॥ ಶ್ರೀಃ ॥

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

ಶ್ರೀಮದ್ಭನುಮದ್ಭೀಮಮಧ್ವಾಂತರ್ಗತಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀಗುರುಭ್ಯೋನಮಃ

೨೦ನೇ ಅಧ್ಯಾಯವು

ಯಜ್ಞೈರುದಾನನರದೇವವಂದ್ಯತಾಪ್ರಶ್ನರ್ಷಿಪೂಜಾಸು ಯುಧಿಷ್ಠಿರೋಽಭೂತ್ ॥
ಧರ್ಮಾನುಶಾಸ್ತಿಹರಿತತ್ವಶಂಸನಸ್ವರಾಷ್ಟ್ರರಕ್ಷಾದಿಷು ಭೀಮ ಆಸೀತ್ ॥೧॥

ಅನ್ವಯಾರ್ಥ — ಯಜ್ಞೈರುದಾನನರದೇವವಂದ್ಯತಾಪ್ರಶ್ನರ್ಷಿಪೂಜಾಸು — ಯಜ್ಞ ಮಾಡುವದು, ದಾನ, ಇವರಿಂದ ಮರ್ಯಾದೆಗಳನ್ನು ಸ್ವೀಕರಿಸುವದು, ಜ್ಞಾನಿಗಳು ಬಂದಾಗ ಅವರ ಹತ್ತಿರ ತತ್ವವಿಚಾರಾರ್ಥವಾಗಿ ಪ್ರಶ್ನೆ ಮಾಡುವದು, ಬಂದ ಋಷಿಗಳ ಪೂಜಾ ಮೊದಲಾದ ಕಾರ್ಯಗಳಲ್ಲಿ, ಯುಧಿಷ್ಠಿರಃ — ಧರ್ಮರಾಜನು, ಅಭೂತ್ — ಆಗಿದ್ದನು. ಧರ್ಮಾನುಶಾಸ್ತಿಹರಿತತ್ವಶಂಸನಸ್ವರಾಷ್ಟ್ರರಕ್ಷಾದಿಷು — ಧರ್ಮೋಪದೇಶ, ಭಗವಂತನಾದ ಶ್ರೀಹರಿಯು ಎಂಬ ತತ್ತ್ವೋಪದೇಶ, ರಾಷ್ಟ್ರರಕ್ಷಣೆ ಮೊದಲಾದ ಕಾರ್ಯಗಳಲ್ಲಿ; ಭೀಮಃ — ಶ್ರೀಭೀಮಸೇನದೇವರು, ಆಸೀತ್ — ಆಗಿದ್ದರು. ॥೧॥

ಸ್ತ್ರೀಧರ್ಮಸಂಶಾಸನಭೃತ್ಯಕೋಶರಕ್ಷಾವ್ಯಯಾದೌ ಗುಣದೋಷಚಿಂತನೇ ॥
ಅಂತಃಪುರಸ್ಥಸ್ಯ ಜನಸ್ಯ ಕೃಷ್ಣಾ ತ್ವಾಸೀದ್ಧರೇರ್ಧರ್ಮನಿದರ್ಶನೀಚ ॥೨॥

ಅನ್ವಯಾರ್ಥ — ಅಂತಃಪುರಸ್ಥಸ್ಯ — ಅಂತಃಪುರದಲ್ಲಿರುವ, ಜನಸ್ಯ — ಜನರ, ಗುಣದೋಷಚಿಂತನೇ — ವ್ಯಯಾನ್ಯಾಯಗಳ ವಿಚಾರದಲ್ಲಿ, ಸ್ತ್ರೀಧರ್ಮಸಂಶಾಸನಭೃತ್ಯಕೋಶರಕ್ಷಾವ್ಯಯಾದೌ — ಸ್ತ್ರೀಧರ್ಮಗಳ ಉಪದೇಶ, ಭೃತ್ಯ, ಕೋಶಗಳಿಗೆ ಯಾವಕೊರತೆಯೂ ಬಾರದಂತೆ ರಕ್ಷಣೆ, ವಿನಿಯೋಗ ಮೊದಲಾದ ಕಾರ್ಯದಲ್ಲಿ, ಕೃಷ್ಣಾ — ಶ್ರೀದ್ರೌಪದೀದೇವಿಯರು, ಆಸೀತ್ — ತೊಡಗಿದ್ದರು. ಚ — ಮತ್ತು, ಹರೇಃ — ಶ್ರೀಹರಿಯ, ಧರ್ಮನಿದರ್ಶನೀ — ಭಾಗವತ ಧರ್ಮಗಳ ಉಪದೇಶರು, ಧರ್ಮಾಚರಣೆಗೆ (ದೃಷ್ಟಾಂತರು) ಆದರ್ಶ ಭೂತರೂ ಆಗಿದ್ದರು. ॥೨॥

ಬೀಭತ್ಸುರಾಸೀತ್ಪರರಾಷ್ಟ್ರಮರ್ದನೇ ತೇನಾನಿಯಮ್ಯಾಂಸ್ತು ಜರಾಸುತಾದೀನ್ ॥
ಸಕೀಚಕಾದೀಂಶ್ಚ ಮನುರ್ದಭೀಮಸ್ತಸ್ಯೈವತೇ ಬಲತೋನಿತ್ಯಭೀತಾಃ ॥೩॥

ಅನ್ವಯಾರ್ಥ —ಬೀಭತ್ಸುಃ – ಅರ್ಜುನನು, ಪರರಾಷ್ಟ್ರಮರ್ದನೇ— ದುಷ್ಟರಾದ ವೈರಿಗಳ ರಾಜ್ಯದ ನಿಗ್ರಹ ಕಾರ್ಯದಲ್ಲಿ, ಅಸೀತ್ – ತೊಡಗಿದ್ದನು. ತು– ಆದರೆ, ತೇನ – ಆ ಅರ್ಜುನನಿಂದ, ಅನಿಯಮ್ಯಾನ್ – ನಿಗ್ರಹಿಸಲು ಅಶಕ್ಯರಾದ, ಜರಾಸುತಾದೀನ್ – ಜರಾಸಂಧನೇ ಮೊದಲಾದಂಥ, ಸಕೀಚಕಾದೀನ್ – ಕೀಚಕನೇ ಮೊದಲಾದವರಿಂದ ಸಹಿತರಾದ ದುಷ್ಟರಾಜರನ್ನು, ಭೀಮಃ – ಶ್ರೀಭೀಮಸೇನದೇವರು, ಮಮರ್ದ – ಮರ್ದಿಸುತ್ತಿದ್ದರು. ತೇ – ಆ ಜರಾಸಂಧಾದಿ ದುಷ್ಟರು, ತಸ್ಯೈವ ಬಲತಃ – ಆ ಭೀಮಸೇನದೇವರದೇ ಸಾಮರ್ಥ್ಯದಿಂದ, ನಿತ್ಯಭೀತಾಃ – ಯಾವಾಗಲೂ ಹೆದರಿಕೊಂಡು ಇರುತ್ತಿದ್ದರು. ॥೩॥

ರಾಷ್ಟ್ರೇಷು ಭೀಮೇನ ವಿಮರ್ದಿತೇಷು ಜಿತಾಶ್ಚ ಯುದ್ಧೇಷು ನಿರುದ್ಯಮಾಸ್ತೇ ॥
ಬಭೂವುರಾಸೀದ್ಧರಿಧರ್ಮನಿಷ್ಠಃ ಪ್ರಾಯೇಣ ಲೋಕಶ್ಚ ತದೀಯಶಾಸನಾತ್ ॥೪॥

ಅನ್ವಯಾರ್ಥ – ರಾಷ್ಟ್ರೇಷು– ವೈರಿರಾಜ್ಯಗಳು, ಭೀಮೇನ – ಶ್ರೀಭೀಮಸೇನರಿಂದ, ವಿಮರ್ದಿತೇಷು(ಸತ್ಸು) ಪೀಡಿಸಲ್ಪಡುತ್ತಿರಲು(ಸೋಲಿಸಲ್ಪಡುತ್ತಿರಲು),ತೇ – ಆ ಎಲ್ಲ ದುಷ್ಟರಾಜರು, ನಿರುದ್ಯಮಾಃ – ಪ್ರತಿಯಾಗಿ ಶ್ರೀಭೀಮರನ್ನು ಕೊಲ್ಲುವ ಸೋಲಿಸುವ ಉದ್ಯೋಗದಿಂದ ರಹಿತರು, ಬಭೂವುಃ – ಆಗಿದ್ದರು. ಚ – ಮತ್ತು, ಪ್ರಾಯೇಣ – ಒಹುವಾಗಿ, ಲೋಕಃ— ಎಲ್ಲ ಜನರು, ತದೀಯಶಾಸನಾತ್ – ಆ ಶ್ರೀಭೀಮಸೇನದೇವರ ಆಡಳಿತದಿಂದ, ಹರಿಧರ್ಮನಿಷ್ಠಃ – ಭಗವದ್ಧರ್ಮಗಳಲ್ಲಿ ಆಸಕ್ತರಾದವರು, ಆಸೀತ್—ಆಗಿದ್ದರು. ॥೪॥

ಆಜೀವಿನಾಂ ಯೇತನದಸ್ತದಾಽಸೀನ್ಮಾದ್ರೀಸುತಃ ಪ್ರಥಮೋಽಥ ದ್ವಿತೀಯಃ ॥
ಸಂಧಾನಭೇದಾದಿಷು ಧರ್ಮರಾಜಪಶ್ಚಾಚ್ಚ ಖಡ್ಗೀಸಬಭೂವ ರಕ್ಷನ್ ॥೫॥

ಅನ್ವ—ತದಾ—ಆಗ, ಪ್ರಥಮಃ— ಮೊದಲನೆಯವನಾದ, ಮಾದ್ರೀಸುತಃ— ಮಾದ್ರೀದೇವಿಯ ಮಗನಾದ ನಕುಲನು, ಆಜೀವಿನಾಂ – ಪಾಂಡವರನ್ನು ಆಶ್ರಯಿಸಿಕೊಂಡು ಜೀವಿಸುತ್ತಿರುವವರಿಗೆ, ವೇತನದಃ— ಸಂಬಳವನ್ನು ಕೊಡುವವನಾಗಿದ್ದನು. ಅಥ – ಹಾಗೂ, ದ್ವಿತೀಯಃ— ಎರಡನೆಯವನಾದ ಸಹದೇವನು, ಸಂಧಾನಭೇದಾದಿಷು — ಪರ ರಾಜರೊಡನೆ ಸಂಧಾನ,ವಿರೋಧ, ಇತ್ಯಾದಿಗಳ ವಿಚಾರ ಕಾರ್ಯದಲ್ಲಿ, ಬಭೂವ—ಇದ್ದನು, ಚ – ಮತ್ತು ಧರ್ಮರಾಜಪಶ್ಚಾತ್ – ಧರ್ಮರಾಜನ ಹಿಂಬದಿಯಲ್ಲಿ, ಖಡ್ಗೀಸನ್ – ಖಡ್ಗವನ್ನು ಹಿಡಿದವನಾಗಿ, ರಕ್ಷನ್ – ರಕ್ಷಿಸುವವನು, ಬಭೂವ— ಆಗಿದ್ದನು ॥೫॥

ಧೃಷ್ಟದ್ಯುಮ್ನಸ್ತತ್ರಸೇನಾಪ್ರಣೇತಾ ಶಕ್ರಪ್ರಸ್ಥೇ ನಿತ್ಯಮಾಸ್ತೇಽತಿಹಾರ್ದಾತ್ ।
ವಿಶೇಷತೋಭೀಮಸಖಾಸ ಆಸೀದಾಪ್ತ್ಯಂ ಚೈಷಾಂ ಸರ್ವಕಾಮೈಸ್ಸುಪೂರ್ಣಂ ॥ ೬ ॥

ಅನ್ವ—ತತ್ರ-ಆ ಪಾಂಡವ ರಾಜ್ಯದಲ್ಲಿ, ಸೇನಾಪ್ರಣೇತಾ—ಸೇನಾಪತಿಯಾಗಿರುವ, ಧೃಷ್ಟದ್ಯುಮ್ನಃ—ಧೃಷ್ಟದ್ಯುಮ್ನನು, ಅತಿಹಾರ್ದಾತ್ – ಬಹಳ ಸ್ನೇಹದಿಂದ, ನಿತ್ಯಂ—ಯಾವಾಗಲೂ, ಶಕ್ರಪ್ರಸ್ಥೇ – ಇಂದ್ರಪ್ರಸ್ಥದಲ್ಲಿ, ಆಸ್ತೇ – ಇರುತ್ತಿದ್ದನು, ಸಃ—ಧೃಷ್ಟದ್ಯುಮ್ನನು, ವಿಶೇಷತಃ— ವಿಶೇಷವಾಗಿ, ಭೀಮಸಖಾ— ಶ್ರೀಭೀಮಸೇನದೇವರ ಸಹವಾಸಿಯು, ಆಸೀತ್—ಆಗಿದ್ದನು, ಚ – ಮತ್ತು, ಏಷಾಂ – ಈ ಪಾಂಡವರ, ರಾಷ್ಟ್ರಂ—ರಾಜ್ಯವು, ಸರ್ವಕಾಮೈಃ— ಎಲ್ಲ ಭೋಗಗಳಿಂದ, ಸುಪೂರ್ಣಂ—ಪೂರ್ಣವಾದದ್ದು ಆಸೀತ್—ಆಗಿತ್ತು. ॥ ೬ ॥

ನಾನೈಷ್ಣವೋ ನ ದರಿದ್ರೋ ಬಭೂವ ನ ಧರ್ಮಹಾನಿಶ್ಚ ಬಭೂವ ಕಸ್ಯಚಿತ್ ।
ತೇಷಾಂ ರಾಷ್ಟ್ರೇ ಶಾಸತಿ ಭೀಮಸೇನೇ ನ ಸ್ಯಾಧಿತೋ ನಾಪಿ ವಿಪರ್ಯಯಾನ್ಮೃತಿಃ ॥ ೭ ॥

ಅನ್ವ – ತೇಷಾಂ – ಆ ಪಾಂಡವರ, ರಾಷ್ಟ್ರೇ – ರಾಜ್ಯದಲ್ಲಿ, ಭೀಮಸೇನೇ – ಶ್ರೀ ಭೀಮಸೇನದೇವರು, ಶಾಸತಿ (ಸತಿ) – ಆಳುತ್ತಿರಲು, (ಕಶ್ಚಿತ್)–ಯಾವನೂ, ಅವೈಷ್ಣವಃ – ವಿಷ್ಣುಭಕ್ತನಲ್ಲದವನು, ನ – ಇರಲಿಲ್ಲ, ದರಿದ್ರಃ– ಬಡವನು, ನ ಬಭೂವ – ಇರಲಿಲ್ಲ, ಕಸ್ಯಚಿತ್—ಯಾವನಿಗೂ, ಧರ್ಮಹಾನಿಃ – ಧರ್ಮಲೋಪವು, ನ ಬಭೂವ – ಆಗುತ್ತಿರಲಿಲ್ಲ, ವ್ಯಾಧಿತಃ – ರೋಗಗಳಿಂದ, ಮೃತಿಃ – ಮರಣವು, ನ – ಇರಲಿಲ್ಲ, ವಿಪರ್ಯಯಾತ್ — ವಿರುದ್ಧವಾಗಿ (ದೊಡ್ಡವರ ಎದುರು ಸಣ್ಣವರ), ಮೃತಿಃ – ಮರಣವು, ನಾಪಿ – ಇರುತ್ತಿರಲಿಲ್ಲ. ॥ ೭ ॥

ಯುಧಿಷ್ಠಿರಂ ಯಾಂತಿಹಿ ದರ್ಶನೋತ್ಸುಕಾಃ ಪ್ರತಿಗ್ರಹಾಯಾಪ್ಯಥ ಯಾಜನಾಯ ।
ಕಾರ್ಯಾರ್ಥಿನೋ ನೈವ ವೃಕೋದರೇಣ ಕಾರ್ಯಾಣಿ ಸಿದ್ಧಾನಿಯತೋಽಖಿಲಾನಿ ॥ ೮ ॥

ಅನ್ವ – ದರ್ಶನೋತ್ಸುಕಾಃ — ರಾಜದರ್ಶನ ಮಾಡುವ ಇಚ್ಛೆಯುಳ್ಳ ಪ್ರಜೆಗಳು, ಅಥ – ಹಾಗೂ, ಪ್ರತಿ ಗ್ರಹಾಯ – ದಾನ, ಬಹುಮಾನವನ್ನು ತೆಗೆದುಕೊಳ್ಳಲು, ಯಾಜನಾಯ–ಯಜ್ಞ–ಯಾಗಾದಿಗಳನ್ನು ಮಾಡಿಸಲು,(ಆಗತಾಃ)– ಬಂದಂಥ ಜನರು, ಯುಧಿಷ್ಠಿರಂ – ಧರ್ಮರಾಜನನ್ನು ಕುರಿತು, ಯಾಂತಿ—ಹೋಗುತ್ತಿದ್ದರು. (ಕಿಂತು)–ಆದರೆ, ಯತಃ– ಯಾವ ಕಾರಣದಿಂದ, ಅಖಿಲಾನಿ ಕಾರ್ಯಾಣಿ — ಪ್ರಜೆಗಳ ಎಲ್ಲ ಕಾರ್ಯಗಳು, ವೃಕೋದರೇಣ — ಭೀಮಸೇನ ದೇವರಿಂದಲೇ, ಸಿದ್ಧಾನಿ – ಪೂರ್ಣವಾಗುತ್ತಿದ್ದವೋ, (ತತಃ) – ಆ ಕಾರಣದಿಂದ, ಕಾರ್ಯಾರ್ಥಿನಃ— ಸ್ವಕಾರ್ಯನಿಮಿತ್ತದಿಂದ ಬಂದ ಪ್ರಜೆಗಳು, ಯುಧಿಷ್ಠಿರಂ – ಧರ್ಮರಾಜನನು, ಕುರಿತು, ನೈವ ಯಾಂತಿ – ಹೋಗುತ್ತಿದ್ದಿಲ್ಲ. ॥ ೮ ॥

ಗಂಧರ್ವವಿದ್ಯಾಧರಚಾರಣಾಶ್ಚ ಸೇವಂತ ಏತಾನ್ ಸತತಂ ಸಮಸ್ತಾಃ ।
ಯಥಾ ಸುರೇಂದ್ರಂ ಮುನಯಶ್ಚ ಸರ್ವಆಯಾಂತಿ ದೇವಾ ಅಪಿಕೃಷ್ಣಮರ್ಚಿತುಂ ॥ ೯ ॥

ಸಮಸ್ತಾಃ – ಎಲ್ಲ, ಗಂಧರ್ವವಿದ್ಯಾಧರಚಾರಣಾಃ—ಗಂಧರ್ವರು, ವಿದ್ಯಾಧರರು, ಚಾರಣರು, ಚ – ಮತ್ತು, ಸರ್ವೇ – ಎಲ್ಲ, ಮುನಯಃ—ಋಷಿಗಳು, ಸುರೇಂದ್ರಂ ಯಥಾ – ದೇವೇಂದ್ರನನ್ನು ಹೇಗೆ ಸೇವಿಸಬೇಕೋ, ತಥಾ–ಹಾಗೆ, ಏತಾನ್ – ಈ ಪಾಂಡವರನ್ನು, ಸತತಂ — ಯಾವಾಗಲೂ, ಸೇವಂತೇ – ಸೇವಿಸುತ್ತಿದ್ದರು, ದೇವಾಅಪಿ — ದೇವತೆಗಳೂ ಕೂಡ, ಕೃಷ್ಣಂ—ಶ್ರೀಕೃಷ್ಣನನ್ನು, ಅರ್ಚಿತುಂ—ಪೂಜಿಸುವದಕ್ಕಾಗಿ, ಆಯಾಂತಿ—ಬರುತ್ತಿದ್ದರು. ॥ ೯ ॥

ತೇಷಾಂ ರಾಷ್ಟ್ರೇಕಾರ್ತಯುಗಾ ಹಿ ಧರ್ಮಾಃ ಪ್ರವರ್ತಿತಾ ಏವ ತತೋಽಧಿಕಾಶ್ಚ ।
ಋದ್ಧಿಶ್ಚ ತಸ್ಮಾದಧಿಕಾ ಸುವರ್ಣರತ್ನಾಂಬರಾದೇರಪಿ ಸಸ್ಯಸಂಪದಾಂ ॥ ೧೦ ॥

ತೇಷಾಂ–ಆ ಪಾಂಡವರ, ರಾಷ್ಟ್ರೇ – ರಾಜ್ಯದಲ್ಲಿ, ಕಾರ್ತಯುಗಾಃ–ಕೃತಯುಗದಲ್ಲಿ ನಡೆಯುವ, ಧರ್ಮಾಃ ಏವ– ಧರ್ಮಾಚರಣೆಗಳೇ, ಪ್ರವರ್ತಿತಾಃ–ನಡೆಯುತ್ತಿದ್ದವು, ತತಃ–ಕೃತಯುಗದ ಧರ್ಮಗಳಿಗಿಂತಲೂ, ಅಧಿಕಾಶ್ಚ – ಹೆಚ್ಚಾದ ಧರ್ಮಗಳೂ ಕೂಡ, ಪ್ರವರ್ತಿತಾಃ – ನಡೆಯುತ್ತಿದ್ದವು, ಸುವರ್ಣರತ್ನಾಂಬರಾದೇಃ – ಭಂಗಾರ, ರತ್ನ, ವಸ್ತ್ರ ಮೊದಲಾದ ಸಂಪತ್ತುಗಳ, ಚ – ಮತ್ತು, ಸಸ್ಯಸಂಪದಾಂ — ಸಸ್ಯಸಂಪತ್ತುಗಳ, ಋದ್ಧಿಃ – ಅಭಿವೃದ್ಧಿಯೂ ಕೂಡ, ತಸ್ಮಾತ್ – ಕೃತಯುಗಕ್ಕಿಂತಲೂ (ಕೃತಯುಗದಲ್ಲದ್ದ ಅಭಿವೃದ್ಧಿಗಿಂತಲೂ), ಅಧಿಕಾ ಅಸೀತ್ – ಹೆಚ್ಚಾಗಿತ್ತು. ॥ ೧೦ ॥

ಭಾವಾನುವಾದ–೧–೧೦ ಪಾಂಡವರು ಇಂದ್ರಪ್ರಸ್ಥವನ್ನು ಹೊಂದಿ, ಅಲ್ಲಿ ಧರ್ಮರಾಜನು ಅಭಿಷಿಕ್ತನಾಗಿರುವಾಗ ಅವನ ಆಡಳಿತದಲ್ಲಿ ಯಾರು ಯಾರು ಯಾವ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದರು ಎಂಬುದನ್ನು ಆಚಾರ್ಯರು ತಿಳಿಸುತ್ತಿದ್ದಾರೆ. ರಾಜ್ಯದ ಮುಖ್ಯನಾದ ರಾಜನು ಮಾಡಬೇಕಾದ ಕಾರ್ಯಗಳಾದ ಯಜ್ಞಗಳು, ದಾನ, ರಾಜರಿಂದ ಗೌರವ

(ಮರ್ಯಾದೆ) ಸ್ವೀಕಾರ, ತತ್ವವಿಚಾರ, ಋಷಿಪೂಜಾ ಇತ್ಯಾದಿಗಳನ್ನು ಯುಧಿಷ್ಠಿರನು ಮಾಡುತ್ತಿದ್ದನು. ಭಗವತ್ತತ್ವಗಳ ಉಪದೇಶ, ಧರ್ಮಾಚರಣೆಇಲ್ಲದವರ ದಂಡನೆ, ರಾಜ್ಯರಕ್ಷಣೆ ಮೊದಲಾದ ಉಭಯ (ಜ್ಞಾನ-ಬಾಹು) ಬಲ ಕಾರ್ಯಗಳನ್ನು ಶ್ರೀ ಭೀಮಸೇನರು ಮಾಡುತ್ತಿದ್ದರು. ಗೃಹದಲ್ಲಿದ್ದುಕೊಂಡೇ ಮಾಡಬಹುದಾದ, ತಾಯಿಯಾಗಿದ್ದು ಮಾಡಬಹುದಾದ, ಶ್ರೀ ಲಕ್ಷ್ಮೀಸನ್ನಿಧಾನ ಉಳ್ಳವರಿಂದ ಸಾಧ್ಯವಾದ ಕಾರ್ಯಗಳಾದ, ಸ್ತ್ರೀಧರ್ಮೋಪದೇಶ, ಸೇವಕರ ಪಾಲನೆ, (ಖಜಾನೆ,ಕೋಶದ ಅಭಿವೃದ್ಧಿ ಹಾಗೂ ರಕ್ಷಣೆ, ಅಂತಃಪುರಸ್ಥ ಜನರ ನ್ಯಾಯಾನ್ಯಾಯ ವಿಚಾರ ಪೂರ್ವಕ ನಿರ್ಣಯ ಮೊದಲಾದ ಕಾರ್ಯಗಳನ್ನು ಶ್ರೀ ದ್ರೌಪದೀದೇವಿಯರು ಮಾಡುತ್ತಿದ್ದರು. ಅರ್ಜುನನಃ ಪರಕೀಯ ದುಷ್ಟರು ಸ್ವರಾಜ್ಯಕ್ಕೆ ಉಪದ್ರವಕರರಾದರೆ, ಏರಿಬಂದರೆ, ಅವರನ್ನು ನಿಗ್ರಹಿಸುವ, ಮರ್ದಿಸುವ ಕಾರ್ಯವನ್ನು ಮಾಡುತ್ತಿದ್ದನು. ಅರ್ಜುನನಿಂದ ನಿಗ್ರಹಮಾಡಲು ಅಶಕ್ಯವಾಗುವಷ್ಟು ಬಲಿಷ್ಠರಾದ, ಜರಾಸಂಧ, ಕೀಚಕ ಮೊದಲಾದ ದುಷ್ಟರನ್ನು ಶ್ರೀಭೀಮಸೇನದೇವರೇ ಮರ್ದನ ಮಾಡುತ್ತಿದ್ದರು. ಇವರ ಸಾಮರ್ಥ್ಯದಿಂದಲೇ ಆ ದುಷ್ಟರೆಲ್ಲ ಹೆದರಿಕೊಂಡಿದ್ದರು. ಶ್ರೀಭೀಮಸೇನರ ವಿರುದ್ಧಯಾವದೇ ಪ್ರತಿರೋಧ ಕಾರ್ಯಮಾಡಲು ಅಸಮರ್ಥರಾಗಿದ್ದರಿಂದ ಯಾವದೇ ಆ ತರಹದ ಪ್ರಯತ್ನಗಳನ್ನು ಮಾಡುತ್ತಿದ್ದಿಲ್ಲ, ಹೀಗೆ ಶ್ರೀಭೀಮದೇವರ ಆಡಳಿತದಿಂದ ಪೂರ್ಣರಾಜ್ಯವೇ ಧರ್ಮಾಸಕ್ತವಾಗಿತ್ತು. ರಾಜ್ಯಕಾರ್ಯ ಮಾಡಿಕೊಂಡು ಉಪಜೀವಿಸುತ್ತಿರುವವರಿಗೆ ವೇತನವನ್ನು ನಕುಲನು ವಿತರಿಸುತ್ತಿದ್ದರೆ, ಸಹದೇವನು ಪರಕೀಯ ರಾಜರಿಂದ ಸಂಧಾನ, ಭೇದಾದಿ ರಾಜಕೀಯ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದನು ಮತ್ತು ಧರ್ಮರಾಜನ ಹಿಂಬದಿಯಲ್ಲಿ ಖಡ್ಗಧಾರಿಯಾಗಿ ಇದ್ದು ಅವನ ರಕ್ಷಣ ಕೆಲಸವನ್ನು ಮಾಡುತ್ತಿದ್ದನು. ಪಾಂಡವರ ಈ ಇಂದ್ರಪ್ರಸ್ಥ ರಾಜ್ಯದಲ್ಲಿ ಸೇನಾಪತಿಯಾಗಿದ್ದ ಧೃಷ್ಟದ್ಯುಮ್ನನು ಶ್ರೀಭೀಮಸೇನದೇವರಿಗೆ ಪ್ರಿಯನಾಗಿದ್ದನು. ಪಾಂಡವರ ಆಡಳಿತದಲ್ಲಿಯು ಆ ಇಂದ್ರಪ್ರಸ್ಥ ರಾಜ್ಯವು ಸರ್ವ ಅಭೀಷ್ಟಗಳಿಂದ ಪೂರ್ಣವಾಗಿತ್ತು. ಶ್ರೀಭೀಮಸೇನದೇವರ ಆಡಳಿತವಿರವಾಗ, ವಿಷ್ಣುದ್ವೇಷಿಯಾಗಲೀ, ದರಿದ್ರನಾಗಲೀ ಒಬ್ಬರೂ ಇರಲಿಲ್ಲ. ಒಬ್ಬನಿಗೂ ಧರ್ಮಾಲೋಪವಾಗುತ್ತಿರಲಿಲ್ಲ. ರೋಗಾದ್ಯುಪದ್ರವಗಳಿಂದ ಮರಣವಿರಲಿಲ್ಲ, ಹಿರಿಯರಿರುವಾಗ ಚಿಕ್ಕವರು ಮರಣಹೊಂದುವಂಥ (ಉದಾ — ತಂದೆ ಎದುರು ಮಗ, ಗಂಡನ ಎದುರು ಹೆಂಡತಿ ಇತ್ಯಾದಿ) ವಿಪರೀತವಾದ ಮರಣ ವಿರಲಿಲ್ಲ. ಪ್ರಜೆಗಳ ಕಾರ್ಯಗಳೇನಾದರೂ ರಾಜರಲ್ಲಿ ಆಗಬೇಕಾಗಿದ್ದರೆ— ಅವೆಲ್ಲ ಶ್ರೀಭೀಮಸೇನದೇವರಿಂದಲೇ ಆಗುತ್ತಿದ್ದದ್ದರಿಂದ ಯಾರೂ ~~ಕಾರ್ಯಾರ್ಥಿಗಳಾಗಿ ಧರ್ಮರಾಜನ ಹತ್ತಿರ ಹೋಗುವ ಪ್ರಸಂಗವೇ ಇರುತ್ತಿರಲಿಲ್ಲ.~~ ಆದರೆ ರಾಜನನ್ನು ನೋಡಬೇಕೆಂಬ ಇಚ್ಛೆ ಉಳ್ಳವರು, ಯಜ್ಞ-ಯಾಗಾದಿಗಳನ್ನು ಮಾಡಿಸುವಂಥ ಪುರೋಹಿತರು, ದಾನಸ್ವೀಕರಿಸುವದಕ್ಕಾಗಿ ಬಂದವರು ಇಂಥ ಜನರು ಮಾತ್ರ ರಾಜನ ಹತ್ತಿರ ಹೋಗುತ್ತಿದ್ದರು. ಗಂಧರ್ವರು, ವಿದ್ಯಾಧರರು, ಚಾರಣರು, ಇಂದ್ರನ ಸೇವೆಯನ್ನು ಮಾಡುವಂತೆ ಇಲ್ಲಿಗೆ ಬಂದು ಪಾಂಡವರ ಸೇವೆಯನ್ನು ಮಾಡುತ್ತಿದ್ದರು. ಎಲ್ಲ ದೇವತೆಗಳೂ, ಮುನಿಗಳೂ ಶ್ರೀಕೃಷ್ಣನನ್ನು ಅರ್ಚಿಸುವದಕ್ಕೋಸ್ಕರ ಇಲ್ಲಿಗೆ ಬರುತಿದ್ದರು. ಏಕೆಂದರೆ ಶ್ರೀಕೃಷ್ಣನು ಪ್ರಾಯಃ ಇವರಲ್ಲಿಯೇ ಇರುತ್ತಿದ್ದನು. ಕೃತಯುಗದ ಧರ್ಮಾಚರಣೆಗಿಂತಲೂ ಹೆಚ್ಚಿನ ಧರ್ಮಾಚರಣೆಯು ನಡೆಯುತ್ತಿತ್ತು. ಸುವರ್ಣ, ರತ್ನ, ಸಸ್ಯ ಮೊದಲಾದ ಸಂಪತ್ತುಗಳ ಅಭಿವೃದ್ಧಿಯೂ ಕೂಡ ಕೃತಯುಗದಲ್ಲಿಯ ಅಭಿವೃದ್ಧಿಗಿಂತಲೂ ಹೆಚ್ಚಾಗಿತ್ತು.

ಅಥೋಪಯೇಮೇ ಶಿಶುಪಾಲ ಪುತ್ರೀಂ ಯುಧಿಷ್ಠಿರೋದೇವಕೀಂ ನಾಮ ಪೂರ್ವಾಂ ।
ಸ್ವೀಯಾಂಭಾರ್ಯಾಂ ಯತ್ಸಹಜೋಧೃಷ್ಟಕೇತು ರನುಹ್ಲಾದಸ್ಸವಿತುಶ್ಚಾಂಶಯುಕ್ತಃ ॥ ೧೧ ॥

ಅನ್ವಯಾರ್ಥ – ಅಥ —ಇಂದ್ರಪಸ್ಥಕ್ಕೆ ಬಂದನಂತರ, ಯುಧಿಷ್ಠಿರಃ—ಧರ್ಮರಾಜನು, ಯತ್ಸಹಜಃ—ಯಾವಳ ಸಹೋದರನಾದ, ಧೃಷ್ಟಕೇತುಃ–ಧೃಷ್ಟಕೇತು ಎಂಬವನು, ಅನುಹ್ಲಾದಃ–ಪ್ರಹ್ಲಾದರಾಜನ ತಮ್ಮನಾದ ಅನುಹ್ಲಾದನ ಅವತಾರನೋ,ಚ–ಮತ್ತು, ಸವಿತುಃ–ಸೂರ್ಯನ, ಅಂಶಯುಕ್ತಃ–ಅಂಶದಿಂದ ಕೂಡಿದವನೋ, ತಾಂ—ಅಂತಹ (ಅಂತಹ ಧೃಷ್ಟಕೇತುವಿನ ಅಕ್ಕಳಾದ)ಸ್ವೀಯಾಂ ಪೂರ್ವಾಂಭಾರ್ಯಾಂ—ಮೂಲರೂಪದಲ್ಲಿ ತನ್ನ ಹೆಂಡತಿಯೇ ಆಗಿರುವ ಶ್ಯಾಮಲೆಯ ಅವತಾರಳಾದ, ಶಿಶುಪಾಲಪುತ್ರೀಂ – ಶಿಶುಪಾಲನ ಮಗಳಾದ ದೇವಕೀಂ ನಾಮ – ದೇವಕಿ ಎಂಬವಳನ್ನು, ಉಪಯೇಮೇ—ವಿವಾಹ ಮಾಡಿಕೊಂಡನು. ॥ ೧೧ ॥

ತಸ್ಯಾಂಸುಹೋತ್ರೋನಾಮತಃ ಪುತ್ರಆಸೀದ್ಯಶ್ಚಿತ್ರಗುಪ್ತೋನಾಮಪೂರ್ವಂ ಸುಲೇಖಃ ॥
ಕೃಷ್ಣಸೈವಾಪ್ಯನ್ಯರೂಪೇಣ ಜಾತಾಕಾಶೀಶಪುತ್ರೀ ಯಾಂಪ್ರವದಂತಿಕಾಳೀಂ ॥೧೨॥

ಸಾಕೇವಲಾಭಾರತೀ ನಾನ್ಯದೇವ್ಯಸ್ತತ್ರಾವಿಷ್ಟಾಸ್ತತ್ಕೃತೇ ಕಾಶಿರಾಜಃ ॥
ಸ್ವಯಂವರಾರ್ಥಂ ನೃಪತೀನಾಜುಹಾವ ಸರ್ವಾಂಸ್ತೇಪಿಹ್ಯತ್ರ ಹರ್ಷಾತ್ ಸಮೇತಾಃ ॥೧೩॥

ಅನ್ವಯಾರ್ಥ ಯಃ – ಯಾವನು, ಪೂರ್ವಂ – ಮೂಲರೂಪದಲ್ಲಿ, ಚಿತ್ರಗುಪ್ತೋನಾಮ– ಚಿತ್ರಗುಪ್ತನೆಂದು ಪ್ರಸಿದ್ಧನಾದ, ಸುಲೇಖಃ – ಪ್ರತಿಜೀವರ ಪಾಪಪುಣ್ಯಗಳ ಲೆಖ್ಖವನ್ನು ಬರೆಯುವವನೋ, ಸಃ – ಅವನು, ತಸ್ಯಾಂ – ಆ ದೇವಕಿಯಲ್ಲಿ, (ತಸ್ಯ – ಆ ಯದುಧಿಷ್ಠಿರನಿಗೆ) ನಾಮತಃ ಸುಹೋತ್ರಃ – ಹೆಸರಿನಿಂದ ಸುಹೋತ್ರನೆಂದು ಪ್ರಸಿದ್ಧನಾದ, ಪುತ್ರ: – ಮಗನು, ಅಸೀತ್ – ಆದನು,ಅಪಿ – ಹಾಗೂ, ಸಾ ಕೃಷ್ಣಾ ಏವ – ಪಂಚಪಾಂಡವರ ಪತ್ನಿಯಾಗಿರುವ ದ್ರೌಪದಿಯಲ್ಲಿರುವ ಭಾರತಿಯೇ, ಯಾಂ – ಯಾವಳನ್ನು, ಕಾಳೀಂ–ಕಾಳೀ ಎಂಬುದಾಗಿ, ಪ್ರವದಂತಿ – ಕರೆಯುತ್ತಾರೋ, ತೇನ ಅನ್ಯರೂಪೇಣಾಪಿ – ಅಂಥ ಇನ್ನೊಂದು ರೂಪದಿಂದಲೂ, ಕಾಶೀಶಪುತ್ರೀ – ಕಾಶೀರಾಜನ ಮಗಳಾಗಿ, ಜಾತಾ – ಹುಟಿದಳು. ಸಾ – ಆ ಕಾಳೀದೇವಿಯು, ಕೇವಲಾ ಭಾರತೀ – ಕೇವಲ ಭಾರತಿಯು ಅವತಾರಳು. ತತ್ರ—ಅವಳಲ್ಲಿ ಅನ್ಯದೇವ್ಯಃ– ಬೇರೆ ದೇವತಾಸ್ತ್ರೀಯರು, ನ ಆವಿಷ್ಟಾಃ – ಪ್ರವಿಷ್ಟರಾಗಿಲ್ಲ. ತತ್ಕೃತೇ – ಆ ಕಾಳೀದೇವಿಯು ವಿವಾಹದ ಸಲುವಾಗಿ, ಸ್ವಯಂವರಾರ್ಥಂ - ಸ್ವಯಂವರವನ್ನು ಮಾಡುವದಕ್ಕಾಗಿ, ಸರ್ವಾನ್ ನೃಪತೀನ್— ಎಲ್ಲ ರಾಜರನ್ನು, ಆಜುಹಾವ – ಆಹ್ವಾನಿಸಿದನು. ತೇsಪಿ— ಅವರೂಕೂಡ,ಅತ್ರ – ಈ ಕಾಶೀನಗರದಲ್ಲಿ, ಹರ್ಷಾತ್ ಹಿ – ಸಂತೋಷದಿಂದಲೇ,ಸಮೇತಾಃ– ಸೇರಿದ್ದರು. ॥೧೨॥ ॥೧೩॥

ತೇಷಾಂ ಮಧ್ಯೇ ಭೀಮಸೇನಾಂಸ ಏಷಾ ಮೂಲಾಮಾಧಾತ್ ತತ್ರ ಜರಾಸುತಾದ್ಯಾಃ ॥
ಕ್ರುದ್ಧಾ ವಿಷ್ಣೋರಾಶ್ರಿತಾನಾಕ್ಷಿಪಂತಃ ಆಸೇದುರುಚ್ಚೈಃ ಶಿವಮಾಸ್ತುವಂತಃ ॥೧೪॥

ಅನ್ವಯಾರ್ಥ– ಏಷಾ– ಈ ಕಾಳೀದೇವಿಯು, ತೇಷಾಂಮಧ್ಯೇ– ಆ ಎಲ್ಲ ರಾಜರ ನಡುವೆ, ಭೀಮಸೇನಾಂಸೇ– ಶ್ರೀಭೀಮಸೇನದೇವರ ಕೊರಳಿನಲ್ಲಿ, ಮೂಲಾಂ ಆಧಾತ್ – ಮೂಲೆಯನ್ನು ಹಾಕಿದಳು. ತತ್ರ – ಆ ಸಮಯದಲ್ಲಿ, ಕ್ರುದ್ಧಾಃ – ಸಿಟ್ಟಿಗೆದ್ದಂಥ, ಜರಾಸುತಾದ್ಯಾಃ— ಜರಾಸಂಧನೇ ಮೊದಲಾದವರು, ವಿಷ್ಣೋ— ಶ್ರೀಮನ್ನಾರಾಯಣನನ್ನು, ಆಶ್ರಿತಾನ್—ಆಶ್ರಯಿಸಿದವರನ್ನು, ಆಕ್ಷಿಪಂತಃ ಸಂತಃ— ನಿಂದಿಸುವವರಾಗಿ, ಶಿವಂ— ಶ್ರೀರುದ್ರದೇವರನ್ನು, ಉಚ್ಚೈಃ– ಆಸ್ತುವಂತಃ ಸಂತಃ – ಜೆನ್ನಾಗಿ ಗಟ್ಟಿಯಾಗಿ, ಸ್ತುತಿಸುವವರಾಗಿ ಆಸೇದುಃ— ಏರಿಬಂದರು. ॥೧೪॥

ಪೂರ್ವಂವಾಕ್ಯೈರ್ವೈದಿಕೈಸ್ತಾನ್ಸಭೀಮೋ ಜಿಗ್ಯೇತರ್ಕೈರ್ವಾಸ್ತಾಧುಭಿಸ್ಸಂಪ್ರಯುಕ್ತೈಃ ।
ವೇದಾಹ್ಯದೋಷಾ ಇತಿ ಪೂರ್ವಮೇವ ಸಂಸಾಧಯಿತ್ವೈವ ಸದಾಗಮೈಶ್ಚ ॥೧೫॥

ಸಃಭೀಮಃ—ಆ ಭೀಮನು, ಪೂರ್ವಮೇವ—ಮೊದಲೇ, ಸದಾಗಮೈಶ್ಚ– ನಿರ್ದುಷ್ಟ ಪ್ರಮಾಣವಾಕ್ಯಗಳಿಂದ, ಸಂಪ್ರಯುಕ್ತೈಃ—ಪ್ರಯೋಗಿಸಲ್ಪಟ್ಟ, ಸಾಧುಭಿಃ ತರ್ಕೈರ್ವಾಶ್ಚ—ನಿರ್ದುಷ್ಟ ಯುಕ್ತಿಗಳಿಂದಲೂ ಕೂಡ, ವೇದಾಃ ಅದೋಷಾಃ ಹಿ—ವೇದಗಳು ನಿರ್ದುಷ್ಟವಾದ ಪ್ರಮಾಣಗಳೇ, ಇತಿ—ಎಂದು, ಸಂಸಾಧಯಿತ್ವೈವ–ಸಾಧಿಸಿಯೇ, ಪೂರ್ವಂ–ಮೊದಲು ವೈದಿಕೈಃವಾಕ್ಯೈಃ— ವೇದವಾಕ್ಯಗಳಿಂದ, ವೈದಿಕೈಃತರ್ಕೈರ್ವಾಶ್ಚ —ವೇದಾನುಸಾರಿ ಯುಕ್ತಿಗಳಿಂದಲೂ ಕೂಡ, ತಾನ್ —ಆ ಜರಾಸಂಧಾದಿಗಳನ್ನು, ಜಿಗ್ಯೇ – ಗೆದ್ದರು. ॥ ೧೫ ॥

ವೇದಾಧಿಕ್ಯಂ ಶೈವಶಾಸ್ತ್ರಾಣಿಚಾಹುರ್ವೇದೋಜ್ಝಿತಾನಾಂ ಬಹುಲಾಂಚ ನಿಂದಾಂ ।
ತಥಾ ಶಾಕ್ತೇಯಸ್ಕಾಂದಸೌರಾದಿಕಾನಾಂ ತತ್ರೈವೋಕ್ತಂ ಛಂದಸಾಂ ವೈಷ್ಣವತ್ವಂ ॥ ೧೬ ॥

ಶೈವಶಾಸ್ತ್ರಾಣಿಚ— ಶೈವಶಾಸ್ತ್ರ ಪುರಾಣಗಳೂ ಕೂಡ, ವೇದಾಧಿಕ್ಯಂ— ವೇದಗಳ ಶ್ರೇಷ್ಠತೆಯನ್ನು, ತಥಾ— ಹಾಗೂ, ವೇದೋಜ್ಝಿತಾನಾಂ— ವೇದಬಾಹ್ಯರಾದ, ಶಾಕ್ತೇಯಸ್ಕಾಂದಸೌರಾದಿಕಾನಾಂ— ಸ್ಕಾಂದ, ಶಾಕ್ತ, ಸೌರಮತ ದವರ, ಬಹುಲಾಂ ನಿಂದಾಂಚ— ಬಹುನಿಂದೆಯನ್ನೂ ಕೂಡ, ಆಹುಃ — ಹೇಳುತ್ತವೆ. ತತ್ರೈವ — ಅದೇ ಶೈವಪುರಾಣಾದಿಗಳಲ್ಲಿ, ಛಂದಸಾಂ—ವೇದಗಳಿಗೆ, ವೈಷ್ಣವತ್ವಂ— ವಿಷ್ಣುಪರತ್ವವು, ಉಕ್ತಂ—ಹೇಳಲ್ಪಟ್ಟಿದೆ. ॥ ೧೬ ॥

ವಿಷ್ಣೋರಾಧಿಕ್ಯಂ ತಾನಿಶಾಸ್ತ್ರಾಣಿಚಾಹುಃ ಶಿವಾದಿಭ್ಯಃ ಕುತ್ರಚಿನ್ನೈವವೇದೇ ।
ವಿಷ್ಣೂತ್ಕೃಷ್ಟಃಕಥಿತೋ ಬೌದ್ಧಪೂರ್ವಾಶ್ಚಾಹುರ್ವಿಷ್ಣುಂ ಪರಮಂ ಸರ್ವತೋಽಪಿ ॥ ೧೭ ॥

ತಾನಿ ಶಾಸ್ತ್ರಾಣಿ ಚ—ಆ ಶೈವಾದಿ ಶಾಸ್ತ್ರಗಳೂ ಕೂಡ, ವಿಷ್ಣೋಃ—ಶ್ರೀಮನ್ನಾರಾಯಣನಿಗೆ, ಶಿವಾದಿಭ್ಯಃ— ಶ್ರೀರುದ್ರಾದಿಗಳಿಗಿಂತಲೂ, ಆಧಿಕ್ಯಂ — ಶ್ರೇಷ್ಠತೆಯನ್ನು, ಆಹುಃ — ಹೇಳುತ್ತವೆ, ವೇದೇ — ವೇದದಲ್ಲಿ, ಕುತ್ರಚಿತ್ — ಎಲ್ಲಿಯೂ, ವಿಷ್ಣೂತ್ಕೃಷ್ಟಃ — ಶ್ರೀನಾರಾಯಣನಿಗಿಂತಲೂ ಶ್ರೇಷ್ಠನಾದ ವ್ಯಕ್ತಿಯು, ನೈವ ಕಥಿತ:— ಹೇಳಲ್ಪಟ್ಟಿರುವದೇ ಇಲ್ಲ. ಬೌದ್ಧಪೂರ್ವಾಶ್ಚ — ಬೌದ್ಧರೇ ಮೊದಲಾದ ಅವೈದಿಕ ಮತೀಯರೂ ಕೂಡ, ವಿಷ್ಣುಂ — ಶ್ರೀಮನ್ನಾರಾಯಣನನ್ನು, ಸರ್ವತೋಽಪಿ ಪರಮಂ - ಸರ್ವೋತ್ತಮನನ್ನಾಗಿ, ಆಹುಃ — ಹೇಳುತ್ತಾರೆ. ॥ ೧೭ ॥

ಲೋಕಾಯತಾಶ್ಚ ಕ್ವಚಿದಾಹುರಗ್ರ್ಯಂ ವಿಷ್ಣುಂಗುರುಂ ಸರ್ವವರಂ ಬೃಹಸ್ಪತೇಃ ।
ಸರ್ವಾಗಮೇಷು ಪ್ರಥಿತೋಽತ ಏವವಿಷ್ಣುಸ್ಸಮಸ್ತಾಧಿಕ ಏವಮುಕ್ತಿದಃ ॥ ೧೮ ॥

ಲೋಕಾಯತ ಶ್ಚ — ಚಾರ್ವಾಕರೂ ಕೂಡ, ಕ್ವಚಿತ್ — ತಮ್ಮ ಗ್ರಂಥದ ಕೆಲವು ಭಾಗದಲ್ಲಿ, ವಿಷ್ಣುಂ — ಶ್ರೀಮನ್ನಾರಾಯಣನನ್ನು, ಬೃಹಸ್ಪತೇಃ—ತಮ್ಮ ಮತಪ್ರವರ್ತಕರಾದ ಬೃಹಸ್ಪತ್ಯಾಚಾರ್ಯರಿಗೆ, ಅಗ್ರ್ಯಂ ಗುರುಂ— ಪ್ರಥಮ ಗುರುವನ್ನಾಗಿ, (ಅದ್ದರಿಂದಲೇ) ಸರ್ವವರಂ — ಸರ್ವೋತ್ತಮನನ್ನಾಗಿ, ಆಹುಃ — ಹೇಳುವರು, ಅತಃ — ಹೀಗೆ ಎಲ್ಲರೂ ಒಪ್ಪಿದ್ದರಿಂದಲೇ, ಸರ್ವಾಗಮೇಷು-ಎಲ್ಲ ಶಾಸ್ತ್ರಗಳಲ್ಲಿ. ಮುಕ್ತಿದಃ—ಮೋಕ್ಷಪ್ರದನಾದ, ವಿಷ್ಣುಃ ಏವ — ಶ್ರೀನಾರಾಯಣನೇ, ಸಮಸ್ತಾಧಿಕಃ—ಸರ್ವೋತ್ತಮನು, ಇತಿ—ಎಂದು, ಪ್ರಥಿತಃ—ಪ್ರಸಿದ್ಧನಾಗಿರುವನು. ॥ ೧೮ ॥

ತೇಷ್ವಾಗಮೇಷ್ವೇವ ಪರಸ್ಪರಂಚ ವಿರುದ್ಧತಾ ಹ್ಯನ್ಯಪಕ್ಷೇಷು ಭೂಪಾಃ ।
ಪ್ರತ್ಯಕ್ಷತಶ್ಚಾತ್ರ ಪಶ್ಯಧ್ವಮಾಶು ಬಲಂ ಬಾಹ್ವೋರ್ಮೇ ವಿಷ್ಣುಪದಾಶ್ರಯಸ್ಯ ॥ ೧೯ ॥

ಭೂಪಾಃ — ರಾಜರೇ, ಅನ್ಯಪಕ್ಷೇಷು- ಇತರ ಮತಗಳಲ್ಲಿ, ತೇಷುಆಗಮೇಷು ಏವ-ಅವರ ಶಾಸ್ತ್ರಗಳಲ್ಲಿಯೇ ಪರಸ್ಪರಂಚ — ತಮ್ಮ ಪೂರ್ವೋತ್ತರ ವಾಕ್ಯಗಳಿಗೂ ಕೂಡ ವಿರುದ್ಧತಾ — ವಿರೋಧವಿರುವದು, ವಿಷ್ಣುಪದಾಶ್ರಯಸ್ಯ — ಶ್ರೀ ಮನ್ನಾರಾಯಣನ ಪಾದವನ್ನಾಶ್ರಯಿಸಿದ, ಮೇ — ನನ್ನ, ಬಾಹ್ವೋಃ — ಬಾಹುಗಳ, ಬಲಂ — ಶಕ್ತಿಯನ್ನು, ಪ್ರತ್ಯಕ್ಷತಶ್ಚ — ಪ್ರತ್ಯಕ್ಷವಾಗಿಯೂ, ಆಶು—ಬೇಗನೆ, ಪಶ್ಯಧ್ವಂ — ನೋಡಿರಿ, (ವಿಷ್ಣುಭಕ್ತನಾದ ನನ್ನ ಬಲವೇ ಅಧಿಕವಾಗಿರುವಾಗ, ವಿಷ್ಣುವು ಅಧಿಕನೆಂದು ಏನು ಹೇಳುವದು ? ಕೈಮುತ್ಯನ್ಯಾಯದಿಂದ ಸಿದ್ಧವಾಗುವದು ಎಂದು ಶ್ರೀಭೀಮಸೇನದೇವರ ಅಭಿಪ್ರಾಯ). ॥ ೧೯ ॥

ಅವತಾರಿಕೆ — ತಮ್ಮ ಶಕ್ತಿಯ ಆಧಿಕ್ಯದ ಬಗೆಗೆಯೇ ಉದಾಹರಣೆ ಪೂರ್ವಕ ವಿವರಣೆ ಕೊಡುತ್ತಾರೆ.

ಪೂರ್ವಂ ಹಿ ಗಂಗಾ ಮನು ವಿಷ್ಣುಪೂಜಾವಿಘ್ನಾರ್ಥಮಾಯಾದ್ವಾಮಕರೇಣಸಾಮೇ ॥
ನುನ್ನಾ ಪರಸ್ತಾದ್ಬಹು ಯೋಜನಂಗತಾ ಪುರೇ ಕೂರುಣಾಂ ಶಿವ ಆಗತಸ್ತದಾ ॥೨೦॥

ಕುರೂಣಾಂ ಪುರೇ— ಹಸ್ತಿನಾವತಿ ಪಟ್ಟಣದಲ್ಲಿಯೇ, ಪೂರ್ವಂ— ಹಿಂದೆ ಬಾಲ್ಯದಲ್ಲಿಯೇ, ಗಂಗಾ — ಪ್ರವಾಹ ರೂಪಳಾದ ಗಂಗೆಯಂ, ಮಮ — ನನ್ನ, ವಿಷ್ಣುಪೂಜಾವಿಘ್ನಾರ್ಥಂ — ವಿಷ್ಣುಪೂಜಾ ಕಾರ್ಯಕ್ಕೆ ವಿಘ್ನವಾಡುವದಕ್ಕಾಗಿ, ಆಯಾತ್ — ಬಂದಳು. ಸಾ-ಆವಳು,ಮೇ—ನನ್ನ, ವಾಮಕರೇಣ — ಎಡಗೈಯಿಂದಲೇ, ನುನ್ನಾಸತೀ — ಒಗೆಯಲ್ಪಟ್ಟವಳಾಗಿ, ತತಃ — ಪ್ರವಾಹ ಹರಿಯುತ್ತಿದ್ದ ಸ್ಥಳದಿಂದ, ಪರಸ್ತಾತ್ — ಹಿಂದೆ ದೂರಕ್ಕೆ, ಬಹುಯೋಜನಂ— ಬಹಳ ಯೋಜನಗಳ ಪರ್ಯಂತ, ಗತಾ — ಹೋದಳು. ತದಾ— ಆ ಸಮಯದಲ್ಲಿ, ಶಿವಃ— ಶ್ರೀರುದ್ರದೇವರು, ಆಗತಃ — ಬಂದರು. ॥೨೦॥

ಸವ್ಯಾಘ್ರರೂಪೀಕಪಿಲಾತ್ಮಿಕಾಮುಮಾಂ ಪರೀಕ್ಷಯನ್ ಹಂತು ಮಿವಾದ್ರವದ್ ದ್ರುತಂ ॥
ಸಮೇಯಿವಾನ್ದ್ಧೇ ವಿಜಿತೋಮೂರ್ಛಿತಶ್ಚ ಗದಾಪ್ರಹಾರಾದಾಸ ಲಿಂಗಾಂತರಸ್ಥಃ ॥೨೧॥

ವ್ಯಾಘ್ರರೂಪೀ ಸಃ— ಹುಲಿಯ ವೇಷವುಳ್ಳ ಆ ರುದ್ರದೇವರು, ಮಾಂ ಪರೀಕ್ಷಯನ್— ನನ್ನ ಬಲವನ್ನು ಪರೀಕ್ಷಿಸುವದಕ್ಕಾಗಿ, ಕಪಿಲಾತ್ಮಿಕಾಂ ಉಮಾಂ — ಆಕಳುರೂಪವುಳ್ಳ ಪಾರ್ವತಿಯನ್ನು, ಹಂತುಮಿವ—ಕೊಲ್ಲಲೋ ಎಂಬಂತೆ, ದ್ರುತಂ ಆದ್ರವತ್— ಬೇಗ ಓಡಿಬಂದರು. ಸಃ—ಆ ರುದ್ರನು, ಮೇ — ನನ್ನಿಂದ, ಯುದ್ಧೇ — ಯುದ್ಧದಲ್ಲಿ, ವಿಜಿತಃ— ಸೋತನು. ಗದಾಪ್ರಹಾರಾತ್ — ನನ್ನಗದಾ ಹೊಡೆತದಿಂದ, ಮೂರ್ಛಿತಃ— ಮೂರ್ಛೆಹೊಂದಿದನು, ಲಿಂಗಾಂತರಸ್ಥಃ ಆಸ — (ಎಚ್ಚರವಾದ ಮೇಲೆ) ಲಿಂಗದಲ್ಲಿ ಅಡಗಿದವನಾದನು. ॥೨೧॥

ವ್ಯಾಘ್ರೇಶ್ವರಂ ನಾಮಲಿಂಗಂ ಪೃಥಿವ್ಯಾಂ ಖ್ಯಾತಂ ತದಾಸ್ತೇ ತದ್ವದನ್ಯತ್ರಯುದ್ಧಂ ॥
ತೀರೇ ಗೋಮತ್ಯಾ ಹ್ಯೈಮವತೇಗಿರೌ ಹಿ ಜಿತಸ್ತತ್ರಾಪ್ಯಾಸ ಶಾರ್ದೂಲಲಿಂಗಂ ॥೨೨॥

ತತ್ — ಶಿವನಂ ಪ್ರವೇಶಮಾಡಿದ ಆ ಲಿಂಗವು, ಪೃಥಿವ್ಯಾಂ—ಭೂಮಿಯಲ್ಲಿ ವ್ಯಾಘ್ರೇಶ್ವರಂ ಲಿಂಗಂ ನಾಮ— ವ್ಯಾಘ್ರೇಶ್ವರ ಲಿಂಗವೆಂದು, ಖ್ಯಾತಂ ಆಸ್ತೇ — ಪ್ರಸಿದ್ಧವಾಗಿಹ ತದ್ವತ್ — ಆದೇರೀತಿಯಾಗಿ, ಅನ್ಯತ್ರ— ಇನ್ನೊಂದು ಕಡೆ, ಹ್ಯೈಮವತೇ ಗಿರೌ — ಹಿಮಾಲಯ ಪರ್ವತದಲ್ಲಿ, ಗೋಮತ್ಯಾಃ ತೀರೇ — ಗೋಮತೀನದಿಯ ತೀರ ಪ್ರದೇಶದಲ್ಲಿ, ಯುದ್ಧಂ— ಯುದ್ಧವು (ಆಸ ಆಯಿತು) ತತ್ರಾಪಿ — ಆ ಯುದ್ಧದಲ್ಲಿಯೂ ಕೂಡ, (ಶಿವಃ—ರುದ್ರದೇವನು) ಜಿತಃ— ಗೆಲ್ಲಲ್ಪಟ್ಟನು. ಶಾರ್ದೂಲಲಿಂಗಂ ಆಸ—ಶಾರ್ದೂಲ ಲಿಂಗರೂಪನೂ ಆದನು. ಹಿ—ಈ ವಿಷಯವು ಪ್ರಸಿದ್ಧವು. ॥೨೨॥

ಏವಂ ಪ್ರತ್ಯಕ್ಷೇ ವಿಷ್ಣುಪದಾಶ್ರಯಸ್ಯ ಬಲಾಧಿಕ್ಯೇಕಿಮುವಕ್ತವ್ಯಮತ್ರ ॥
ವಿಷ್ಣೋರಾಧಿಕ್ಯೇ ಕ್ಷತ್ರಿಯಾಣಾಂ ಪ್ರಮಾಣಂಬಲಂ ವಿಪ್ರೇಜ್ಞಾನಮೇವೇತಿಚಾಹುಃ ॥೨೩॥

ಏವಂ— ಈ ರೀತಿಯಾಗಿ, ಅತ್ರ — ಈ ಲೋಕದಲ್ಲಿ, ವಿಷ್ಣುಪದಾಶ್ರಯಸ್ಯ— ಶ್ರೀಮನ್ನಾರಾಯಣನಪಾದ ವನ್ನಾಶ್ರಯಿಸಿದ(ನನ್ನ), ಬಲಾಧಿಕ್ಯೇ —ಅಧಿಕಬಲವೇ, ಪ್ರತ್ಯಕ್ಷೇ-ಪ್ರತ್ಯಕ್ಷಸಿದ್ಧವಾಗಿರುವಾಗ, ವಿಷ್ಣೋಃ ಆಧಿಕ್ಯೇ- ಶ್ರೀಮನ್ ನಾರಾಯಣನ ಉತ್ತಮತ್ವದಬಗ್ಗೆ, ಕಿಮು ವಕ್ತವ್ಯಂ — ಹೇಳಬೇಕೇನು ? (ಹೇಳಬೇಕಿಲ್ಲ ಸ್ವತಃ ಸಿದ್ಧ ಎಂದು ತಾತ್ಪರ್ಯ) ಕ್ಷತ್ರಿಯಾಣಾಂ — ಕ್ಷತ್ರಿಯರಲ್ಲಿ ಉತ್ತಮತ್ವ ಅಧಮತ್ವವನ್ನು ತಿಳಿಯುವ ಬಗ್ಗೆ, ಬಲಂ ಪ್ರಮಾಣಂ ಇತಿ— ಸಾಮರ್ಥ್ಯವು ಆಧಾರವು (ಹೆಚ್ಚು ಶಕ್ತಿಉಳ್ಳವನು ಉತ್ತಮನು, ಕಡಿಮೆ ಶಕ್ತಿಉಳ್ಳವನು ಅಧಮನು) ಎಂದು, ವಿಪ್ರೇ— ಬ್ರಾಹ್ಮಣರಲ್ಲಿ

ಆ ತಾರತಮ್ಯ ತಿಳಿಯಲು, ಜ್ಞಾನಂಪ್ರವರಾಣಂ ಇತಿ— ಜ್ಞಾನವು ಆಧಾರವು (ಅಧಿಕ ಜ್ಞಾನವುಳ್ಳವನು ಶ್ರೇಷ್ಠನು, ಕಡಿಮೆ ಜ್ಞಾನವುಳ್ಳವನು ಕನಿಷ್ಠನು) ಎಂದು, ಆಹುಃ – ಜ್ಞಾನಿಗಳು ಹೇಳುವರು ॥೨೩॥

ಮಯಾ ಕೇದಾರೇ ವಿಪ್ರರೂಪೀಜಿತಶ್ಚ ರುದ್ರೋಽವಿಶಲ್ಲಿಂಗಮೇವಾಶುಭೀತಃ ॥
ತತಃ ಪರಂವೇದವಿದಾಮಗಮ್ಯತಾಶಾಪಂ ಪ್ರಾದಾಚ್ಛಂಕರೋ ವ್ರೀಳಿತೋಽತ್ರ ॥೨೪॥

ಮಯಾ – ನನ್ನಿಂದ, ಕೇದಾರೇ ಚ– ಕೇದಾರಕ್ಷೇತ್ರದಲ್ಲಿಯೂ ಕೂಡ, ವಿಪ್ರರೂಪೀ ರುದ್ರಃ – ಬ್ರಾಹ್ಮಣರೂಪದಲ್ಲಿ ಬಂದ ಶಿವನು, ಜಿತಃ – ಗೆಲ್ಲಲ್ಪಟ್ಟನು. ಭೀತಃಸನ್ – ಹೆದರಿದವನಾಗಿ, ಲಿಂಗಮೇವ – ಲಿಂಗವನ್ನೇ, ಆಶು– ಕೂಡಲೇ ಅವಿಶತ್— ಪ್ರವೇಶಿಸಿದನು. ತತಃಪರಂ – ಆ ನಂತರದಿಂದ, ವ್ರೀಳಿತಃ ಶಂಕರಃ— ನಾಚಿಕೆಪಟ್ಟುಕೊಂಡ ರುದ್ರನು, ಅತ್ರ– ಈ ಕೇದಾರಕ್ಷೇತ್ರಕ್ಕೆ, ವೇದವಿದಾಂ ಅಗಮ್ಯತಾಶಾಪಂ— ವೇದಜ್ಞಾನಿಗಳಿಂದ ಹೊಂದಲ್ಪಡದಂತಾಗಲಿ ಎಂಬ ಶಾಪವನ್ನು, ಪ್ರಾದಾತ್ – ಕೊಟ್ಟರು ॥೨೪॥

ಏವಂಪ್ರತ್ಯಕ್ಷೇ ವಿಷ್ಣುಬಲೇಪ್ರತೀಪಂ ಮನೋಯಸ್ಯಹ್ಯುತ್ತರಂ ಸಬ್ರವೀತು ॥
ಕ್ರೋಧೋಽಧಿಕಶ್ಚೇತ್ ಕ್ಷಿಪ್ರಮಾಯಾತು ಯೋದ್ಧುಮಿತ್ಯುಕ್ತಾಸ್ತೇಹ್ಯಾಯಯುರಾತ್ತಶಸ್ತ್ರಾಃ ॥೨೫॥

ಏವಂ – ಹೀಗೆ, ಪ್ರತ್ಯಕ್ಷೇ ವಿಷ್ಣುಬಲೇ—ಪ್ರತ್ಯಕ್ಷಸಿದ್ಧವಾದ ಶ್ರೀಮನ್ನಾರಾಯಣನ ಸಾಮರ್ಥ್ಯದಬಗ್ಗೆ, ಯಸ್ಯ ಮನಃ—ಯಾವನ ಮನಸ್ಸು, ಪ್ರತೀಪಂ – ವಿರುದ್ಧವಾಗಿದೆಯೋ, ಸಃ – ಅವನು, ಉತ್ತರಂ ಬ್ರವೀತು — ಉತ್ತರವನ್ನು ಹೇಳಲಿ. ಹಿ—ನಿಶ್ಚಯವು. ಕ್ರೋಧಃ ಅಧಿಕಃ ಚೇತ್— ಸಿಟ್ಟು ಹೆಚ್ಚಾಗಿದ್ದರೆ, ಯೋದ್ಧುಂ— ಯುದ್ಧ ಮಾಡುವದಕ್ಕಾಗಿ, ಕ್ಷಿಪ್ರಂ ಆಯಾತು— ಬೇಗ ಬರಲಿ, ಇತಿ ಉಕ್ತಾಃ— ಈ ರೀತಿ ಹೇಳಿಸಿಕೊಳ್ಳಲ್ಪಟ್ಟ ಆ ರಾಜರೆಲ್ಲ, ಆತ್ತಶಸ್ತ್ರಾಃಸಂತಃ – ಶಸ್ತ್ರಧಾರಿಗಳಾಗಿ, ಅಯಯುಃ – (ಯುದ್ಧಕ್ಕಾಗಿ) ಬಂದರು. ಹಿ – ಇದು ಹಾಗೂ ಮುಂದಿನ ವಿಷಯವು ಎಲ್ಲವು ಎಲ್ಲರ ಪ್ರತ್ಯಕ್ಷಸಿದ್ಧವು. ॥೨೫॥

ವಿದ್ರಾವ್ಯತಾನ್ ಬಾಣಸಂಘೈಸ್ಸಮಸ್ತಾನ್ ಜರಾಸುತಂ ಗದಯಾ ಪೋಥಯಿತ್ವಾ ॥
ಬಾಹುಭ್ಯಾಂ ಚೈನಂ ಪರಿಗೃಹ್ಯಾಶು ವಿಷ್ಣೋಃಪಾದೋತ್ಥಾಯಾಂ ಪ್ರಾಕ್ಷಿಪದ್ದೇವನದ್ಯಾಂ ॥೨೬॥

(ಭೀಮಃ – ಶ್ರೀಭೀಮಸೇನದೇವರು), ತಾನ್ ಸಮಸ್ತಾನ್ – ಅವರೆಲ್ಲರನ್ನು ಬಾಣಸಂಘೈಃ— ಬಾಣಗಳ ಸಮೂಹಗಳಿಂದ, ವಿದ್ರಾವ್ಯ – ಓಡಿಸಿ, ಜರಾಸುತಂ – ಜರಾಸಂಧನನ್ನು, ಗದಯಾ— ಗದಾಯುಧದಿಂದ, ಪೋಥಯಿತ್ವಾ – ಮರ್ದನಮಾಡಿ, ಚ. ಮತ್ತು, ಏನಂ— ಈ ಜರಾಸಂಧನನ್ನು, ಆಶು – ಕೂಡಲೇ, ಬಾಹುಭ್ಯಾಂ ಪರಿಗೃಹ್ಯ – ಕೈಗಳಿಂದ ಹಿಡಿದು, ವಿಷ್ಣೋಃ ಪಾದೋತ್ಥಾಯಾಂ— ಶ್ರೀಮನ್ನಾರಾಯಣನ ಪಾದದಿಂದ ಹೊರಟಿರುವ, ದೇವನದ್ಯಾಂ – ದೇವ ನದಿಯಾದ ಗಂಗೆಯಲ್ಲಿ, ಪ್ರಾಕ್ಷಿಪತ್—ಒಗೆದರು. ॥೨೬॥

ಸವ್ರೀಳಿತಃ ಪ್ರಯಯೌ ಕಾಗಧಾಂಶ್ಚ ಭೂಪೈಸ್ಸಮೇತೋ ಭೀಮಸೇನೋರಥಂಸ್ವಂ ॥
ಆರುಹ್ಯ ಕಾಶೀಶ್ವರಪೂಜಿತಶ್ಚ ಯಯೌ ಕಾಲ್ಯಾ ಶಕ್ರಸನಾಮಕಂ ಪುರಂ ॥೨೭॥

ವ್ರೀಳಿತ :ಸ :— ಲಜ್ಜಿತನಾದ ಆ ಜರಾಸಂಧನು, ಭೂಪೈ: ಸಮೇತಸ್ಸನ್–ಎಲ್ಲ ರಾಜರಿಂದ ಕೂಡಿದವನಾಗಿ, ಮಾಗಧಾನ್–ಮಗಧದೇಶಕ್ಕೆ ಯಯೌಚ–ಹೋಗಿಯೇ ಬಿಟ್ಟನು. ಭೀಮಸೇನಃ ಶ್ರೀಭಿಮಸೇನದೇವರು, ಸ್ವಂ ರಥಂ– ತಮ್ಮ ರಥವನ್ನು, ಆರುಹ್ಯ– ಏರಿ, ಕಾಶೀಶ್ವರಪೂಜಿತಃ ಚ ಸನ್— ಕಾಶೀರಾಜನಿಂದ ಪೂಜಿಸಿಕೊಂಡವರಾಗಿಯೂ, ಕಾಲ್ಯಾ (ಸಹ) – ಕಾಳೀದೇವಿಯಿಂದ ಕೂಡಿಕೊಂಡು, ಶಕ್ರಸನಾಮಕಂ ಪುರಂ —ಇಂದ್ರ ಪ್ರಸ್ಥ ಪಟ್ಟಣವನ್ನು ಕುರಿತು, ಯಃಯೌ– ಹೋದರು. ॥೨೭॥

ತಸ್ಯಾಂ ತ್ರಿಲೋಕಾಧಿಕರೂಪಸದ್ಗುಣೈರಾಸಮ್ಮಿತಾಯಾಂರಮಮಾಣಸ್ಸ್ತಂಚ ।
ಶರ್ವತ್ರಾತಂ ನಾಮಾಜನಯತ್ಪುರಾ ಯುಸ್ಸಮಾನವಾಯುರ್ಬಲವೀರ್ಯಯುಕ್ತಃ ॥೨೮॥

(ಸಃ–ಆ ಭೀಮರು). ತ್ರಿಲೋಕಾಧಿಕರೂಪಸದ್ಗುಣೈಃ– ಮೂರುಲೋಕದ ಎಲ್ಲರಿಗಿಂತಲೂ ಹೆಚ್ಚಾದ ಸೌಂದರ್ಯ, ಜ್ಞಾನಾದಿಗುಣಗಳಿಂದ, ಆಸಮ್ಮಿತಾಯಾಂ -- ತನಗೆ ಅತ್ಯಂತಯೋಗ್ಯಳಾದ, ತಸ್ಯಾಂ — ಆ ಕಾಳೀದೇವಿಯಲ್ಲಿ, ರಮಮಾಣಸ್ಸನ್ — ವಿಹರಿಸುವವರಾಗಿ, ಯಃ — ಯಾವನು, ಬಲವೀರ್ಯಯುಕ್ತಃ – ಶಕ್ತಿಪರಾಕ್ರಮಗಳಿಂದ ಕೂಡಿದವನೋ, ಪುರಾ – ಮೂಲರೂಪದಲ್ಲಿ, ಸಮಾನವಾಯುಃ – ಸಮಾನವಾಯುವೋ, ತಂ— ಅಂಥ, ಶರ್ವತ್ರಾತಂ ನಾಮ ಸುತಂಚ – ಶರ್ವತ್ರಾತ ಎಂಬ ಮಗನನ್ನೂಕೂಡ, ಅಜನಯತ್— ಪಡೆದರು. ॥೨೮॥

ಕೃಷ್ಣೋಽಪಿ ಗತ್ವಾ ದ್ವಾರವತೀಂ ಸರಾಮಸ್ತ್ಯಾಪಿತುರ್ವಧಕರ್ತಾರಮೇವ ।
ಶತಧನ್ವಾನಂ ಹಂತುಮೈಚ್ಛತ್ಸಚೈವ ಯುಯಾಚೇಽಕ್ರೂರಂ ಕೃತವರ್ಮಾನುಯುಕ್ತಂ ॥೨೯॥

ಸ ರಾಮ ; — ಬಲರಾಮನಿಂದ ಸಹಿತನಾದ, ಕೃಷ್ಣೋಽಪಿ – ಶ್ರೀಕೃಷ್ಣನಾದರೂ ಕೂಡ, ದ್ವಾರವತೀಂ ದ್ವಾರಕಾ ಪಟ್ಟಣಕ್ಕೆ, ಗತ್ವಾ —ಹೋಗಿ,ಸತ್ಯಾಪಿತುಃ – ಸತ್ಯಾಭಾಮಾದೇವಿಯ ತಂದೆಯಾದ ಸತ್ರಾಜಿತರಾಜನ ವಧಕರ್ತಾರಂ– ಸಂಹಾರ ಮಾಡಿದಂಥ, ಶತಧನ್ವಾನಂ— ಶತಧನ್ವನನ್ನು, ಹಂತುಂ – ಕೊಲ್ಲಲು, ಐಚ್ಛದೇವ—ಇಚ್ಛಿಸಿಯೇಬಿಟ್ಟನು ಸಃಚ– ಶತಧನ್ವನಾದರೂ ಕೂಡ, ಕೃತವರ್ಮಾನುಯುಕ್ತಂ— ಕೃತವರ್ಮನಿಂದ ಕೂಡಿದ, ಅಕ್ರೂರಮೇವ —ಅಕ್ರೂರನನ್ನೇ; ಯಯಾಚೇ— ಪ್ರಾರ್ಥಿಸಿದನು. ॥೨೯॥

ತಾವಬ್ರೂತಾಂ ಸರ್ವಲೋಕೈಕಕರ್ತುರ್ನಾವಾಂ ವಿರೋಧಂ ಮನಸಾಽಪಿ ಕುರ್ವಃ ।
ಕೃಷ್ಣಸ್ಯ ಸರ್ವೇಶಿತುರಿತ್ಯನೂಕ್ತ ಆರುಹ್ಯಚಾಶ್ವೀಂ ಭಯತಃ ಪರಾದ್ರವತ್ ॥೩೦॥

ತೌ— ಅವರಿಬ್ಬರೂ ಸರ್ವಲೋಕೈಕಕರ್ತುಃ — ಸರ್ವಜಗತ್ತಿನ ಮುಖ್ಯಕರ್ತನಾದ, ಸರ್ವೇಶಿತುಃ ಸಕಲ ಜಗದೊಡೆಯನಾದ, ಕೃಷ್ಣಸ್ಯ – ಶ್ರೀಕೃಷ್ಣನ, ವಿರೋಧಂ – ವಿರೋಧವನ್ನು, ಆವಾಂ — ನಾವಿಬ್ಬರೂ, ಮನಸಾ ಅಪಿ – ಮನಸ್ಸಿನಿಂದಲೂ ಕೂಡ, ನ ಕುರ್ವಃ– ಮಾಡುವದಿಲ್ಲ, ಇತಿ ಅಬ್ರೂತಾಂ – ಎಂದು ಹೇಳಿದರು. ಇತಿ–ಹೀಗೆ. ಅನೂಕ್ತಃ— ಪುನಃ ಪುನಃ ಹೇಳಿಸಿಕೊಂಡ ಆ ಶತಧನ್ವನು,ಭಯತಃ– ಶ್ರೀಕೃಷ್ಣಭಯದಿಂದ, ಅಶ್ವೀಂಆರುಹ್ಯ–ಹೆಣ್ಣು ಕುದುರೆಯೊಂದನ್ನು ಏರಿ, ಪರಾದ್ರವತ್ — ಓಡಿಹೋದನು ॥೩೦॥

ತಾವನ್ಯೋವ ತಂ ಕೃಷ್ಣರಾವೌ ರಥೇನ ಯಾತೌ ಶತಂ ಯೋಜನಾನಾಂ ದಿನೇನ ।
ಗತ್ವಾ ಮೃತಾಯಾಂ ವಡವಾಯಾಂ ತದೈವ ಸಪ್ರಾದ್ರವತ್ ಕೃಷ್ಣ ಏನಂ ಪದಾಽಗಾತ್ ॥೩೧॥

ಕೃಷ್ಣರಾವಪೌ — ಶ್ರೀಕೃಷ್ಣಬಲರಾಮರಿಬ್ಬರು, ತಂ ಅನ್ವೇವ— ಅವನ ಹಿಂದೆಯೇ, ರಥೆ ನ - ರಥದಿಂದ, ಯಾತೌ - ಹೋದರು, ತಡವಾಯಾಂ – ಶತಧನ್ವನ ಆ ಹೆಣ್ಣು ಕುದುರೆಯು, ದಿನೇನ – ಆ ಒಂದು ಹಗಲಿನಲ್ಲಿ,ಯೋಜನಾನಾಂ ಶತಂ – ಒಂದನೂರು ಯೋಜನಗಳ ಪರ್ಯಂತ, ಗತ್ವಾ – ಹೋಗಿ, ಮೃತಾಯಾಂ ಸತ್ಯಾಂ— ಸಾಯುತ್ತಿರಲು, ತದೈವ- ಆಗಕೂಡಲೇ, ಸ:- ಆ ಶತಧನ್ವನು, ಪ್ರಾದ್ರವತ್ — ಓಡಿದನು, ಕೃಷ್ಣ: – ಶ್ರೀಕೃಷ್ಣನೂ, ಏನಂ — ಈ ಶತಧನ್ವನನ್ನು ಕುರಿತು, ಪದಾ — ಕಾಲಿನಿಂದ, ಅಗಾತ್ — ಹೋದನು. ॥೩೧॥

ಭಿತ್ವಾ ಶಿರಸ್ತಸ್ಯ ಚಕ್ರೇಣಕೃಷ್ಣೋ ಜಾನನ್ನಕ್ರೂರೇ ಮಣಿಮೇನೇನದತ್ತಂ ॥
ಅಪ್ಯಜ್ಞವಲ್ಲೋಕವಿಡಂಬನಾಯ ಪರೀಕ್ಷ್ಯವಾಸೋಽತ್ರನೇತ್ಯಾಹ ರಾಮಂ ॥೩೨॥

ಕೃಷ್ಣಃ – ಶ್ರೀಕೃಷ್ಣನು, ತಸ್ಯ ಶಿರಃ – ಆ ಶತಧನ್ವನ ತಲೆಯನ್ನು, ಚಕ್ರೇಣ – ತನ್ನ ಚಕ್ರದಿಂದ, ಭಿತ್ವಾ – ಕತ್ತರಿಸಿ, ಮಣಿಂ— ಸ್ಯಮಂತಕಮಣಿಯನ್ನು, ಏನೇನ – ಈ ಶತಧನ್ವನಿಂದ, ಅಕ್ರೂರೇ – ಅಕ್ರೂರನವಶದಲ್ಲಿ, ದತ್ತಂ— ಕೊಡಲ್ಪಟ್ಟವಿಷಯವನ್ನು, ಜಾನನ್ನಪಿ — ತಿಳಿದವನಾದರೂ ಕೂಡ, ಲೋಕವಿಡಂಬನಾಯ - ಲೋಕದಂತೆನಟನೆಗಾಗಿ, ಅಜ್ಞವತ್— ತಿಳಿಯದವರಂತೆ, ವಾಸಃ— ಶತಧನ್ವನವಸ್ತ್ರವನ್ನು, ಪರೀಕ್ಷ್ಯ – ಪರೀಕ್ಷಿಸಿ, ಅತ್ರ – ಈ ಶತಧನ್ವನ ಹತ್ತಿರ, ನ—ಸ್ಯಮಂತಕಮಣಿಯು ಇಲ್ಲ, ಇತಿ—ಎಂದು, ರಾಮಂ – ಶ್ರೀಬಲರಾಮನನ್ನು ಕುರಿತು, ಆಹ—ಹೇಳಿದನು. ॥೩೨॥

ಅವಿಶ್ವಾಸಾತ್ಸ ತು ಸಕ್ರೋಧವಿವ ಯಯೌ ವಿದೇಹಾನವಸತ್ಪಂಚ ಚಾಬ್ದಾನ್ ॥
ಜಾನನ್ ಪಾರ್ಥೇಭ್ಯೋಽಹಾರ್ಯತಾಂ ಕೇಶವಸ್ಯ ವಶೀಕರ್ತುಂ ಧಾರ್ತರಾಷ್ಟ್ರೋಬಲಂಗಾತ್ ॥೩೩॥

ತು—ಆದರೆ, ಸಃ- ಆ ಬಲರಾಮದೇವರು, ಅವಿಶ್ವಾಸಾತ್ – ಶ್ರೀಕೃಷ್ಣನ ಮಾತಿನಲ್ಲಿ ವಿಶ್ವಾಸವಿಲ್ಲದೇ, ~~ಸಕ್ರೋಧಃ ಏವ — ಸಿಟ್ಟಿನಿಂದಸಹಿತರಾಗಿಯೇ, ವಿದೇಹಾನ್ — ಮಿಥಿಲಾಪಟ್ಟಣವನ್ನು ಕುರಿತು, ಯಯೌ — ಹೋದರು.~~ ಚ-ಮತ್ತು, ಪಂಚ ಅಬ್ದಾನ್ – ಐದುವರ್ಷಗಳವರೆಗೆ, ಅವಸತ್ – ವಾಸಮಾಡಿದರು. ಧಾರ್ತರಾಷ್ಟ್ರಃ – ದುರ್ಯೋಧನನು, ಕೇಶವಸ್ಯ—ಶ್ರೀಕೃಷ್ಣನ(ನ್ನು),ಪಾರ್ಥೇಭ್ಯಃ – ಪಾಂಡವರ ದೆಶೆಯಿಂದ,ಅಹಾರ್ಯತಾಂ—ತನ್ನ ಕಡೆಸೆಳೆಯಲು ಅಶಕ್ಯತೆಯನ್ನು, ಜಾನನ್ ಸನ್—ತಿಳಿದವನಾಗಿ, ಬಲಂ ವಶೀಕರ್ತುಂ- ಬಲರಾಮನನ್ನು ತನ್ನವಶಕ್ಕೆ ತೆಗೆದುಕೊಳ್ಳುವದಕ್ಕಾಗಿ,(ಅ) ಗಾತ್ – ಮಿಥಿಲೆಗೆ ಹೋದನು. ॥೩೩॥

ಬಭೂವ ಶಿಷ್ಯೋಽಸ್ಯ ತಥಾ ಗದಾಯಾಮುಸನ್ನಿಧಾನಂ ಕೇಶವಸ್ಯ ಪ್ರತೀಕ್ಷನ್ ॥
ತದಾಯಯಾಚೇ ಭಗಿನೀಂ ಚ ತಸ್ಯ ಸಚ ಪ್ರತಿಜ್ಞಾಮಕರೋತ್ಪ್ರದಾನೇ ॥೩೪॥

ತಥಾ — ಹಾಗೂ, ಕೇಶವಸ್ಯ ಅಸನ್ನಿಧಾನಂ – ಶ್ರೀಕೃಷ್ಣನಇಲ್ಲದಿರುವಿಕೆಯನ್ನು (ಬಲರಾಮನ ಸಮೀಪದಲ್ಲಿ) ಪ್ರತೀಕ್ಷನ್ – ನೀರಿಕ್ಷಿಸುತ್ತಿದ್ದಂಥ ಆ ದುರ್ಯೋಧನನು, ಗದಾಯಾಂ—ಗದಾವಿದ್ಯೆಯಲ್ಲಿ,ಅಸ್ಯ – ಈ ಬಲರಾಮನ, ಶಿಷ್ಯಃ – ಶಿಷ್ಯನು, ಬಭೂವ—ಆದನು. ಚ—ಮತ್ತು, ತದಾ - ಆಗ,ತಸ್ಯ—ಆ ಬಲರಾಮನ, ಭಗಿನೀಂ—ಸಹೋದರಿಯಾದ ಸುಭದ್ರೆಯನ್ನು ಯಯಾಚೇ — ತನಗೆ ಕೊಡಬೇಕೆಂದು ಪ್ರಾರ್ಥಿಸಿದನು, ಸಚ— ಆ ಬಲರಾಮನೂ ಕೂಡ, ಪ್ರದಾನೇ – ಅವನಿಗೆ ಕೊಡುವದಕ್ಕೆ, ಪ್ರತಿಜ್ಞಾಂ – ಪ್ರತಿಜ್ಞೆಯನ್ನು, ಅಕರೋತ್—ಮಾಡಿದನು, ॥೩೪॥

ಜ್ಯೇಷ್ಠಂಹ್ಯೇನಂ ಕೇಶವೋ ನಾತಿವರ್ತೇದಿತ್ಯೇವ ಮೇನೇ ಧಾರ್ತರಾಷ್ಟ್ರಃಸತಸ್ಮಾತ್ ॥
ಜಗ್ರಾಹ ಹಸ್ತಂ ದಕ್ಷಿಣಂ ಸತ್ಯಹೇತೋರ್ದದೌ ಚರಾಮಃ ಕರಮುಸ್ಮೈ ಹಲಾಂಕಂ ॥೩೫॥

ಸಃ ಧಾರ್ತರಾಷ್ಟ್ರಃ — ಆ ದುರ್ಯೋಧನನು, ಏನಂ ಜ್ಯೇಷ್ಠಂ — ಅಣ್ಣನಾದ ಈ ಬಲರಾಮನನ್ನು, ಕೇಶವಃ — ಶ್ರೀಕೃಷ್ಣನು, ನ ಅತಿವರ್ತೇತ್ — ಮೀರಲಾರನು, ಇತಿ ಹ್ಯೇವ — ಎಂಬುದಾಗಿಯೇ, ಮೇನೇ — ತಿಳಿದನು. ತಸ್ಮಾತ್ — ಹಾಗೆ ತಿಳಿದದ್ದರಿಂದ, ಸತ್ಯಹೇತೋಃ — ಸುಭದ್ರೆಯನ್ನು ಕೊಡುವೆನು ಎಂದು ಹೇಳಿದ ಬಲರಾಮನ ಮಾತಿನ ದಾರ್ಢ್ಯಕ್ಕಾಗಿ, ದಕ್ಷಿಣಂ ಹಸ್ತಂ — ಬಲರಾಮನ ಬಲಗೈಯನ್ನು, ಜಗ್ರಾಹ — ಹಿಡಿದನು. (ಅಂದರೆ ಖಂಡಿತ ನಿನ್ನ ಮಾತನ್ನು ನಡೆಸುತ್ತೀಯಾದರೆ ಕೈಮೇಲೆ ಕೈಹಾಕು ಎಂದು ಕೇಳದನು.) ರಾಮಃ — ಬಲರಾಮನು, ಹಲಾಂಕಂ — ಹಲಾಯುಧವು ಯಾವಾಗಲೂ ಚಿಹ್ನವಾಗಿರುವ, ಕರಂ — ಹಸ್ತವನ್ನು ಅಸ್ಮೈ — ಈ ದುರ್ಯೋಧನನಿಗೆ, ದದೌ — ಕೊಟ್ಟನು. ॥೩೫॥

ಅವ — ಸುಭದ್ರೆಯನ್ನು ಕೇಳುವ ದುರ್ಯೋಧನನ ಆಪೇಕ್ಷೆಯ ಉದ್ದೇಶವನ್ನು ಹೇಳುತ್ತಾರೆ —

ರೂಪೇಣ ತಸ್ಯಾ ಮೋಹಿತೋ ಧಾರ್ತರಾಷ್ಟ್ರೋವಿಶೇಷತಃ ಕೃಷ್ಣರಾವೌ ಭಗಿನ್ಯಾಃ ॥
ಸ್ನೇಹಾದ್ವಶಂ ಯಾಸ್ಯತ ಇತ್ಯಗೃಹ್ಣದ್ಧಸ್ತಂ ಹಲಾಂಕಂ ಹಲಿನೋ ರಿಪುಘ್ನಂ ॥೩೬॥

ತಸ್ಯಾಃ — ಆ ಸುಭದ್ರೆಯ, ರೂಪೇಣ - ಸೌಂದರ್ಯದಿಂದ, ಮೋಹಿತಃ - ಮೋಹವನ್ನು ಹೊಂದಿದ ಧಾರ್ತರಾಷ್ಟ್ರಃ - ದುರ್ಯೋಧನನು, ಕೃಷ್ಣರಾವೌ ಶ್ರೀಕೃಷ್ಣ — ಬಲರಾಮರು, ಭಗಿನ್ಯಾಃ — ಸಹೋದರಿಯಾದ ಸುಭದ್ರೆಯ, ವಿಶೇಷತಃ ಸ್ನೇಹಾತ್ — ವಿಶೇಷಪ್ರೀತಿಯಿಂದ, ವಶಂ — ನನ್ನ ಆಧೀನತೆಯನ್ನು (ಪಕ್ಷವನ್ನು), ಯಾಸ್ಯತಃ ಹೊಂದುತ್ತಾರೆ, ಇತಿ — ಎಂಬಭಾವದಿಂದ, ಹಲಿನಃ — ಬಲರಾಮನ, ರಿಪುಘ್ನಂ — ವೈರಿಗಳನ್ನು ಸಂಹರಿಸುವ, ಹಲಾಂಕಂ - ಹಲಾಯುಧವುಚಿಹ್ನವಾಗುಳ್ಳ ಹಸ್ತಂ — ಕೈಯನ್ನು, ಅಗೃಹ್ಣಾತ್ — ಸ್ವೀಕರಿಸಿದನು, (ಕೈಮೇಲೆ ಕೈಪೂರ್ವಕ ವಚನವನ್ನು ತೆಗೆದುಕೊಂಡನು.) ॥೩೬॥

ಜಾತಾ ದೇವಕ್ಯಾಂ ಸಾಸುಭದ್ರೇತಿ ನಾಮ್ನಾ ಭದ್ರಾರೂಪೇಣಾನಕದುಂದುಭೇಸ್ತಾಂ ॥
ಕೃತ್ವಾ ಪುತ್ರೀಂ ರೋಹಿಣೀಸ್ವಾಮರಕ್ಷತ್ಪೂರ್ವಂತು ಯಾಸೀತ್ರಿಜಟೈವನಾಮ್ನಾ ॥೩೭॥

ಪೂರ್ವಂ — ಹಿಂದೆ, ಯಾ — ಯಾವಳು, ನಾಮ್ನಾ ತ್ರಿಜಟಾ — ಹೆಸರಿನಿಂದ ತ್ರಿಜಟಾ ಎಂದು ಪ್ರಸಿದ್ಧಳೋ, ಸಾ — ಅವಳು, ರೂಪೇಣ — ಸೌಂದರ್ಯದಿಂದ, ಭದ್ರಾ — ಶುಭದಾಯಕಳು, ಇತಿ — ಎಂಬಕಾರಣದಿಂದ, ಸುಭದ್ರಾ ಇತಿ ನಾಮ್ನಾ — ಸುಭದ್ರಾಎಂಬ ಹೆಸರಿನಿಂದ, ಆನಕದುಂದುಭೇಃ — ವಸುದೇವನಿಂದ, ದೇವಕ್ಯಾಂ — ದೇವಕೀದೇವಿಯಲ್ಲಿ, ಜಾತಾ — ಹುಟ್ಟಿದಳು. ತಾಂ — ಅವಳನ್ನು, ರೋಹಿಣ್ಯೇ — ರೋಹಿಣೀದೇವಿಯಲಿ, ಸ್ವಾಂ ಪುತ್ರೀಂ — ಕೃತ್ವಾ — ತನ್ನಮಗಳನ್ನಾಗಿ ಮಾಡಿಕೊಂಡು, ಅರಕ್ಷತ — ರಕ್ಷಿಸಿದಳು. ॥೩೭॥

ಸೀತಾಯಾಃಪ್ರಾಜ್ಞಿತ್ಯಶುಶ್ರೂಷಣಾತ್ತಾನಬಭೂವ ವಿಷ್ಣೋರ್ಭಗಿನೀಪ್ರಿಯಾಚ ॥
ಉಮಾವೇಶಾದ್ರೂಪಗುಣೋಪಪನ್ನಾ ಪದ್ಮೇಕ್ಷಣಾಚಂಪಕದಾಮಗೌರೀ ॥೩೮॥

ಪದ್ಮೇಕ್ಷಣಾ — ಕಮಲದಂತೆ ಕಣ್ಣುಳ್ಳ, ಚಂಪಕದಾಮಗೌರೀ — ಸಂಪಿಗೆಮಾಲೆಯಂತೆ ಗೌರವರ್ಣಳಾದ, ಸಾ — ಆ ಸುಭದ್ರೆಯು, ಉಮಾವೇಶಾತ್ — ಪಾರ್ವತಿಯ ಆವೇಶದಿಂದ, ರೂಪಗುಣೋಪಪನ್ನಾ — ಸೌಂದರ್ಯ ಹಾಗೂ ಸದ್ಗುಣಗಳಿಂದಕೂಡಿದವಳು, ಚ — ಮತ್ತು, ಪ್ರಾಕ್ — ತಾನು ತ್ರಿಜಟೆಯಾಗಿರುವಾಗ, ಸೀತಾಯಾಃ — ಸೀತಾದೇವಿಯ, ನಿತ್ಯ ಶುಶ್ರೂಷಣಾತ್ — ನಿತ್ಯಸೇವೆಯನ್ನು ಮಾಡಿದ್ದರಿಂದ, ವಿಷ್ಣೋಃ — ಶ್ರೀಕೃಷ್ಣನ, ಪ್ರಿಯಾ ಭಗಿನೀ - ಪ್ರಿಯಳಾದ ಸಹೋದರಿಯು ಬಭೂವ — ಆದಳು. ॥೩೮॥

ಏತತ್ಕೃತ್ವಾ ಧೃತರಾಷ್ಟ್ರಾತ್ಮಜಸ್ಸ ಯಯೌ ಕುರೂನ್ ನಿವಸತ್ಕತ್ರರಾಮೋ ॥
ಕೃಷ್ಣೋ೭ಕ್ರೂರಂ ನಿವಸಂತಂ ಭಯೇನ ಸಹಾರ್ದಿಕ್ಯಂ ಚಾನಯಿತ್ವಾಜಗಾದ ॥೩೯॥

ಧೃತರಾಷ್ಟ್ರಾತ್ಮಜಃ ಸಃ — ಧೃತರಾಷ್ಟ್ರಪುತ್ರನಾದ ಆ ದುರ್ಯೋಧನನು ಏತತ್ — ಇಷ್ಟು ಕಾರ್ಯವನ್ನು, ಕೃತ್ವಾ — ಮಾಡಿ, ಕುರೂನ್ — ಹಸ್ತಿನಾವತಿಗೆ, ಯಯೌ — ಹೋದನು. ರಾಮಃ - ಬಲರಾಮನು, ಅತ್ರ — ಮಿಥಿಲೆಯಲ್ಲಿಯೇ, ನಿವಸತಿಸತಿ — ವಾಸಿಸುತ್ತಿರಲು, ಸ ಕೃಷ್ಣಃ — ಆ ಶ್ರೀಕೃಷ್ಣನು, ಭಯೇನ — ತನ್ನ ಭಯದಿಂದ, ವಿವಸಂತಂ — ಊರಿನಿಂದ ದೂರದಲ್ಲಿ ವಾಸಿಸುತ್ತಿದ್ದ, ಅಕ್ರೂರಂ — ಅಕ್ರೂರನನ್ನು, ಹಾರ್ದಿಕ್ಯಂಚ — ಕೃತವರ್ಮನನ್ನೂ ಕೂಡ, ಆನಯಿತ್ವಾ — ಕರಿಯಿಸಿ, ಜಗಾದ — ಮಾತಾಡಿದನು. ॥೩೯॥

ಆನೀಯರಾಮಂಚ ಸಮಸ್ತಸಾತ್ವತಾಂಯದಾ೭ವಾದೀತ್ಕೇಶವಃ ಸನ್ನಿಧಾನೇ ॥
ಮಣಿಸ್ತ್ವಯ್ಯಾಸ್ತೇದರ್ಶಯೇತ್ಕೇವ ಭೀತಸ್ತದಾ೭ಕ್ರೂರೋ೭ದರ್ಶಯದ್ರತ್ನಮಸ್ಮೈ ॥೪೦॥

ಕೇಶವಃ — ಶ್ರೀಕೃಷ್ಣನು, ರಾಮಂಚ — ಬಲರಾಮನನ್ನೂ ಕೂಡ, ಆನೀಯ — ಕರಿಸಿ, ಸಮಸ್ತಸಾತ್ವತಾಂ — ಎಲ್ಲ ಯಾದವರ, ಸನ್ನಿಧಾನೇ — ಸಮಕ್ಷಮದಲ್ಲಿ, (ಅಕ್ರೂರಂ — ಅಕ್ರೂರನನ್ನು ಕುರಿತು), ತ್ವಯಿ — ನಿನ್ನಲ್ಲಿ, ಮಣಿಃ ಆಸ್ತೇ — ಸ್ಯಮಂತಕರತ್ನವಿರುತ್ತದೆ, ದರ್ಶಯ — ಎಲ್ಲರಿಗೂ ತೋರಿಸು, ಇತಿ — ಎಂದು, ಯದಾ — ಯಾವಾಗ, ಅವಾದೀತ್ — ಹೇಳಿದನೋ, ತದಾ — ಆಗ, ಭೀತಃ — ಹೆದರಿದಂಥ, ಅಕ್ರೂರಃ — ಅಕ್ರೂರನು, ಅಸ್ಮೈ — ಶ್ರೀಕೃಷ್ಣನಿಗೆ, (ಶ್ರೀಬಲರಾಮನಿಗೆ,) ರತ್ನಂ — ರತ್ನವನ್ನು, ಅದರ್ಶಯತ್ — ತೋರಿಸಿದನು. ॥೪೦॥

ಅವ್ಯಾಜತಾಮಾತ್ಮನೋ ದರ್ಶಯಿತ್ವಾ ಹಲಾಯುಧೇ ಕೇಶವಸ್ತಸ್ಯ ಜಾನನ್ ॥
ರತ್ನಾಕಾಂಕ್ಷಾಮುಗ್ರಸೇನಸ್ಯ ಚೈವಮಾತುಶ್ಚ ಸಾಂಬಸ್ಯ ಪುನರ್ಬಭಾಷೇ ॥೪೧॥

ಕೇಶವಃ — ಶ್ರೀಕೃಷ್ಣನು, ಹಲಾಯುಧೇ — ಬಲರಾಮನಿಗೆ, ಆತ್ಮನಃ — ತನ್ನ, ಅವ್ಯಾಜತಾಂ — ನಿಷ್ಕಪಟತೆಯನ್ನು, ದರ್ಶಯಿತ್ವಾ — ತೋರಿಸಿ, ತಸ್ಯ — ಆ ಬಲರಾಮನಿಗೆ, ಉಗ್ರಸೇನಸ್ಯ — ಉಗ್ರಸೇನರಾಜನಿಗೆ, ಚ ಮತ್ತು, ಸಾಂಬಸ್ಯ ಮಾತುಶ್ಚ — ಸಾಂಬನ ತಾಯಿಯಾದ ಜಾಂಬವತಿದೇವಿಗೂಕೂಡ, ರತ್ನಾಕಾಂಕ್ಷಾಂ — ಸ್ಯಮಂತಕರತ್ನದ ಅಪೇಕ್ಷೆಯನ್ನು, ಜಾನನ್ ಸನ್ — ತಿಳಿದವನಾಗಿ, ಪುನಃ — ಮತ್ತೆ, ಬಭಾಷೇ — ಮಾತನಾಡಿದನು. ॥೪೧॥

ಆಸ್ತಾಮಕ್ರೂರೇಮಣಿರನ್ಯೈರಧಾರ್ಯಸ್ಸದಾಯಜ್ವಾದ್ದಾನಪತೇಸ್ಸಧಾರ್ಯಃ ॥
ನಸತ್ಯಾಕೃಷ್ಣಾವಾಂಛಿತಂ ಕಿಂಚಿದಿಚ್ಛೇತ್ತಥಾಪಿ ತಸ್ಯಾಯೋಗ್ಯಇತ್ಯಾಹಕೃಷ್ಣಃ ॥೪೨॥

ಮಣಿಃ — ಸ್ಯಮಂತಕಮಣಿಯು, ಅಕ್ರೂರೇ — ಅಕ್ರೂರನಲ್ಲಿ, ಆಸ್ತಾಂ — ಇರಲಿ, ಸದಾಯಜ್ವಾತ್ — ಯಾವಾಗಲೂ ಯಜ್ಞ ಮಾಡುವದರಿಂದ, ದಾನಪತೇಃ — ದಾನಮಾಡುವ ಆ ಅಕ್ರೂರನಿಂದ, ಸಃ — ಆ ಮಣಿಯು, ಧಾರ್ಯಃ — ಹೊಂದಲು ಯೋಗ್ಯವು. ಅನ್ಯೈಃ — ಇತರರಿಂದ, ಅಧಾರ್ಯಃ — ಇಟ್ಟುಕೊಳ್ಳಲು ಅಯೋಗ್ಯವು ('ಎಂದು ಮಾತನಾಡಿದನು' ಎಂದು ಹಿಂದಿನ ಶ್ಲೋಕಕ್ಕೆ ಅನ್ವಯ) ಸತ್ಯಾ — ಸತ್ಯಭಾಮಾದೇವಿಯು, ಕೃಷ್ಣಾವಾಂಛಿತಂ ಕಿಂಚಿತ್ — ಶ್ರೀಕೃಷ್ಣನಿಂದ ಅಪೇಕ್ಷಿಸಲ್ಪಡದ ಯಾವದನ್ನೂ, ಯತಃ ನ ಇಚ್ಛೇತ್ — ಇಚ್ಛಿಸುವದಿಲ್ಲವೋ (ಇಚ್ಛಿಸಲಾರಳೋ) (ಅತಃ — ಆದ್ದರಿಂದ) ಕೃಷ್ಣಃ — ಶ್ರೀಕೃಷ್ಣನು, ತಸ್ಯಾಃ — ಅವಳಿಗೆ (ಸತ್ಯಭಾಮೆಗೆ), ಯೋಗ್ಯ ಇತಿ — ಇರಲು ಯೋಗ್ಯವು ಎಂದು, ಆಹ — ಹೇಳಿದನು. ॥೪೨॥

ಲಬ್ಧ್ವಾರತ್ನಂದಾನಪತಿಸ್ಸದೈವ ಸಂದೀಕ್ಷಿತೋಽಭೂದ್ಯಜ್ಞಕರ್ಮಣ್ಯತಂದ್ರಃ ॥
ಪ್ರದರ್ಶ್ಯಕೃಷ್ಣೋಹಲಿನೇರತ್ನಮೇತಚ್ಛಕ್ರಪ್ರಸ್ಥಂ ಪಾಂಡವಸ್ನೇಹತೋಽಗಾತ್ ॥೪೩॥

ದಾನಪತಿಃ--ದಾನಪತಿಯಾದ ಅಕ್ರೂರನು, ರತ್ನಂ ಲಬ್ಧ್ವ – ಸ್ಯಮಂತಕರತ್ನವನ್ನು ಹೊಂದಿ,ಅತಂದ್ರಸ್ಸನ್– ಆಲಸ್ಯರಹಿತನಾಗಿ, ಸದೈವ – ಯಾವಾಗಲೂ, ಯಜ್ಞಕರ್ಮಣಿ – ಯಜ್ಞಕಾರ್ಯದಲ್ಲಿ, ಸಂದೀಕ್ಷಿತಃ— ವಿಶೇಷದೀಕ್ಷಾಯುಕ್ತನು, ಅಭೂತ್ – ಆದನು.–ಕೃಷ್ಣಃ – ಶ್ರೀಕೃಷ್ಣನು, ಹಲಿನೇ–ಹಲಾಯುಧವುಳ್ಳ ಬಲರಾಮನಿಗೆ, ಏತತ್ ರತ್ನಂ–ಈ ರತ್ನವನ್ನು, ಪ್ರದರ್ಶ್ಯ– ತೋರಿಸಿ, ಪಾಂಡವಸ್ನೇಹತಃ – ಪಾಂಡವರಪ್ರೀತಿಯಿಂದ, ಶಕ್ರಪ್ರಸ್ಥಂ – ಇಂದ್ರಪ್ರಸ್ಥವನ್ನು ಕುರಿತು, ಅಗಾತ್ – ಹೋದನು. ॥೪೩॥

ಭಾವಾನುವಾದ–೧೧–೪೩ ಧರ್ಮರಾಜನು ತನ್ನ ಮೂಲರೂಪದಲ್ಲಿ ತನ್ನ ಹೆಂಡತಿಯಾದ ಶ್ಯಾಮಲೆಯು ಅವತಾರಳಾದ, ಶಿಶುಪಾಲನಮಗಳಾದ, ದೇವಕಿಯನ್ನು ವಿಹಾಹಮಾಡಿಕೊಂಡನು, ಆ ದೇವಕಿಯು ತಮ್ಮನು ಧೃಷ್ಟಕೇತು ಎಂಬವನು. ಅವನು ಅನುಹ್ಲಾದನ ಅವತಾರನು, ಸೂರ್ಯನ ಆವೇಶವುಳ್ಳವನು. ಧರ್ಮರಾಜನಿಗೆ ಅವಳಲ್ಲಿ ಸುಹೋತ್ರನೆಂಬ ಮಗನು ಜನಿಸಿದನು. ಅವನು ಎಲ್ಲರ ಪುಣ್ಯಪಾಪಕರ್ಮಗಳ ಲೆಕ್ಕವನ್ನು ಸರಿಯಾಗಿ ಬರೆಯುವ ಚಿತ್ರಗುಪ್ತನ ಅವತಾರನು. ದ್ರೌಪದಿಯು ಮೂಲರೂಪಳಾದ ಭಾರತೀದೇವಿಯು ಮಾತ್ರ ಕಾಶೀರಾಜನ ಮಗಳಾಗಿ ಕಾಳೀದೇವಿ ಎಂಬ ಹೆಸರಿನಿಂದ ಅತವರಿದಳು. ಅವಳಲ್ಲಿ ಇತರ ಶಚೀ, ಶ್ಯಾಮಲಾ, ಉಷಸ್, ಪಾರ್ವತಿ ಈ ಯಾರದೇ ಆವೇಶವಿರಲಿಲ್ಲ; ಅವಳ ಸ್ವಯಂವರಕ್ಕಾಗಿ ಕಾಶೀರಾಜನು ಎಲ್ಲರಾಜರನ್ನು ಆಮಂತ್ರಿಸಿದ್ದನು. ಅವರೆಲ್ಲರೂ ತಮಗೆ ಕಾಳೀದೇವಿಯು ಸಿಗುತ್ತಾಳೆಂಬ ಭ್ರಮದಿಂದ ಸಂತೋಷದಿಂದ ಬಂದಿದ್ದರು. ಕಾಳೀದೇವಿಯು ಅವರೆಲ್ಲರ ನಡುವೆ ಶ್ರೀಭೀಮಸೇನದೇವರ ಕೊರಳಲ್ಲಿ ಮಾಲೆಯನ್ನು ಹಾಕಿದಳು. ಆಗ ಜರಾಸಂಧಾದಿಗಳು ಸಿಟ್ಟಿಗೆದ್ದು, ವಿಷ್ಣುಭಕ್ತರನ್ನು ನಿಂದಿಸುತ್ತಾ ಶಿವನನ್ನು ಸ್ತುತಿಸುತ್ತಾ ಏರಿ ಬಂದರು. ಅವರೆಲ್ಲರನ್ನು ಕುರಿತು ಆ ಭೀಮಸೇನದೇವರು ವೇದಗಳು ನಿರ್ದುಷ್ಟಪ್ರಮಾಣಗಳು ಎಂದು ಸಮರ್ಥಿಸಿ, ಅಂತಹ ವೇದವಾಕ್ಯಗಳಿಂದ, ನಿರ್ದುಷ್ಟ ಅನುಮಾನಗಳಿಂದಲೂ ಅವರನ್ನು ಜಯಿಸಿದರು. "ವೇದಗಳ ಶ್ರೇಷ್ಠತೆಯನ್ನು ಇತರ ಶೈವಾದಿಶಾಸ್ತ್ರಗಳೂ ಹೇಳುತ್ತವೆ. ಸೌರ,ಶೈವ,ಶಾಕ್ತ ಮೊದಲಾದ ಮತಗಳ ನಿಂದೆಯನ್ನು ಮಾಡುತ್ತವೆ. ವೇದಗಳು ವಿಷ್ಣೂತ್ಕೃಷ್ಟತೆಯನ್ನು ಹೇಳುತ್ತವೆ ಎಂದು ಅವುಗಳಲ್ಲಿ ಹೇಳಿದೆ. ಆ ಇತರ ಶಾಸ್ತ್ರಗಳೂ ಕೂಡ ವಿಷ್ಣುಪಾರಮ್ಯವನ್ನು ಹೇಳುತ್ತವೆ. ಆದರೆ ವೇದಗಳಲ್ಲಿ ಮಾತ್ರ ವಿಷ್ಣುವಿಗಿಂತ ಉತ್ತಮನನ್ನು ಯಾರನ್ನೂ ಹೇಳುವದಿಲ್ಲ. ಅವೈದಿಕರಾದ ಬೌದ್ಧ ಮೊದಲುಗೊಂಡವರೂ ವಿಷ್ಣು ಸರ್ವರಿಗಿಂತ ಉತ್ತಮನೆಂದು ಒಪ್ಪುತ್ತಾರೆ. (ಬುದ್ಧನು ವಿಷ್ಣುವಿನ ಅವತಾರಿಯಾದ್ದರಿಂದ). ಚಾರ್ವಾಕರೂ ಕೂಡ ತಮ್ಮ ಮತಪ್ರವರ್ತಕರಾದ ಬೃಹಸ್ಪತ್ಯಾಚಾರ್ಯರಿಗೂ ಗುರುವಾದ ಶ್ರೀವಿಷ್ಣುವನ್ನು ಸರ್ವಶ್ರೇಷ್ಠನೆಂದು ಒಪ್ಪುತ್ತಾರೆ. ಹೀಗೆ ವಿಷ್ಣುವು ಸರ್ವಾಧಿಕನು, ಮುಕ್ತಿಪ್ರದನು ಎಂದು ಎಲ್ಲ ಶಾಸ್ತ್ರಗಳಲ್ಲಿಯೂ ಪ್ರಸಿದ್ಧನಾಗಿರುವನು.ಇತರ ಆಗಮಗಳೆಲ್ಲವೂ ಪರಸ್ಪರವಿರುದ್ಧವಾಗಿವೆ. ಆದ್ದರಿಂದ ಅವು ಯಾವೂ ಪ್ರಮಾಣವಾಗಲಾರವು. ಅದಕ್ಕಾಗಿ ವಿಷ್ಣು ಸರ್ವೋತ್ತಮತ್ವಕ್ಕೆ ಅವುಗಳ ವಿರೋಧವು ಏನೂ ಮಾಡಲಾರದು. ಇಷ್ಟೇ ಅಲ್ಲ ಪ್ರತ್ಯಕ್ಷತಃ ವಿಷ್ಣುವಿನ ಅಧಿಕತ್ವದಬಗ್ಗೆ ತಿಳಿಯಿರಿ. ನಾನು ಶ್ರೀವಿಷ್ಣುವಿನ ಭಕ್ತನು.ನಾನು ಎಷ್ಟಾಸಮರ್ಥನಿರುವೆನು ಎಂಬುದನ್ನು ಬೇಕಾದರೆ ಪರೀಕ್ಷಿಸಿರಿ.ಹಿಂದೊಮ್ಮೆ ಗಂಗೆಯು ನಾನು ಮಾಡುತ್ತಿದ್ದ ವಿಷ್ಣುಪೂಜೆಗೆ ವಿಘ್ನಮಾಡಲು ಬಂದಳು. ಅವಳ ಆ ಅಪಾರ ಪ್ರವಾಹವನ್ನು ನಾನು ನನ್ನ ಎಡಗೈಯಿಂದಲೇ ದೂರಕ್ಕೆ ಸರಿಸಿದೆನು. ಅವಳು ಬಹುಯೋಜನ ದೂರಕ್ಕೆ ಹೋದಳು, ಆಗ ರುದ್ರನು ನನ್ನಬಲ ಪರೀಕ್ಷಿಸಲೆಂದು ಹುಲಿವೇಷ ಹೊಂದಿ,ಉಮಾಳಿಗೆ ಕಪಿಲಗೋರೂಪವನ್ನು ತಾಳಿಸಿ,ಅವಳನ್ನು ಕೊಲ್ಲಲೆಂಬಂತೆ ಬೆನ್ನುಹತ್ತಿ ಓಡಿಬಂದನು.ಅದನ್ನು ನೋಡಿದ ನಾನು ವ್ಯಾಘ್ರವನ್ನು ತಡೆದು ಅದರ ಜೊತೆಗೆ ಯುದ್ಧಮಾಡಿ ಗದಾದಿಂದ ಪ್ರಹರಿಸಿದಾಗ, ಅದು ಮೂರ್ಛಿತವಾಯಿತು. ನಂತರ ಶಿವನು ಅಲ್ಲಿಯೇಇದ್ದ ಒಂದು ಲಿಂಗದಲ್ಲಿ ಅಡಗಿದನು. ಆ ಲಿಂಗವೇ ವ್ಯಾಘ್ರೇಶ್ವರ ಎಂದು ಪ್ರಸಿದ್ಧವಾಗಿದೆ. ಇದೇ ರೀತಿ ಇನ್ನೊಮ್ಮೆ ಹಿಮಾಲಯ ಪರ್ವತದ ಗೋಮತೀ ನದೀತೀರದಲ್ಲಿಯೂ ರುದ್ರನು ಬಂದಾಗ ಅಲ್ಲಿಯೂ ನನ್ನಿಂದ ಸೋತು ಲಿಂಗವನ್ನು ಸೇರಿದಾಗ ಶಾರ್ದೂಲ ಲಿಂಗವೆಂದು ಪ್ರಸಿದ್ಧವಾಯಿತು. ಹೀಗೆ ಬಾಹುಬಲದ ವಿಷಯದಲ್ಲಿ ರುದ್ರನನ್ನು ಎರಡು ಸಲವೂ ಗೆದ್ದಿದ್ದರೆ, ಜ್ಞಾನ ಬಲದ ಬಗ್ಗೆಯೂ ನನ್ನನ್ನು ಪರೀಕ್ಷಿಸಲೆಂದು ಕೇದಾರಕ್ಷೇತ್ರದಲ್ಲಿ ರುದ್ರನು ಬ್ರಾಹ್ಮಣವೇಷತಾಳಿ

ಬಂದು ನನ್ನೊಡನೆ ವೇದಾರ್ಥದ ಬಗ್ಗೆ ಚರ್ಚೆಮಾಡಿ ಸೋತು ಲಜ್ಜಾದಿಂದ ವೇದಾರ್ಥವೇತ್ತರು ಯಾರೂ ಇಲ್ಲಿಗೆ ಬಾರದಂತಾಗಲಿ ಎಂದು ಶಾಪವನ್ನು ಕೊಟ್ಟನು, ಮತ್ತು ಹೆದರಿ ಲಿಂಗವನ್ನು ಪ್ರವೇಶಿಸಿದನು. ಹೀಗೆ ಶ್ರೀವಿಷ್ಣುಭಕ್ತನಾದ ನನ್ನ ಜ್ಞಾನಬಲ ಬಾಹುಬಲಗಳೇ ಶಿವನಿಗಿಂತ ಅಧಿಕವಾಗಿರುವಾಗ ಶ್ರೀವಿಷ್ಣುವಿನ ಜ್ಞಾನಬಲಗಳು ಎಲ್ಲರಿಗಿಂತ ಅಧಿಕವಾಗಿವೆ; ಅದ್ದರಿಂದ ಆತನೇ ಉತ್ತಮ ಎಂದು ಹೇಳಬೇಕೇನು ? ಹೇಳುವ ಅವಶ್ಯಕತೆಯೇ ಇಲ್ಲ. ಬ್ರಾಹ್ಮಣರಲ್ಲಿ ಅಧಿಕಜ್ಞಾನಿಯು ಶ್ರೇಷ್ಠನು; ಕ್ಷತ್ರಿಯರಲ್ಲಿ ಅಧಿಕ ಬಾಹುಬಲವುಳ್ಳವನು ಶ್ರೇಷ್ಠನು. ನನ್ನಲ್ಲಿ ಎರಡು ಬಲಗಳು ಅಧಿಕವಾಗಿವೆ. ಶ್ರೀವಿಷ್ಣುವು ಸರ್ವೋತ್ತಮನಾಗಿದ್ದಾನೆ. ಇದರ ಬಗ್ಗೆ ಯಾರಿಗಾದರೂ ಅಸಮ್ಮತಿ ಇದ್ದರೆ, ಉತ್ತರ ಹೇಳಿರಿ. ಎಲೋ ರಾಜರೇ ಹೇಳಿರಿ; ಸಿಟ್ಟುಬಂದಿದ್ದರೆ ಬನ್ನಿರಿ ಯುದ್ಧಕ್ಕೆ; ಬನ್ನಿರಿ, ಎಂದು ಈ ರೀತಿಯಾಗಿ ಶ್ರೀಭೀಮರು ಹೇಳಿ ಆಹ್ವಾನಿಸಿದಾಗ ಎಲ್ಲರಾಜರೂ ಶಸ್ತ್ರಧಾರಿಗಳಾಗಿ ಯುದ್ಧಕ್ಕೆ ಬಂದರು. ಅವರೆಲ್ಲರನ್ನೂ ಶ್ರೀಭೀಮರು ಬಾಣಗಳಿಂದಲೇ ಓಡಿಸಿ, ಜರಾಸಂಧನಿಗೆ ಗದಾಪ್ರಹಾರವನ್ನು ಇತ್ತು, ಹಣ್ಣುಮಾಡಿ ತನ್ನ ಕೈಗಳಿಂದ ಎತ್ತಿ ಅವನನ್ನು ಶ್ರೀವಿಷ್ಣುಪಾದೋದಕವಾದ ಗಂಗೆಯಲ್ಲಿ ಒಗೆದರು. (ಗಂಗೆಯು ಶ್ರೀವಿಷ್ಣುಪಾದೋದಕವಾದ್ದರಿಂದ ಶಿವಭಕ್ತನಾದ ತಾನು ಅದರಲ್ಲಿ ಸ್ನಾನಮಾಡುವದಿಲ್ಲವೆಂದು ಹೇಳುತ್ತಿದ್ದನು. ಅದಕ್ಕಾಗಿ ಬಲಾತ್ಕಾರದಿಂದ ಒಗೆದರು.) ಅವನು ಲಜ್ಜಿತನಾಗಿ, ತನ್ನ ಮಗಧದೇಶಕ್ಕೆ ಹೋದನು. ಶ್ರೀಭೀಮಸೇನದೇವರು ಕಾಶೀರಾಜನಿಂದ ಪೂಜಿತರಾಗಿ ತಮ್ಮ ರಥವನ್ನೇರಿ ಕಾಳೀಸಮೇತರಾಗಿ, ಇಂದ್ರಪ್ರಸ್ಥಕ್ಕೆ ಹೋದರು. ತ್ರಿಲೋಕಗಳ ಸ್ತ್ರೀಯರೆಲ್ಲರಿಗಿಂತಅಧಿಕಸೌಂದರ್ಯ ಹಾಗೂ ಸದ್ಗುಣಗಳುಳ್ಳ,ತನಗೆ ಅನುರೂಪಳಾದ ಆ ಕಾಳೀದೇವಿಯಲ್ಲಿ ವಿಹರಿಸುವವರಾಗಿ, ಶರ್ವತ್ರಾತನೆಂಬ ಮಗನನ್ನು ಪಡೆದರು, ಅವನು ಪ್ರಾಣದೇವರ ಪುತ್ರರಾದ ಪಾಣಾಪಾನಾದಿ ಐದು ಮಕ್ಕಳಲ್ಲಿ ಒಬ್ಬನಾದ ಸಮಾನವಾಯುವಿನ ಅವತಾರನು, ಬಹುಬಲಿಷ್ಠನಾಗಿದ್ದನು.

ಶ್ರೀಕೃಷ್ಣನು ಬಲರಾಮನಿಂದ ಕೂಡಿಕೊಂಡು ಇಂದ್ರಪ್ರಸ್ಥದಿಂದ ದ್ವಾರಕೆಗೆ ಬಂದು ಸತ್ಯಭಾಮಾದೇವಿಯ ತಂದೆಯಾದ ಸತ್ರಾಜಿತರಾಜನನ್ನು ವಧಿಸಿದ ಶತಧನ್ವನನ್ನು ಸಂಹರಿಸಲು ಇಚ್ಛಿಸಿ ಉದ್ಯುಕ್ತನಾದಾಗ, ಅದನ್ನು ತಿಳಿದು ಶತಧನ್ವನು ಕೃತವರ್ಮ ಅಕ್ರೂರರನ್ನು ಸಹಾಯಕ್ಕಾಗಿ ಪ್ರಾರ್ಥಿಸಿದನು. ಆದರೆ ಸರ್ವಲೋಕಜನಕನಾದ, ಸರ್ವನಿಯಾಮಕನಾದ ಆ ಶ್ರೀಕೃಷ್ಣನ ವಿರೋಧವನ್ನು ನಾವು ಮನಸ್ಸಿನಿಂದಕೂಡ ಮಾಡುವದಿಲ್ಲ ಎಂದು ಅವರಿಬ್ಬರೂ ಹೇಳಿದಾಗ, ಅವನು ಶ್ರೀಕೃಷ್ಣನ ಭಯದಿಂದ ಒಂದು ಹೆಣ್ಣುಕುದುರೆಯನ್ನೇರಿ ಓಡಿದನು. ಅವನನ್ನು ಬೆನ್ನುಹತ್ತಿ ಶ್ರೀಕೃಷ್ಣ ಬಲರಾಮರು ರಥವನ್ನೇರಿ ಹೊರಟರು. ಒಂದು ಹಗಲಿನಲ್ಲಿ ಒಂದುನೂರು ಯೋಜನದೂರ ಓಡಿದ್ದಾರೆ. ಆ ಕುದುರೆಯು ಓಡಿ ಓಡಿ ಶ್ರಮದಿಂದ ಸತ್ತಾಗ, ಶತಧನ್ವನು ಕಾಲಿನಿಂದಲೇ ಓಡಿದನು. ಆಗ ಶ್ರೀಕೃಷ್ಣನೂ ಕೂಡ ರಥಬಿಟ್ಟು ಕಾಲಿನಿಂದಲೇ ನಡೆದು ಅವನ ಹತ್ತಿರ ಬಂದು, ಚಕ್ರದಿಂದ ಅವನ ತಲೆಯನ್ನು ಕತ್ತರಿಸಿ ಸಂಹರಿಸಿದನು. ಸ್ಯಮಂತಕಮಣಿಯನ್ನು ಶತಧನ್ವನು ಅಕ್ರೂರನ ಬಳಿಗೆ ಕೊಟ್ಟಿದ್ದಾನೆ ಎಂದು ತಿಳಿದಿದ್ದರೂಕೂಡ, ಲೋಕದ ಅಜ್ಞಜನರಂತೆ ನಟಿಸುವವನಾಗಿ ಶತಧನ್ವನ ಬಟ್ಟೆಗಳನ್ನೆಲ್ಲ ಶೋಧಿಸಿದಾಗ ಬಲರಾಮನು ಬಂದಾಗ ಇವನ ಹತ್ತಿರ ರತ್ನವಿಲ್ಲವೆಂದು ಹೇಳಿದನು. ಆದರೆ ಶ್ರೀಕೃಷ್ಣನು ಹೇಳಿದ್ದರ ಮೇಲೆ ವಿಶ್ವಾಸವಾಗದೇ ಸಿಟ್ಟಿಗೆದ್ದು ಶ್ರೀಕೃಷ್ಣನನ್ನು ಬಿಟ್ಟು ಮಿಥಿಲಾಪಟ್ಟಣಕ್ಕೆ ಹೋಗಿ ಅಲ್ಲಿ ಐದುವರ್ಷವಾಸಮಾಡಿದನು; ಇದೇ ಸಮಯದಲ್ಲಿ ದುರುಳದುರ್ಯೋಧನನು ಬಲರಾಮನನ್ನು ವಶಪಡಿಸಿಕೊಳ್ಳಲು ಅಲ್ಲಿಗೆ ಬಂದನು. ಅವನು ಶ್ರೀಕೃಷ್ಣನನ್ನಂತೂ ವಶಪಡಿಸಿಕೊಳ್ಳಲು ಸಾಧ್ಯವಿಲ್ಲವೆಂದು, ಶ್ರೀಕೃಷ್ಣನ ಹತ್ತಿರ ಬಲರಾಮನಿರುವಾಗ ಆ ಬಲರಾಮನನ್ನು ವಶಪಡಿಸಿಕೊಳ್ಳುವದೂ ಅಶಕ್ಯವೆಂದು ತಿಳಿದು, ಶ್ರೀಕೃಷ್ಣನಿಂದ ದೂರವಿರುವಾಗ ಬಲರಾಮನನ್ನು ವಶಪಡಿಸಿಕೊಳ್ಳಲುಸಾಧ್ಯವೆಂದು ತಿಳಿದು ಅಂಥ ಸಮಯವನ್ನು ಕಾಯುತ್ತಲೇ ಇದ್ದನು. ಈಗ ಬಲರಾಮನ ಹತ್ತಿರ ಗದಾವಿದ್ಯಾವನ್ನು ಕಲಿಯುವ ನೆಪಮಾಡಿಕೊಂಡು ಬಂದನು. ಇರುತ್ತಾ ಬಲರಾಮನ ಹತ್ತಿರ ಅವನ ತಂಗಿಯಾದ ಸುಭದ್ರೆಯನ್ನು ತನಗೆ ಕೊಡಲು ಕೇಳಿದನು. ಸುಭ್ರದೆಯರೂಪದಿಂದ ಮೋಹಿತನಾದ ಅವನು, ಸುಭದ್ರೆಯನ್ನು ಕೊಡುವ ಬಗ್ಗೆ ಬಲರಾಮನಿಂದ ಮಾತು ಪಡೆದರೆ ಅಣ್ಣನಾದ ಇವನನ್ನು ಶ್ರೀಕೃಷ್ಣನು ಮೀರಲಾರನು. ಹೀಗಾಗಿ ಸುಭದ್ರೆ ನನಗೆಸಿಕ್ಕೇಸಿಗುವಳು ಆಮೇಲೆ ತಂಗಿಯು ಸಲುವಾಗಿ ಇಬ್ಬರೂ ನನ್ನವಶಕ್ಕೆ ಬರುವರು ಎಂದು, ಊಹಿಸಿಕೊಂಡು ಬಲರಾಮನ ಹತ್ತಿರ ಕೇಳಿದನು. ಅವನಾದರೂ ಆಯಿತು 'ಕೊಡುವೆನು' ಎಂದು ಪ್ರತಿಜ್ಞೆಯನ್ನು ಮಾಡಿದನು; ಆ ಮಾತು ಸತ್ಯವೆಂದು ತಿಳಿಸಲು ಕೈಮೇಲೆ

ಕೈಹಾಕಬೇಕು ಎಂದು ದುರ್ಯೋಧನನು ಕೇಳಿದಾಗ ಬಲರಾಮನು ರಿಪುಸಂಹಾರ ಮಾಡುವಂಥ, ಹಲಾಯುಧವನ್ನು ಧರಿಸಿರುವ ತನ್ನ ಕೈಯನ್ನು ಅವನಿಗೆ ಕೊಟ್ಟನು (ಆ ಕೈಯನ್ನು ಅವನ ಕೈಮೇಲೆ ಹಾಕಿ ವಚನಕೊಟ್ಟನು), ಆ ಸುಭದ್ರೆಯು ಪೂರ್ವ ರಾಮಾಯಣಕಾಲದಲ್ಲಿ ತ್ರಿಜಟಾ ಎಂಬ ರಾಕ್ಷಸಿಯಾಗಿ ಶ್ರೀಸೀತಾಮಾತೆಯ ಪ್ರತೀಕದ ಸೇವೆಯನ್ನು ಮಾಡಿದವಳು. ಅದರ ಫಲವಾಗಿ ಈಗ ಶ್ರೀಕೃಷ್ಣನ ಪ್ರಿಯ ತಂಗಿಯಾಗಿ ಅವತರಿಸಿದಳು. ದೇವಕಿಯಲ್ಲಿ ಹುಟ್ಟಿದ ಅವಳನ್ನು ರೋಹಿಣಿಯು ತನ್ನ ಮಗಳನ್ನಾಗಿ ಮಾಡಿಕೊಂಡು ರಕ್ಷಿಸಿದಳು. ಅವಳಲ್ಲಿ ಪಾರ್ವತಿಯ ಆವೇಶವಿದ್ದದ್ದರಿಂದ ವಿಶೇಷಸೌಂದರ್ಯ ಹಾಗೂ ಗುಣವುಳ್ಳವಳಾಗಿದ್ದಳು. ಇಂಥ ಸುಭದ್ರೆಯನ್ನು ಪಡೆಯುವ ಕುತ್ಸವಸ್ಥೆಯನ್ನು ಮಾಡಿಕೊಂಡ ದುರ್ಯೋಧನನು ಹೊರಟು ಹಸ್ತಿನಾವತಿಗೆ ಹೋದನು. ಬಲರಾಮನು ಮಾತ್ರ ಮಿಥಿಲೆಯಲ್ಲಿಯೇ ಇದ್ದನು. ಈ ಕಡೆಗೆ ಶ್ರೀಕೃಷ್ಣನು ತನ್ನ ಭಯದಿಂದ ದ್ವಾರಕೆಯ ಹೊರಗೆ ವಾಸಿಸುತ್ತಿದ್ದ ಕೃತವರ್ಮಸಹಿತನಾದ ಅಕ್ರೂರನನ್ನು ಕರಿಯಿಸಿ,ಬಲರಾಮನನ್ನೂ ಕೂಡ ಕರಿಯಿಸಿ ಬಲ್ಲ ಯಾದವರ ಸಮಕ್ಷಮದಲ್ಲಿ, ಅಕ್ರೂರನಿಗೆ ನಿನ್ನ ಹತ್ತಿರವಿರುವ ರತ್ನವನ್ನು ತೋರಿಸು ಎಂದು ಒಮ್ಮೆಲೇ ಹೇಳಿದನು. ಆ ಅಕ್ರೂರನಾದರೂ ಭಯದಿಂದ ಸ್ಯಮಂತಕ ರತ್ನವನ್ನು ತೋರಿಸಿದನು. ಹೀಗೆ ಶ್ರೀಕೃಷ್ಣನು ತನ್ನ ನಿಷ್ಕಪಟತೆಯನ್ನು ಬಲರಾಮನಿಗೆ ತೋರಿಸಿ, ಈ ರತ್ನವನ್ನು ಉಗ್ರಸೇನರಾಜ, ಜಾಂಬವತೀ, ಬಲರಾಮ ಇವರೆಲ್ಲರೂ ಅಪೇಕ್ಷಿಸುತ್ತಿರುವದನ್ನು ತಿಳಿದು ಒಬ್ಬರಿಗೆ ಕೊಟ್ಟರೆ ಇನ್ನೊಬ್ಬರಿಗೆ ಬೇಸರವಾಗುವದರಿಂದಲೂ ಉಚ್ಚವಾದ ಒಂದು ತತ್ವವನ್ನು ತಿಳಿಸಲಿಕ್ಕಾಗಿಯೂ, ಆ ಮಣಿಯು ಅಕ್ರೂರನಲ್ಲಿರಲು ಯೋಗ್ಯವೆಂದು ಹೇಳಿದನು. ನಿತ್ಯವೂ ಯಜ್ಞಗಳನ್ನಾಚರಿಸುವ ಧಾರ್ಮಿಕನಾದ ಅವನಿಗೆ ಅದು ಯೋಗ್ಯವು ಇತರರಿಗೆ ಅಯೋಗ್ಯವು ಎಂದು ಹೇಳಿದನು. ಸತ್ಯಭಾಮಾದೇವಿಯು ಶ್ರೀಕೃಷ್ಣನಿಗೆ ಅನಪೇಕ್ಷಿತವಾದ ಯಾವವಸ್ತುವನ್ನೂ ಅಪೇಕ್ಷಿಸುವದಿಲ್ಲ; ಆದರೂ ಶ್ರೀಕೃಷ್ಣನು ಲೋಕರೀತಿಯನ್ನು ಅನುಸರಿಸುತ್ತಾ ಅವಳಿಗೂ ಅಯೋಗ್ಯ ಎಂದೇ ಹೇಳಿದನು. ಅಕ್ರೂರನಾದರೂ ಆ ರತ್ನವನ್ನು ಪಡೆದು, ಯಜ್ಞಕರ್ಮಗಳಲ್ಲಿ ವಿಶೇಷದೀಕ್ಷಾಬದ್ಧನಾದನು. ಶ್ರೀಕೃಷ್ಣನು ಇಷ್ಟಕಾರ್ಯವನ್ನು ಮುಗಿಸಿ ಪಾಂಡವರ ಮೇಲಿನ ವಿಶೇಷಪ್ರೀತಿಯಿಂದ ಇಂದ್ರಪ್ರಸ್ಥಕ್ಕೆ ಹೋದನು. ಇದರಿಂದ ದಾನಧರ್ಮಗಳ ಆಚರಣೆಯುಳ್ಳವರಿಗೆ ದಾನವನ್ನು ಕೊಡಬೇಕೆಂದು ತಿಳಿಸಿದನು.

ವಸನ್ನಜಸ್ತತ್ರ ಬಹೂಂಶ್ಚ ಮಾಸಾನ್ ಸಫಲ್ಗುನೋಽಯಾನ್ಮೃಗಯಾಂ ಕದಾಚಿತ್ ॥

ಹತ್ವಾ ಮೃಗಾನ್ಯಮುನಾತೀರಸಂಸ್ಥಾನ್ ಸೋಽನ್ಯಾಂ ಕಾಳಿಂದೀಂದದೃಶೇ ತತ್ಸ್ವಸಾರಮ್ ॥೪೪॥

ಅಜಃ –ಉತ್ಪತ್ತಿರಹಿತನಾದ ಶ್ರೀಕೃಷ್ಣನು, ತತ್ರ – ಪಾಂಡವರಲ್ಲಿ (ಇಂದ್ರಪ್ರಸ್ಥದಲ್ಲಿ) ಬಹೂಂಶ್ಚ ಮಾಸಾನ್ – ಬಹಳ ತಿಂಗಳುಗಳವರೆಗೆ, ವಸನ್ ಸನ್ – ವಾಸಮಾಡುವವನಾಗಿ, ಕದಾಚಿತ್ – ಒಮ್ಮೆ, ಸಫಲ್ಗುನಃ ಸನ್ – ಅರ್ಜುನನಿಂದ ಸಹಿತನಾದವನಾಗಿ, ಮೃಗಯಾಂ ಅಯಾತ್ – ಬೇಟೆಗಾಗಿಹೊದನು. ಸಃ – ಆ ಪರಮಾತ್ಮನು, ಯಮುನಾತೀರಸಂಸ್ಥಾನ್– ಯಮುನಾನದಿಯದಡದಲ್ಲಿ ಇರುವ, ಮೃಗಾನ್ – ಮೃಗಗಳನ್ನು, ಹತ್ವಾ – ಕೊಂದು, ಅನ್ಯಾಂ – ಈ ಯಮುನೆಗಿಂತ ಬೇರೆಯವಳಾದ, ತತ್ಸ್ವಸಾರಂ– ಅವಳಸೋದರಿಯಾದ, ಕಾಳಿಂದೀಂ – ಕಾಳಿಂದಿ ಎಂಬವಳನ್ನು, ದದೃಶೇ– ನೋಡಿದನು. ॥೪೪॥

ಸಾಸೂರ್ಯಪುತ್ರೀ ಯಮುನಾನುಜಾತಾ ತಪಶ್ಚರಂತೀ ಕೃಷ್ಣಪತ್ನೀತ್ವಕಾಮಾ ॥

ಪೃಷ್ಟಾಽರ್ಜುನೇನಾಽಹ ಸಮಸ್ತಮೇತತ್ಪತ್ನೀಂಚ ತಾಂ ಜಗೃಹೇ ವಾಸುದೇವಃ ॥೪೫॥

ಸಾ – ಆ ಕಾಳಿಂದಿಯು, ಯಮುನಾನುಜಾತಾ – ಯಮುನೆಯ ನಂತರ ಹುಟ್ಟಿದ, ಸೂರ್ಯಪುತ್ರೀ – ಸೂರ್ಯನ ಮಗಳು, ಕೃಷ್ಣಪತ್ನೀತ್ವಕಾಮಾಸತೀ – ಶ್ರೀಕೃಷ್ಣನಹೆಂಡತಿಯಾಗುವ ಇಚ್ಛೆಯುಳ್ಳವಳಾಗಿ, ತಪಸ್ಸನ್ನುಮಾಡುತ್ತಿದ್ದವಳು. ಅರ್ಜುನೇನ ಪೃಷ್ಟಾಸತೀ – ಅರ್ಜುನನಿಂದ ಕೇಳಲ್ಪಟ್ಟವಳಾಗಿ, ಏತತ್ಸಮಸ್ತಂ – ಈ ಎಲ್ಲವಿಷಯವನ್ನು (ತನ್ನವಿವರವನ್ನು) ಆಹ - ಹೇಳಿದಳು. ವಾಸುದೇವಃ – ಶ್ರೀಕೃಷ್ಣನು, ತಾಂ ಚ – ಅವಳನ್ನೂಕೂಡ, ಪತ್ನೀಂ ಜಗೃಹೇ – ಹೆಂಡತಿಯನ್ನಾಗಿ ಸ್ವೀಕರಿಸಿದನು ॥೪೫॥

ತತೋಗತ್ವಾನಗ್ನಜಿತೋ ಗೃಹಂಚ ಸ್ವಯುಂವರೇ ಸಪ್ತವೃಷಾನಗೃಹ್ಣಾತ್ ॥
ಸರ್ವೈರಗ್ರಾಹ್ಯಾನಸುರಾನ್ವೀರೇಣ ಶಿವಸ್ಯಯೈರ್ನಿರ್ಜಿತಾ ಭೂಮಿಪಾಲಾಃ ॥೪೬॥

ತತಃ – ಆನಂತರ, ನಗ್ನಜಿತಃ – ನಗ್ನಜಿತ್ ಎಂಬವನ, ಗೃಹಂ ಚ – ಮನೆಗೆಕೂಡ, ಗತ್ವಾ – ಹೋಗಿ, ಯೈಃ – ಯಾವುಗಳಿಂದ, ಶಿವಸ್ಯ ವರೇಣ – ಶ್ರೀರುದ್ರದೇವರ ವರದಿಂದ, ಭೂಮಿಪಾಲಾಃ – ರಾಜರು, ನಿರ್ಜಿತಾಃ – ಗೆಲ್ಲಲ್ಪಟ್ಟಿದ್ದರೋ ತಾನ್ – ಅಂಥ, ಸರ್ವೈಃ ಅಗ್ರಾಹ್ಯಾನ್—(ಶ್ರೀರುದ್ರವರದಿಂದ) ಎಲ್ಲರಿಂದಲೂ ಹಿಡಿಯಲಶಕ್ಯವಾದಂಥ, ಅಸುರಾನ್ – ದೈತ್ಯಸ್ವರೂಪರಾದ, ಸಪ್ತ ವೃಷಾನ್–ಏಳುಗೂಳಿಗಳನ್ನು, ಸ್ವಯಂವರೇ-ಸ್ವಯಂವರದಲ್ಲಿ ಅಗೃಹ್ಣಾತ್-ನಿಗ್ರಹಿಸಿದನು. ॥೪೬॥

ತತೋ ನೀಲಾಂ ತಸ್ಯ ಸುತಾಂ ಚ ಲೇಭೇ ಪೂರ್ವಂ ನೀಲಾ ಗೊಪಕನ್ಯಾsಪಿ ಯಾsಸೀತ್ ॥
ಸಾದೇಹೇsಸ್ಯಾಃ ಪ್ರಾವಿಶತ್ ಪೂರ್ವಮೇಷಾ ಯಸ್ಮಾದೇಕಾದ್ವಿವಿಧಾ ಸಂಪ್ರಜಾತಾ ॥೪೭॥

ತತಃ – ಆ ಗೂಳಿಗಳ ನಿಗ್ರಹಮಾಡಿದನಂತರ, ತಸ್ಯ – ಆ ನಗ್ನಜಿತ್ ಯಾದವರಾಜನ, ಸುತಾಂ—ಮಗಳಾದ. ನೀಲಾಂ ಚ—ನೀಲಾ ಎಂಬವಳನ್ನೂಕೂಡ, ಲೇಭೇ — ಹೊಂದಿದನು. ಪೂರ್ವಂ – ಈ ಮೊದಲು, ಯಾ—ಯಾವ, ಗೊಪಕನ್ಯಾ ನೀಲಾ – ಕುಂಭ ಎಂಬ ಗೋಪಾಲಕನ ಮಗಳಾದ ನೀಲಾಎಂಬುವಳು ಆಸೀತ್ ಶ್ರೀಕೃಷ್ಣನಿಗೆ ಪತ್ನಿಯಾಗಿದ್ದಳೋ ಸಾ—ಅವಳು, ಅಸ್ಯಾಃ – ಈ ನಗ್ನಜಿತ್ ರಾಜನ ಮಗಳಾದ ನೀಲಿಯು, ದೇಹೇ—ದೇಹದಲ್ಲಿ, ಪ್ರಾವಿಶತ್ – ಪ್ರವೇಶಿಸಿದಳು ಯಸ್ಮಾತ್ – ಯಾವಕಾರಣದಿಂದ, ಏಕಾ – ಒಬ್ಬನೀಲಾಎಂಬವಳೇ, ದ್ವಿವಿಧಾ– ಎರಡು ನೀಲಾರೂಪಗಳುಳ್ಳವಳಾಗಿ, ಸಂಪ್ರಜಾತಾ – ಹುಟ್ಟಿದವಳೋ (ಆದ್ದರಿಂದ ಪ್ರವೇಶಿಸಿದಳು.) ॥೪೭॥

ಪಿತೃಷ್ವಸುರ್ಮಿತ್ರವಿಂದಾಸುತಾಚ ಕೃಷ್ಣೇ ಮಾಲಾಮಾಸಜದ್ರಾಜಮಧ್ಯೇ ॥
ವಿಂದಾನುವಿಂದೌ ಭ್ರಾತರಾವೇವ ತಸ್ಯಾನ್ಯಷೇಧತಾಂ ಧಾರ್ತರಾಷ್ಟ್ರ್ಯರ್ಥಮುಗ್ರೌ ॥೪೮॥

ಪಿತೃಷ್ವಸುಃ - ಶ್ರೀಕೃಷ್ಣನ ಸೋದರತ್ತೆಯಾದ ರಾಜಾಧಿದೇವಿ ಎಂಬವಳ, ಸುತಾ – ಮಗಳಾದ, ಮಿತ್ರವಿಂದಾ ಚ – ಮಿತ್ರವಿಂದಾ ಎಂಬವಳೂಕೂಡ, ರಾಜಮಧ್ಯೇ – ಎಲ್ಲ ರಾಜರ ಸಮಕ್ಷಮದಲ್ಲಿ, ಕೃಷ್ಣೇ – ಶ್ರೀಕೃಷ್ಣನಕೊರಳಲ್ಲಿ, ಮಾಲಾಂ – ಮಾಲೆಯನ್ನು, ಆಸಜತ್ – ಹಾಕಿದಳು. ತಸ್ಯಾಃ – ಅವಳ, ಭ್ರಾತರೌ – ಸಹೋದರರಾದ, ಉಗ್ರೌ – ತಮೋಯೊಗ್ಯರಾದ, ವಿಂದಾನುವಿಂದೌ – ವಿಂದ ಅನುವಿಂದ ಎಂಬ ಇಬ್ಬರು, ಧಾರ್ತರಾಷ್ಟ್ರ್ಯರ್ಥಂ ಏವ – ತಮ್ಮಸಹೋದರಿಯನ್ನು ದುರ್ಯೋಧನನಿಗೆ ಕೊಡುವದಕ್ಕಾಗಿಯೇ. ನ್ಯಷೇಧತಾಂ – ನಿಷೇಧಮಾಡಿದರು(ಶ್ರೀಕೃಷ್ಣನಿಗೆ ಕೊಡುವದನ್ನು). ॥೪೮॥

ಜಿತ್ವಾsವಂತ್ಯೌ ತೌ ನೃಪತೀಂಶ್ಚೈವ ಸರ್ವಾನಾದಾಯ ತಾಂ ಪ್ರಯಯೌ ವಾಸುದೇವಃ ॥
ಪಿತೃಷ್ವಸುಸ್ತನಯಾಂ ಚ ದ್ವಿತೀಯಾಂ ಭದ್ರಾಂದತ್ತಾಮಗ್ರಹೀದ್ಭ್ರಾತೃಭಿಸ್ಸ್ವಃ ॥೪೯॥

ವಾಸುದೇವಃ – ಶ್ರೀಕೃಷ್ಣನು, ತೌ ಅವಂತ್ಯೌ–ನಿಷೇಧಿಸುತ್ತಿರ್ದ ಆ ಇಬ್ಬರು ವಿಂದಾನುವಿಂದರನ್ನು, ಚ–ಮತ್ತು, ಸರ್ವಾನ್ ನೃಪತೀಂಶ್ಚ – ಎಲ್ಲರಾಜರನ್ನೂ ಕೂಡ, ಜಿತ್ವಾ – ಗೆದ್ದು, ತಾಂ – ಆ ಮಿತ್ರವಿಂದೆಯನ್ನು, ಆದಾಯಏವ – ಕರೆದುಕೊಂಡೇ, ಪ್ರಯಯೌ –ಹೊರಟನು. ಸಃ– ಆ ಕೃಷ್ಣನು, ದ್ವಿತೀಯಾಂ – ಎರಡನೆಯವ(ಇನ್ನೊಬ್ಬ)ಳಾದ,ಪಿತೃಷ್ವಸುಃ ತನಯಾಂ-ಸೋದರತ್ತೆಯಮಗಳಾದ. (ಇನ್ನೊಬ್ಬಸೋದರತ್ತೆ ಶ್ರುತಕೀರ್ತಿ ಎಂಬವಳ ಮಗಳಾದ)ಭ್ರಾತೃಭಿ:–ಅವಳ(ಕನ್ಯೆಯ) ಸಹೋದರರಿಂದ, ದತ್ತಾಂ–ಕೊಡಲ್ಪಟ್ಟ, ಭದ್ರಾಂಚ – ಭದ್ರಾದೇವಿಯನ್ನೂಕೂಡ, ಅಗ್ರಹೀತ್–ಸ್ವೀಕರಿಸಿದನು. ॥೪೯॥

ವಿಶ್ವೇಷಾಂ ದೇವಾನಾಮವತಾರಾ ಹಿ ಪಂಚ ತೇಕೈಕಯಾ ಭ್ರಾತರೋಽಸ್ಯಾಃ ಹರೇಶ್ಚ ॥
ಭಕ್ತಾ ನಿತ್ಯಂ ಪಾಂಡವಾನಾಂ ಚ ತಾತೋಽಪ್ಯೇಷಾಂ ವಶೇ ಶೈಬ್ಯನಾಮಾರ್ಭುರಗ್ರೇ ॥೫೮॥

ಅಸ್ಯಾಃ — ಈ ಭದ್ರಾಳ, ಪಂಚಭ್ರಾತರಃ – ಐದುಮಂದಿ ಸಹೋದರರಾದ, ಕೈಕಯಾಃತೇ — ಕೈಕಯದೇಶೀಯರಾದ ಅವರು, ವಿಶ್ವೇಷಾಂದೇವಾನಾಂ-ಐದುಮಂದಿ ವಿಶ್ವೇದೇವತೆಗಳ, ಅವತಾರಾಃಹಿ – ಅವತಾರರಾದವರೋ(ಆ ಕಾರಣ-ದಿಂದ),ನಿತ್ಯಂ-ಸದಾ,ಹರೇಃ ಪಾಂಡವಾನಾಂಚ ಭಕ್ತಾಃ:-ಶ್ರೀಕೃಷ್ಣನ ಮತ್ತು ಪಾಂಡವರ ಭಕ್ತರೇ ಆಗಿರುವರು.ಏಷಾಂ ತಾತಃ-ಇವರ ತಂದೆಯಾದ, ಅಗ್ರೇ – ಮೂಲರೂಪದಲ್ಲಿ, ಋಭುಃ – ಋಭುದೇವತಾದ(ಅತ್ರ – ಇಲ್ಲಿಅವತರಿಸಿದಾಗ)ಶೈಬ್ಯನಾಮಾ-ಚ-ಶೈಬ್ಯನೆಂಬವನೂ ಕೂಡ, ಏಷಾಂ— ಈ ಕೇಕಯರ ಆದ್ದರಿಂದ ಪಾಂಡವರ, ವಶೇ - ವಶದಲ್ಲಿ ಇದ್ದನು. ॥೫೮॥

ಭಾವಾನುವಾದ-೪೪-೫೦ ಇಂದ್ರಪ್ರಸ್ಥಕ್ಕೆ ಬಂದ ಶ್ರೀಕೃಷ್ಣನು ಬಹುದಿನ ಅಲ್ಲಿಯೇ ವಾಸವಾಗಿದ್ದು, ಒಂದು ದಿನ ಅರ್ಜುನಸಮೇತನಾಗಿ ಬೇಟೆಗಾಗಿ ಬಂದು ಯಮುನಾತೀರದಲ್ಲಿರುವ ಮೃಗಗಳನ್ನು ಸಂಹರಿಸುತ್ತಾ ಹೊರಟಿರುವಾಗ ಅಲ್ಲಿ, ಒಬ್ಬ ಕಾಳಿಂದೀಎಂಬ ಸ್ತ್ರೀಯನ್ನು ನೋಡಿದನು. ಕಾಳಿಂದಿ ಎಂದು ಯಮುನೆಗೂ ಹೆಸರುಇದೆ. ಅವಳಿಂದ ಬೇರೆಯಾದ ಅವಳ ತಂಗಿಯಾದ ಕಾಳಿಂದಿ ಇವಳು. ಅವಳು ಶ್ರೀಕೃಷ್ಣನ ಪತ್ನಿಯಾಗಬೇಕೆಂದು ತಪಸ್ಸನ್ನು ಮಾಡುತ್ತಿದ್ದಳು. ಅವಳ ಹತ್ತಿರ ಅರ್ಜುನನು ಹೋಗಿ ವಿಚಾರ ಮಾಡಿದಾಗ ಆ ಎಲ್ಲ ವಿಷಯ ತಿಳಿದು ಶ್ರೀಕೃಷ್ಣನು ಅವಳನ್ನು ತನ್ನ ಪತ್ನಿಯನ್ನಾಗಿ ಸ್ವೀಕರಿಸಿದನು. ಇನ್ನೊಮ್ಮೆ ನಗ್ನಜಿತ್ ಎಂಬರಾಜನ ಮಗಳಾದ ನೀಲಾದೇವಿಯು ಸ್ವಯಂವರ ನಡೆದಿತ್ತು. ಅವರ ಮನೆಯಲ್ಲಿ ದುಷ್ಟವಾದ, ರುದ್ರವರದಿಂದ ಯಾರಿಗೂ ನಿಗ್ರಹಿಸಲಾಗದ, ಅಸುರರಾದ ಏಳು ಗೂಳಿಗಳು ಇದ್ದವು. ಅವುಗಳನ್ನು ನಿಗ್ರಹಿಸಿ-ದವನಿಗೆ ಆ ನೀಲಾದೇವಿಯು ಮಾಲೆಯನ್ನು ಹಾಕುವವಳಿದ್ದಳು. ಶ್ರೀಕೃಷ್ಣನು ಅವುಗಳನ್ನು ನಿಗ್ರಹಿಸಿ ಶ್ರೀನೀಲಾದೇವಿಯ ಮಾಲೆಯನ್ನು ಪಡೆದನು. ಈ ಮೊದಲು ವಿವಾಹವಾಗಿ ಶ್ರೀಕೃಷ್ಣಪತ್ನಿಯಾಗಿ ಬಂದ, ಕುಭ ಗೋಪಾಲಕನ ಪುತ್ರಿಯಾದ, ನೀಲಾದೇವಿಯು ಈ ಹೊಸ ನೀಲಾಳಲ್ಲಿ ಪ್ರವೇಶಿಸಿದಳು. ಈ ಇಬ್ಬರೂ ನೀಲೆಯರು ಒಂದೇ ಚೇತನದ ಎರಡು ರೂಪಗಳಷ್ಟೇ. ಆದ್ದರಿಂದ ಒಬ್ಬರಲ್ಲಿ ಒಬ್ಬರುಸೇರಿದರು. ಹೀಗಾಗಿ ಶ್ರೀಕೃಷ್ಣ ಪತ್ನಿಯರ ಸಂಖ್ಯೆ 16108 ಕ್ಕಿಂತ ಹೆಚ್ಚಾಗುವ ಪ್ರಶ್ನೆಯೇ ಇಲ್ಲ. ಶ್ರೀಕೃಷ್ಣಪರಮಾತ್ಮನ ಸೋದರತ್ತೆಯಾದ ರಾಜಾಧಿದೇವಿ ಎಂಬವಳ ಮಗಳಾದ ಮಿತ್ರವಿಂದಾ ಎಂಬವಳು ಎಲ್ಲ ರಾಜರ ಸಮಕ್ಷಮದಲ್ಲಿ ಎಲ್ಲರನ್ನು ಬಿಟ್ಟು ಶ್ರೀಕೃಷ್ಣನ ಕೊರಳಲ್ಲಿ ಮಾಲೆಯನ್ನು ಹಾಕಿದಳು.ಸಹೋದರರಾದ ವಿಂದಾ-ನುವಿಂದರಿಗೆ ತಮ್ಮ ಸಹೋದರಿಯನ್ನು ದುರ್ಯೋಧನನಿಗೆ ಕೊಡಬೇಕೆಂಬ ಇಚ್ಛೆಯಿತ್ತು. ಹೀಗಾಗಿ ಅವರು ಶ್ರೀಕೃಷ್ಣನಿಗೆ ಮಾಲೆ ಹಾಕುವ ಕಾರ್ಯವನ್ನು ತಡೆಯುತ್ತಿದ್ದರು. ಆದರೂ ಶ್ರೀಕೃಷ್ಣನ ಕೊರಳಿಗೆ ಮಾಲೆಯನ್ನು ಹಾಕಿದಳು. ಅದನ್ನು ಕಂಡ ಅವರೆಲ್ಲ ಶ್ರೀಕೃಷ್ಣನ ಜೊತೆಗೆ ಯುದ್ಧಕ್ಕೆ ಬಂದಾಗ ಅವರನ್ನೆಲ್ಲ ಗೆದ್ದು, ಆ ಮಿತ್ರವಿಂದಾಳನ್ನು ಕರೆದುಕೊಂಡು ದ್ವಾರಕೆಗೆ ಹೋದನು. ಇನ್ನೊಬ್ಬ ಸೋದರತ್ತೆಯಾದ ಶ್ರುತಕೀರ್ತಿಯ ಮಗಳಾದ ಭದ್ರಾಳನ್ನು ಅವಳ ಐದು ಸಹೋದರರು ಆದರ ಪೂರ್ವಕ ಶ್ರೀಕೃಷ್ಣನಿಗೆ ದಾನವಾಡಿಕೊಟ್ಟರು. ಅವಳನ್ನು ಸ್ವೀಕರಿಸಿದನು, ಈ ಐದು ಮಂದಿ ಸಹೋದರು ಕೇಕಯದೇಶ-ದವರು;ವಿಶ್ವೇದೇವತೆಗಳ ಅವತಾರರು; ಹೀಗಾಗಿ ಶ್ರೀಕೃಷ್ಣ ಮತ್ತು ಪಾಂಡವರ ಭಕ್ತರು. ಅವರ ತಂದೆಯಾದ ಶೈಬ್ಯನು ಋಭುದೇವತೆಯ ಅವತಾರನು ಮತ್ತು ಇವರ ಆಧೀನನಾಗಿದ್ದನು. ಹೀಗಾಗಿ ಅವರು ತಾವೇ ದಾನವಾಡಿದರು.

ಸ್ವಯಂವರೋ ಲಕ್ಷಣಾಯಾಸ್ತಥಾಽಸೀದ್ ಯಥಾದ್ರೌಪದ್ಯಾ ಲಕ್ಷ್ಯವೇಧಾತ್ಮಕಃ ಸಃ ॥
ಮದ್ರೇಷು ತಸ್ಯಾಶ್ಚ ಪಿತಾ ಪಿನಾಕಂ ಸ್ವಯಂವರಾರ್ಥಂ ಜಗೃಹೇ ಗಿರೀಶಾತ್ ॥೫೯॥

ಮದ್ರೇಷು ಮದ್ರದೇಶದಲ್ಲಿ, ಲಕ್ಷಣಾಯಾಃ – ಲಕ್ಷಣಾ ಎಂಬವಳ, ಸ್ವಯಂವರಃ – ಸ್ವಯಂವರವು ಆಸೀತ್ — ಆಯಿತು. ಸಃ – ಅದು, ದ್ರೌಪದ್ಯಾಃ ಸ್ವಯಂವರಃ – ದ್ರೌಪದಿಯ ಸ್ವಯಂವರವು, ಯಥಾ ತಥಾ— ಹೇಗೋ

ಹಾಗೆ, ಲಕ್ಷ್ಯಭೇದಾತ್ಮಕಃ – ಗುರಿಗೆ ಹೊಡೆಯುವ ಕಾರ್ಯರೂಪವು, ಆಸೀತ್ – ಆಗಿತ್ತು. ತಸ್ಯಾಃ ಪಿತಾ – ಆ ಲಕ್ಷಣೆಯ ತಂದೆಯಾದ ಬೃಹತ್ಸೇನನು, ಸ್ವಯಂವರಾರ್ಥಂ – ಸ್ವಯಂವರಕ್ಕಾಗಿ, ಗಿರೀಶಾತ್ – ರುದ್ರದೇವರಿಂದ, ಪಿನಾಕಂ – ಪಿನಾಕ ಧನುಸ್ಸನ್ನು, ಜಗೃಹೇ – ಸ್ವೀಕರಿಸಿ ತಂದಿದ್ದನು. ॥೫೧॥

ಲಕ್ಷ್ಯಂಚ ತತ್ಸರ್ವತ ಶ್ಛನ್ನಮೇವದ್ವಾರಂ ಚತಸ್ಯಾಪ್ಯುಪರಿಸ್ಥ ಲಕ್ಷ್ಯಾತ್ ॥
ಛಿನ್ನೇಷುಣಾ ಪಾತನೀಯುಂಚ ತದ್ಧಿ ದ್ರೌಪದ್ಯರ್ಥಾತ್ ತದಶಕ್ಯಂ ತತೋಽಲಂ ॥೫೨॥

ತತ್ ಲಕ್ಷ್ಯಂ – ಆ ಗುರಿಯು, ಸರ್ವತಃ – ಎಲ್ಲಕಡೆಗೂ, ಛನ್ನಮೇವ ಮುಚ್ಚಲ್ಪಟ್ಟಿತ್ತು. ಚ – ಮತ್ತು, ತಸ್ಯ ದ್ವಾರಂ ಚ– ಅದರ ದ್ವಾರವೂಕೂಡ, ಲಕ್ಷ್ಯಾತ್ ಉಪರಿ ಸ್ಥ – ಗುರಿಯುಮೆಲ್ಭಾಗವಲ್ಲಿತ್ತು. ಚ – ಹಾಗೂ, ತತ್ – ಅಷ್ಟು ಕಠಿಣವಾದ ಗುರಿಯು, ಹಿ – ಯಾವಕಾರಣದಿಂದ, ಛಿನ್ನೇಷುಣಾ – ತುಂಡುಬಾಣದಿಂದ, ಪಾತನೀಯಂ – ಕೆಡವಲ್ಪಡ ಬೇಕಾಗಿತ್ತೋ, ತತಃ – ಆ ಕಾರಣದಿಂದ, ದ್ರೌಪದ್ಯರ್ಥಾತ್ – ದ್ರೌಪದೀಸ್ವಯಂವರದ ಲಕ್ಷ್ಯಕ್ಕಿಂತ, ತತ್ – ಆ ಲಕ್ಷಣಾ ಸ್ವಯಂವರದ ಲಕ್ಷ್ಯವು, ಅಲಂ ಅಶಕ್ಯಂ – ಬಹಳ ಅಸಾಧ್ಯವಾದದ್ದು ಆಗಿತ್ತು. ॥೫೨॥

ತತ್ರಾಜಗ್ಮುರ್ಮಾಗಧಾದ್ಯಾಶ್ಚ ಸರ್ವೇ ಪಾರ್ಥಾಅಪಿದ್ರಷ್ಟುಮಿಹಾಭ್ಯುಪಾಯಯುಃ ॥
ದುರ್ಯೋಧನಾದ್ಯಾಶ್ಚ ಸಸೂತಪುತ್ರಾಃಸಜ್ಜೀಕರ್ತುಂ ಧನುರಪ್ಯುತ್ಸಹಂತೇ ॥೫೩॥

ತತ್ರ – ಆ ಸ್ವಯಂವರಕ್ಕೆ, ಮಾಗಧಾದ್ಯಾಃ ಸರ್ವೇ – ಜರಾಸಂಧನೇ ಮೊದಲಾದ ಎಲ್ಲರೂ, ಆಜಗ್ಮುಃ– ಬಂದರು. ಪಾರ್ಥಾಃ ಅಪಿ – ಪಾಂಡವರೂಕೂಡ, ದ್ರಷ್ಟುಂ – ಶ್ರೀಕೃಷ್ಣಲಕ್ಷಣಾ ವಿವಾಹವನ್ನು ನೋಡುವದಕ್ಕಾಗಿ, ~~ಇಹ – ಇಲ್ಲಿಗೆ, ಅಭ್ಯುಪಾಯಯುಃ – ಬಂದಿದ್ದರು. ಚ – ಮತ್ತು, ಸಸೂತಪುತ್ರಾಃ – ಕರ್ಣನಿಂದಸಹಿತರಾದ, ದುರ್ಯೋಧನಾದ್ಯಾಃ –~~ ದುರ್ಯೋಧನನೇ ಮೊದಲಾದವರು, ಧನುಃ – ಆ ಧನುಸ್ಸನ್ನು, ಸಜ್ಜೀಕರ್ತುಂ – ಕಟ್ಟಲು, ಉತ್ಸಹಂತೇ – ಪ್ರಯತ್ನಿಸಿದರು. ॥೫೩॥

ಕೇಚಿನ್ನಿಪೇತುರ್ಧನುಷೈವ ತಾಡಿತಾ ನನ್ಯೇಕೇಚಿಚ್ಚಾಲಯಿತುಂ ಚ ಶೇಕುಃ ॥
ದುರ್ಯೋಧನೋ ಮಾಗಧಃ ಸೂತಪುತ್ರಃ ಸಜ್ಯಂಕೃತ್ವಾ ಲಕ್ಷ್ಯವೀಕ್ಷಾಂ ನ ಶೇಕುಃ ॥೫೪॥

ಕೇಚಿತ್ – ಕೆಲವರು, ಧನುಷಾ ತಾಡಿತಾಃ – ಬಿಲ್ಲಿನಿಂದ ಬಡಿಸಿಕೊಂಡವರಾಗಿ (ಹಿಡಿಯಲಾಗದೇ), ನಿಪೇತುಃ ಏವ – ಬಿದ್ದೇಬಿಟ್ಟರು. ಕೇಚಿತ್ – ಇನ್ನು ಕೆಲವರು, (ಧನುಃ ಬಿಲ್ಲನ್ನು) ಚಾಲಯಿತುಂ ಚ – ಅಲುಗಾಡಿಸಲೂಕೂಡ, ನ ಶೇಕುಃ – ಸಮರ್ಥರಾಗಲಿಲ್ಲ. ದುರ್ಯೋಧನಃ ಮಾಗಧಃ ಸೂತಪುತ್ರಃ (ಇತ್ಯೇತೇ) – ದುರ್ಯೋಧನ, ಜರಾಸಂಧ, ಕರ್ಣ ಈ ಮೂವರು, (ಧನುಃ – ಬಿಲ್ಲನ್ನು) ಸಜ್ಯಂಕೃತ್ವಾ – ಜ್ಯಾದಿಂದ ಕಟ್ಟಿ, ಲಕ್ಷ್ಯವೀಕ್ಷಾಂ (ಕರ್ತುಂ) – ಗುರಿಯ ನೋಡುವಿಕೆಯನ್ನು (ಮಾಡಲು), ಅಂದರೆ ಗುರಿಯನ್ನು ನೋಡಲು, ನ ಶೇಕುಃ – ಸಮರ್ಥರಾಗಲಿಲ್ಲ ॥೫೪॥

ಧನಂಜಯಃ ಸ್ವಾತ್ಮಬಲಂಪ್ರಕಾಶಯನ್ ಸಜ್ಯಂಕೃತ್ವಾ ಧನುರೈಕ್ಷಚ್ಚ ಲಕ್ಷ್ಯಂ ॥
ನೈವಾsದದೇ ಬಾಣಮನಿಚ್ಛಯೈವ ಪ್ರಾಪ್ತಾಂ ಜಾನನ್ ಕೇಶವೇನೈವತಾಂಚ ॥೫೫॥

ಧನಂಜಯಃ ಅರ್ಜುನನು, ಸ್ವಾತ್ಮಬಲಂ – ತನ್ನ ಶಕ್ತಿಯನ್ನು, ಪ್ರಕಾಶಯನ್ – ತೋರಿಸುವವನಾಗಿ, ಧನುಃ– ಸಜ್ಯಂ ಕೃತ್ವಾ – ಬಿಲ್ಲನ್ನು ಜ್ಯಾದಿಂದ ಕಟ್ಟಿ, ಲಕ್ಷ್ಯಂಚ ಐಕ್ಷತ್ – ಗುರಿಯನ್ನೂ ಕೂಡ ನೋಡಿದನು. ಚ– ಆದರೆ, ತಾಂ–

ಆ ಲಕ್ಷಣಾಳನ್ನು, ಕೇಶವೇನ ಏವ ಪ್ರಾಪ್ಯಾಂ – ಶ್ರೀಕೃಷ್ಣನಿಂದಲೇ ಹೊಂದಲ್ಪಡಬೇಕಾದವಳನ್ನಾಗಿ, ಜಾನನ್‌ಸನ್ :- ತಿಳಿದವನಾಗಿ, ಅನಿಚ್ಛಯಾಏವ—ಅವಳಬಗ್ಗೆ ಇಚ್ಛೆ ತನಗಿಲ್ಲದ್ದರಿಂದಲೇ, ಬಾಣಂ – ಬಾಣವನ್ನು, ನೈವ ಆದದೇ – ಸ್ವೀಕರಿಸ ಲಿಲ್ಲ (ತೆಗೆದುಕೊಳ್ಳಲಿಲ್ಲ) ॥೫೫॥

ಭೀಮುಶ್ಚಾಪಂ ಲಕ್ಷ್ಯಮುಪ್ಯೇತದತ್ರ ದ್ರಷ್ಟುಂಚ ನೈವೈಚ್ಛದರೀಂದ್ರಧಾರಿಣಃ ॥
ಯೋಗ್ಯೇಕರ್ಮಣ್ಯಾಯತಂಶ್ಚಾಪರಾಧೀ ಸ್ಯಾಮಿತ್ಯಂಜಃ ಪಶ್ಯಮಾನೋಮಹಾತ್ಮಾ ॥೫೬॥

ಅರೀಂದ್ರಧಾರಿಣಃ - ಚಕ್ರಧಾರಿ ಶ್ರೀಕೃಷ್ಣನಿಗೆ, ಯೋಗ್ಯೇ-ಯೋಗ್ಯವಾದ,ಕರ್ಮಣಿ- ಕಾರ್ಯದಲ್ಲಿ,ಆಯತಂಶ್ಚ- ಪ್ರಯತ್ನಮಾಡಿದರೂ ಕೂಡ, ಅಪರಾಧೀ ಸ್ಯಾಂ – ಅಪರಾಧಿಯಾಗುತ್ತೇನೆ,ಇತಿ – ಎಂದು. ಅಂಜಃ - ಚೆನ್ನಾಗಿ, ಪಶ್ಯಮಾನಃ- ವಿಚಾರಮಾಡಿದ, ಮಹಾತ್ಮಾಭೀಮಃ – ಮಹಾತ್ಮರಾದ ಶ್ರೀಭೀಮರು, ಅತ್ರ- ಈ ಲಕ್ಷಣಾ ಸ್ವಯಂವರದಲ್ಲಿ, ಚಾಪಂ- ಧನುಸ್ಸನ್ನು, ಚ-ಮತ್ತು ಲಕ್ಷ್ಯಂಚ - ಗುರಿಯನ್ನು ದ್ರಷ್ಟುಂಚ-ನೋಡಲೂ ಕೂಡ, ನೈವ ಐಚ್ಛತ್ – ಇಚ್ಛಿಸಲಿಲ್ಲ. ॥೫೬॥

ಕೃಷ್ಣಸ್ತತಶ್ಚಾಪಮುಧಿಜ್ಯಮಾಶು ಕೃತ್ವಾಽಚಿಂತ್ಯಶ್ಛಿನ್ನಬಾಣೇನಲಕ್ಷ್ಯಂ ॥
ಅಪಾತಯದ್ದುಂದುಭಯಶ್ಚದಿವ್ಯಾ ನೇದುಃ ಪ್ರಸೂನಂ ವವೃಷುಃ ಸುರಾಶ್ಚ ॥೫೭॥

ತತಃ – ಆನಂತರ, ಅಚಿಂತ್ಯಃ ಕೃಷ್ಣಃ – ಯಾರಿಂದಲೂ ತಿಳಿಯಲು ಅಶಕ್ಯನಾದ ಶ್ರೀಕೃಷ್ಣನು, ಆಶು – ಕೂಡಲೇ, ಚಾಪಂ- ಧನುಸ್ಸನ್ನು, ಅಧಿಜ್ಯಂ— ಜ್ಯಾದಿಂದಸಹಿತವನ್ನಾಗಿ, ಕೃತ್ವಾ – ಮಾಡಿ, ಛಿನ್ನಬಾಣೇನ – ತುಂಡುಬಾಣ ದಿಂದ, ಲಕ್ಷ್ಯಂ-ಗುರಿಯನ್ನು, ಅಪಾತಯತ್ – ಕೆಡವಿದನು. ದಿವ್ಯಾಃದುಂದುಭಯಶ್ಚ – ಶ್ರೇಷ್ಠವಾದ ನಗಾರಿ ಮೊದಲಾದ ವಾದ್ಯಗಳು, ನೇದುಃ- ಧ್ವನಿಮಾಡಿದವು. ಚ- ಮತ್ತು, ಸುರಾಃ – ದೇವತೆಗಳು, ಪ್ರಸೂನಂ ವವೃಷುಃ- ಪುಷ್ಪವೃಷ್ಟಿ ಯನ್ನುಗೈದರು. ॥೫೭॥

ಕೃಷ್ಣೇಬ್ರಹ್ಮಾದ್ಯೈಃ ಸ್ತೂಯಮಾನೇ ನರೇಂದ್ರಕನ್ಯಾ ಮಾಲಾಂ ಕೇಶವಾಂಸೇ ನಿಧಾಯ ॥
ತಸ್ಥಾವುಪಾಸ್ಯಾಥ ಸರ್ವೇನರೇಂದ್ರಾ ಯುದ್ಧಾಯಾಗುಃ ಕೇಶವಂಸ್ವಾತ್ತಶಸ್ತ್ರಾಃ ॥೫೮॥

ಕೃಷ್ಣೇ- ಶ್ರೀಕೃಷ್ಣನು, ಬ್ರಹ್ಮಾದ್ಯೈಃ- ಬ್ರಹ್ಮಾದಿದೇವತೆಗಳಿಂದ, ಸ್ತೂಯಮಾನೇ ಸತಿ- ಸ್ತುತಿಸಲ್ಪಡು ತ್ತಿರಲು, ನರೇಂದ್ರಕನ್ಯಾ- ರಾಜಕುಮಾರಿಯಾದ ಲಕ್ಷಣೆಯು, ಮಾಲಾಂ-ಮಾಲೆಯನ್ನು, ಕೇಶವಾಂಸೇ-ಶ್ರೀಕೃಷ್ಣನ ಕೊರಳಲ್ಲಿ ನಿಧಾಯ – ಹಾಕಿ, ಅಸ್ಯಉಪ – ಅವನ ಸವೀಪದಲ್ಲಿ, ತಸ್ಥೌ-ನಿಂತಳು. ಅಥ-ನಂತರ, ಸರ್ವೇ ನರೇಂದ್ರಾಃ- ಎಲ್ಲರಾಜರು, ಸ್ವತ್ತಶಸ್ತ್ರಾಃ ಸಂತಃ- ಆಯುಧಧಾರಿಗಳಾಗಿ,ಕೇಶವಂ-ಶ್ರೀಕೃಷ್ಣನನ್ನು ಕುರಿತು, ಯುದ್ಧಾಯ ಆಗುಃ-ಯುದ್ಧಕ್ಕಾಗಿ ಬಂದರು. ॥೫೮॥

ವಿದ್ರಾವ್ಯತಾನ್ ಮಾಗಧಾದೀನ್ ಸ ಕೃಷ್ಣೋ ಭೀಮಾರ್ಜುನಾಭ್ಯಾಂ ಸಹಿತಃ ಪುರೀಂಸ್ವಾಮ್ ॥
ಯಯಾವೇತಾ ಅಷ್ಟಮಹಾಮಹಿಷ್ಯಃ ಕೃಷ್ಣಸ್ಯದಿವ್ಯಾ ಲೋಕಸುಂದರ್ಯ ಇಷ್ಟಾಃ ॥೫೯॥

ಸಃ ಕೃಷ್ಣಃ – ಆ ಶ್ರೀಕೃಷ್ಣಪರಮಾತ್ಮನು, ತಾನ್ ಮಾಗಧಾದೀನ್- ಆ ಜರಾಸಂಧಾದಿ ರಾಜರನ್ನು, ವಿದ್ರಾವ್ಯ- ಓಡಿಸಿ, ಭೀಮಾರ್ಜುನಾಭ್ಯಾಂ ಸಹಿತಃ ಸನ್—ಭೀಮಾರ್ಜುನರಿಂದ ಸಹಿತನಾಗಿ, ಸ್ವಾಂಪುರೀಂ—ತನ್ನ ದ್ವಾರಕೆಗೆ, ಯಯೌ- ಹೋದನು, ಏತಾಃ ಅಷ್ಟ ಮಹಾಮಹಿಷ್ಯಃ— ಈ ಎಂಟು ಸಂಖ್ಯಾಕ ಮಹಾಮಹಿಷಿಯರು, ದಿವ್ಯಾಃ ಲೋಕಸುಂದರ್ಯಃ- ಲೋಕೋತ್ತರ ಸೌಂದರ್ಯ ಉಳ್ಳವರು, ಕೃಷ್ಣಸ್ಯೇಷ್ಟಾಃ—ಶ್ರೀಕೃಷ್ಣನಿಗೆ ಪ್ರಿಯರಾದವರು. ॥೫೯॥

ಭೈಷ್ಮೀಸತ್ಯಾಚ್ಚೈಕತನುರ್ದ್ವಿಧೈವ ಜಾತಾಭೂಮೌ ಪ್ರಕೃತಿರ್ಮೂಲಭೂತಾ ॥
ತಯೈವಾನ್ಯಾಃ ಸರ್ವದಾऽನುಪ್ರವಿಷ್ಟಾಃ ತಾಸಾಂ ಮಧ್ಯೇ ಜಾಂಬವತೀಪ್ರಧಾನಾ ॥೬೦॥

ಭೈಷ್ಮೀ — ಶ್ರೀರುಕ್ಮಿಣೀದೇವಿಯಂ. ಚ–ಮತ್ತು, ಸತ್ಯಾ — ಸತ್ಯಭಾಮಾದೇವಿಯು, ಏಕತನುಃ — ಒಂದೇ, (ಅಭಿನ್ನರು) ಮೂಲಭೂತಾ ಪ್ರಕೃತಿಃ — ಮೂಲಕಾರಣವಾದ ಜಡಪ್ರಕೃತಿಯ ಅಭಿಮಾನಿಯಾದ ಶ್ರೀಲಕ್ಷ್ಮೀದೇವಿಯು, ಭೂಮೌ — ಭೂಮಿಯಲ್ಲಿ, ದ್ವಿಧಾ — ಆ ಎಗಡು ರೂಪದಿಂದ, ಜಾತಾ — ಅವತರಿಸಿದವಳು, ಅನ್ಯಾಃ - ಉಳಿದ ಆರು ಸ್ತ್ರೀಯರೂ, ತಯಾಏವ — ಆ ಲಕ್ಷ್ಮೀದೇವಿಯಿಂದಲೇ, ಸರ್ವದಾ — ಯಾವಾಗಲೂ, ಅನುಪ್ರವಿಷ್ಟಾಃ — ಪ್ರವೇಶಿಸಲ್ಪಟ್ಟವರು. ತಾಸಾಂ— ಮಧ್ಯೇ— ಆ ಆರು ಸ್ತ್ರೀಯರ ಪೈಕಿ, ಜಾಂಬವತೀ — ಜಾಂಬವತಿದೇವಿಯು, ಪ್ರಧಾನಾ— ಶ್ರೇಷ್ಠಳು ॥೬೦॥

ರಾಮೇಣತುಲ್ಯಾ ಜಾಂಬವತೀಪ್ರಿಯತ್ವೇ ಕೃಷ್ಣಸ್ಯಾನ್ಯಾಃ ಕಿಂಚಿದೂನಾಶ್ಚತಸ್ಯಾಃ ॥
ಯದಾऽऽವೇಶೋಬಹುಲಃಸ್ಯಾದ್ರಮಾಯಾಃ ತದಾತಾಸು ಪ್ರೀಯತೇ ಕೇಶವೋऽಲಂ ॥೬೧॥

ಕೃಷ್ಣಸ್ಯ ಪ್ರಿಯತ್ವೇ–ಶ್ರೀಕೃಷ್ಣನಿಗೆ ಪ್ರಿಯರಾಗಿರುವ ವಿಷಯದಲ್ಲಿ, ಜಾಂಬವತೀ–ಜಾಂಬವತೀದೇವಿಯಂ, ರಾಮೇಣ ತುಲ್ಯಾ— ಬಲರಾಮದೇವರಂಗೆ ಸಮಳು. ಅನ್ಯಾಃ — ಉಳಿದಸ್ತ್ರೀಯರು, ತಸ್ಯಾಃ—ಆ ಜಾಂಬವತಿಗಿಂತ, ಕಿಂಚಿತ್ ಊನಾಃ— ಸ್ವಲ್ಪ ಕಡಿಮೆಯುವರು. ಯದಾ — ಯಾವಾಗ, ರಮಾಯಾಃ ಆವೇಶಃ—ಶ್ರೀಲಕ್ಷ್ಮೀದೇವಿಯ ಆವೇಶವು, ತಾಸು—ಅವರಲ್ಲಿ, ಬಹುಲಃ ಸ್ಯಾತ್— ಬಹಳವಾಗಿರುವದೋ, ತದಾ - ಆಗ, ಕೇಶವಃ— ಶ್ರೀಕೃಷ್ಣನು, ತಾಸು ಅವರಲ್ಲಿ. ಅಲಂ ಪ್ರೀಯತೇ– ಹೆಚ್ಚು ಪ್ರೀತಿಯುಳ್ಳವನಾಗುತ್ತಾನೆ. ॥೬೧॥

ಯದಾऽऽವೇಶೋ ಹ್ರಾಸಮುಪೈತಿತತ್ರ ಪ್ರದ್ಯುಮ್ನತೋ ವಿಂಶಗುಣಾಧಿಕಾಃ ಸ್ಯುಃ ॥

ಅನಾದಿತಸ್ತಾಃ ಕೇಶವಾನ್ನಾನ್ಯಸಂಸ್ಥಾ ರೇಮೇತಾಭಿಃ ಕೇಶವೋ ದ್ವಾರವತ್ಯಾಮ್ ॥೬೨॥

ಯದಾ— ಯಾವಾಗ, ತತ್ರ – ಅವರಲ್ಲಿ, ಆವೇಶಃ— ಶ್ರೀರವಾದೇವಿಯ ಆವೇಶವು, ಹ್ರಾಸಂ ಉಪೈತಿ— ಹ್ರಾಸವನ್ನು ಹೊಂದುವದೋ (ಕಡಿಮೆಯಾಗುವದೋ), ತದಾ— ಆಗ, ತಾಃ – ಅವರು, ಪ್ರದ್ಯುಮ್ನತಃ— ಪ್ರದ್ಯುಮ್ನನಿಗಿಂತ, ವಿಂಶಗುಣಧಿಕಾಃ ಸ್ಯುಃ — ಇಪ್ಪತ್ತುಗುಣಗಳಿಂದ ಶ್ರೇಷ್ಠರು, ತಾಃ— ಅವರೆಲ್ಲರೂ, ಅನಾದಿತಃ — ಅನಾದಿಕಾಲದಿಂದಲೂ, ಕೇಶವಾತ್ ಅನ್ಯಸಂಸ್ಥಾಃ ನ—ಶ್ರೀಕೃಷ್ಣನನ್ನು ಬಿಟ್ಟು ಬೇರೆಯವರನ್ನು ಹೊಂದಿದವರಲ್ಲ. ಕೃಷ್ಣಃ – ಶ್ರೀಕೃಷ್ಣನು, ತಾಭಿಃ ಸಹ—ಅವರಿಂದ ಕೂಡಿ, ದ್ವಾರವತ್ಯಾಂ – ದ್ವಾರಕೆಯಲ್ಲಿ, ರೇಮೇ — ವಿಹರಿಸಿದನು. ॥೬೨॥

ಭಾವಾನುವಾದ –೫೧–೬೨ ಮದ್ರದೇಶದಲ್ಲಿ ಲಕ್ಷಣಾ ಎಂಬವಳ ಸ್ವಯಂವರವು ಇತ್ತು. ದ್ರೌಪದೀ ಸ್ವಯಂವರದಂತೆ ಲಕ್ಷ್ಯವೇಧವನ್ನು ಮಾಡಲಿತ್ತು. ಅದಕ್ಕಾಗಿ ಧನುಸ್ಸನ್ನು ರುದ್ರದೇವರಿಂದ, ಲಕ್ಷಣೆಯ ತಂದೆಯು ತಂದಿದ್ದನು. ಲಕ್ಷ್ಯವನ್ನು ಎಲ್ಲಕಡೆಗೂ ಮಂಚ್ಚಿತ್ತು. ಮೇಲ್ಭಾಗದಲ್ಲಿ ಅದರ ದ್ವಾರವನ್ನು ಇಡಲಾಗಿತ್ತು. ಒಂದು ಸಣ್ಣ ಬಾಣದಿಂದ ಅದನ್ನು ಹೊಡೆಯಬೇಕಾಗಿತ್ತು. ಹೀಗಾಗಿ ದ್ರೌಪದೀ ಸ್ವಯಂವರದ ಲಕ್ಷ್ಯವೇಧಕ್ಕಿಂತಲೂ ಕಠಿಣವಾಗಿತ್ತು, ಜರಾಸಂಧಾದಿ ದುಷ್ಟರಾಜರೆಲ್ಲರೂ ಬಂದಿದ್ದರು. ಪಾಂಡವರು ಪ್ರೇಕ್ಷಕರಾಗಿ ಬಂದಿದ್ದರು. ಕರ್ಣದುರ್ಯೋಧನಾದಿಗಳು ಧನುಸ್ಸಿನ ಜ್ಯಾವನ್ನು ಬಿಗಿಯಲು ಪ್ರಯತ್ನಿಸಿದರು. ಆದರೆ ಕೆಲವರು ಧನಸ್ಸನ್ನು ಅಲುಗಾಡಿಸಿದರು. ಕೆಲವರು ಆ ಧನುಸ್ಸಿನಿಂದ ಬಡಿಸಿಕೊಂಡು ಬಿದ್ದರು. ದುರ್ಯೋಧನ, ಜರಾಸಂಧ, ಕರ್ಣ ಇವರು ಜ್ಯಾವನ್ನು ಬಿಗಿದರಾದರೂ ಲಕ್ಷ್ಯವನ್ನೂ (ಗುರಿಯನ್ನು) ಕಾಣದಾದರು. ಅರ್ಜುನನು ತನ್ನಸಾಮರ್ಥ್ಯವನ್ನು ತೋರಲು ಬಂದು, ಜ್ಯಾವನ್ನುಕಟ್ಟಿ, ಲಕ್ಷ್ಯವನ್ನೂ ಕಂಡು, ಶ್ರೀಕೃಷ್ಣನೇ ಆ ಲಕ್ಷಣೆಯನ್ನು ಹೊಂದಬೇಕು; ತಾನು ಹೊಡೆಯಬಾರದು ಎಂಬ ವಿಚಾರದಿಂದ (ಹೊಡೆಯುವ ಇಚ್ಛೆಯಿಲ್ಲದ್ದ

ರಿಂದ) ಬಾಣವನ್ನು ತೆಗೆದುಕೊಳ್ಳಲಿಲ್ಲ. ಮಹಾತ್ಮರಾದ ಶ್ರೀ ಭೀಮರುಮಾತ್ರ ಶ್ರೀಕೃಷ್ಣನಿಗೆ ಯೋಗ್ಯವಾದ ಕಾರ್ಯದಲ್ಲಿ ಪ್ರಯತ್ನವನ್ನು ಮಾಡುವದೂಕೂಡ ಅಪರಾಧವೆಂದೆಣಿಸಿ ಧನುಸ್ಸುಗುರಿ ಇವನ್ನು ನೋಡಲೂ ಕೂಡ ಇಚ್ಛಿಸಲಿಲ್ಲ. ಈ ಸಂದರ್ಭದಲ್ಲಿ ಶ್ರೀಕೃಷ್ಣನು ಆ ಧನುಸ್ಸಿಗೆ ಹಗ್ಗವನ್ನು ಕೂಡಲೇ ಬಿಗಿದು ಆ ತುಂಡುಬಾಣದಿಂದಲೇ ಲಕ್ಷ್ಯವನ್ನೂ ಕೂಡ ಹೊಡೆದು ಕೆಡವಿದನು. ದೇವತೆಗಳು ಪುಷ್ಪವೃಷ್ಟಿಯನ್ನು ಮಾಡಿದರು; ಮಂಗಲ ವಾದ್ಯಗಳನ್ನು ಬಾರಿಸಿದರು. ಬ್ರಹ್ಮಾದಿದೇವತೆಗಳು ಸ್ತುತಿಸುತ್ತಿದ್ದರು, ಲಕ್ಷಣೆಯು ಶ್ರೀಕೃಷ್ಣನ ಕೊರಳಲ್ಲಿ ಮಾಲೆಯನ್ನು ಹಾಕಿ ಅವನ ಸಮೀಪದಲ್ಲಿ ನಿಂತಳು. ದುಷ್ಟ, ಮತ್ಸರಿ ರಾಜರು ಶಸ್ತ್ರಧಾರಿಗಳಾಗಿ ಯುದ್ಧಕ್ಕೆ ಬಂದಾಗ,ಶ್ರೀಕೃಷ್ಣನು ಭೀಮಾರ್ಜುನರಿಂದ ಕೂಡಿ ಜರಾಸಂಧಾದಿ ದುಷ್ಟರನ್ನೆಲ್ಲ ಓಡಿಸಿ ತನ್ನ ದ್ವಾರಕಾ ಪಟ್ಟಣಕ್ಕೆ ಹೋದನು. ಹೀಗೆ ಈ ಎಂಟುಮಂದಿ ಸುಂದರ ಸ್ತ್ರೀಯರು ಶ್ರೀಕೃಷ್ಣನ ಅಷ್ಟಮಹಾಮಹಿಷಿಯರು ಎಂದು ಪ್ರಸಿದ್ಧರು. ಇವರಲ್ಲಿ ಶ್ರೀರುಕ್ಮಿಣೀ-ಸತ್ಯಭಾಮೆಯರು ಕ್ರಮವಾಗಿ ಶ್ರೀಲಕ್ಷ್ಮೀದೇವಿಯ ಶ್ರೀ-ಭೂರೂಪಗಳ ಸಾಕ್ಷಾತ್ ಅವತಾರರು. ಉಳಿದವರಲ್ಲಿ ಶ್ರೀಲಕ್ಷ್ಮೀದೇವಿಯ ಆವೇಶವಿದ್ದು, ಜಾಂಬವತೀದೇವಿಯು ಪ್ರಧಾನಳು. ಅವಳು ಶ್ರೀಬಲರಾಮದೇವರಷ್ಟು ಶ್ರೀಕೃಷ್ಣನಿಗೆ ಪ್ರಿಯಳಾದರೆ, ಉಳಿದವರು ಅವಳಿಗಿಂತ ಕಡಿಮೆ. ಶ್ರೀಲಕ್ಷ್ಮೀದೇವಿಯ ಆವೇಶವು ಹೆಚ್ಚು ಇರುವಾಗ ಶ್ರೀಕೃಷ್ಣನು ಅವರಲ್ಲಿ ಹೆಚ್ಚು ಪ್ರೀತಿಯನ್ನು ತೋರುತ್ತಿದ್ದನು. ಆವೇಶವು ಕಡಿಮೆಯಾದಾಗ, ಪ್ರದ್ಯುಮ್ನನಿಗಿಂತ ಇಪ್ಪತ್ತು ಗುಣಗಳಿಗಿಂತ ಉತ್ತಮರು ಆಗಿರುತ್ತಿದ್ದರು. ಇವರು ಅನಾದಿಯಿಂದಲೂ ಶ್ರೀಕೃಷ್ಣನನ್ನು ಬಿಟ್ಟುಬೇರೆ ಯಾರನ್ನೂ ಹೊಂದಿಲ್ಲ ಅಂಥವರಿಂದ ಕೂಡಿಕೊಂಡು ಶ್ರೀಕೃಷ್ಣನು ದ್ವಾರಕೆಯಲ್ಲಿ ವಿಹರಿಸಿದನು.

ಏವಂಕೃಷ್ಣೇ ದ್ವಾರಕಾಮುಧ್ಯಸಂಸ್ಥೇ ಗಿರಿಂಭೂಪಾ ರೈವತಕಂ ಸಮಾಯಯುಃ ॥
ದುರ್ಯೋಧನಾದ್ಯಾಃ ಪಾಂಡವಾಶ್ಚೈವ ಸರ್ವೇ ನಾನಾದೇಶ್ಯಾಯೇ ಚ ಭೂಪಾಲಸಂಘಾಃ ॥೬೩॥

ಏವಂ — ಈ ರೀತಿಯಾಗಿ, ಕೃಷ್ಣೇ — ಶ್ರೀಕೃಷ್ಣನು, ದ್ವಾರಕಾಮುಧ್ಯಸಂಸ್ಥೇಸತಿ-ದ್ವಾರಕೆಯಲ್ಲಿರುತ್ತಿರಲು, ಭೂಪಾಃ — ರಾಜರು, ರೈವತಕಂ ಗಿರಿಂ — ರೈವತಪರ್ವತಕ್ಕೆ, ಸಮಾಯಯುಃ—ಬಂದರು. ದುರ್ಯೋಧನಾದ್ಯಾಃ—ದುರ್ಯೋಧನಾದಿ ಕೌರವರು, ಪಾಂಡವಾಃಚ—ಪಾಂಡವರೂ, ನಾನಾದೇಶ್ಯಾಃ—ಬೇರೆಬೇರೆ ದೇಶದವರಾದ, ಯೇ ಚ ಭೂಪಾಲ ಸಂಘಾಃ — ಯಾವ ರಾಜರ ಸಮೂಹಗಳೋ, ತೇಚ — ಅವರೆಲ್ಲರೂಕೂಡ. ಸಮಾಯಯುಃ ಏವ — ಬಂದೇಬಂದರು. ॥೬೩॥

ಆತ್ಮಾನಂ ತಾನ್ ದ್ರಷ್ಟುಮಭ್ಯಾಗತಾನ್ ಸ ಕೃಷ್ಣೋ ಗಿರೌ ರೈವತಕೇದದರ್ಶ ॥
ನಮಸ್ಕೃತೇ ಸರ್ವನರೇಂದ್ರಮುಖ್ಯೈಃ ಕೃಷ್ಣೇ ವೈದರ್ಭ್ಯಾ ಸಹ ದಿವ್ಯಾಸನಸ್ಥೇ ॥೬೪॥

ಏತ್ಯಾಽಕಾಶಾನ್ನಾರದಃ ಕೃಷ್ಣಮಾಹ ಸರ್ವೋತ್ತಮಸ್ತ್ವಂ ತ್ವಾದೃಶೋನಾಸ್ತಿ ಕಶ್ಚಿತ್ ॥
ಇತ್ಯಾಶ್ಚರ್ಯೋ ಧನ್ಯಇತ್ಯೇವ ಶಬ್ದದ್ವಯೇ ತೂಕ್ತೇ ವಾಸುದೇವಸ್ತಮಾಹ ॥೬೫॥

ದಕ್ಷಿಣಾಭಿಃಸಾಕಮಿತ್ಯೇನ ಕೃಷ್ಣಂ ಪಪ್ರಚ್ಛುರೇತತ್ ಕಮಿತಿಸ್ಮ ಭೂಪಾಃ ॥
ನಾರಾಯಣೋ ಮುನಿಮೂಚೇ ವದೇತಿ ಶೃಣುಧ್ವಮಿತ್ಯಾಹ ಸ ನಾರದೋಽಪಿ ॥೬೬॥

ಸಃಕೃಷ್ಣಃ—ಆ ಕೃಷ್ಣನು, ಆತ್ಮಾನಂ — ತನ್ನನ್ನು, ದ್ರಷ್ಟುಂ—ನೋಡಲು, ರೈವತಕೇ ಅಭ್ಯಾಗತಾನ್ — ರೈವತಪರ್ವತದಲ್ಲಿ ಬಂದಂತಹ. ತಾನ್ — ಅವರನ್ನು, ದದರ್ಶ — ನೋಡಿದನು. ವೈದರ್ಭ್ಯಾಸಹ ದಿವ್ಯಾಸನಸ್ಥೇ—ರುಕ್ಮಿಣಿಯಿಂದ ಸಹಿತವಾಗಿ ಸಿಂಹಾಸನದಲ್ಲಿರುವ, ಕೃಷ್ಣೇ — ಶ್ರೀಕೃಷ್ಣನು, ಸರ್ವನರೇಂದ್ರಮುಖ್ಯೈಃ—ಎಲ್ಲ ಶ್ರೇಷ್ಠರಾಜರಿಂದ, ನಮಸ್ಕೃತೇ ಸತಿ —ನಮಸ್ಕರಿಸಲ್ಪಡುತ್ತಿರಲು, ನಾರದಃ — ನಾರದರು, ಆಕಾಶಾತ್ ಏತ್ಯ ಆಕಾಶಮಾರ್ಗದಿಂದ ಬಂದು, ಕೃಷ್ಣಂ—

ಶ್ರೀಕೃಷ್ಣನನ್ನು ಕುರಿತು, ಆಹ – ಹೇಳಿದರು. ತ್ವಂ ಸರ್ವೋತ್ತಮಃ – ನೀನು ಸರ್ವೋತ್ತಮನು, ತ್ವಾದೃಶಃ ಕಶ್ಚಿತ್ನಾಸ್ತಿ – ನಿನ್ನಂಥವನು ಯಾವನೂಇಲ್ಲ. ಇತಿ (ಅಭಿಪ್ರಾಯೇಣ)– ಎಂಬ ಅಭಿಪ್ರಾಯದಿಂದ. ನಾರದೇನ – ನಾರದರಿಂದ, ತು – ಈ ಮೊದಲಿನವರಿಗಿಂತ ವಿಶೇಷವಾಗಿ, ತ್ವಂಏವ – ನೀನೇ, ಆಶ್ಚರ್ಯಃ ಧನ್ಯಃ ಇತಿ ಶಬ್ದದ್ವಯೋ - ಆಶ್ಚರ್ಯನು, ಧನ್ಯನು ಎಂಬ ಎರಡು ಶಬ್ದಗಳು, ಕೃಷ್ಣಂಪ್ರತಿಏವ- ಶ್ರೀಕೃಷ್ಣನನ್ನು ಕುರಿತೇ, ಉಕ್ತೇಸತಿ – ಹೇಳಲ್ಪಡುತ್ತಿರಲು, ವಾಸುದೇವಃ–ಶ್ರೀಕೃಷ್ಣನು ತಂ-ಆ ನಾರದರನ್ನು ಕುರಿತು, ದಕ್ಷಿಣಾಭಿಃ ಸಾಕಂ ಏವ – ದಕ್ಷಿಣಾನಾಮಕ ಲಕ್ಷ್ಮೀ ರೂಪಗಳಿಂದ ಸಹಿತವಾಗಿಯೇ. (ನಾನು ಆಶ್ಚರ್ಯನು, ಧನ್ಯನು ಇರುತ್ತೇನೆ) ಇತಿ – ಎಂದು, ಆಹ— ಹೇಳಿದನು. ಭೂಪಾಃ—ರಾಜರು, ಕಿಂ ಏತತ್—ಏನಿದರ ಅಭಿಪ್ರಾಯವು, ಇತಿ—ಎಂದು, ಶ್ರೀಕೃಷ್ಣಂ—ಶ್ರೀಕೃಷ್ಣನನ್ನು, ಪಪ್ರುಚ್ಛ; ಸ್ಮ ಕೇಳಿದರು. ನಾರಾಯಣಃ – ಶ್ರೀಕೃಷ್ಣನು, ವದ ಇತಿ–ಹೇಳು ಎಂದು, ಮುನಿಂ – ನಾರದರಿಗೆ, ಊಚೇ–ಹೇಳಿದನು. ಸಃನಾರದಃ ಅಪಿ–ಆ ನಾರದರೂಕೂಡ, ಶೃಣುಧ್ವಂ ಇತಿ-ಕೇಳಿರಿ ಎಂದು, ಆಹ – ಹೇಳಿದರು. ॥೬೪॥೬೫॥೬೬॥

ಕೂರ್ಮೋ ದೃಷ್ಟೋ ವಿಷ್ಣುಪದ್ಯಾಂ ಮಯೋಕ್ತಃ ತ್ವಮುತ್ತಮೋನಾಸ್ತಿ ಸಮಸ್ತವೇತಿ
ಊಚೇ ಗಂಗಾಮುತ್ತಮಾಂಸಾಜಲೇಶಮುಮಾಮೂಚೇ ಪೃಥಿವೀನಾಮಿಕಾಂಸಃ ॥೬೭॥

ವಿಷ್ಣುಪದ್ಯಾಂ— ಗಂಗಾನದಿಯಲ್ಲಿ, ಮಯಾ ದೃಷ್ಟಃ—ನನ್ನಿಂದ ನೋಡಲ್ಪಟ್ಟ, ಕೂರ್ಮಃ—ಒಂದು ಆಮೆಯು, ತ್ವಂ ಉತ್ತಮಃ— ನೀನು ಉತ್ತಮನು, ತವ ಸಮಃ ನಾಸ್ತಿ—ನಿನಗೆ ಸಮನಿಲ್ಲ, ಇತಿ – ಎಂದು, ಉಕ್ತಃಸನ್– ಹೇಳಲ್ಪಟ್ಟ ದ್ದಾಗಿ, ಗಂಗಾಂ— ಗಂಗೆಯನ್ನು, ಉತ್ತಮಾಂ— ತನಗಿಂತ ಉತ್ತಮಳನ್ನಾಗಿ, ಊಚೇ – ಹೇಳಿತು. ಸಾ— ಆ ಗಂಗೆಯು ಜಲೇಶಂ— ಜಲಾಭಿಮಾನಿಯಾದ ವರುಣನನ್ನು (ತನಗಿಂತ ಶ್ರೇಷ್ಠನನ್ನಾಗಿ). ಊಚೇ— ಹೇಳಿದಳು. ಸಃ – ಆ ವರುಣನು, ಪೃಥಿವೀನಾಮಿಕಾಂ ಉಮಾಂ – ಪೃಥಿವೀ ಎಂದು ಹೆಸರುಳ್ಳ ಪಾರ್ವತಿಯನ್ನು (ಉತ್ತಮಳನ್ನಾಗಿ), ಊಚೇ – ಹೇಳಿದನು. ॥೬೭॥

ಯಾವಾದೃಶಾ ದೇವತಾಃ ಸರ್ವಶಸ್ತಾ ಧೃತಾಸ್ತಯಾ ಪೃಥಿತತ್ವಾತ್ ಪೃಥಿವ್ಯಾ ॥
ಶಿವಂಶೇಷಂ ಗರುಡಂಚಾಹ ಸಾಽಪಿ ಪರಾವನಾತ್ ಪರ್ವತನಾಮಧೇಯಾನ್ ॥೬೮॥

ಯಾ ವಾದೃಶಾಃ ದೇವತಾಃ–ನನ್ನಂತಹ ಯಾವದೇವತೆಗಳೋ, ತಾಃ ಸರ್ವಶಃ–ಅವರೆಲ್ಲರೂ, ಪೃಥಿತತ್ವಾತ್ – ಪ್ರಸಿದ್ಧಳಾದ್ದರಿಂದ, ಪೃಥಿವ್ಯಾ— ಪೃಥಿವೀನಾಮಕಳಾದ, ತಯಾ-ಅವಳಿಂದ, ಧೃತಾಃ – ಧರಿಸಲ್ಪಟ್ಟಿದ್ದಾರೆ. (ಆದ್ದರಿಂದ ಅವಳು ಉತ್ತಮಳು). ಸಾಽಪಿ – ಅವಳಾದರೂ, ಪರಾವನಾತ್ – ತಮಗಿಂತ ಅಧಮರಾದ ಇಂದ್ರಾದಿಗಳ ರಕ್ಷಣಮಾಡುವದರಿಂದ, ಪರ್ವತನಾಮಧೇಯಾನ್ — ಪರ್ವತಎಂಬಹೆಸರುಳ್ಳ, ಶಿವಂ, ಶೇಷಂ, ಗರುಡಂಚ — ರುದ್ರದೇವರನ್ನು, ಶೇಷದೇವರನ್ನು, ಗರುಡದೇವರನ್ನೂಕೂಡ, (ಉತ್ತಮರನ್ನಾಗಿ), ಆಹ—ಹೇಳಿದಳು. ॥೬೮॥

ತೈರೇವಾಹಂ ಮತ್ಸಮಾಶ್ಚೈವ ದೇವ್ಯೋ ಧ್ರಿಯಂತ ಇತ್ಯೇವ ತ ಊಚಿರೇಽಥ ॥
ಬ್ರಹ್ಮಾಣಮೇವೋತ್ತಮಮಾಹ ಸೋಽಪಿ ವೇದಾತ್ಮಿಕಾಂ ಪ್ರಕೃತಿಂ ವಿಷ್ಣುಪತ್ನೀಂ ॥೬೯॥

ಅಹಂ—ನಾನು, ಮತ್ಸಮಾಃ ದೇವ್ಯಃಚ–ನನ್ನಸಮಾನರಾದ ವಾರುಣೀ ಸೌಪರ್ಣೀ ದೇವಸ್ತ್ರೀಯರೂ, ತೈರೇವ–ಆ ಗರುಡಶೇಷರುದ್ರರಿಂದಲೇ, ಧ್ರಿಯಂತೇ – ಧರಿಸಲ್ಪಡುತ್ತಾರೆ. ಇತಿ – ಎಂದು(ಊಚೇ—ಹೇಳಿದಳು). ಅಥ-ನಂತರ ನಾನು ಅವರ ಹತ್ತಿರ ಹೋಗಿ ನೀವು ಆಶ್ಚರ್ಯರು, ಧನ್ಯರು ಎಂದು ಹೇಳಿದನಂತರ, ತೇ – ಅವರು, ಬ್ರಹ್ಮಾಣಂ ಏವ – ಚತುರ್ಮುಖಬ್ರಹ್ಮದೇವರನ್ನೇ, ಉತ್ತಮಂ – ಉತ್ತಮರನ್ನಾಗಿ, ಊಚಿರೇ – ಹೇಳಿದರು. ಸಃ ಅಪಿ— ಅವರಾದರೂ ಕೂಡ,

ವೇದಾತ್ಮಿಕಾಂ— ವೇದಾಭಿಮಾನಿನಿಯಾದ, ಪ್ರಕೃತಿಂ— ಪ್ರಕೃತಿತತ್ವಾಭಿಮಾನಿಯಾದ, ವಿಷ್ಣುಪತ್ನೀಂ— ಶ್ರೀಲಕ್ಷ್ಮೀದೇವಿಯನ್ನು (ಉತ್ತಮಂಳನ್ನಾಗಿ), ಆಹ— ಹೇಳಿದರು. ॥೬೯॥

ಸೈಕಾದೇವೀ ಬಹುರೂಪಾ ಬಭಾಷೇ ಯುಕ್ತಂಯದಾsಹಂ ಜ್ಞೇನ ನಾರಾಯಣೇನ ॥
ಯಜ್ಞಕ್ರಿಯಾವಾನಿನೀ ಯಜ್ಞನಾಮ್ನೀ ತದೋತ್ತಮಾ ತತ್ಪವೇಶಾತ್ ತದಾಖ್ಯಾ ॥೭೦॥

(ನಂತರದಲ್ಲಿ ನೀನು ಧನ್ಯಳು, ಆಶ್ಚರ್ಯಳು ಎಂದು ನನ್ನಿಂದ ಹೇಳಲ್ಪಟ್ಟ) ಏಕಾ ದೇವೀ ಅಪಿ—ಎಲ್ಲರೂಪಗಳಲ್ಲಿ ಅಭಿನ್ನಳಾದರೂಕೂಡ, ಬಹುರೂಪಾ— ಬಹುರೂಪವುಳ್ಳ, ಸಾ—ಅವಳು (ಆ ಲಕ್ಷ್ಮೀದೇವಿಯು), (ಅಭಿಮಾನ್ಯವಾನಗಳ ತಾರತಮ್ಯದಿಂದ), ಯದಾ— ಯಾವಾಗ, ಅಹಂ—ನಾನು—ಜ್ಞೇನ—ಸರ್ವಜ್ಞನಾದ, ನಾರಾಯಣೇನ— ಶ್ರೀಮನ್ನಾರಾಯಣನಿಂದ, ಯುಕ್ತಾ—ಕೂಡಿರುವೆನೋ, ಯಜ್ಞಕ್ರಿಯಾವಾನಿನೀ—ಯಜ್ಞಕಾರ್ಯದ ಅಭಿಮಾನಿಯಾಗಿರುವೆನೋ, ತತ್ಪವೇಶಾತ್—ಯಜ್ಞದಲ್ಲಿ ಪ್ರವೇಶವಿರುವದರಿಂದ ಅಥವಾ ಯಜ್ಞನಾಮಕ ಭಗವಂತನಲ್ಲಿ ಪ್ರವೇಶವಿರುವದರಿಂದ ಅಂದರೆ ಅವನ ತೊಡೆಯಲ್ಲಿರುವದರಿಂದ, ತದಾಖ್ಯಾ— ಆ ರೀತಿ ಅರ್ಥವುಳ್ಳ, ಯಜ್ಞನಾಮ್ನೀ—ಯಜ್ಞ ಎಂಬಹೆಸರುಳ್ಳವಳು, (ಭೂಯಾಸಂ—ಆಗುವೆನೋ) ತದಾ—ಆಗ, ಉತ್ತಮಾ—ಆ ರೂಪವು ಶ್ರೇಷ್ಠವು, ಇತಿ ಬಭಾಷೇ—ಎಂದು ಹೇಳಿದಳು. ॥೭೦॥

ವಿಷ್ಣ್ವವಿಷ್ಟಾಯಜ್ಞನಾಮ್ನೀ ತದಂಕಸ್ಥಿತಾ ಸೋಚೇ ಕೇಶವೋಹ್ಯುತ್ತಮೋsಲಂ ॥
ನತತ್ಸಮಶ್ಚಾಧಿಕೋsತಃ ಕುತಃ ಸ್ಯಾದೃಷೇ ಸತ್ಯಂ ನಾನ್ಯಥೇತಿ ಸ್ಮ ಭೂಯಃ ॥೭೧॥

ವಿಷ್ಣ್ವವಿಷ್ಟ ಶ್ರೀಹರಿಯಲ್ಲಿ ಪ್ರವೇಶಹೊಂದಿದ, ತದಂಕಸ್ಥಿತಾ—ಆ ಶ್ರೀಹರಿಯ ತೊಡೆಯಲ್ಲಿರುವ, ಯಜ್ಞನಾಮ್ನೀ ಸಾ—ಯಜ್ಞನಾಮಕಳಾದ ಆ ಲಕ್ಷ್ಮೀದೇವಿಯು, ಋಷೇ—ಹೇ ನಾರದರೇ, ಕೇಶವಃ ಹಿ—ಶ್ರೀಮನ್ನಾರಾಯಣನೇ, ~~ಅಲಂ—ನಿರವಧಿಕವಾಗಿ, ಉತ್ತಮಃ—ಉತ್ತಮನು, ತತ್ಸಮಃ ಚ—ಅವನ ಸಮಾನಾದವನೂ ಕೂಡ, ನ—ಇಲ್ಲ, ಅತಃ—~~ ಆದ್ದರಿಂದ, ಅಧಿಕಃ—ಅವನಿಗಿಂತ, —ಉತ್ತಮನು, ಕುತಃಸ್ಯಾತ್—ಹೇಗೆಇದ್ದಾನು? ಸತ್ಯಂ —ಈ ವಿಷಯವು ಸತ್ಯವಾದದ್ದು, ಅನ್ಯಥಾ ನ— ಇದಕ್ಕೆವಿರುದ್ಧವಾಗಿ ಎಂದೂ ಇಲ್ಲ, ಇತಿ - ಎಂದು, ಭೂಯಃ—ಪುನಃಪುನಃ, ಊಚೇ—ಹೇಳಿದಳು. ॥೭೧॥

ತಯೋಕ್ತೋsಹಂ ನಾವತಾರೇಷು ಕಶ್ಚಿತ್ ವಿಶೇಷ ಇತ್ಯೇವ ಯದುಪ್ರವೀರವ್
ಸರ್ವೋತ್ತಮೋsಸೀತ್ಯವದಂ ಸಚಾಹ ನಕೇವಲಂ ಮೇಂsಕಗಾಯಾಃ ಶ್ರಿಯೋsಹಂ ॥೭೨॥

ಸದೋತ್ತಮಃ ಕಿಂತು ಯದಾತುಸಾಮೇ ವಾಮಾರ್ಧರೂಪಾ ದಕ್ಷಿಣಾನಾಮಧೇಯಾ ॥
ಯಸ್ಮಾತ್ತಸ್ಯಾ ದಕ್ಷಿಣತಃ ಸ್ಥಿತೋsಹಂ ತಸ್ಮಾನ್ನಾಮ್ನಾ ದಕ್ಷೀಣೇತ್ಯೇವ ಸಾ ಸ್ಯಾತ್ ॥೭೩॥

ಸಾದಕ್ಷಿಣಾವಾನಿನೀ ದೇವತಾ ಚ ಸಾಚಸ್ಥಿತಾ ಬಹುರೂಪಾ ಮುದರ್ಧಾ ॥
ವಾಮಾರ್ಧೋ ಮೇ ತತ್ಪವಿಷ್ಟೋ ಯತೋ ಹಿ ತತೋsಹಂ ಸ್ಯಾಮರ್ಧನಾರಾಯಣಾಖ್ಯಃ ॥೭೪॥

ತದಾsಸ್ಯಸ್ಯಾ ಉತ್ತಮೋsಹಂ ಸುಪೂರ್ಣೋ ನಮಾದೃಶಃ ಕಶ್ಚಿದಸ್ತ್ಯುತ್ತಮೋ ವಾ ॥
ಇತ್ಯೇವಾವಾದೀದ್ ದಕ್ಷಿಣಾಭಿಃ ಸಹೇತಿ ಸರ್ವೋತ್ತಮತ್ವಂ ದಕ್ಷಿಣಾನಾಂ ಸ್ಮರನ್ಸಃ ॥೭೫॥

ತಾಭಿಶ್ಚೈತಾಭಿರ್ದಕ್ಷಿಣಾಭಿಃ ಸಮೇತಾದ್ ವರಿಷ್ಠೋಽಹಂ ಜಗತಃ ಸರ್ವದೈವ ॥
ಮತ್ಸಾಮರ್ಥ್ಯಾನ್ನೈವ ಚಾನಂತಭಾಗೋ ದಕ್ಷಿಣಾನಾಂ ವಿದ್ಯತೇ ನಾರದೇತಿ ॥೭೬॥

ತಯಾ---ಆ ಯಜ್ಞನಾಮಕ ಲಕ್ಷ್ಮೀದೇವಿಯಿಂದ, ಉಕ್ತಃ – ಈ ರೀತಿ ಹೇಳಿಸಿಕೊಳ್ಳಲ್ಪಟ್ಟ, ಅಹಂ—ನಾನು, ಅವತಾರೇಷು—, ಭಗವಂತನ ಅವತಾರಗಳಲ್ಲಿ, ಕಶ್ಚಿತ್ ವಿಶೇಷಃ – ಯಾವವ್ಯತ್ಯಾಸ (ಭೇದ) ವೂ, ನ ಇಲ್ಲ, ಇತಿ— ಎಂಬ ಕಾರಣದಿಂದ, ಯದುಪ್ರವೀರಂ--ಯಾದವಶ್ರೇಷ್ಠನಾದ ಶ್ರೀಕೃಷ್ಣನನ್ನು ಕುರಿತು, ಸರ್ವೋತ್ತಮಃ ಅಸಿ–ನೀನು ಸರ್ವೋತ್ತಮ ನಿರುವಿ ಎಂಬ ಅರ್ಥದಲ್ಲಿ ಧನ್ಯಃ ಅಸಿ, ಆಶ್ಚರ್ಯ ಅಸಿ ಎಂಬ ಮಾತನ್ನು, ಅವದಂ— ಹೇಳಿದೆನು. ಸಃ ಚ- ಆ ಶ್ರೀಕೃಷ್ಣ ನಾದರೂ, ಅಹಂ — ನಾನು, ಸದಾ–ಯಾವಾಗಲೂ, ಕೇವಲಂ ಮೇ ಅಂಗಾಯಶ್ರೀಃ ಶ್ರಿಯಃ ಉತ್ತಮಃ ನ – ಕೇವಲ ನನ್ನ ತೊಡೆಯಲ್ಲಿರುವ ಲಕ್ಷ್ಮೀಗಿಂತಲೂ ಉತ್ತಮನು ಎಂದಿಷ್ಟೇ ಅಲ್ಲ, ಕಿಂತು— ಆದರೆ, ಯದಾ – ಯಾವಾಗ, ಸಾ – ಆ ಲಕ್ಷ್ಮೀಯು, ಮೇ – ನನ್ನ, ವಾಮಾರ್ಧರೂಪಾಸತೀ— ನನ್ನ ಒಂದು ರೂಪದಲ್ಲಿ ವಾಮಭಾಗದಲ್ಲಿ ಅರ್ಧಶರೀರವನ್ನು ಹೊಂದಿದವಳಾಗಿ, ಯಸ್ಮಾತ್ಃ ತಸ್ಯಾ: ದಕ್ಷಿಣತಃ ಅಹಂಸ್ಥಿತಃ– ನಾನುಅವಳ ಬಲದಲ್ಲಿದ್ದದ್ದರಿಂದ, ನಾಮಾ ದಕ್ಷಿಣಾಽತಿಸಾ ಸ್ಯಾತ್–(ದಕ್ಷ–ಬಲಭಾಗದಲ್ಲಿ ಇನ–(ಸ್ವಾಮಿ) ವುಳ್ಳವಳು ಎಂಬ ಅರ್ಥದಲ್ಲಿ ದಕ್ಷಿಣಾ ಎಂಬ ಹೆಸರುಳ್ಳವಳಾದ್ದಾಳೋ, ಸಾ – ಅವಳು, ದಕ್ಷಿಣಾಮಾನಿನೀ ದೇವತಾ—ಯಜ್ಞ ದಕ್ಷಿಣೆಗೆ ಅಭಿಮಾನಿನಿಯು,ಬಹುರೂಪಾ – ಬಹುರೂಪವುಳ್ಳವಳು, ವಾಮಾರ್ಧ ಚ ಸ್ಥಿತಾ–ನನ್ನ ಅರ್ಧರೂಪದಂತೆಯೂ ಇದ್ದಾಳೆ. ಯತಃ – ಯಾವ ಕಾರಣದಿಂದ, ಮೇ ವಾಮಾರ್ಧಃ - ನನ್ನ ಅರ್ಧ ದೇಹವು(ವಾಮಭಾಗದ ದೇಹವು), ತತ್ಪ್ರವಿಷ್ಟಃ – ಅವಳಿಂದ ಪ್ರವಿಷ್ಟವಾಗಿದೆಯೋ, ತತಃ–ಆ ಕಾರಣದಿಂದ, ಅಹಂ–ನಾನು, ಅರ್ಧನಾರಾಯಣಾಖ್ಯಃ ಸ್ಯಾಂ –ಅರ್ಧನಾರಾಯಣ ಎಂಬ ಹೆಸರುವುಳ್ಳವನು ಆಗಿರುವೆನು. ತದಾಪಿ - ಆ ರೂಪದಲ್ಲಿರು ವಾಗಲೂ ಕೂಡ,ಅಹಂ - ನಾನು,ಅಸ್ಯಾಃ – ಈ ದಕ್ಷಿಣಾನಾಮಕ ಲಕ್ಷ್ಮೀಗಿಂತಲೂ, ಉತ್ತಮಃ–ಉತ್ತಮನು; ಸಂಪೂರ್ಣಃ – ಪರಿಪೂರ್ಣನು, ಮಾದೃಶಃ ಉತ್ತಮಃ ವಾ — ನನ್ನಂಥವನಾಗಲಿ, ನನಗಿಂತ ಉತ್ತಮನಾಗಲಿ, ಕಶ್ಚಿತ್—ಯಾವನೂ, ನ ಅಸ್ತಿ – ಇರುವದಿಲ್ಲ, ಇತಿ ಏವ – ಈ ಅಭಿಪ್ರಾಯದಿಂದಲೇ, ದಕ್ಷಿಣಾನಾಂ – ದಕ್ಷಿಣಾನಾಮಕ ಲಕ್ಷ್ಮೀರೂಪಗಳಿಗೆ, ಸರ್ವೋತ್ತಮತ್ವಂ–ಸರ್ವೋತ್ತಮತ್ವವನ್ನು, ಸ್ಮರನ್ – ತಿಳಿದ, ಸಃ ಆ ಶ್ರೀಕೃಷ್ಣನು, ಹೇನಾರದ–ಹೇ ನಾರದರೇ, ತಾಭಿಃ– ನನ್ನ ಎಡಕ್ಕೆ ಇರುವ, ತೊಡೆಯಲ್ಲಿರುವ ಲಕ್ಷ್ಮೀರೂಪಗಳಿಂದ, ಏತಾಭಿಃ ದಕ್ಷಿಣಾಭಿಃ – ಈ ದಕ್ಷಿಣಾನಾಮಕ ರೂಪಗಳಿಂದ, ಸಮೇತಾತ್ ಜಗತಃ — ಸಹಿತವಾದ ಸಕಲ ಜಗತ್ತಿಗಿಂತಲೂ, ಅಹಂ — ನಾನು, ಸರ್ವದಾ ವರಿಷ್ಠಃ – ಯಾವಾಗಲೂ ಶ್ರೇಷ್ಠನು. ಮತ್ಸಾಮರ್ಥ್ಯಾತ್ — ನನ್ನ ಸಾಮರ್ಥ್ಯದ ದೆಶೆಯಿಂದ, ಅನಂತಭಾಗಃ – ಅನಂತಭಾಗವೂ ಕೂಡ, ದಕ್ಷಿಣಾನಾಂ — ದಕ್ಷಿಣಾನಾಮಕ ಲಕ್ಷ್ಮೀರೂಪಗಳಿಗೆ, ನ ವಿದ್ಯತೇ – ಇರುವದಿಲ್ಲ, ಇತಿ—ಎಂಬ ಅಭಿಪ್ರಾಯದಿಂದ, ದಕ್ಷಿಣಾಭಿಃ ಸಹ ಇತಿ– ದಕ್ಷಿಣಾಭಿಃಸಹ ಎಂದು, ಅವಾದೀತ್ – ಹೇಳಿದನು. ॥೭೨॥-೫॥೭೪॥೭೫॥೭೬॥

ಅವಃ – ಶ್ರೀಕೃಷ್ಣನ ಅಭಿಪ್ರಾಯವು ಪ್ರತ್ಯಕ್ಷಸಿದ್ಧವಾಗಿದೆ ನೋಡಿರಿ ಎಂದು ತಿಳಿಸುತ್ತಾರೆ. —

ಉಕ್ತಂಕೃಷ್ಣೇನಾಪ್ರತಿಮೇನಭೂಪಾ ಅನ್ಯೋತ್ತಮತ್ವಂ ದಕ್ಷಿಣಾನಾಂಚಶಶ್ವತ್ ॥
ಸೇಯಂಭೈಷ್ಮೀದಕ್ಷಿಣಾ ಕೇಶವೋಽಯಂ ತಸ್ಯಾಃಶ್ರೇಷ್ಠಃ ಪಶ್ಯತ ರಾಜಸಂಘಾಃ ॥೭೭॥

ಹೇಭೂಪಾಃ – ಎಲೋ ರಾಜರೇ, ಅಪ್ರತಿಮೇನ – ಅಸದೃಶನಾದ ಕೃಷ್ಣೇನ,–ಶ್ರೀಕೃಷ್ಣನಿಂದ, ದಕ್ಷಿಣಾನಾಂ– ದಕ್ಷಿಣಾನಾಮಕ ಲಕ್ಷ್ಮೀದೇವಿಯ ರೂಪಗಳಿಗೆ, ಅನ್ಯೋತ್ತಮತ್ವಂ—ಇತರ ಎಲ್ಲರಿಗಿಂತ (ಬ್ರಹ್ಮಾದಿಗಳಿಗಿಂತ) ಉತ್ತಮತ್ವವು ಶ್ರೇಷ್ಠತೆಯು, ಶಶ್ವತ್— ಶಾಶ್ವತವಾಗಿ, ಉಕ್ತಂ— ಹೇಳಲ್ಪಟ್ಟಿದೆ. ಹೇ ರಾಜಸಂಘಾಃ – ಎಲೋ ರಾಜರೇ, ಸಾ ದಕ್ಷಿಣಾ— ಆ ದಕ್ಷಿಣಾನಾಮಕ ಶ್ರೀಲಕ್ಷ್ಮೀದೇವಿಯೇ, ಇಯಂ ಭೈಷ್ಮೀ — ಈ ರುಕ್ಮಿಣೀದೇವಿಯು, ತಸ್ಯಾಃ – ಅವಳಿಗಿಂತ. ಅಯಂ ಕೇಶವ :– ಈ ಶ್ರೀಕೃಷ್ಣನು, ಶ್ರೇಷ್ಠಃ – ಶ್ರೇಷ್ಠನಾಗಿದ್ದಾನೆ, ಪಶ್ಯತ — ನೋಡಿರಿ. ॥೭೭॥

ಪ್ರತ್ಯಕ್ಷಂ ವೋ ವೀರ್ಯಮಸ್ಯಾಪಿ ಕುಂತ್ಯಾ ಯುಧೇಽರ್ಥಿತಃ ಕೇಶವೋ ವೀರ್ಯಮಸ್ಯೈ ॥
ಅದರ್ಶಯತ್ ಪಾಂಡವಾನ್ ಧಾರ್ತರಾಷ್ಟ್ರಾನ್ ಭೀಷ್ಮದ್ರೋಣ ದ್ರೌಣಿಕೃಪಾನ್ ಸಕರ್ಣಾನ್ ॥
ನಿರಾಯುಧಾಂಶ್ಚಕ್ರ ಏಕಃ ಕ್ಷಣೇನ ಲೋಕಶ್ರೇಷ್ಠಾನ್ ದೈವತೈರಪ್ಯಜೇಯಾನ್ ॥೭೮॥

ಅಸ್ಯ ವೀರ್ಯಂ – ಈ ಶ್ರೀಕೃಷ್ಣನ ಪರಾಕ್ರಮವು, ವಃ—ನಿಮಗೆ, ಪ್ರತ್ಯಕ್ಷಮಪಿ – ಪ್ರತ್ಯಕ್ಷ ಸಿದ್ಧವೂ ಆಗಿದೆ (ಇತಿ – ಎಂದು, ಯದಾ ನಾರದಃ ಜಗಾದ ತದಾ—ಯಾವಾಗ ನಾರದರು ಹೇಳಿದರೋ ಆಗ) ಕುಂತ್ಯಾ - ಕುಂತೀದೇವಿಯಿಂದ, ಯುಧೇ—ಯುದ್ಧಕ್ಕಾಗಿ, ಅರ್ಥಿತಃ – ಪ್ರಾರ್ಥಿತನಾದ, ಕೇಶವಃ – ಶ್ರೀಕೃಷ್ಣನು, ಅಸ್ಯೈ – ಈ ಕುಂತಿಗೆ, ವೀರ್ಯಂ—ತನ್ನಪರಾಕ್ರಮವನ್ನು, ಅದರ್ಶಯತ್ – ತೋರಿಸಿದನು. ಏಕಃ—ಒಬ್ಬನೇ, (ದೈವತೈರಪಿ ಅಜೇಯಾನ್ – ದೇವತೆಗಳಿಂದಲೂ ಕೂಡ ಗೆಲ್ಲಲು ಅಶಕ್ಯರಾದ, ಲೋಕಶ್ರೇಷ್ಠಾನ್—ಲೋಕದಲ್ಲಿ ಶ್ರೇಷ್ಠಪರಾಕ್ರಮಿಗಳಾದ,) ಪಾಂಡವಾನ್ – ಪಾಂಡವರನ್ನು, ಧಾರ್ತರಾಷ್ಟ್ರಾನ್ – ಕೌರವರನ್ನು, ಸಕರ್ಣಾನ್ – ಕರ್ಣನಿಂದಸಹಿತರಾದ, ಭೀಷ್ಮದ್ರೋಣದ್ರೌಣಿಕೃಪಾನ್—ಭೀಷ್ಮದ್ರೋಣ ಅಶ್ವತ್ಥಾಮಕೃಪಾಚಾರ್ಯರನ್ನು, ಕ್ಷಣೇನ – ಕ್ಷಣದಲ್ಲಿಯೇ, ಸ್ವಲ್ಪಸಮಯದಲ್ಲಿಯೇ, ನಿರಾಯುಧಾನ್—ಆಯುಧರಹಿತರನ್ನಾಗಿ, ಚಕ್ರೇ – ಮಾಡಿದನು. ॥೭೮॥

ಅವ— ಶ್ರೀಭೀಮರು ಶ್ರೀಕೃಷ್ಣನ ಎದುರುನಿಂತು ಯುದ್ಧವನ್ನು ಹೇಗೆ ಮಾಡಿದರು ಎಂಬ ಶಂಕೆಯನ್ನು ಪರಿಹರಿಸುತ್ತಾರೆ.

ವ್ರತಂ ಭೀಮಸ್ಯಾಸ್ತಿ ನೈವಾಭಿಕೃಷ್ಣಮಿಯಾಮಿತಿಸ್ಮಾಽಜ್ಞಯಾಃ ತಸ್ಯವಿಷ್ಣೋಃ ॥
ಚಕ್ರಂ ರಥಸ್ಯಾಗ್ರಹೀತ್ ಸ ಪ್ರಣಮ್ಯ ಕೃಷ್ಣಂ ಸತಂ ಕೇಶವೋಽಪಾಹರಚ್ಚ ॥೭೯॥

ಯಸ್ಮಾತ್—ಯಾವಕಾರಣದಿಂದ ಕೃಷ್ಣಂ ಅಭಿ – ಶ್ರೀಕೃಷ್ಣನ ಎದುರು, ನೈವಾಯಾಂ–ಯುದ್ಧಕ್ಕಾಗಿಹೋಗುವದಿಲ್ಲ, ಇತಿ—ಎಂದು, ಭೀಮಸ್ಯ ವ್ರತಂ ಅಸ್ತಿ–ಶ್ರೀಭೀಮಸೇನರ ನಿಯಮವಿದೆಯೋ, ತಸ್ಮಾತ್—ಆದ್ದರಿಂದ, ತಸ್ಯವಿಷ್ಣೋಃ—ಆ ಶ್ರೀಕೃಷ್ಣನ, ಆಜ್ಞಯಾ ಏವ—ಅಪ್ಪಣೆಯಿಂದಲೇ, ಸಃ—ಆ ಭೀಮರು, ರಥಸ್ಯ– ಶ್ರೀಕೃಷ್ಣನರಥದ, ಚಕ್ರಂ—ಗಾಲಿಯನ್ನಷ್ಟೇ, ಅಗ್ರಹೀತ್ – ಹಿಡಿದರು,(ಯುದ್ಧಮಾಡಲಿಲ್ಲ) ಸಃಕೇಶವಃಚ—ಆ ಶ್ರೀಕೃಷ್ಣನಾದರೂ ಕೂಡ, ತಂ—ಆ ಭೀಮರನ್ನು, ಅಪಾಹರತ್ – ತನ್ನಶಕ್ತಿಯಿಂದ ರಥ ಚಕ್ರದಿಂದ ಬಿಡಿಸಿ ದೂರಕ್ಕೆ ಸರಿಸಿದನು. ॥೭೯॥

ಏವಂಕ್ರೀಡಂತೋಽಪ್ಯಾತ್ಮಶಕ್ತ್ಯಾ ಪ್ರಯತ್ನಂ ಕುರ್ವಂತಸ್ತೇ ವಿಜಿತಾಃ ಕೇಶವೇನ ॥
ತತಃ ಸರ್ವೇ ನೇಮುರಸ್ಮೈ ಪೃಥಾ ಚ ಸವಿಸ್ಮಯಾ ವಾಸುದೇವಂ ನನಾಮ ॥೮೦॥

ಏವಂ—ಹೀಗೆ, ಕ್ರೀಡಂತಃಅಪಿ – ಕ್ರೀಡಿಸತಕ್ಕವರಾದರೂ ಕೂಡ, ಆತ್ಮಶಕ್ತ್ಯಾ ಪ್ರಯತ್ನಂ ಕುರ್ವಂತಃ — (ಭಗವಂತನ ಆಜ್ಞಾನುಸಾರ) ತಮ್ಮ ಶಕ್ತ್ಯನುಸಾರ ಪ್ರಯತ್ನವನ್ನುಮಾಡತಕ್ಕಂಥ, ತೇ ಸರ್ವೇ – ಆ ಪಾಂಡವರೆಲ್ಲರೂ ಕೇಶವೇನ ವಿಜಿತಾಃ ಸಂತಃ —ಶ್ರೀಕೃಷ್ಣನಿಂದ ಗೆಲ್ಲಲ್ಪಟ್ಟವರಾಗಿ, ಅಸ್ಮೈ—ಶ್ರೀಕೃಷ್ಣನಿಗೆ, ನೇಮುಃ – ನಮಸ್ಕರಿಸಿದರು, ಸವಿಸ್ಮಯಾ – ಆಶ್ಚರ್ಯಚಕಿತಳಾದ, ಪೃಥಾ ಚ—ಕುಂತೀದೇವಿಯೂ, ಕೂಡ, ವಾಸುದೇವಂ—ಶ್ರೀಕೃಷ್ಣನನ್ನು, ನನಾಮ—ನಮಸ್ಕರಿಸಿದಳು. ॥೮೦॥

ಏವಂವಿಧಾನ್ಯದ್ಭುತಾನೀಹ ಕೃಷ್ಣೇ ದೃಷ್ಟ್ವಾನಿವಃ ಶತಸಾಹಸ್ರಶಶ್ಚ ॥
ತಸ್ಮಾದೇಷ ಹ್ಯದ್ಭುತೋಽತ್ಯತ್ಭುತಶ್ಚೇತ್ಯುಕ್ತಾ ನೇಮುಸ್ತೇಽಖಿಲಾವಾಸುದೇವಂ ॥೮೧॥

ಏವಂವಿಧಾನಿ ಅದ್ಭುತಾನಿ – ಈ ರೀತಿಯಾದ ಆಶ್ಚರ್ಯಕರಘಟನೆಗಳು, ಇಹ ಕೃಷ್ಣೇ—ಈ ಕೃಷ್ಣನಲ್ಲಿ, ವಃ – ನಿಮ್ಮಿಂದ, ಶತಸಾಹಸ್ರಶಃಚ—ಸಾವಿರಾರು (ಅಸಂಖ್ಯವಾಗಿ), ದೃಷ್ಟಾನಿ—ನೋಡಲ್ಪಟ್ಟಿರುತ್ತವೆ. ತಸ್ಮಾತ್—ಆದ್ದರಿಂದ, ಏಷಃಹಿ – ಈ ಶ್ರೀಕೃಷ್ಣನೇ, ಅದ್ಭುತಃ ಅತ್ಯುತ್ತಮಃ ಚ – ಆಶ್ಚರ್ಯಕರನು ಮತ್ತು ಅತ್ಯುತ್ತಮನು, ಇತಿ – ಎಂದು, ಉಕ್ತಾಃ – ನಾರದರಿಂದಹೇಳಿಸಿಕೊಳ್ಳಲ್ಪಟ್ಟ, ತೇ ಅಖಿಲಾಃ–ಅವರೆಲ್ಲರೂ ವಾಸುದೇವಂ ನೇಮುಃ–ಶ್ರೀಕೃಷ್ಣನನ್ನು ನಮಸ್ಕರಿಸಿದರು. ॥೮೧॥

ವಾಯ್ವಾಜ್ಞಯಾ ವಾಯುಶಿಷ್ಯಃ ಸ ಸತ್ಯಮಿತ್ಯಾದ್ಯುಕ್ತ್ವಾ ನಾರದೋರುಕ್ಮಿಣೀಂಚ ॥
ಸ್ತುತ್ವಾಪುಷ್ಪಂ ಪಾರಿಜಾತಸ್ಯ ದತ್ವಾ ಯಯೌ ಲೋಕಂ ಕ್ಷಿಪ್ರಮುಬ್ಜೋದ್ಭವಸ್ಯ ॥೮೨॥

ವಾಯುಶಿಷ್ಯಃ ಸಃ ನಾರದಃ – ಶ್ರೀವಾಯುದೇವರ ಶಿಷ್ಯರಾದ ನಾರದರು, ವಾಯ್ವಾಜ್ಞಯಾ—ವಾಯುದೇವರ ಆಪ್ತಣೆಯ ಪ್ರಕಾರ, ಇತ್ಯಾದಿ ಸತ್ಯಂ—ಇತ್ಯಾದಿ ಪ್ರಾಮಾಣಿಕವಾದ, ಸರ್ವಹಿತಕರವಾದ ಮಾತನ್ನು, ಉಕ್ತ್ವಾ—ಹೇಳಿ, ರುಕ್ಮಿಣೀಂ ಚ ಸ್ತುತ್ವಾ – ಶ್ರೀರುಕ್ಮಿಣಿಯನ್ನೂ ಕೂಡ ಸ್ತುತಿಸಿ, ಪಾರಿಜಾತಸ್ಯ ಪುಷ್ಪಂ ದತ್ವಾ – ಪಾರಿಜಾತ ಪುಷ್ಪವನ್ನು ಕೊಟ್ಟು, ಅಬ್ಜೋದ್ಭವಸ್ಯ – ಕಮಲದಲ್ಲಿ ಜನಿಸಿದ ಚತುರ್ಮುಖಬ್ರಹ್ಮದೇವರ, ಲೋಕಂ – ಸತ್ಯಲೋಕಕ್ಕೆ, ಕ್ಷಿಪ್ರಂ– ಕೂಡಲೇ, ಯಯೌ —ಹೋದರು. ॥೮೨॥

ಸಾಕ್ಷಾತ್ಸತ್ಯಾರುಕ್ಮಿಣೀತ್ಯೇಕಸಂವಿತ್ ದ್ವಿಧಾಭೂತಾನಾತ್ರಭೇದೋಽಸ್ತಿ ಕಶ್ಚಿತ್ ॥
ತಥಾಪಿ ಸಾಪ್ರಮದಾನಾಂ ಸ್ವಭಾವಪ್ರಕಾಶನಾರ್ಥಂ ಕುಪಿತೇವಾಽಸ ಸತ್ಯಾ ॥೮೩॥

ಸಾಕಂ ರುಕ್ಮಿಣ್ಯಾ ರಾಜಮಧ್ಯೇಪ್ರವೇಶಾತ್ ಸ್ತವಾದೃಷೇಃ ಪುಷ್ಪದಾನಾಚ್ಚದೇವೀಂ ॥
ಕೋಪಾನನಂ ದರ್ಶಯಂತೀಮುವಾಚ ವಿಡಂಬನಾರ್ಥಂ ಕಾಮಿಜನಸ್ಯ ಕೃಷ್ಣಃ ॥೮೪॥

ಏಕಸಂವಿತ್ – ಮುಖ್ಯಜ್ಞಾನದೇವತೆಯಾದ, ಜ್ಞಾನಾನಂದಸ್ವರೂಪಳಾದ, ಶ್ರೀಲಕ್ಷ್ಮೀದೇವಿಯೇ, ಸಾಕ್ಷಾತ್ – ತಾನೇ (ಸ್ವತಃ), ರುಕ್ಮಿಣೀ ಸತ್ಯಾ ಇತಿ-ರುಕ್ಮಿಣೀಸತ್ಯಭಾಮಾ ಎಂದು, ದ್ವಿಧಾಭೂತಾ – ಎರಡುರೂಪಳಾಗಿದ್ದಾಳೆ. ಅತ್ರ – ಈ ರೂಪಗಳಲ್ಲಿ, ಕಶ್ಚಿತ್ ಭೇದಃ – ಯಾವಭೇದವೂ(ವಿರೋಧವೂ), ನ ಅಸ್ತಿ – ಇಲ್ಲ, ತಥಾಪಿ—ಆದರೂಕೂಡ, ಸಾ ಸತ್ಯಾ– ಆ ಸತ್ಯಭಾಮಾದೇವಿಯು, ಪ್ರಮದಾನಾಂ – ಸ್ತ್ರೀಯರ, ಸ್ವಭಾವಪ್ರಕಾಶನಾರ್ಥಂ – ಸ್ವಭಾವವನ್ನು ಪ್ರಕಟಮಾಡುವದಕ್ಕಾಗಿ, ರುಕ್ಮಿಣ್ಯಾಸಾಕಂ —ರುಕ್ಮಿಣೀದೇವಿಯಿಂದ ಕೂಡಿಕೊಂಡು, ರಾಜಮಧ್ಯೇ – ರಾಜಸಭೆಯ ಮಧ್ಯದಲ್ಲಿ, ಪ್ರವೇಶಾತ್ – ಶ್ರೀಕೃಷ್ಣನ ಪ್ರವೇಶಕಾರ್ಯದಿಂದ ಋಷೇಃ – ನಾರದರ (ಅವರುಮಾಡಿದ), ಸ್ತವಾತ್—ರುಕ್ಮಿಣೀಯಬಗ್ಗೆ ಸ್ತೋತ್ರ ಕಾರ್ಯದಿಂದ, ಪುಷ್ಪದಾನಾಚ್ಚ – ಪಾರಿಜಾತ ಪುಷ್ಪ ದಾನದಿಂದಲೂ, ಕುಪಿತಾ ಇವ ಆಸ – ಸಿಟ್ಟಿಗೆದ್ದವಳಂತಾದಳು. ಕೋಪಾನನಂ– ಸಿಟ್ಟಿಗೆದ್ದಮುಖವನ್ನು, ದರ್ಶಯಂತೀಂ—ತೋರಿಸುತಕ್ಕ, ದೇವೀಂ – ಶ್ರೀಸತ್ಯಭಾಮಾದೇವಿಯನ್ನು ಕುರಿತು, ಕೃಷ್ಣಃ – ಶ್ರೀಕೃಷ್ಣನು, ಕಾಮಿಜನಸ್ಯ ವಿಡಂಬನಾರ್ಥಂ—ಕಾಮುಕಜನರ ನಟನೆಗಾಗಿ, ಉವಾಚ—ಹೇಳಿದನು. ॥೮೩-೮೪॥

ದಾತಾಸ್ಮ್ಯಹಂ ಪಾರಿಜಾತಂ ತರುಂ ತ ಇತ್ಯೇವ ತತ್ರಾಥಾಽಗಮದ್ ವಾಸವೋಽಪಿ ॥
ಸರ್ವೈರ್ದೇವೈರ್ಭೌಮು ಜಿತೋಽಪ್ಯದಿತ್ಯಾಸ್ತೇನೈವಾಥೋ ಕುಂಡಲಾಭ್ಯಾಂ ಹೃತಾಭ್ಯಾಂ ॥೮೫॥

ಅಹಂ—ನಾನು, ತೇ—ನಿನಗೆ, ಪಾರಿಜಾತಂ ತರುಂವಿವ—ಪಾರಿಜಾತಗಿಡವನ್ನೇ, ದಾತಾಸ್ಮಿ—ತಂದುಕೊಡುವೆನು ಇತಿ—ಎಂದು ಹೇಳಿದನು. ಅಥ—ಅನಂತರ, ತತ್ರ—ಅಲ್ಲಿಗೆ, ಭೌಮಜಿತಃ—ನರಕಾಸುರನಿಂದ ಗೆಲ್ಲಲ್ಪಟ್ಟಂಥ, ವಾಸವಃಅಪಿ—ಇಂದ್ರದೇವರೂಕೂಡ, ತೇನೈವ—ಆ ನರಕಾಸುರನಿಂದಲೇ, ಅದಿತ್ಯಾಃಕುಂಡಲಾಭ್ಯಾಂ ಹೃತಾಭ್ಯಾಂ ಸದ್ಭ್ಯಂ—ಅದಿತಿಯ ಕರ್ಣ ಕುಂಡಲಗಳು ಅಪಹರಿಸಲ್ಪಡುತ್ತಿರಲು, ಸರ್ವೈಃದೇವೈಃಸಹ—ಎಲ್ಲದೇವತೆಗಳಿಂದ ಸಹಿತನಾಗಿ, ಅಗಮತ್—ಬಂದನು.॥೮೫॥

ತದೈವಾऽಗು ರ್ಮುನಯಸ್ತೇನ ನುನ್ನಾ ಃ ಬದರ್ಯಾಸ್ತೇ ಸರ್ವಏವಾऽಶು ಕೃಷ್ಣಂ ॥
ಯಯಾಚಿರೇ ಭೌಮವಧಾಯ ನತ್ವಾ ಸ್ತುತ್ವಾ ಸ್ತೋತ್ರೈರ್ವೈದಿಕೈಸ್ತಾಂತ್ರಿಕೈಶ್ಚ ॥೮೬॥

ತದಾ ಏವ—ಆ ಸಮಯದಲ್ಲಿಯೇ, ತೇನ ನುನ್ನಾಃ—ಆ ಇಂದ್ರನಿಂದ ಪ್ರೇರಿತರಾದ, ಆ ನರಕನಿಂದ ಪೀಡಿತರಾದ ಸರ್ವೇಮುನಯಃ—ಎಲ್ಲ ಋಷಿಗಳು, ಆಶು—ಕೂಡಲೇ, ಬದರ್ಯಾಃ—ಬದರೀಕ್ಷೇತ್ರದಿಂದ, ಆಗುಃ—ಬಂದರು, ಚ—ಮತ್ತು ಕೃಷ್ಣನನ್ನು, ನತ್ವಾ—ನಮಸ್ಕರಿಸಿ, ವೈದಿಕೈಃ ತಾಂತ್ರಿಕೈಃಸ್ತೋತ್ರೈಃ—ವೇದೋಕ್ತ, ಪುರಾಣೋಕ್ತ ಸ್ತೋತ್ರಗಳಿಂದ ಸ್ತುತ್ವಾ—ಸ್ತೋತ್ರಮಾಡಿ, ಭೌಮವಧಾಯ—ನರಕಾಸುರನ ವಧಕ್ಕಾಗಿ, ಯಯಾಚಿರೇ—ಪ್ರಾರ್ಥಿಸಿದರು. ॥೮೬॥

ಭಾವಾನುವಾದ-೬೩-೮೬ : ಶ್ರೀಕೃಷ್ಣನು ತನ್ನ ಪತ್ನೀಸಮೇತನಾಗಿ ದ್ವಾರಕೆಯಲ್ಲಿರುತ್ತಿರಲು ಪಾಂಡವರು, ಕೌರವರು, ಉಳಿದೆಲ್ಲರಾಜರು ರೈವತಪರ್ವತಕ್ಕೆ ಬಂದರು. ತನ್ನನ್ನು ಕಾಣಲು ಬಂದ ಅವರನ್ನೆಲ್ಲ ಶ್ರೀಕೃಷ್ಣನು ನೋಡಿದನು. ದಿವ್ಯಾಸನದಲ್ಲಿ ಆಸೀನನಾದ ಶ್ರೀರುಕ್ಮಿಣೀಸಹಿತನಾದ ಶ್ರೀಕೃಷ್ಣನು ಶ್ರೇಷ್ಠರಾಜ—ಮಹಾರಾಜರಿಂದ ನಮಸ್ಕಾರಮಾಡಿಸಿಕೊಳ್ಳುತ್ತಿರುವಾಗ ಆಕಾಶಮಾರ್ಗದಿಂದ ಬಂದ ದೇವರ್ಷಿನಾರದರು ಶ್ರೀಕೃಷ್ಣನನ್ನು ಕುರಿತು ನೀನು ಸರ್ವೋತ್ತಮನು, ನಿನ್ನಂಥವನು ಯಾರೂಇಲ್ಲ, ಎಂಬ ಈ ಅಭಿಪ್ರಾಯದಲ್ಲಿಯೇ, ನೀನು ಆಶ್ಚರ್ಯನು, ಧನ್ಯನು ಎಂಬ ಎರಡು ಮಾತುಗಳನ್ನು ಹೇಳಿದರು. ಆಗ ಶ್ರೀಕೃಷ್ಣನು ದಕ್ಷಿಣಾಭಿಸ್ಸಾಕಂ ಎಂಬ ಮಾತನ್ನು ಹೇಳಿದನು. ಆಗ ಅದನ್ನೆಲ್ಲ ಕೇಳಿದ, ~~ಅದರೆ ಅರ್ಥವಾಗದ ರಾಜರೆಲ್ಲರೂ ಏನು ಇದರ ಅರ್ಥವು? ಎಂದು ಕೇಳಿದರು. ಶ್ರೀಕೃಷ್ಣನು ನಾರದರಿಗೆ ಸಂದರ್ಭಸಹಿತವಾಗಿ~~ ವಿವರಣೆ ನೀಡಲು ಹೇಳಿದನು. ಆಗ ನಾರದರು ಎಲ್ಲ ರಾಜರನ್ನು ಕುರಿತು ಕೇಳಿರಿ ಎಂದು ಹೇಳಿ, ವಿವರಿಸಲಾರಂಭಿಸಿದರು. ನಾನುಗಂಗೆಗೆ ಹೋದಾಗ, ಅಲ್ಲಿ ಕೂರ್ಮ (ಆಮೆ) ವನ್ನು ನೋಡಿದಾಗ ನೀನು ಉತ್ತಮ ನಿನಗೆ ಸಮಾವಾದದ್ದಿಲ್ಲ ಎಂದು ಅಂದೆನು. ಆಗ ಅದು ತನಗಿಂತ ಗಂಗೆಯು ಶ್ರೇಷ್ಠಳು ಎಂದು ಹೇಳಿತು. ಆಗ ನಾನು ಅವಳ ಹತ್ತಿರ ಹೋಗಿ ನೀನು ಆಶ್ಚರ್ಯಳು ಧನ್ಯಳು ಎಂದು ಹೇಳಿದಾಗ ಅವಳು ತನಗಿಂತ ವರುಣದೇವರನ್ನು ಹೇಳಿದಳು. ಅವರು ತಮಗಿಂತ ಕೆಳಗಿನವರನ್ನು ಧರಿಸಿ ಪ್ರಸಿದ್ಧರಾಗಿರುವದರಿಂದ ಪೃಥಿವೀನಾಮಕರಾದ ಉಮಾ ಸೌಪರ್ಣ ವಾರುಣಿಯರನ್ನು ಹೇಳಿದರು. ಅವರು ಮತ್ತೆ ತಮಗಿಂತ ಪರ್ವತನಾಮಕರಾದ (ಪರ ತಮಗಿಂತ ಅವರರಾದ ಇಂದ್ರಾದಿಗಳ, ಅವನ-ರಕ್ಷಣಮಾಡುವದರಿಂದ) ಗರುಡ ಶೇಷ-ರುದ್ರರನ್ನು ಆಶ್ಚರ್ಯಧನ್ಯರನ್ನಾಗಿ ಹೆಳಿದರು. ಅವರ ಹತ್ತಿರ ಹೋಗಿ ನಾನು ಹಾಗೆ ಹೇಳಿದಾಗ ಅವರು ತಮಗಿಂತಬ್ರಹ್ಮದೇವರು ಆಶ್ಚರ್ಯರು ಧನ್ಯರು ಎಂದು ಹೇಳಿದರು. ಅವರಲ್ಲಿ ಹೋಗಿ ಹಾಗೆ ಹೇಳಿದಾಗ ಅವರು ನನ್ನ ತಾಯಿಯಾದ ವೇದಾಭಿಮಾನಿ-ಯಾದ ಪ್ರಕೃತಿನಾಮಕಳಾದ ಶ್ರೀಲಕ್ಷ್ಮೀದೇವಿಯು ಆಶ್ಚರ್ಯಳುಧನ್ಯಳು ಎಂದರು. ಅವಳ ಹತ್ತಿರ ಹೋಗಿ ನಾನು ಹಾಗೇ ಹೇಳಿದಾಗ ಅವಳು, ವೇದಫಲೀಭೂತ ಯಜ್ಞಕ್ಕೆ ಅಭಿಮಾನಿಯಾದ ಯಜ್ಞ ನಾಮಕಳಾದ ಲಕ್ಷ್ಮೀದೇವಿಯು ಆಶ್ಚರ್ಯಳು ಧನ್ಯಳು ಎಂದಳು. ಅವಳೂಕೂಡ ತನಗಿಂತ ತನ್ನ ಪತಿಯಾದ, ತನ್ನ ಅಭಿಮಾನ್ಯಮಾನ ಯಜ್ಞ ಕ್ರಿಯೆಯಲ್ಲಿ ಆರಾಧ್ಯನಾದ, ನಿರವಧಿಕಗುಣಪೂರ್ಣನಾದ ಶ್ರೀಮನ್ನಾರಾಯಣನು ಆಶ್ಚರ್ಯನು ಧನ್ಯನು ಎಂದೂ ಅಂದಳು. ಆಗ ನಾನು ಭಗವಂತನಿಗೆ ಮೂಲರೂಪ-ಅವತಾರರೂಪಗಳಲ್ಲಿ ಅಭೇದವಿದ್ದದ್ದರಿಂದ, ಶ್ರೀಕೃಷ್ಣನ ಬಳಿಗೆ ಇಲ್ಲಿಗೆ ಬಂದು ಹಾಗೆ ತ್ವಂ ಆಶ್ಚರ್ಯೋऽಸಿ ಧನ್ಯೋऽಸಿ ಎಂದು ಹೇಳಿದಾಗ, ಅವನು ದಕ್ಷಿಣಾಭಿಸ್ಸಾಕಂ ಎಂದು ಅಂದನು. ಅದರ ಅರ್ಥವು 1) ಕೇವಲ ನಾನು ಮಾತ್ರ

ಇವರೆಲ್ಲರಿಗಿಂತ ಉತ್ತಮ ಎಂದೂ ಅಲ್ಲ; ಆದರೆ ದಕ್ಷಿಣಾನಾಮ್ನಿಳಾದ ಲಕ್ಷ್ಮೀದೇವಿಯೂ ಕೂಡ ಇವರೆಲ್ಲರಿಗಿಂತ ಉತ್ತಮಳು (ಅವಳು ಸಾವಧಿಕ ಉತ್ತಮಳು ತಾನು ನಿರವಧಿಕ ಉತ್ತಮ ಎಂಬ ಅರ್ಥದಲ್ಲಿ) ಎಂಬ ಹಿಂದು ಅರ್ಥದಲ್ಲಿಯೂ ಹಾಗೂ (2) ನಾನು ಕೇವಲ ಈ ಎಲ್ಲರಿಗಿಂತ) ಕೂರ್ಮನಿಂದ ಹಿಡಿದು ಯಜ್ಞಾಭಿಮಾನಿ ಲಕ್ಷ್ಮೀದೇವಿ ಪರ್ಯಂತರಾಗಿರುವವರಿಗಿಂತ ಮಾತ್ರ ಶ್ರೇಷ್ಠ ಎಂದಿಷ್ಟೆ ಅಲ್ಲ; ಆದರೆ ದಕ್ಷಿಣಾನಾಮಕಳಾದ ಲಕ್ಷ್ಮೀದೇವಿಗಿಂತಲೂ ಕೂಡ ಶ್ರೇಷ್ಠನು ಎಂಬ ಇನ್ನೊಂದೂ ಅರ್ಥದಲ್ಲಿಯೂ ಕೂಡ ದಕ್ಷಿಣಾಭಿಸ್ಸಾಕಂ ಎಂದು ಹೇಳಿದನು. "ಆ ದಕ್ಷಿಣಾರೂಪಳಾದ ಲಕ್ಷ್ಮೀದೇವಿಯು ದೇವರ ಶರೀರದಲ್ಲಿ ಅರ್ಧ ಭಾಗದಲ್ಲಿ ಸೇರಿರುವಳು. ಹೀಗಾಗಿ ಅವಳ ದಕ್ಷ-ಬಲಭಾಗದಲ್ಲಿ, ಇನ-ಸ್ವಾಮಿಯು ಇರುವದರಿಂದ, ದಕ್ಷಿಣಾಕ್ಕೆ ಅಭಿಮಾನಿಯಾದ್ದರಿಂದ ದಕ್ಷಿಣಾನಾಮಕಳಾಗಿರುವಳು, ವಾಸ್ತವಿಕವಾಗಿ ವೇದಾಭಿಮಾನಿಯಾದ ಪ್ರಕೃತಿನಾಮಕ ಭಗವಂತನ ವಾಮಭಾಗದಲ್ಲಿ ಕುಳಿತಿರುವ ಲಕ್ಷ್ಮೀ ಯಜ್ಞಾಭಿಮಾನಿಯಾವ ಭಗವಂತನ ತೊಡೆಯಮೇಲೆ ಆಸೀನಳಾದ ಯಜ್ಞನಾಮಕಳಾದ ಲಕ್ಷ್ಮೀದೇವಿ, ದಕ್ಷಿಣಾಭಿಮಾನಿಯಾವ, ಅರ್ಧನಾರಾಯಣರೂಪೀ ಭಗವಂತನ ಅರ್ಧಶರೀರದಲ್ಲಿ ವಾಮಭಾಗ-ಶರೀರದಲ್ಲಿರುವದಕ್ಷಿಣಾವಾಮಕಳಾದ ಲಕ್ಷ್ಮೀದೇವಿ ಈ ಮೂವರೂ ಕೂಡ ಅಭಿನ್ನರೇ ಆವರಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಆದರೆ ಆವರಿಂದ ಅಭಿಮನ್ಯಮಾನವಾದ ವೇದ, ಯಜ್ಞ, ದಕ್ಷಿಣಾಗಳಲ್ಲಿ ತಾರತಮ್ಯವಿದ್ದದ್ದರಿಂದ ಹಾಗೆ ಉತ್ತಮತ್ವವನ್ನು ಹೇಳಿದ್ದು. ಅದರಿಂದ ಭಗವಂತನ ಹೆಚ್ಚು ಹೆಚ್ಚು ಸಾಮೀಪ್ಯಕ್ಕೆ ಮಹತ್ವವನ್ನು ತೋರಿಸಿದ್ದು ಎಂದೂ ತಿಳಿಯಬೇಕು. ಇಲ್ಲಿ ನಾರದರು ಪ್ರಥಮವಾಗಿ ಕೂರ್ಮದ ಹತ್ತಿರ ಬಂದು ಹೇಳಿದರಲ್ಲವೇ, ಆ ಕೂರ್ಮವು ತ ರತಮ್ಯದಲ್ಲಿ ಪೂರ್ವ ಅವಧಿರೂಪನಾದ ಪುಷ್ಕರನು. ಪ್ರತಿಯೊಬ್ಬರ ಹತ್ತಿರ ಆಶ್ಚರ್ಯ ಧನ್ಯ ಎಂದು ನಾರದರು ಹೇಳಿದ್ದು ಎಲ್ಲರೂ ಅವರವರಿಗಿಂತ ಕಡಿಮೆಯಾದ ಎಲ್ಲರಿಗಿಂತ ಉತ್ತಮ ಎಂಬ ಅಭಿಪ್ರಾಯದಿಂದ ಎಂದು ತಿಳಿಯಬೇಕು. ಏಕೆಂದರೆ ಪರಮ ತತ್ವನಾದ ಭಗವಂತನ ಆಪರೋಕ್ಷಿಗಳಾದ ನಾರದರಿಗೆ ತಪ್ಪುತಿಳಿವಳಿಕೆಯುಂಟಿಲ್ಲ. ಇದರಿಂದ ಪುಷ್ಕರನಿಗಿಂತ, ಗಂಗಾ ಅವಳಿಗಿಂತ ವರುಣದೇವರು, ಅವರಿಗಿಂತ ಉಮಾ ಸೌಪರ್ಣ ವಾರುಣಿಯರು ಅವರಿಗಿಂತ ಗರುಡಶೇಷರುದ್ರರು, ಅವರಿಗಿಂತ ವಾಯು-ಬ್ರಹ್ಮದೇವರು, ಅವರಿಗಿಂತ ಬಹುರೂಪಿಣಿಯಾದ ಲಕ್ಷ್ಮೀದೇವಿಯು, ಅವರಿಗಿಂತ ಶ್ರೀ ನಾರಾಯಣನು ನಿರವಧಿಕ ಸರ್ವೋತ್ತಮನು ಎಂದು(1) ದೇವತಾತಾರತಮ್ಯವು, ಕೂರ್ಮದೇಹಕ್ಕಿಂತ ಗಂಗಾಜಲವು, ಅದಕ್ಕಿಂತ ತದಾಧಾರಭೂತ ಸಮುದ್ರಜಲ, ಅದಕ್ಕಿಂತ ಅದರ ಆಧಾರಭೂತ ಪೃಥಿವಿಯು, ಅದಕ್ಕಿಂತ ಅದರ ಆಧಾರ ಭೂತ ಪರ್ವತಗಳು, ಅವುಗಳಿಗಿಂತ ಮಹತ್ತತ್ವವು, ಅದಕ್ಕಿಂತಲೂ ಬ್ರಾಹ್ಮಣ್ಯಕ್ಕೆ ಕಾರಣವಾದ ವೇದವು, ಶುಷ್ಕ ವೇದಕ್ಕಿಂತ ತದರ್ಥಭೂತ ವಿಷ್ಣು ಪೂಜಾರೂಪ ಯಜ್ಞವು, ಅದಕ್ಕಿಂತ ಋತ್ವಿಜರು ಮಾಡಿದ ಯಜ್ಞದಪುಣ್ಯ ರೂಪ ಶ್ರೇಯಸ್ಸನ್ನು ಯಜಮಾನನಿಗೆ ತಂದುಕೊಡುವ ಪ್ರಯುಕ್ತ, ಯಜ್ಞದಲ್ಲಿ ಋತ್ವಿಜರಿಗೆ ಆಗುವ ಶ್ರಮವನ್ನು ಪರಿಹರಿಸುವದರಿಂದಲೂ ದಕ್ಷಿಣಾಕ್ಕೆ ಉತ್ತಮತ್ವವು ಹೀಗೆ (2) ಜಡತಾರತಮ್ಯವೂ ಸಿದ್ಧವಾಗುತ್ತದೆ. ಭಗವಂತನ ಅಸಂಕುಚಿತ ನಿರವಧಿಕ ಸರ್ವೋತ್ತಮತ್ವವೂ ಸಿದ್ಧವಾಯಿತು. ಇಷ್ಟೆಲ್ಲ ಅಭಿಪ್ರಾಯದಿಂದ ಭಗವಂತನು ದಕ್ಷಿಣಾಭಿಸ್ಸಾಕಂ ಎಂದು ಹೇಳಿದ್ದು. ನಾರದನೇ ನನ್ನ ಸಾಮರ್ಥ್ಯದ ಅನಂತಭಾಗಗಳಲ್ಲಿಯೂ ಒಂದು ಭಾಗವೂಕೂಡ, ದಕ್ಷಿಣಾದೇವಿಯಲ್ಲೂ ಕೂಡ ಇಲ್ಲ ಎಂದೂ ಭಗವಂತನು ಹೇಳಿದನು. ಎಲೋರಾಜರೇ, ಉಳಿದ ಎಲ್ಲರಿಗಿಂತ ಉತ್ತಮಳಾದ ಆ ದಕ್ಷಿಣಾದೇವಿಯು ಈ ರುಕ್ಮಿಣಿಯು; ಅವಳಿಗಿಂತ ಉತ್ತಮನಾದವನು ಈ ಶ್ರೀಕೃಷ್ಣನು. ಈ ವಿಷಯವು ಅವನ ಪರಾಕ್ರಮವು ಪ್ರತ್ಯಕ್ಷಸಿದ್ಧವಾಗಿದೆ ನೋಡಿರಿ, ಎಂದೂ ನಾರದರು ಹೇಳಿದರು. ಆಗ ಇದನ್ನೆಲ್ಲ ಕೇಳಿದ ಕುಂತೀದೇವಿಯು ನಿನ್ನ ಪರಾಕ್ರಮವನ್ನು ತೋರಿಸು ಎಂದು ಪ್ರಾರ್ಥಿಸಿದಳು. ಆಗ ಭಗವಂತನು ಯುದ್ಧವನ್ನು ಎಲ್ಲ ರಾಜರಜೊತೆಗೆಮಾಡಿ ಅದರಲ್ಲಿ ತನ್ನ ಪ್ರರಾಕ್ರಮವನ್ನು ಕುಂತಿಗೆ ತೋರಿಸಿದನು. ಪಾಂಡವರನ್ನು, ಭೀಷ್ಮ, ದ್ರೋಣ, ಕರ್ಣ ಅಶ್ವತ್ಥಾಮಸಹಿತರಾದ ಕೌರವರನ್ನು ಎಲ್ಲರನ್ನು ತಾನೊಬ್ಬನೇ ಕ್ಷಣಮಾತ್ರ ಸಮಯದಲ್ಲಿ ಆಯುಧಹೀನರನ್ನಾಗಿ ಮಾಡಿ ಜಯಿಸಿದನು, ಭೀಮಸೇನದೇವರು ಭಗವಂತನ ಎದುರು ಯುದ್ಧಕ್ಕಾಗಿ ನಿಲ್ಲುವದಿಲ್ಲ ಎಂದು ನಿಯಮವುಳ್ಳವರು. ಆ ಕಾರಣದಿಂದ ಈಗ ಯುದ್ಧ ಮಾಡು ಎಂದು ಭಗವಂತನ ಅಪಣೆಯಿದ್ದದ್ದರಿಂದ, ಭಗವಂತನಿಗೆ ನಮಸ್ಕಾರ ಮಾಡಿ ಅವನ ರಥದ ಚಕ್ರವನ್ನು ಮಾತ್ರ ಹಿಡಿದರೇ ವಿನಃ ಯುದ್ಧ ಮಾಡಲಿಲ್ಲ, ಆಗ ಶ್ರೀಕೃಷ್ಣನು ರಥಚಕ್ರದಿಂದ ಅವರನ್ನು ಬಿಡಿಸಿ ದೂರಕ್ಕೆ ಸರಿಸಿ ಅವರನ್ನು ಜಯಿಸಿದನು, ಹೀಗೆ ತಮ್ಮ ತಮ್ಮ ಶಕ್ತ್ಯನುಸಾರ ಯುದ್ಧ ಮಾಡಿದಾಗ ಕೂಡ ಎಲ್ಲ ರಾಜರು ಶ್ರೀಕೃಷ್ಣನಿಂದ ಪರಾಜಿತರಾಗಿ ನಮಸ್ಕರಿಸಿದರು, ಕುಂತಿಯೂ ಕೂಡ ಇದನ್ನು ನೋಡಿ ಆಶ್ಚರ್ಯಚಕಿತಳಾಗಿ ನಮಿಸಿದಳು, ಆಗ ವಾಯುಶಿಷ್ಯರಾದ ನಾರದರು ಎಲೋ ರಾಜರೇ, ಇಂಥ ಅದ್ಭುತಗಳು ಭಗವಂತನಲ್ಲಿ ಸಾವಿರಾರು

(ಆನಂತ) ಇವೆ. ಆದಕಾರಣ ಇವನೇ ಅದ್ಭುತನು, ಅತ್ಯುತ್ತಮನು ಎಂದು ಹೇಳಿ ವಾಯುದೇವರ [illegible] ಕೆಲಸ ಮಾಡಿ, ರುಕ್ಮಿಣೀಯನ್ನೂ ಸ್ತುತಿಸಿ, ಪಾರಿಜಾತ ಪುಷ್ಪವನ್ನು ಅವಳಿಗೆ ಕೊಟ್ಟಿ ತಾವು ಸತ್ಯಲೋಕಕ್ಕೆ ಹೋದರು. ಆಗ ಇದೆಲ್ಲ ವಾರ್ತಾವನ್ನು ತಿಳಿದು ಶ್ರೀಲಕ್ಷ್ಮೀಸ್ವರೂಪರೇ ಆದ ಸತ್ಯಭಾಮಾದೇವಿಯರು, ಸಾಮಾನ್ಯವಾದ ಸ್ತ್ರೀಸ್ವಭಾವವನ್ನು ತೋರಿಸಲು, ಶ್ರೀಕೃಷ್ಣನು ತನ್ನನ್ನು ಬಿಟ್ಟು ರುಕ್ಮಿಣೀಯನ್ನು ರಾಜಸಭೆಗೆ ಕರೆದೊಯ್ದಿದ್ದರಿಂದ, ನಾರದರು ಸ್ತುತಿಸಿದ್ದರಿಂದ ಪಾರಿಜಾತಪುಷ್ಪವನ್ನು ಕೊಟ್ಟದ್ದರಿಂದಲೂ ಸಿಟ್ಟಿಗೆದ್ದವಳಂತೆವಾಡಿ ಸಿಟ್ಟಿನ ಮುಖವನ್ನು ತೋರಿಸಿದಾಗ ಭಗವಂತ ಶ್ರೀಕೃಷ್ಣನು ಕೂಡ ಕಾಮಿಸಂಸಾರಿ ಜನರಂತೆ ನಟಿಸುತ್ತಾ ಅವಳನ್ನು ಸಮಾಧಾನ ಮಾಡುತ್ತಾ ನಾನು ನಿನಗೆ ಪಾರಿಜಾತ ವೃಕ್ಷವನ್ನೇ ತಂದು ಕೊಡುವೆನು ಎಂದು ಅಂದನು. ಅದೇ ಸಮಯಕ್ಕೆ ಅಲ್ಲಿಗೆ ನರಕಾಸುರನಿಗೆ ಸೋತಂಥ ಇಂದ್ರನು ಎಲ್ಲ ದೇವತಾ ಸಹಿತನಾಗಿ ಬಂದನು. ಅವನಿಂದ ಪ್ರೇರಿತರಾದ, ನರಕನಿಂದ ಪೀಡಿತರಾದ ಮುನಿಗಳೂ ಬದರೀಕ್ಷೇತ್ರದಿಂದ ಬಂದರು. ವೇದೋಕ್ತಪುರಾಣೋಕ್ತ ಸ್ತೋತ್ರಮಾಡಿ ದೇವಮಾತೆಯಾದ ಅದಿತಿದೇವಿಯ ಕರ್ಣಕುಂಡಲಗಳನ್ನು ನರಕಾಸುರನು ಅಪಹರಿಸಿದ ವಿಷಯವನ್ನು ತಿಳಿಸಿ ಅವನ ಸಂಹಾರಕ್ಕಾಗಿ ಪ್ರಾರ್ಥಿಸಿದರು.

ಇಂದ್ರೇಣ ದೇವೈಸ್ಸಹಿತೇನ ಯಾಚಿತೋ ವಿಷ್ವೈಶ್ಚ ಸಸ್ಮಾರ ವಿಹಂಗರಾಜಮ್ ॥
ಆಗಮ್ಯ ನತ್ವಾ ಪುರತಃ ಸ್ಥಿತಂ ತಮಾರುಹ್ಯ ಸತ್ಯಾಸಹಿತೋ ಯಯೌ ಹರಿಃ ॥೮೭॥

ಅನ್ವಯಾರ್ಥ: – ದೇವೈ: ಸಹಿತೇನ ಇಂದ್ರೇಣ—ದೇವತೆಗಳಿಂದ ಸಹಿತನಾದ ಇಂದ್ರನಿಂದ, ಚ—ಮತ್ತು, ವಿಪ್ರೈ:—ಬ್ರಾಹ್ಮಣರಿಂದ, ಯಾಚಿತಃ – ಪ್ರಾರ್ಥಿಸಲ್ಪಟ್ಟ, ಹರಿಃ – ಶ್ರೀಕೃಷ್ಣನು, ವಿಹಂಗರಾಜಂ – ಪಕ್ಷಿರಾಜನಾದ ಗರುಡನನ್ನು, ಸಸ್ಮಾರ—ಸ್ಮರಿಸಿದನು. ಆಗಮ್ಯ—ಬಂದು, ನತ್ವಾ – ನಮಸ್ಕರಿಸಿ, ಪುರತಃಸ್ಥಿತಂ – ಎದುರು ನಿಂತಿರುವ, ತಂ—ಆ ಗರುಡನನ್ನು, ಆರುಹ್ಯ—ಏರಿ, ಸತ್ಯಾಸಹಿತಃ ಸನ್—ಸತ್ಯಭಾಮಾದೇವಿಯಿಂದ ಸಹಿತನಾಗಿ, ಯಯೌ – ಹೊರಟನು. ॥೮೭॥

ನಿತ್ಯೈವ ಯಾ ಪ್ರಕೃತಿ: ಸ್ವೇಚ್ಛಯೈವ ಜಗಚ್ಛಿಕ್ಷಾರ್ಥಂ ದ್ವಾದಶೀಂ ಭೀಮಸಂಜ್ಞಾಮ್ ॥
ಉಪೋಷ್ಯ ಬಭ್ರೇ ಕೋಟಿಧಾರಾಜಲಸ್ಯ ವಿಷ್ಣೋಃ ಪ್ರೀತ್ಯರ್ಥಂ ಸೈವಹಿ ಸತ್ಯಭಾಮಾ ॥೮೮॥

ಯಾ ನಿತ್ಯಾಪ್ರಕೃತಿಃ – ಯಾವಳು ನಿತ್ಯಳಾದ ಶ್ರೀಲಕ್ಷ್ಮೀದೇವಿಯ ಅವತಾರಳೋ, ಸಾ ಸತ್ಯಭಾಮಾ ಏವ—ಆ ಸತ್ಯಭಾಮಾದೇವಿಯೇ, ಜಗಚ್ಛಿಕ್ಷಾರ್ಥಂ ಏವ—ಲೋಕಜನರ ಶಿಕ್ಷಣಕ್ಕಾಗಿಯೇ (ಕಾಮ್ಯಫಲದಉದ್ದೇಶದಿಂದ ಅಲ್ಲ), ಸ್ವೇಚ್ಛಯಾ—ತನ್ನ ಇಚ್ಛೆಯಿಂದ, ವಿಷ್ಣೋಃಪ್ರೀತ್ಯರ್ಥಂ – ಶ್ರೀವಿಷ್ಣುಪ್ರೀತಿಗಾಗಿ, ಭೀಮಸಂಜ್ಞಾಂ ದ್ವಾದಶೀಂ—ಭೀಮದ್ವಾದಶೀ ಎಂಬ ಹೆಸರುಳ್ಳ ಮಾಘ ಶುದ್ಧದ್ವಾದಶೀ ವ್ರತವನ್ನು, (ಕರ್ತುಂ—ಮಾಡಲು) (ಏಕಾದಶ್ಯಾಂ—ಏಕಾದಶೀಯಲ್ಲಿ) ಉಪೋಷ್ಯ—ಉಪವಾಸಮಾಡಿ, (ರಾತ್ರೌ—ರಾತ್ರಿಯಲ್ಲಿ) ಜಲಸ್ಯ ಕೋಟಿಧಾರಾ: – ಸಛಿದ್ರ ಕಲಶದಿಂದ ಬರುವ ಜಲದ ಕೋಟಿ ಸಂಖ್ಯಾಕ ಧಾರಾಗಳನ್ನು, ಬಭ್ರೇಧರಿಸಿದಳು. (ಅಷ್ಟು-ಧಾರಾಗಳಿಂದ ಸ್ನಾನ ಮಾಡಿದಳು) ವಿಶೇಷಾಂಶ – ಯಾವಾಗಲೂ ಏಕಾದಶೀ ಉಪವಾಸ ಮಾಡುವ ಆ ಸತ್ಯಭಾಮೆಯು ಆ ಸಲ ವಿಶೇಷ ಸಂಕಲ್ಪ, ದಾನ ಹೋಮಾದಿ ಪೂರ್ವಕ ವ್ರತ ಇಟ್ಟುಕೊಂಡಿದ್ದಳು ಎಂದು ಅರ್ಥ. (ಅದೊಂದೇ ಉಪವಾಸ ಮಾಡಿದಳು ಎಂದು ಅರ್ಥವಲ್ಲ.) ॥೮೮॥

ತಯಾಯುಕ್ತೋ ಗರುಡಸ್ಕಂಧಸಂಸ್ಥೋ ದೂರಾನುಯಾತೋ ವಜ್ರಭೃತಾಽಪ್ಯನುಜ್ಞಾಮ್ ॥
ದತ್ತಾಽಮುಷ್ಮೈ ಪ್ರಯಯೌ ವಾಯುಜುಷ್ಟಾಮಾಶಾಂ ಕೃಷ್ಣೋ ಭೌಮವಧೇ ಧೃತಾತ್ಮಾ ॥೮೯॥

ಭೌಮವಧೇ – ನರಕಾಸುರನವಧದವಿಷಯಂದಲ್ಲಿ, ಧೃತಾತ್ಮಾ – ನಿಶ್ಚಿತವಾನಸ್ಸುಳ್ಳ (ನಿಶ್ಚಯವಾಡಿದ), ಕೃಷ್ಣಃ— ಶ್ರೀಕೃಷ್ಣನು, ತಯಾಯುಕ್ತಃಸನ್ – ಆ ಸತ್ಯಭಾಮೆಯಿಂದ ಕೂಡಿದವನಾಗಿ, ಗರುಡಸ್ಕಂಧ ಸಂಸ್ಥಿತಸನ್ – ಗರುಡನ– ಹೆಗಲಲ್ಲಿ ಕುಳಿತವನಾಗಿ, ವಜ್ರಭೃತಾ – ವಜ್ರಾಯುಧಧಾರಿ ಇಂದ್ರನಿಂದ – ದೂರಾನುಯಾತಃಸನ್ – ದೂರದವರೆಗೆ ಅನುಸರಿ ಸಲ್ಪಟ್ಟವನಾಗಿ, ಅಮುಷ್ಮೈ – ಆ ಇಂದ್ರನಿಗೆ, ಅನುಜ್ಞಾಂ ಅಪಿದತ್ವಾ—(ತನ್ನ ಸ್ವರ್ಗಲೋಕಕ್ಕೆ ಹೋಗಲು) ಅಪ್ಪಣೆಯನ್ನೂ ಕೂಡ ಕೊಟ್ಟು, ವಾಯುಜುಷ್ಟಾಂ ಆಶಾಂ – ವಾಯುವಿನಿಂದ ಅಧಿಷ್ಠಿತವಾದ ವಾಯವ್ಯದಿಕ್ಕನ್ನು ಕ್ರಮಿಸಿ, ಪ್ರಯಯೌ – ಹೊರಟನು. ॥೮೯॥

ಭೌಮೋ ಹ್ಯಸೀದ್ಬ್ರಹ್ಮವರಾದವಧ್ಯೋ ನ ಶಸ್ತ್ರಭೃಜ್ಜೀಯಸ ಇತ್ಯಮುಷ್ಮೈ ॥
ದತ್ತೋ ವರೋ ಬ್ರಹ್ಮಣಾ ತದ್ವದೇವ ತಸ್ಯಾಮಾತ್ಯಾನಾಂ ತದ್ವದವಧ್ಯತಾ ಚ ॥೯೦॥

ಹಿ – ಯಾವ ಕಾರಣದಿಂದ, ಬ್ರಹ್ಮಣಾ – ಬ್ರಹ್ಮದೇವರಿಂದ, ಅಮುಷ್ಮೈ—ಆ ನರಕಾಸುರನಿಗೆ, ಶಸ್ತ್ರಭೃತ್— ಶಸ್ತ್ರಧಾರಿಯಾದ ನೀನು, ನ ಜೀಯಸೇ—ಯಾರಿಂದಲೂ ಗೆಲ್ಲಲ್ಪಡುವದಿಲ್ಲ, ಇತಿ ವರಃ ದತ್ತಃ – ಈ ರೀತಿ ವರವು ಕೊಡಲ್ಪ-ಟ್ಟಿತ್ತೋ (ತಸ್ಮಾತ್-ಆದ್ದರಿಂದ ಅಜೇಯಃ-ಅಜೇಯನಾದ)ಭೌಮಃ – ನರಕಾಸುರನು,ಬ್ರಹ್ಮವರಾತ್ ಬ್ರಹ್ಮದೇವರ ವರದಿಂದ ಅವಧ್ಯಃ ಅಸೀತ್ – ಅವಧ್ಯನೂ ಆಗಿದ್ದನು. ತಸ್ಯ ಅಮಾತ್ಯಾನಾಂ ಚ— ಆ ನರಕನ ಮಂತ್ರಿಗಳಿಗೂ ಕೂಡ ತದ್ವದೇವ –, ನರಕನಂತೆ ಅಜೇಯತ್ವವೂ ತದ್ವತ್ ಅವಧ್ಯತಾ—ಅವನಂತೆ ಅವಧ್ಯತ್ವವೂಕೂಡ' ಬ್ರಹ್ಮಣಾ(ದತ್ತಾ)— ಬ್ರಹ್ಮದೇವರಿಂದ ಕೊಡಲ್ಪಟ್ಟಿತ್ತು. ॥೯೦॥

ಭೌಮೇನ ಜಯ್ಯತ್ವಮಪಿ ಹ್ಯಮೀಷಾಂ ದತ್ತಂ ಭೌಮಾಯ ಬ್ರಹ್ಮಣಾ ಕ್ರೋಡರೂಪಾತ್ ॥
ವಿಷ್ಣೋರ್ಜಾತಾಯಾಸ್ಯ ದುರ್ಗಂ ಚ ದತ್ತಂ ಪ್ರಾಗ್ಜ್ಯೋತಿಷಂ ನಾಮ ಪುರಂ ಸಮಸ್ತೈಃ ॥೯೧॥

ಅಮೀಷಾಂ—ಆ ಮಂತ್ರಿಗಳಿಗೆ, ಭೌಮೇನ ಜಯ್ಯತ್ವಂ—ನರಕಾಸುರನಿಂದ ಸೋಲೂ,ಬ್ರಹ್ಮಣಾ—ಬ್ರಹ್ಮದೇವರಿಂದ, ದತ್ತಂ—ಕೊಡಲ್ಪಟ್ಟಿತ್ತು. ಚ – ಮತ್ತು, ಕ್ರೋಡರೂಪಾತ್ ವಿಷ್ಣೋಃ – ವರಾಹರೂಪನಾದ ವಿಷ್ಣುವಿನಿಂದ, ಜಾತಾಯ ಅಸ್ಯ—ಹುಟ್ಟಿದ ಈ ನರಕನಿಗೆ, ಸಮಸ್ತೈಃ—ಎಲ್ಲರಿಂದ, ದುರ್ಗಂ – ಪ್ರವೇಶಿಸಲು ಅಶಕ್ಯವಾದ, ಸಮಸ್ತೈಃ– ಪುರಂ - ಎಲ್ಲಭಾಗ್ಯಗಳಿಂದ ಪೂರ್ಣವಾದ,ಪ್ರಾಗ್ಜ್ಯೋತಿಷಂ ನಾಮ ಪುರಂ—ಪ್ರಾಗ್ಜ್ಯೋತಿಷವೆಂಬಹೆಸರಿನ ಪಟ್ಟಣವು,(ಬ್ರಹ್ಮ– ದೇವರಿಂದಲೇ), ದತ್ತಂ— ಕೊಡಲ್ಪಟ್ಟಿತ್ತು ॥೯೧॥

ಆವ – ಆ ಪಟ್ಟಣದ ದುರ್ಗತ್ವವನ್ನೆ ವಿವರಿಸುತ್ತಾರೆ.

ಆಸೀದ್ಬಾಹ್ಯೇಗಿರಿದುರ್ಗಂ ತದಂತಃ ಪಾನೀಯದುರ್ಗಂ ಮೌರವಂ ಪಾಶದುರ್ಗಮ್ ॥
ತಸ್ಯಾಪ್ಯಂತಃ ಕ್ಷುರಧಾರೋಪಮುಂ ತತ್ಪಾಶಾಶ್ಚ ತೇ ಷಟ್ಸಹಸ್ರಾಃ ಸುಘೋರಾಃ ॥೯೨॥

ಬಾಹ್ಯೇ—ಆ ಪಟ್ಟಣದ ಪೂರ್ಣಹೊರಗೆ, ಗಿರಿದುರ್ಗಂ—ಪರ್ವತಗಳ ಆವರಣವು ಇತ್ತು, ತದಂತಃ—ಅದರ ಒಳಬದಿಯಲ್ಲಿ, ಪಾನೀಯದುರ್ಗಂ – ನೀರಿನ ಆವರಣವು, ತದಂತಃ—ಅದರ ಒಳಗೆ, ಮೌರವಂ ಕ್ಷುರಧಾರೋಪಮುಂ ಪಾಶದುರ್ಗಂ—ಮುರನು ಮಕರಾಕ್ಷಸನು ಕಾಯುತ್ತಿರುವ ಕತ್ತಿಯಂತೆ ಹರಿತವಾದಪಾಶಗಳ ದುರ್ಗವು ಇತ್ತು. ತೇ ತತ್ಪಾಶಾ –

ಆ ದುರ್ಗದಲ್ಲಿರುವ, ಆ ಮುರಪಾಶಗಳು, ಷಟ್ ಸಹಸ್ರಾಃ—ಆರುಸಾವಿರ ಸಂಖ್ಯಾಕವಾಗಿದ್ದವು, ಸುಘೋರಾಃ - ಭಯಂಕರವಾಗಿದ್ದವು. ॥೯೨॥

ಅಭೇದ್ಯತ್ವಮರಿಭಿರತಾರ್ಯತಾ ಚ ದತ್ತಾ ದುರ್ಗಾಣಾಂ ಬ್ರಹ್ಮಣಾSSರಾಧಿತೇನ ॥
ತಸ್ಯಾಮಾತ್ಯಾಃ ಪೀಠಮುರೌ ನಿಸುಂಭಹಯಗ್ರೀವೌ ಪಂಚಜನಶ್ಚ ಶೂರಾಃ ॥೯೩॥

ಆರಾಧಿತೇನ ಬ್ರಹ್ಮಣಾ—ನರಕಾಸುರನಿಂದ ಆರಾಧಿಸಲ್ಪಟ್ಟ ಬ್ರಹ್ಮದೇವರಿಂದ, ದುರ್ಗಾಣಾಂ – ಆ ಕೋಟೆಗಳಿಗೆ, ಅರಿಭಿಃ ಅಭೇದ್ಯತ್ವಂ ಅತಾರ್ಯತಾ ಚ – ವೈರಿಗಳಿಂದ ನಾಶಮಾಡಲು ಅಶಕ್ಯತೆಯು;ದಾಟಲು ಅಶಕ್ಯತೆಯು, ದತ್ತಾ—ಕೊಡಲ್ಪಟ್ಟಿತು, ತಸ್ಯ ಅಮಾತ್ಯಾಃ—ಆ ನರಕನ ಮಂತ್ರಿಗಳಾದ, ಪೀಠಮುರೌ – ಪೀಠ ಮತ್ತು ಮುರ ಎಂಬುವರು, ನಿಸುಂಭ ಹಯಗ್ರೀವೌ – ನಿಸುಂಭ ಹಯಗ್ರೀವರು, ಚ ಮತ್ತು. ಪಂಚಜನಃ – ಪಂಚಜನ ಎಂಬವನು ಇವರೆಲ್ಲ, ಶೂರಾಃ – ಶೂರರು ಆಗಿದ್ದರು. ॥೯೩॥

ಸಂಕಲ್ಪ್ಯ ತಾನ್ ಲೋಕಪಾಲಾನಹಂ ಚ ಬ್ರಹ್ಮೇತ್ಯದ್ಧಾ ಭಾಷಮಾಣಸ್ಯ ಅಸ್ತೇ ॥
ಹಂತುಂ ಕೃಷ್ಣೋ ನರಕಂ ತತ್ರ ಗತ್ವಾ ಗಿರಿಂ ದುರ್ಗಂ ಗದಯಾ ನಿರ್ಬಿಭೇದ ॥೯೪॥

ಸಃ – ಆ ನರಕನು, ತಾನ್ – ಆ ಮಂತ್ರಿಗಳನ್ನು, ಲೋಕಪಾಲಾನ್ – ಲೋಕಪಾಲಕರನ್ನಾಗಿ, ಸಂಕಲ್ಪ್ಯ—ಸಂಕಲ್ಪಿಸಿ,ಅಹಂ – ನಾನು,ಬ್ರಹ್ಮ—ಬ್ರಹ್ಮನು(ದೇವರು),ಇತಿ—ಎಂದು,ಭಾಷಮಾಣಃ ಆಸ್ತೇ—ಮಾತನಾಡುವವನಾಗಿದ್ದನು, ಕೃಷ್ಣಃ—ಶ್ರೀಕೃಷ್ಣನು, ನರಕಂಹಂತುಂ—ನರಕಾಸುರನನ್ನು ಕೊಲ್ಲಲು,ಗತ್ವಾ—ಆ ಆವರಣಗಳ ಸಮೀಪಕ್ಕೆ, ಗತ್ವಾ–ಹೋಗಿ, ಗಿರಿಂ ದುರ್ಗಂ—ಪರ್ವತಗಳ ಆವರಣವನ್ನು, ಗದಯಾ—ಗದೆಯಿಂದ, ನಿರ್ಬಿಭೇದ – ಸೀಳಿದನು.(ನಾಶಪಡಿಸಿದನು) ॥೯೪॥

ವಾಯುವ್ಯಾಸ್ತ್ರೇಣೋದಕಂ ಶೋಷಯಿತ್ವಾ ಚಕರ್ತ ಖಡ್ಗೇನ ಮುರಸ್ಯ ಪಾಶಾನ್ ॥
ಅಥಾಭಿಪೇತುರ್ಮುರಪೀಠೌ ನಿಸುಂಭಹಯಗ್ರೀವೌ ಪಂಚಜನಶ್ಚ ದೈತ್ಯಾಃ ॥೯೫॥

ವಾಯುವ್ಯಾಸ್ತ್ರೇಣ – ವಾಯುವ್ಯಾಸ್ತ್ರದಿಂದ, ಉದಕಂ—ನೀರನ್ನು,ಶೋಷಯಿತ್ವಾ – ಒಣಗಿಸಿ, ಮುರಸ್ಯಪಾಶಾನ್—ಮುರದೈತ್ಯನು ಕಾಯುತ್ತಿದ್ದ ಪಾಶಗಳನ್ನು, ಖಡ್ಗೇನ ಚಕರ್ತ – ಖಡ್ಗದಿಂದ ಕತ್ತರಿಸಿದನು.ಅಥ—ಆನಂತರ,ಮುರಪೀಠೌ ನಿಸುಂಭಹಯಗ್ರೀವೌ ಚ ಪಂಚಜನಃ ಇತಿ ದೈತ್ಯಾಃ—ಮುರ, ಪೀಠ, ನಿಸುಂಭ, ಹಯಗ್ರೀವ ಮತ್ತು ಪಂಚಜನ ಎಂಬ ದೈತ್ಯರು, ಅಭಿಪೇತುಃ – ಯುದ್ಧಕ್ಕಾಗಿ ಬಂದರು. ॥೯೫॥

ತಾ ಇಂತೈಲ ಶಸ್ತ್ರಾಸ್ತ್ರಶಿಲಾಭಿವರ್ಷಿಣಶ್ಚಕ್ರೇ ವ್ಯಸೂಂಶ್ಚಕ್ರನಿಕೃತ್ತಕಂಧರಾನ್ ॥
ತೇಷಾಂ ಸುತಾಸ್ಸಪ್ತ ಸಪೌತ್ರೀರು ವೀರ್ಯಾ ವರಾದವಧ್ಯಾ ಗಿರಿಶಸ್ಯಾಭಿಪೇತುಃ ॥೯೬॥

(ಸಃ—ಆ ಶ್ರೀಕೃಷ್ಣನು), ಶೈಲಶಸ್ತ್ರಾಸ್ತ್ರಶಿಲಾಭಿವರ್ಷಿಣಃ—ಪರ್ವತ, ಶಸ್ತ್ರಾಸ್ತ್ರ, ಶಿಲೆಗಳನ್ನು ಸುರಿಸತ್ತಿದ್ದ, ತಾನ್ – ಅವರನ್ನು, ಚಕ್ರನಿಕೃತ್ತಕಂಧರಾನ್ – ಚಕ್ರದಿಂದ ಕತ್ತರಿಸಲ್ಪಟ್ಟ ಕುತ್ತಿಗೆಯುಳ್ಳವರನ್ನಾಗಿ, (ಕೃತ್ವಾ – ಮಾಡಿ), ವ್ಯಸೂನ್ ಚಕ್ರೇ – ಪ್ರಾಣರಹಿತ (ಮೃತ)ರನ್ನಾಗಿ ಮಾಡಿದನು, ತದಾ--ಆಗ, ಗಿರಿಶಸ್ಯ ವರಾತ್ – ರುದ್ರದೇವರ ವರದಿಂದ,

ಅವಧ್ಯಾಃ—ನಾಶರಹಿತರಾದಂಥ, ಉರುವೀರ್ಯಾಃ—ಬಹುಪರಾಕ್ರಮಿಗಳಾದ, ತೇಷಾಂ ಸಪ್ತ ಸಪ್ತ ಸುತಾಃ—ಆ ಮುರ-
ಮೊದಲಾದ ದೈತ್ಯರ ಏಳೇಳು ಮಕ್ಕಳು, ಅಭಿಪೇತುಃ—ಏರಿ ಬಂದರು. ॥೯೬॥

ತಾನಸ್ತ್ರ ಶಸ್ತ್ರಾಭಿಮುಚಶ್ಶರೋತ್ತಮೈಃ ಸಮರ್ಪಯಾಮಾಸ ಸ ಮೃತ್ಯವೇ ಚ್ಯುತಃ ॥
ಹತ್ವಾ ಪಂಚತ್ರಿಂಶತೋ ಮಂತ್ರಿಪುತ್ರಾನ್ ಜಗಾಮ ಭೌಮಸ್ಯ ಸಕಾಶಮಾಶು ॥
ಶ್ರುತ್ವಾ ಭೌಮಃ ಕೃಷ್ಣಮಾಯಾಂತಮಾರಾದಕ್ಷೌಹಿಣೀವಿಂಶಕೇನಾಭ್ಯಯಾತ್ತಮ್ ॥೯೭॥

ಸಃ ಅಚ್ಯುತಃ—ಆ ಶ್ರೀಕೃಷ್ಣನು, ಅಸ್ತ್ರಶಸ್ತ್ರಾಭಿಮುಂಚಃ—ಅಸ್ತ್ರಶಸ್ತ್ರ ಪ್ರಯೋಗ ಮಾಡುತ್ತಿದ್ದ, ತಾನ್—ಆ
ಮಂತ್ರಿಪುತ್ರರನ್ನು, ಶರೋತ್ತಮೈಃ—ಶ್ರೇಷ್ಠ ಬಾಣಗಳಿಂದ, ಮೃತ್ಯವೇ ಅಪರ್ಯಯಾಮಾಸ—ಯಮನಿಗೆ ಒಪ್ಪಿಸಿದನು (ಸಂಹ-
ರಿಸಿದನು). ಪಂಚತ್ರಿಂಶತಃ ಮಂತ್ರಿಪುತ್ರಾನ್—ಮೂವತ್ತೈದುಮಂತ್ರಿಪುತ್ರರನ್ನು, ಹತ್ವಾ—ಕೊಂದು, ಆಶು—ಕೂಡಲೇ,
ಭೌಮಸ್ಯ ಸಕಾಶಂ—ನರಕಾಸುರನ ಸಮೀಪಕ್ಕೆ, ಜಗಾಮ—ಹೋದನು, ಭೌಮಃ—ನರಕಾಸುರನು, ಕೃಷ್ಣಂ ಆರಾತ್
ಆಯಾಂತಂ ಶ್ರುತ್ವಾ—ಶ್ರೀಕೃಷ್ಣನನ್ನು ಸಮೀಪ ಬಂದವನನ್ನಾಗಿ ಕೇಳಿ, ತಂ—ಅವನನ್ನು ಕುರಿತು, ಅಕ್ಷೌಹಿಣೀ ವಿಂಶಕೇನ—
ಇಪ್ಪತ್ತು ಅಕ್ಷೌಹಿಣೀ ಸೈನ್ಯದಿಂದ, ಸಹಿತನಾಗಿ, ಅಭ್ಯಯಾತ್—ಏರಿಹೋದನು. ॥೯೭॥

ಜಘ್ನೇ ಸೇನಾಂ ಗರುಡಃ ಪಕ್ಷಪಾತೈಃ ಪಾದಂ ಶೇಷಂ ಕೇಶವಸ್ಸಾಯಕೌಘೈಃ ॥
ಅಥಾssಸಸಾದಾssಶು ಭೌಮೋಽಚ್ಯುತಂ ತಂ ಮುಂಚನ್ ಶರಾನಸ್ತ್ರ ಸಮನ್ವಿತಾನ್ ದ್ರಾಕ್ ॥೯೮॥

ಗರುಡಃ—ಗರುಡದೇವರು, ಪಕ್ಷಪಾತೈಃ—ರೆಕ್ಕೆಗಳ ಒಡಿತದಿಂದ, ಪಾದಂ ಸೇನಾಂ—ಕಾಲುಭಾಗ ಸೇನೆಯನ್ನು,
ಜಘ್ನೇ—ಕೊಂದರು, ಕೇಶವಃ—ಶ್ರೀಕೃಷ್ಣನು, ಶೇಷಂ—ಉಳಿದ ಮುಕ್ಕಾಲುಭಾಗ ಸೈನ್ಯವನ್ನು, ಸಾಯಕೌಘೈಃ—ಬಾಣ
ಸಮೂಹಗಳಿಂದ, ಜಘ್ನೇ—ಕೊಂದನು, ಅಥ—ಸೈನ್ಯ ಸಂಹಾರವಾದನಂತರ. ಭೌಮಃ—ನರಕಾಸುರನು, ಅಸ್ತ್ರಸಮನ್ವಿತಾನ್
ಶರಾನ್—ಮಂತ್ರಗಳಿಂದ ಅಭಿಮಂತ್ರಿತವಾದ ಬಾಣಗಳನ್ನು, ದ್ರಾಕ್—ಬೇಗ, ಮುಂಚನ್ ಸನ್—ಬಿಡುವವನಾಗಿ ತಂ
ಅಚ್ಯುತಂ ಆ ಶ್ರೀಕೃಷ್ಣನನ್ನು ಕುರಿತು, ಆಶು—ಕೂಡಲೇ, ಆಸಸಾದ—ಏರಿಬಂದನು ॥೯೮॥

ವಿವ್ಯಾಧ ತಂ ಕೇಶವಸ್ಸಾಯಕೌಘೈರ್ಭೌಮಶ್ಶತಘ್ನೀಂ ಬ್ರಹ್ಮದತ್ತಾಮಮುಂಚತ್
ಅಭೇದ್ಯೋಽಭೇದ್ಯೋ ನಿತ್ಯಸಂವಿತ್ಸುಖಾತ್ಮಾ ನಿತ್ಯೋವ್ಯಯಃ ಪೂರ್ಣಶಕ್ತಿಸ್ಸಕೃಷ್ಣಃ ॥೯೯॥

ನಿಗೀರ್ಯ ತಾಂ ದೇವವರಃ ಶತಘ್ನೀಂ ನಿತ್ಯಶ್ಶಾಂತೋಽದರ್ಶಯಚ್ಚಾಪ್ಯಂತವಚ್ಚ ॥೧೦೦॥

ಕೇಶವಃ—ಶ್ರೀಕೃಷ್ಣನು, ತಂ—ಆ ನರಕಾಸುರನನ್ನು, ಸಾಯಕೌಘೈಃ—ಬಾಣಗಳ ಸಮೂಹಗಳಿಂದ,
ವಿವ್ಯಾಧ—ಹೊಡೆದುಪೀಡಿಸಿದನು, ಭೌಮಃ—ನರಕಾಸುರನು, ಬ್ರಹ್ಮದತ್ತಾಂ—ಬ್ರಹ್ಮದೇವರಿಂದ ಕೊಡಲ್ಪಟ್ಟ, ಶತಘ್ನೀಂ—
ಶತಘ್ನೀ ಎಂಬ ಆಯುಧವನ್ನು, ಅಮುಂಚತ್—ಶ್ರೀಕೃಷ್ಣನ ಮೇಲೆ ಬಿಟ್ಟನು. ಅಭೇದ್ಯಃ, ಅಭೇದ್ಯಃ—ಕತ್ತರಿಸಲು ಸೀಳಲು
ಅಶಕ್ಯನಾದ, ನಿತ್ಯಸಂವಿತ್—ನಿತ್ಯಜ್ಞಾನಸ್ವರೂಪನಾದ, ಸುಖಾತ್ಮಾ—ಸುಖಸ್ವರೂಪನಾದ, ಪೂರ್ಣಶಕ್ತಿಃ ದೇವವರಃ
ಸಃಕೃಷ್ಣಃ—ಪರಿಪೂರ್ಣ ಶಕ್ತಿವುಳ್ಳ ಸರ್ವದೇವೋತ್ತಮನಾದ ಆ ಶ್ರೀಕೃಷ್ಣನು, ತಾಂ ಶತಘ್ನೀಂ—ಆ ಶತಘ್ನಿ ಎಂಬ ಆಯುಧ

ವನ್ನು: ನಿಗಿರ್ಯ—ನುಂಗಿ, ನಿತ್ಯಾಶ್ರಾಂತಃ ಚ—ಯಾವಾಗಲೂ ಯಾವದೇ ಶ್ರಮವಿಲ್ಲದವನಾದರೂ, ಶ್ರಾಂತವತ್ ಅದರ್ಶಯತ್ – ಶ್ರಮ ಹೊಂದಿದವನಂತೆ ತೋರಿಸಿದನು. ॥೯೯-೧೦೦॥

ಅವ – ಶ್ರಮವಾದಂತೆ ತೋರಿಸಿದ್ದರ ಕಾರಣವನ್ನು ಹೇಳುತಾರೆ.

ಬಹೂನ್ವರಾನ್ ಬ್ರಹ್ಮಣೋಽನ್ಯೇಷ್ವಮೋಘಾನ್ ಮೋಘೀಕೃತಾನ್ವೀಕ್ಷ್ಯ ಪರಾತ್ಪರೇಶಃ ॥
ಭವೇತ್ಕಥಂಚಿದ್ಬಹುಮಾನೇನ ಯುಕ್ತ ಇತ್ಯೇವ ಕೃಷ್ಣೋऽದರ್ಶಯಚ್ಛ್ರಾಂತವತ್ಸ್ವಮ್ ॥೧೦೧॥

ಪರಾತ್ ಪರೇಶ:—ಉತ್ತಮರಿಗಿಂತಲೂ ಉತ್ತಮನಾದ, ಕೃಷ್ಣ: – ಶ್ರೀಕೃಷ್ಣನು, ಬ್ರಹ್ಮಣ:ಅಮೋಘಾನ್ ಬಹೂನ್ ವರಾನ್ – ಚತುರ್ಮುಖ ಬ್ರಹ್ಮದೇವರ ಅಸತ್ಯವಾಗದ ಬಹುವರಗಳನ್ನು, (ಸ್ವೇನ – ತನ್ನಿಂದ), ಅನ್ಯೇಷು—ಮೋಘೀಕೃತಾನ್ – ಬೇರೆಯಾದ ಮಂತ್ರಿಗಳ ಬಗ್ಗೆ ವ್ಯರ್ಥ ಮಾಡಲ್ಪಟ್ಟವುಗಳನ್ನಾಗಿ, ವೀಕ್ಷ್ಯ – ನೋಡಿ, (ನರಕಃ – ನರಕಾಸುರನು), ಕಥಂಚಿತ್ – ಹೇಗೋ, ಬಹುಮಾನೇನ ಯುಕ್ತ: – ನಾನು ಬ್ರಹ್ಮದೇವರ ಪೂರ್ಣಾನುಗ್ರಹಪಾತ್ರನು ಎಂಬ ಗರ್ವದಿಂದ ಕೂಡಿದವನು, ಅಥವಾ ಬ್ರಹ್ಮದೇವರ ಬಗ್ಗೆ ಬಹುಆದರದಿಂದ ಕೂಡಿದವನು, ಭವೇತ್—ಆಗಲಿ, ಇತಿ ಏವ – ಈ ಕಾರಣದಿಂಲೇ, ಶ್ರಾಂತವತ್ ಅದರ್ಶಯತ್ – ಶ್ರಮಹೊಂದಿದವನಂತೆ ತೋರಿಸಿದನು. ॥೧೦೧॥

ತದಾ ದೃಪ್ತಂ ನರಕಂ ವೀಕ್ಷ್ಯ ದೇವೀ ಸತ್ಯಾऽದದೇ ಕಾರ್ಮುಕಂ ಶಾರ್ಙ್ಗಸಂಜ್ಞಮ್ ॥
ಚಕಾರ ತಂ ಯತಮಾನಂ ಚ ಭೌಮಂ ನಿರಾಯುಧಂ ವಿರಥಂ ಚ ಕ್ಷಣೇನ ॥೧೦೨॥

ತದಾ – ಆಗ, ದೃಪ್ತಂ – ದರ್ಪಯುಕ್ತನಾದ, ನರಕಂ_ನರಕಾಸುರನನ್ನು, ವೀಕ್ಷ್ಯ – ನೋಡಿ, ಸತ್ಯಾ ದೇವೀ—ಸತ್ಯಭಾಮಾದೇವಿಯು, ಶಾರ್ಙ್ಗಸಂಜ್ಞಂ ಕಾರ್ಮುಕಂ – ಶಾರ್ಙ್ಗಧನುಸ್ಸನ್ನು, ಆದದೇ – ಸ್ವೀಕರಿಸಿದಳು, ಚ—ಮತ್ತು, ಯತಮಾನಂ – ಪ್ರಯತ್ನವಾಡುತ್ತಿದ್ದ, ಭೌಮಂ – ನರಕಾಸುರನನ್ನು, ಕ್ಷಣೇನ – ಕ್ಷಣಸಮಯದಲ್ಲಿಯೇ, ನಿರಾಯುಧಂ ವಿರಥಂ ಚ – ಆಯುಧಹೀನನನ್ನಾಗಿ, ರಥಹೀನನನ್ನಾಗಿಯೂ, ಚಕಾರ – ಮಾಡಿದಳು. ॥೧೦೨॥

ಆಲಿಙ್ಗ್ಯ ಕೃಷ್ಣಃ ಸತ್ಯಭಾಮಾಂ ಪುನಶ್ಚ ರಥಾಂತರೇ ಸಂಸ್ಥಿತಂ ಭೌಮಮುಗ್ರಮ್ ॥
ಸೃಜಂತಮಸ್ತ್ರಾಣ್ಯರಿಣಾ ನಿಕೃತ್ತಸ್ಕಂಧಂ ಮೃತ್ಯೋರರ್ಪಯಾಮಾಸ ಶೀಘ್ರಮ್ ॥೧೦೩॥

ಕೃಷ್ಣಃ—ಶ್ರೀಕೃಷ್ಣನು, ಸತ್ಯಭಾಮಾಂ—ಆ ರೀತಿ ಪರಾಕ್ರಮ ಪ್ರದರ್ಶಿಸಿದ ಸತ್ಯಭಾಮಾಳನ್ನು, ಆಲಿಂಗ್ಯ—ಆಲಿಂಗಿಸಿಕೊಂಡು, ಪುನಃ—ಮತ್ತೆ, ರಥಾಂತರೇ – ಬೇರೆ ರಥದಲ್ಲಿ, ಸಂಸ್ಥಿತಂ – ಏರಿ ಬಂದಂಥ, ಉಗ್ರಂ – ಭಯಂಕರನಾದ, ಅಸ್ತ್ರಾಣಿ ಸೃಜಂತಂ – ಅಸ್ತ್ರಗಳನ್ನು ಬಿಡುತ್ತಿದ್ದಂಥ, ಭೌಮಂ—ನರಕಾಸುರನನ್ನು, ಶೀಘ್ರಂ – ಬೇಗ, ಅರಿಣಾ—ಚಕ್ರದಿಂದ, ನಿಕೃತ್ತಸ್ಕಂಧಂ(ಕೃತ್ವಾ)-ಕತ್ತರಿಸಲ್ಪಟ್ಟ ಬಾಹುಶಿರಸ್ಸುಳ್ಳವನನ್ನಾಗಿ(ಮಾಡಿ),ಮೃತ್ಯೋಃ–ಮೃತ್ಯುದೇವತೆಗೆ,ಅರ್ಪಯಾಮಾಸ – ಸಮರ್ಪಿಸಿದನು. ॥೧೦೩॥

ಸ ಮಂತ್ರಿಭಿರ್ಮಂತ್ರಿಪುತ್ರೈಸ್ಸಮೇತೋ ಜಗಾಮ ಕೃಷ್ಣಾವಜ್ಞಯಾऽಂಧಂ ತಮುಶ್ಚ ॥
ತದಾವಿಷ್ಟೋ ವಾಯುರಗಾಚ್ಚ ಕೃಷ್ಣಮಂತ:ಪುರಂ ಪ್ರಾವಿಶತ್ಸತ್ಯಯೇಶಃ ॥೧೦೪॥

ಸ:-ಆ ನರಕಾಸುರನು,ಮಂತ್ರಿಭಿ:-ಮಂತ್ರಿಗಳಿಂದ,ಮಂತ್ರಿಪುತ್ರೈ;-ಮಂತ್ರಿಪುತ್ರರಿಂದ, ಸಮೇತಸನ್-ಕೂಡಿದವನಾಗಿ ಕೃಷ್ಣಾವಜ್ಞಯಾ-ಶ್ರೀಕೃಷ್ಣನ ತಿರಸ್ಕಾರದಿಂದ, ಅಂಧಂ ತಮಃ ಜಗಾಮ-ಅಂಧಂತಮಸ್ಸಿಗೆ ಹೋದನು, ತದಾವಿಷ್ಟಃವಾಯುಃ-ಅವನೊಳಗೆ ಪ್ರವಿಷ್ಟರಾದ ವಾಯುದೇವರು,ಕೃಷ್ಣಂ ಅಗಾತ್-ಶ್ರೀಕೃಷ್ಣನನ್ನು-ಸೇರಿದರು. ಈಶಃ-ಶ್ರೀಕೃಷ್ಣನು, ಸತ್ಯಯಾ (ಸಹ)-ಸತ್ಯಭಾಮಾದೇವಿಯಿಂದ(ಕೂಡಿಕೊಂಡು)ಅಂತ; ಪುರಂ-ಅಂತ:ಪುರವನ್ನು,ಪ್ರಾವಿಶತ್-ಪ್ರವೇಶಿಸಿದನು. ॥೧೦೪॥

ಭಾವಾನುವಾದ:- ಲಟ-೧೦೪

ಹೀಗೆ ನರಕವಧಕ್ಕಾಗಿ ದೇವ-ಋಷಿಗಳಿಂದ ಪ್ರಾರ್ಥಿತನಾದ ಶ್ರೀಕೃಷ್ಣನು ಗರುಡನನ್ನು ಸ್ಮರಿಸಿದನು. ಆಗ ಕೂಡಲೇ ಬಂದು ನಮಸ್ಕರಿಸಿ ಎದುರಲ್ಲಿ ನಿಂತ ಗರುಡನನ್ನು ಸತ್ಯಭಾಮಾಸಮೇತನಾಗಿ ಏರಿ, ನರಕನ ಪ್ರಾಗ್ಜ್ಯೋತಿಷಪುರದ ಕಡೆಗೆ ಹೊರಟನು. ಈ ಸತ್ಯಭಾಮಾಳು ನಿತ್ಯಮುಕ್ತಳಾದ ಶ್ರೀಲಕ್ಷ್ಮೀದೇವಿಯ ಭೂರೂಪದ ಅವತಾರಳಾದ್ದರಿಂದ, ಅವಳಿಗೆ ಮಾಡಬೇಕಾದ ಕಾರ್ಯಗಳೇನೂ ಇಲ್ಲದಿದ್ದರೂ, ಭಗವಂತನ ಪ್ರೀತಿಗಾಗಿ, ಜಗಚ್ಚಿಕ್ಷಾರ್ಥವಾಗಿ ಏಕಾದಶೀ ವ್ರತವನ್ನು ಸದಾ ಆಚರಿಸುತ್ತಿದ್ದಳು. ಒಂದು ಸಲ ವಿಶೇಷ ಸಂಕಲ್ಪ ಸ್ನಾನ,ದಾನ,ಹೋಮ ಪೂರ್ವಕ ವ್ರತಾಚರಣೆ ಮಾಡಲು ಭೀಮ ದ್ವಾದಶೀ (ಮಾಘಶುದ್ಧದ್ವಾದಶೀ) ವ್ರತವನ್ನು ಕೈಕೊಂಡು, ಏಕಾದಶೀದಿನ ಉಪವಾಸಮಾಡಿ, ರಾತ್ರಿಯಲ್ಲಿ ಸಛಿದ್ರ ಕಲಶಗಳಿಂದ ಬರುವ ಒಂದುಕೋಟಿ ಜಲಧಾರಾಗಳನ್ನು ತಲೆಯಲ್ಲಿ ಧರಿಸಿ ಸ್ನಾನಮಾಡಿದಳು. ಇದನ್ನೆಲ್ಲ ಮಾಡಿದ್ದು ಶ್ರೀವಿಷ್ಣುಪ್ರೀತಿಯ ಉದ್ದೇಶದಿಂದಲೇ. ಇಂಥ ಸತ್ಯಭಾಮಾಸಮೇತನಾಗಿ ಹೊರಟ ಶ್ರೀಕೃಷ್ಣನು ವಾಯುವ್ಯ ದಿಕ್ಕಿನಲ್ಲಿ ಬಂದನು. ಇಂದ್ರದೇವರು ಬೆನ್ನು ಹತ್ತಿ ಬಹುದೂರದವರೆಗೆ ಕಳಿಸಲು ಬರುತ್ತಿದ್ದರು. ಅವರಿಗೆ ತನ್ನ ಸ್ವರ್ಗಕ್ಕೆ ಹೋಗಲು ಆಜ್ಞಾಪಿಸಿ ಭೂಮಿದೇವಿಯ ಪುತ್ರನಾದ ನರಕನ ಪಟ್ಟಣದ ಹತ್ತಿರ ಬಂದನು. ಅವನ ಪಟ್ಟಣದ ಹೊರಗೆ ಕ್ರಮವಾಗಿ ಗಿರಿ, ನೀರು, ಕ್ಷುರಪಾಶಗಳ ದುರ್ಗಗಳು ಇದ್ದವು. ಅವುಗಳನ್ನು ದಾಟಲಾಗಲೀ ನಾಶಪಡಿಸಲಾಗಲೀ ಯಾರಿಗೂ ಆಗದಂತೆ ಬ್ರಹ್ಮದೇವರು ನರಕನಿಂದ ಆರಾಧಿತರಾಗಿ ವರಕೊಟ್ಟಿದ್ದಲ್ಲದೆ, ಶಸ್ತ್ರಧಾರಿಯಾಗಿರುವಾಗ ಯಾರಿಗೂ ಸೋಲದಂತೆ, ಯಾರಿಂದಲೂ ಸಾಯದಂತೆ ಅವನಿಗೂ ವರವನ್ನು ಕೊಟ್ಟಿದ್ದರು. ಅದೇರೀತಿ ಅವನ ಐದು ಮಂತ್ರಿಗಳಾದ ಮುರ, ಪೀಠ, ನಿಸುಂಭ ಹಯಗ್ರೀವ ಪಂಚಜನ ಎಂಬವರಿಗೂ ಕೊಟ್ಟಿದ್ದರು. ಮೂರುದುರ್ಗಗಳ ಪೈಕಿ ಕ್ಷುರ ಪಾಶದುರ್ಗದಲ್ಲಿ ಕ್ಷುರ (ಕತ್ತಿ,ಬ್ಲೇಡ್) ದಂತೆ ಹರಿತವಾಗಿರುವ ಆರುಸಾವಿರ ಲೋಹದ ಪಾಶಗಳು ಇದ್ದವು. ಅವುಗಳನ್ನು ಮುರದೈತ್ಯನು ನಿರ್ಮಿಸಿದ್ದನು. ಹೀಗಾಗಿ ಅವುಗಳಿಗೆ ಮೌರವ ಪಾಶ ಎಂದು ಕರೆಯುತ್ತಿದ್ದರು. ಹೀಗೆ ಈ ಎಲ್ಲ ವರ, ಮಂತ್ರಿ, ದುರ್ಗಗಳಿಂದ ದರ್ಪಯುಕ್ತನಾದ ನರಕನು ಆ ತನ್ನ ಮಂತ್ರಿಗಳನ್ನು ಲೋಕಪಾಲರನ್ನಾಗಿ, ತನ್ನನ್ನು ಸಾಕ್ಷಾತ್ ದೇವರನ್ನಾಗಿ ಹೇಳಿಕೊಳ್ಳುತ್ತಿದ್ದನು. ಇಂಥ ನರಕನನ್ನು ಸಂಹರಿಸಲು ನಿಶ್ಚಯಿಸಿದ ಶ್ರೀಕೃಷ್ಣಪರಮಾತ್ಮನು ಪೂರ್ಣ ಹೊರಗಿರುವ ಗಿರಿದುರ್ಗವನ್ನು ತನ್ನ ಗದೆಯಿಂದ ಭೇದಿಸಿ, ವಾಯುವ್ಯ ಅಸ್ತ್ರದಿಂದ ನೀರನ್ನೆಲ್ಲ ಒಣಗಿಸಿ, ಚಕ್ರದಿಂದ ಕ್ಷುರಪಾಶಗಳನ್ನು ಕತ್ತರಿಸಿ, ಆಗ ಯುದ್ಧಕ್ಕೆ ಬಂದ ಐದು ಮಂತ್ರಿಗಳು ತನ್ನ ಮೇಲೆ ಪರ್ವತ, ಶಸ್ತ್ರಾಸ್ತ್ರ, ಶಿಲೆಗಳನ್ನು ಒಗೆಯುತ್ತಿರುವಂತೆಯೇ ಅವರ ಕುತ್ತಿಗೆಗಳನ್ನು ಚಕ್ರದಿಂದ ಕತ್ತರಿಸಿ ಸಂಹರಿಸಿದನು. ಆಗ ಆ ಮಂತ್ರಿಗಳ ಏಳೇಳು ಮಕ್ಕಳು ಒಟ್ಟು ಮೂವತ್ತೈದು ಜನರು ಶ್ರೀರುದ್ರದೇವರ ವರದಿಂದ ಅವಧ್ಯರಾದವರು ಯುದ್ಧಕ್ಕೆ ಬಂದಾಗ ಅವರನ್ನು ಸಂಹರಿಸಿ ನರಕನ ಸಮೀಪಕ್ಕೆ ಹೋದನು. ಅದನ್ನು ತಿಳಿದ ನರಕನು ಇಪ್ಪತ್ತು ಅಕ್ಷೌಹಿಣೀ ಸೈನ್ಯ ಸಮೇತನಾಗಿ ಯುದ್ಧಕ್ಕೆ ಬಂದನು. ಆ ಸೈನ್ಯದಲ್ಲಿಯ ಮುಕ್ಕಾಲು ಭಾಗವನ್ನು ಶ್ರೀಕೃಷ್ಣನ ವಾಹನನಾದ ಗರುಡದೇವನೇ ತನ್ನ ಕೇವಲ ರೆಕ್ಕೆ ಬಡಿತದಿಂದ ಸಂಹರಿಸಿದನು. ಉಳಿದ ಸೈನ್ಯವನ್ನು ಶ್ರೀಕೃಷ್ಣನು ಬಾಣ ಪ್ರಯೋಗದಿಂದ ಸಂಹರಿಸಿದನು. ಆಗ ಅಸ್ತ್ರಪ್ರಯೋಗ ಮಾಡುತ್ತ ಬಂದ ನರಕನನ್ನು ಬಾಣ ಪ್ರಹಾರಗಳಿಂದ ಪೀಡಿಸಿದನು. ಪಿಡೀತನಾದ ನರಕನು ಬ್ರಹ್ಮದತ್ತವಾದ ಶತಘ್ನೀ ಎಂಬ ಗದಾಯುಧವನ್ನು ಶ್ರೀಕೃಷ್ಣನಿಗೆ ಒಗೆದನು. ಅದನ್ನು ನುಂಗಿದ, ಯಾವದೇ ವಿಕಾರರಹಿತನಾದ, ಆನಂದಮಯನಾದ ಶ್ರಮಚಿಂತಾದಿದೋಷ ದೂರನಾದ ಭಗವಂತನು ಸ್ವೇಚ್ಛೆಯಿಂದ ಶ್ರಮವಾಡಂತೆ

ನಟಿಸಿದನು. ಅದನ್ನು ಕಂಡ ನರಕನು ಉಳಿದವರ ಮೇಲೆ ಬ್ರಹ್ಮದೇವನ ಕೃಪೆ ಅಷ್ಟಿಲ್ಲ. ಹೀಗಾಗಿ ಅವರಲ್ಲ ಸತ್ತರು. ನನ್ನ ಮೇಲೆ ಪೂರ್ಣ ಕೃಪೆ ಇದೆಯಾದ್ದರಿಂದಈ ಕೃಷ್ಣನಿಗೆ ಹೀಗೆ ಆಯಿತು ಎಂದು ಭ್ರಮೆ ಹೊಂದಿ ಸಾಯಲಿ,ಬ್ರಹ್ಮದೇವರ ಬಗ್ಗೆ ಆದರದಿಂದ ಪೂಜಿಸಲಿ ಎಂಬ ಉದ್ದೇಶ ಶ್ರೀಕೃಷ್ಣನಿಗೆ ಇತ್ತು. ಆದ್ದರಿಂದ ಹಾಗೆ ನಟಿಸಿದನು. ಆಗ ಸತ್ಯಭಾಮಾದೇವಿಯು ಶಾರ್ಙ್ಗ ಧನುಸ್ಸನ್ನು ತೆಗೆದುಕೊಂಡು ಬಾಣಪ್ರಯೋಗ ಮಾಡಿ, ಭಾರಿ ಯುದ್ಧ ಮಾಡುತ್ತಿದ್ದ ನರಕನನ್ನು ಆಯುಧ-ರಥಹೀನ ನನ್ನಾಗಿಸಿದಳು. ಆಗ ಶ್ರೀಕೃಷ್ಣಪರಮಾತ್ಮನು ಪ್ರೀತನಾಗಿ ಅವಳನ್ನು ಆಲಿಂಗಿಸಿಕೊಂಡು, ಇನ್ನೊಂದು ರಥವನ್ನೇರಿ ಅಸ್ತ್ರಪ್ರಯೋಗ ಮಾಡುತ್ತ ಬಂದ ನರಕಾಸುರನ ಶಿರಸ್ಸನ್ನು ಚಕ್ರಾಯುಧದಿಂದ ಅವನ ಸ್ಕಂಧದಿಂದ ಕತ್ತರಿಸಿ ಸಂಹರಿಸಿದನು. ಹೀಗೆ ನರಕಾಸುರನು ತನ್ನ ಮಂತ್ರಿ ಹಾಗೂ ಅವರ ಪುತ್ರ ಸಮೇತನಾಗಿ ಸತ್ತು ಶ್ರೀಕೃಷ್ಣದ್ವೇಷದ ಫಲವಾಗಿ ಅಂಧತಮಸ್ಸನ್ನು ಹೊಂದಲು ಸಿದ್ಧನಾದನು. ನರಕನಲ್ಲಿ ಬಲಪ್ರಾಪಕರಾಗಿ ಆವಿಷ್ಟರಾದ ವಾಯುದೇವರು ಶ್ರೀಕೃಷ್ಣನೊಳಗೆ ಸೇರಿದರು. ಶ್ರೀಕೃಷ್ಣನು ಸತ್ಯಾ ಸಮೇತನಾಗಿ ಅಂತಃಪ್ರರವನ್ನು ಪ್ರವೇಶಿಸಿದನು.

ವಿಶೇಷಾಂಶ ೧) ತಾನು ದೇವರು ಎಂದು ಹೇಳಿಕೊಳ್ಳುವ ನರಕನನ್ನು ಕೊಂದದ್ದರಿಂದ ತಾನು ದೇವರು ಎಂದು ಹೇಳುವ ಮತ(ಅದ್ವೈತ ಮತ)ದಿಂದ ದೇವರು ಸಂತುಷ್ಟನಾಗುವದಿಲ್ಲ: ಪ್ರತ್ಯುತ ಶಿಕ್ಷಿಸುವನು ಎಂದೂ ತಿಳಿಯುವದು.

೨) ಕರ್ಮ ಬಂಧನವಿಲ್ಲದ ಶ್ರೀಸತ್ಯಭಾಮಾದೇವಿಯೂ ಕೂಡ ಏಕಾದಶೀ ವ್ರತವನ್ನು ಆಚರಿಸಿದ ಮೇಲೆ, ಕರ್ಮಬಂಧನವುಳ್ಳ ಮುಮುಕ್ಷುಗಳೆಲ್ಲರೂ ಆಚರಿಸಲೇಬೇಕು ಎಂದು ಸಿದ್ಧವಾಯಿತು.

ತದಾ ಭೂಮಿಃ ಪಂಚಭೂತಾವರಾ ಯಾ ಯಸ್ಯಾಂ ಜಜ್ಞೇ ನರಕಃ ಶ್ರೀವರಾಹಾತ್ ॥
ಮೂಲಪ್ರಕೃತ್ಯೈವ ಭೂಮ್ಯಾ ನಿತಾಂತಮಾವಿಷ್ಟಾ ಯಾ ಸಾ ಗಮತ್ಕೃಷ್ಣಪಾದೌ ॥೧೦೫॥

ತದಾ – ಆ ಸಮಯದಲ್ಲಿ, ಯಾ ಪಂಚಭೂತಾವರಾ – ಯಾವಳು ಪಂಚಭೂತಗಳ ಅಭಿಮಾನಿಗಳಲ್ಲಿ, ಅವರ (ಅಧಮ)ಳೋ, ಯಸ್ಯಾಂ—ಯಾವಳಲ್ಲಿ, ನರಕಃ—ನರಕಾಸುರನು, ಶ್ರೀವರಾಹಾತ್ – ಶ್ರೀವರಾಹದೇವರಿಂದ, ಜಜ್ಞೇ—ಹುಟ್ಟಿದನೋ, ಯಾ—ಯಾವಳು, ಮೂಲಪ್ರಕೃತ್ಯಾ ಭೂಮ್ಯಾ ಏವ—ಮೂಲಲಕ್ಷ್ಮೀದೇವಿಯ ಭೂರೂಪದಿಂದಲೇ, ನಿತಾಂತಂ ಆವಿಷ್ಟಾ – ಅತ್ಯಂತವಾಗಿ ಆವಿಷ್ಟಳಾಗಿದ್ದಳೋ, ಸಾ ಭೂಮಿಃ – ಆಂಥ ಭೂಮಿದೇವಿಯು, ಕೃಷ್ಣಪಾದೌ – ಶ್ರೀಕೃಷ್ಣಪಾದಗಳನ್ನು, ಅಗಮತ್ – ಹೊಂದಿದಳು. ॥೧೦೫॥

ಸಾಽದಿತ್ಯಾಸ್ತೇ ಕುಂಡಲೇ ಪಾದಯೋಶ್ಚ ನಿಧಾಯ ಪೌತ್ರಂ ಭಗದತ್ತಸಂಜ್ಞಮ್ ॥
ಸಮರ್ಪಯಾಮಾಸ ತಸ್ಯಾಭಿಷೇಕಂ ಪ್ರಾಗ್ಜ್ಯೋತಿಷೇ ಕಾರಯಾಮಾಸ ಕೃಷ್ಣಃ ॥೧೦೬॥

ಸಾ—ಅವಳು, ಅದಿತ್ಯಾಃ—ಅದಿತಿದೇವಿಯ, ತೇ ಕುಂಡಲೇ—ನರಕನು ಅಪಹರಿಸಿದ ಕರ್ಣಕುಂಡಲಗಳನ್ನು, ಪಾದಯೋಃ – ಶ್ರೀಕೃಷ್ಣನ ಪಾದಗಳಲ್ಲಿ, ನಿಧಾಯ—ಇಟ್ಟು, ಭಗದತ್ತಸಜ್ಞಂ – ಭಗದತ್ತನೆಂಬ ಹೆಸರುಳ್ಳ, ಪೌತ್ರಂ – ತನ್ನ ಮಗನ ಮಗನನ್ನು, ಸಮರ್ಪಯಾಮಾಸ—ಅರ್ಪಿಸಿದಳು. ಕೃಷ್ಣಃ—ಶ್ರೀಕೃಷ್ಣನು. ಪ್ರಾಗ್ಜ್ಯೋತಿಷೇ—ಪ್ರಾಗ್ಜ್ಯೋತಿಷ ರಾಜ್ಯದಲ್ಲಿ, ತಸ್ಯ ಅಭಿಷೇಕಂ—ಆ ಭಗದತ್ತನ ಅಭಿಷೇಕ ಕಾರ್ಯವನ್ನು, ಕಾರಯಾಮಾಸ-ಮಾಡಿಸಿದನು. ॥೧೦೬॥

ಸಂಸ್ಥಾಪ್ಯ ತಂ ಸರ್ವಕಿರಾತರಾಜ್ಯೇ ಭೌಮಾಹೃತಂ ವೈಶ್ರವಣಾದ್ಬಲೇನ ॥
ಶಿವೇನ ದತ್ತಂ ಧನದಾಯಾತಿಸತ್ವಂ ಭಗದತ್ತೇನ್ಯದಧಾತ್ಸುಪ್ರತೀಕಂ ರಮೇಶಃ ॥೧೦೭॥

ರಮೇಶಃ—ಶ್ರೀಕೃಷ್ಣನು, ತಂ – ಆ ಭಗದತ್ತನನ್ನು, ಸರ್ವಕಿರಾತರಾಜ್ಯೇ – ಎಲ್ಲ ಕಿರಾತರ ರಾಜ್ಯದಲ್ಲಿ, ಸಂಸ್ಥಾಪ್ಯ – ಇಟ್ಟು, ಶಿವೇನ ಧನದಾಯ ದತ್ತಂ—ರುದ್ರದೇವರಿಂದ ಕುಬೇರನಿಗೆ ಕೊಡಲ್ಪಟ್ಟ, ವೈಶ್ರವಣಾತ್ – ಕುಬೇರನಿಂದ, ಬಲೇನ – ಬಲತ್ಕಾರವಾಗಿ, ಭೌಮಾಹೃತಂ – ನರಕಾಸುರನಿಂದ ಅಪಹರಿಸಿ ತರಲ್ಪಟ್ಟ, ಅತಿಸತ್ವಂ—ಅತಿ ಶಕ್ತಿಯುತವಾದ, ಸುಪ್ರತೀಕಂ – ಸುಪ್ರತೀಕವೆಂಬ ಗಜವನ್ನು, ಭಗದತ್ತೇ – ಭಗದತ್ತನ ವಶದಲ್ಲಿ, ನ್ಯದಧಾತ್ – ಇಟ್ಟನು. ॥೧೦೭॥

ಕರೀಂದ್ರಮೇಕಂ ತಂ ನಿಧಾಯೈವ ತಸ್ಮಿನ್ಕೃತ್ವಾ ಪ್ರಸಾದಂ ಚ ವಸುಂಧರಾಯಾಃ ॥
ಚತುರ್ದಂತಾನ್ಷಟ್ಸಹಸ್ರಾನ್ಕರೀಂದ್ರಾನ್ಪಯೋಬ್ಧಿಜಾನ್ಪ್ರಾಹಿಣೋ ದ್ವಾರವತ್ಯೈ ॥೧೦೮॥

ಏಕಂ ಕರೀಂದ್ರಂ – ಆ ಸುಪ್ರತೀಕ ಆನೆಯೊಂದನ್ನು, ತಸ್ಮಿನ್ – ಆ ಭಗದತ್ತನಲ್ಲಿಯೇ, ನಿಧಾಯ – ಇಟ್ಟು, ವಸುಂಧರಾಯಾಃ – ಭೂಮಿದೇವಿಗೆ, ಪ್ರಸಾದಂ ಚ – ಅನುಗ್ರಹವನ್ನೂ ಕೂಡ, ಕೃತ್ವಾ – ಮಾಡಿ, ಪ್ಧಯೋಬ್ಧಿಜಾನ್—ಕ್ಷೀರಸಮುದ್ರದಲ್ಲಿ ಹುಟ್ಟಿದ, ಚತುರ್ದಂತಾನ್ – ನಾಲ್ಕು ಕೋರೆಗಳಿರುವ, ಷಟ್ಸಹಸ್ರಾನ್ ಕರೀಂದ್ರಾನ್—ಆರುಸಾವಿರ ಸಂಖ್ಯಾಕವಾದ ಶ್ರೇಷ್ಠ ಆನೆಗಳನ್ನು, ದ್ವಾರವತ್ಯೈ – ದ್ವಾರಕೆಗೆ, ಪ್ರಾಹಿಣೋತ್ – ಕಳಿಸಿದನು. ॥೧೦೮॥

ನರಾಧಿಪಾನ್ದೇವಗಂಧರ್ವನಾಗಾನ್ ಜಿತ್ವಾssನೀತಂ ಹೇಮರತ್ನೋಚ್ಚರಾಶಿಮ್ ॥
ಶತದ್ವಯಂ ಯೋಜನಾನಾಂ ಸಮೃದ್ಧಂ ಸಮಂತತಃ ಪ್ರಾಹಿಣೋತ್ ಸ್ವಾಂ ಪುರೀಂ ಸಃ ॥೧೦೯॥

(ನರಕೇಣ—ನರಕಾಸುರನಿಂದ), ನರಾಧಿಪಾನ್—ಮನುಷ್ಯರಾಜರನ್ನು, ದೇವಗಂಧರ್ವನಾಗಾನ್—ದೇವತೆಗಳು ಗಂಧರ್ವರು, ನಾಗರು ಇವರನ್ನು, ಜಿತ್ವಾ – ಗೆದ್ದ, ಆನೀತಂ – ತರಲ್ಪಟ್ಟ, ಯೋಜನಾನಾಂ ಶತದ್ವಯಂ – ಎರಡುನೂರು ಯೋಜನಗಳ ಪ್ರದೇಶದಲ್ಲಿ, ಸಮಂತತಃ – ಎಲ್ಲ ಕಡೆಗೂ, ಸಮೃದ್ಧಂ—ವ್ಯಾಪಿಸಿದ, ಹೇಮರತ್ನೋಚ್ಚರಾಶಿಂ—ಭಂಗಾರ ರತ್ನ ಮೊದಲಾದ ಶ್ರೇಷ್ಠ ಸಂಪತ್ತುಗಳ ರಾಶಿಯನ್ನು, ಸಃ – ಆ ಶ್ರೀಕೃಷ್ಣನು, ಸ್ವಾಂಪುರೀಂ–ತನ್ನ ದ್ವಾರಕೆಗೆ, ಪ್ರಾಹಿಣೋತ್ – ಕಳಿಸಿದನು. ॥೧೦೯॥

ಮಹಾವೀರ್ಯೈರ್ನೈಋತೈ ರಾಕ್ಷಸೇಂದ್ರೈರ್ಭೌಮಾನೀತೈರ್ನಿಋತಿಂ ಯೋಧಯಿತ್ವಾ ॥
ಸ ಪ್ರಾಹಿಣೋತ್ಸರ್ವರತ್ನೋಚ್ಚರಾಶಿಂ ಗಜಾಂಶ್ಚ ನಾರಾಯಣ ಆದಿದೇವಃ ॥೧೧೦॥

ಆದಿದೇವಃ ನಾರಾಯಣಃ–ಮೂಲಕಾರಣ ಪುರುಷನಾದ ನಾರಾಯಣನ ಅವತಾರಿಯಾದ ಶ್ರೀಕೃಷ್ಣನು, ನಿಋತಿಂ -ನಿಋತಿ ಎಂಬ ನೈಋತ್ಯದಿಗಭಿಮಾನಿದೇವನ ಜೊತೆಗೆ, ಯೋಧಯಿತ್ವಾ – ಯುದ್ಧಮಾಡಿ, ಭೌಮಾನೀತೈಃ – ನರಕಾಸುರನಿಂದ ತರಲ್ಪಟ್ಟ, ಮಹಾವೀರ್ಯೈಃ ನೈಋತ್ಯೈಃ ರಾಕ್ಷಸೇಂದ್ರೈಃ – ಮಹಾಪರಾಕ್ರಮಿಗಳಾದ, ನಿಋತಿ ಗಣದ ರಾಕ್ಷಸರಿಂದ – ಸರ್ವರತ್ನೋಚ್ಚರಾಶಿಂ ಗಜಾಂಶ್ಚ – ಎಲ್ಲ ರತ್ನರಾಶಿಯನ್ನು, ಆನೆಗಳನ್ನೂ ಕೂಡ, ಪ್ರಾಹಿಣೋತ್ – ಕಳಿಸಿದನು. ॥೧೧೦॥

ತತ್ರಾ ಪಶ್ಯತ್ಕನ್ಯಕಾ ಭೂಮಿಪಾನಾಂ ಭೌಮಾನೀತಾಃ ಸಮರೇ ತಾನ್ವಿಜಿತ್ಯ ॥
ದ್ವ್ಯಷ್ಟೌ ಸಹಸ್ರಾಣಿ ಶತಂ ಚ ರೂಪಶೀಲೋದಾರಾ ಅಕ್ಷತಾಃ ಸದ್ವ್ರತಸ್ಥಾಃ ॥೧೧೧॥

ಸಮರೇ – ಯುದ್ಧದಲ್ಲಿ, ತಾನ್ – ಆ ರಾಜರನ್ನು, ವಿಜಿತ್ಯ—ಗೆದ್ದು, ಭೌಮಾನೀತಾಃ – ನರಕಾಸುರನಿಂದ ತರಲ್ಪಟ್ಟಂಥ, ದ್ವ್ಯಷ್ಟೌ ಸಹಸ್ರಾಣಿ ಶತಂ ಚ – ಹದಿನಾರುಸಾವಿರದ ಮೇಲೆ ಒಂದನೂರು ಸಂಖ್ಯಾಕರಾದ, ರೂಪಶೀಲೋದಾರಾಃ—ಸೌಂದರ್ಯ ಸಚ್ಚಾರಿತ್ರ್ಯಗಳಿಂದ ಶ್ರೇಷ್ಠರಾದ, ಅಕ್ಷತಾಃ – ರಜೋದರ್ಶನವಾಗದಿದ್ದ, ಸದ್ವ್ರತಸ್ಥಾಃ—ಶ್ರೇಷ್ಠ ಪವಿತ್ರ ವ್ರತಗಳ ಆಚರಣೆಯನ್ನು ಮಾಡುತ್ತಿದ್ದ, ಭೂಮಿಪಾನಾಂ ಕನ್ಯಕಾಃ – ರಾಜಕನ್ಯೆಯರನ್ನು, ತತ್ರ—ಆ ನರಕನ ಅಂತಪುರದಲ್ಲಿ, ಅಪಶ್ಯತ್—ನೋಡಿದನು. ॥೧೧೧॥

ಅವ – ಆ ೧೬೧೦೦ ಮಂದಿ ಎಲ್ಲರೂ ರಾಜಕನ್ಯೆಯರು ಎಂದು ತೋರುವದು. ಆದ್ದರಿಂದ ಸ್ಪಷ್ಟಪಡಿಸುತ್ತಾರೆ-

ಕಾಶ್ಚಿತ್ತತ್ರಾಸನ್ದೇವಗಂಧರ್ವಕನ್ಯಾಸ್ತಾಸಾಂ ಪ್ರಧಾನಾ ತ್ವಷ್ಟೃಪುತ್ರೀ ಕಶೇರುಃ ॥
ಪುತ್ರ್ಯಾ ಅಗ್ನೇಃ ಪೂರ್ವಮಾಸಂಶ್ಚ ತೇಽಥ ಸ್ತ್ರೀತ್ವಪ್ರಾಪ್ತ್ಯೈ ಚಕ್ರುರುಗ್ರಂ ತಪಶ್ಚ ॥೧೧೨॥

ತತ್ರ – ಆ ಹದಿನಾರುಸಾವಿರದ ಒಂದೂನೂರು ಕನ್ಯೆಯರಲ್ಲಿ, ಕಾಶ್ಚಿತ್ - ಕೆಲವರು, ದೇವ ಗಂಧರ್ವಕನ್ಯಾಃ—ದೇವಕನ್ಯೆಯರು, ಗಂಧರ್ವಕನ್ಯೆಯರೂ ಇದ್ದರು. ತಾಸಾಂ ಪ್ರಧಾನಾ – ಅವರೆಲ್ಲರಲ್ಲಿ ಮುಖ್ಯಳಾದವಳು, ತ್ವಷ್ಟೃಪುತ್ರೀಃ ಕಶೇರುಃ—ತ್ವಷ್ಟಾನ ಪುತ್ರಿಯಾದ ಕಶೇರು ಎಂಬವಳು. ತಾಃ—ಅವರು, ಪೂರ್ವಂ - ಹಿಂದಿನಜನ್ಮದಲ್ಲಿ, ಅಗ್ನೇಃ ಪುತ್ರ್ಯಾಃ—ಅಗ್ನಿಯಮಕ್ಕಳು, ಆಸನ್ – ಆಗಿದ್ದರು. ಅಥ – ನಂತರ, ತೇ—ಆ ಅಗ್ನಿಪುತ್ರರು, ಸ್ತ್ರೀತ್ವಪ್ರಾಪ್ತ್ಯೈ–ಹೆಣ್ಣು ಜನ್ಮವನ್ನು ಹೊಂದುವದಕ್ಕಾಗಿ, ಉಗ್ರಂ ತಪಃ ಚ – ಕಠಿಣ ತಪಸ್ಸನ್ನೂ ಕೂಡ, ಚಕ್ರುಃ – ಮಾಡಿದರು. ॥೧೧೨॥

ಭಾರ್ಯಾತ್ವಾರ್ಥೇ ವಾಸುದೇವಸ್ಯ ಯೋಷಿತ್ತನುಂ ತಾಸಾಮಿಚ್ಛತೀನಾಂ ಸಮೀರಃ ॥
ಅದಾದ್ವರಂ ತಪಸಾऽऽರಾಧಿತಸ್ಸ ಸ್ತ್ರೀಭೂತಾಸ್ತೇ ಬದರೀಂ ಸಂಪ್ರಜಗ್ಮುಃ ॥೧೧೩॥

~~ವಾಸುದೇವಸ್ಯ ಭಾರ್ಯಾತ್ವಾರ್ಥೇ – ಶ್ರೀಕೃಷ್ಣನ ಪತ್ನಿಯರಾಗುವದಕ್ಕಾಗಿ, ಯೋಷಿತ್ತನುಂ ಇಚ್ಛತೀನಾಂ~~ ತಾಸಾಂ—ಸ್ತ್ರೀ ದೇಹವನ್ನು ಅಪೇಕ್ಷಿಸತಕ್ಕ ಆವರಿಗೆ, ತಪಸಾ – ಅವರ ತಪಸ್ಸಿನಿಂದ, ಆರಾಧಿತಃ – ಆರಾಧಿಸಲ್ಪಟ್ಟ, ಸಃ ಸಮೀರಃ—ವಾಯುದೇವರು. ವರಂ – ಸ್ತ್ರೀ ಜನ್ಮವನ್ನು ಹೊಂದುವಂತೆ ವರವನ್ನು, ಅದಾತ್—ಕೊಟ್ಟರು. ಸ್ತ್ರೀಭೂತಾಃ ತೇ—ಸ್ತ್ರೀ ಜನ್ಮವನ್ನು ಹೊಂದಿದ ಆ ಅಗ್ನಿಪುತ್ರರು, ಬದರೀಂ – ಬದರೀಕ್ಷೇತ್ರಕ್ಕೆ, ಸಂಪ್ರಜಗ್ಮುಃ—ಹೋದರು. ॥೧೧೩॥

ನಾರಾಯಣಂ ತತ್ರ ಶುಶ್ರೂಷಮಾಣಾಃ ಪ್ರಾಪ್ಯಾಪ್ಸರಸ್ತ್ವಂ ರಾಜಕುಲೇಷು ಜಾತಾಃ ॥
ಕಾಶ್ಚಿತ್ಸ್ವರ್ಗೇ ತಾ ನಿಶಾಮ್ಯೈವ ಕೃಷ್ಣಂ ವವ್ರುಃ ಪತಿಂ ಸರ್ವಗುಣಾಭಿರಾಮಮ್ ॥೧೧೪॥

ತತ್ರ—ಆ ಬದರಿಯಲ್ಲಿ, ನಾರಾಯಣಂ—ಶ್ರೀ ನಾರಾಯಣದೇವರನ್ನು, ಶುಶ್ರೂಷಮಾಣಾಃ ಸತ್ಯಃ—ಸೇವಿಸುವವರಾಗಿ, ಅಪ್ಸರಸ್ತ್ವಂ ಪ್ರಾಪ್ಯ—ಅಪ್ಸರಾ ಸ್ತ್ರೀ ರೂಪವನ್ನು ಹೊಂದಿ, ಕಾಶ್ಚಿತ್ – ಕೆಲವರು, ರಾಜಕುಲೇಷು ಜಾತಾಃ – ರಾಜವಂಶತನದಲ್ಲಿ ಹುಟ್ಟಿದರು, ಕಾಶ್ಚಿತ್ — ಇನ್ನು ಕೆಲವರು, ಸ್ವರ್ಗೇ—ಸ್ವರ್ಗದಲ್ಲಿ ಜನಿಸಿದರು, ತಾಃ–ಅವರೆಲ್ಲ, ಸರ್ವಗುಣಾಭಿರಾಮಂ ಕೃಷ್ಣಂ ನಿಶಮ್ಯೈವ—ಸರ್ವಗುಣಪೂರ್ಣ ಶ್ರೀಕೃಷ್ಣನ ಬಗೆಗೆ ಕೇಳಿಯೇ, ಪತಿಂ—ಗಂಡನನ್ನಾಗಿ, ವವ್ರುಃ—ವರಿಸಿದರು. ॥೧೧೪॥

ಆಜಾನದೇವೈಸ್ಸರ್ವಗುಣೈಸ್ಸಮಾಸ್ತಾಃ ಸ್ವಭಾವತೋऽಥೇಂದಿರಾವೇಶತೋऽತಃ ॥
ಗುಣಾಧಿಕಾಸ್ತಾಶ್ಶಿಬಿಕಾಸು ಕೃಷ್ಣ ಆರೋಪಯಿತ್ವಾ ಪ್ರಾಹಿಣೋದ್ದ್ವಾರವತ್ಯೈ ॥೧೧೫॥

ಸ್ವಭಾವತ:—ಅವರ ಸ್ವರೂಪ ಯೋಗ್ಯತಾನುಸಾರ, ಅಜಾನದೇವೈಃ ಸಮಾಃ— ಅಜಾನಜ ದೇವತೆಗಳಿಗೆ ಸಮರಾದ, ಇಂದಿರಾವೇಶತ:– ಶ್ರೀ ಲಕ್ಷ್ಮೀದೇವಿಯ ಆವೇಶವಿರುವದರಿಂದ, ಅತಃ-ಅಜಾನಜದೇವತೆಗಳಿಗಿಂತಲೂ, ಅಧಿಕಾಃ– ಶ್ರೇಷ್ಠರಾದ ತಾಃ—ಆ ಸ್ತ್ರೀಯರನ್ನು, ಕೃಷ್ಣಃ—ಶ್ರೀಕೃಷ್ಣನು, ಶಿಬಿಕಾಸು ಆರೋಪಯಿತ್ವಾ — ಮೇಣಿಗಳಲ್ಲಿ ಹತ್ತಿಸಿ, ದ್ವಾರವತ್ಯೈ ಪ್ರಾಹಿಣೋತ್— ದ್ವಾರಕಿಗೆ ಕಳಿಸಿದನು. ॥೧೧೫॥

ಸಮುರತತೋ ಯೋಜನಾನಾಂ ಶತೇ ದ್ವೇ ಪ್ರವೃದ್ಧಮಿಂದ್ರಸ್ಯ ಸರತ್ನಪರ್ವತಮ್ ॥
ನಿತ್ಯಾಮೃತಸ್ರಾವಿ ಜಲೇಶ್ವರಸ್ಯ ಛತ್ರಂ ಚ ದೋರ್ಭ್ಯಾಂ ಗರುಡೇ ನ್ಯಧಾದ್ಧರಿಃ ॥೧೧೬॥

ಹರಿಃ–ಶ್ರೀಕೃಷ್ಣನು, ಯೋಜನಾನಾಂ ದ್ವೇಶತೇ–ಎರಡುನೂರು ಯೋಜನ ಪ್ರದೇಶದಲ್ಲಿ, ಸಮುಂತತಃಪ್ರವೃದ್ಧಂ–ಎಲ್ಲಕಡೆಗೂ ಹಬ್ಬಿದಂಥ, ಇಂದ್ರಸ್ಯ—ಇಂದ್ರನ, ಸರತ್ನಪರ್ವತಂ—ರತ್ನಗಳಿಂದ ಸಹಿತವಾದ ಪರ್ವತವನ್ನು, ನಿತ್ಯಾಮೃತ ಸ್ರಾವಿ—ಯಾವಾಗಲೂ ಅಮೃತವನ್ನು ಸ್ರವಿಸುವ, ಜಲೇಶ್ವರಸ್ಯ ಛತ್ರಂ ಚ—ವರುಣನ ಛತ್ರವನ್ನೂಕೂಡ, ದೋರ್ಭ್ಯಾಂ—ಬಾಹುಗಳಿಂದ, ಗರುಡೇ—ಗರುಡದೇವನಮೇಲೆ, ನ್ಯಧಾತ್— ಇಟ್ಟನು, ॥೧೧೬॥

ಸ್ವಯಂ ಚ ಸತ್ಯಾಸಹಿತಸ್ತಮಾರುಹತ್ತ ಚಾಶ್ರಮೇಣೈವ ಯಯೌ ತ್ರಿವಿಷ್ಟಪಮ್ t
ಅಭಿಪ್ರಯಾತೋs ಖಿಲಲೋಕಪಾಲೈರ್ಜನಾರ್ದನಶ್ಶಕ್ರಗೃಹಂ ವಿವೇಶ ॥೧೧೭॥

ಸತ್ಯಾಸಹಿತಃ ಸ:—ಸತ್ಯಭಾಮಾದೇವಿಯಿಂದಕೂಡಿದ ಆ ಶ್ರೀಕೃಷ್ಣನು, ಸ್ವಯಂ ಚ—ತಾನೂಕೂಡ, ಸಮಾರುಹತ್ – (ಗರುಡನನ್ನು) ಏರಿದನು. ಸಃ ಚ—ಆ ಗರುಡನಾದರೂ, ಅಶ್ರಮೇಣಾಏವ—ಶ್ರಮವಿಲ್ಲದೆಯೇ, ತ್ರಿವಿಷ್ಟಪಂ—ಸ್ವರ್ಗಕ್ಕೆ, ಯಯೌ –ಹೋದನು. ಜನಾರ್ದನಃ – ಶ್ರೀಕೃಷ್ಣನು, ಅಖಿಲಲೋಕಪಾಲೈಃ—ಎಲ್ಲ ಲೋಕಪಾಲಕದೇವತೆಗಳಿಂದ, ಅಭಿಪ್ರಯಾತ: ಸನ್-ಎದುರುಗೊಳ್ಳಲ್ಪಟ್ಟವನಾಗಿ, ಶಕ್ರಗೃಹಂ-ದೇವೇಂದ್ರನ ಗೃಹವನ್ನು, ವಿವೇಶ – ಪ್ರವೇಶಿಸಿದನು. ॥೧೧೭॥

ಸಂಪೂಜಿತಸ್ತತ್ಯಭಾಮಾಸಹಾಯಶ್ಶಕ್ರೇಣ ಶಚ್ಯಾ ಸಹಿತೇನ ಸಾದರಮ್ !
ದದಾವದಿತ್ಯಾ ಅಪಿ ಕುಂಡಲೇ ಶುಭೇ ಸಮುಸ್ತದೇವೈರ್ಮುನಿಭಿಶ್ಚ ವಂದಿತಃ ॥೧೧೮॥

ಸತ್ಯಭಾಮಾಸಹಾಯಃ – ಸತ್ಯಭಾಮಾದೇವಿಯಿಂದ ಸಹಿತನಾದ ಶ್ರೀಕೃಷ್ಣನು, ಶಚ್ಯಾಸಹಿತೇನ ಶಕ್ರೇಣ—ಶಚೀದೇವಿಯಿಂದ ಸಹಿತನಾದ ಇಂದ್ರನಿಂದ, ಸಾದರಮ್ ಸಂಪೂಜಿತಸ್ತನ್ – ಆದರಪೂರ್ವಕಪೂಜಿತನಾಗಿ, ಅದಿತ್ಯಾ: ಅಪಿ–ದೇವಮಾತೆಯಾದ ಅದಿತಿಗೂ ಕೂಡ, ಶುಭೇಕುಂಡಲೇ–(ಅವಳ) ಸುಂದರವಾದ ಕರ್ಣಕುಂಡಲಗಳನ್ನು, ದದೌ – ಕೊಟ್ಟನು. ಸಮುಸ್ತದೇವೈಃ–ಎಲ್ಲ ದೇವತೆಗಳಿಂದ, ಚ – ಮತ್ತು, ಮುನಿಭಿಃ – ಮುನಿಗಳಿಂದ, ವಂದಿತಃ – ನಮಸ್ಕರಿಸಲ್ಪಟ್ಟನು. ॥೧೧೮॥

ಭಾವಾನುವಾದ ೧೦೫—೧೧೮ ಶ್ರೀಕೃಷ್ಣನು ಅಂತಃಪುರವನ್ನು ಪ್ರವೇಶಿಸಿದಾಗ ನರಕನ ತಾಯಿಯೂ, ಶ್ರೀ ವರಾಹದೇವರ ಪತ್ನಿಯೂ ಆದ, ಪಂಚಭೂತಾಭಿಮಾನಿಗಳಲ್ಲಿ ಅಧಮಳಾದ ಪೃಥ್ವಿಯ ಅಭಿಮಾನಿಯಾದ ಶ್ರೀ ಲಕ್ಷ್ಮೀದೇವಿಯ ಭೂರೂಪದಿಂದ ಅವಿಷ್ಟಳಾದ ಭೂಮಿದೇವಿಯು ಶ್ರೀಕೃಷ್ಣನ ಪಾದಗಳಿಗೆ ಸಾಷ್ಟಾಂಗ ಪ್ರಣಾಮಮಾಡಿ ಅದಿತಿಯ ಕರ್ಣಕುಂಡಲಗಳನ್ನು ಸಮರ್ಪಿಸಿ, ಮೊಮ್ಮಗನಾದ ಭಗದತ್ತನನ್ನೂ ಒಪ್ಪಿಸಿದಳು, ಶ್ರೀಕೃಷ್ಣನು ಪ್ರಾಗ್ಜ್ಯೋತಿಷದ ರಾಜನನ್ನಾಗಿ ಅವನಿಗೆ ಅಭಿಷೇಕಮಾಡಿ, ನರಕನು ಕುಬೇರನಿಂದ ಅಪಹರಿಸಿತಂದ, ಶ್ರೀ ರುದ್ರದೇವರು ಕುಬೇರನಿಗೆ ಕೊಟ್ಟಿದ್ದ ಸುಪ್ತ, ತೀಕ ಎಂಬ ಆನೆಯನ್ನು, ಕುಬೇರನ ಅವತಾರನಾದ ಆ ಭಗದತ್ತನಿಗೆ ಕೊಟ್ಟು, ಅವನಿಗೂ ಭೂಮಿದೇವಿಗೂ ಅನುಗ್ರಹಮಾಡಿ, ಕ್ಷೀರಸಮುದ್ರ ಮಂಥನ ಕಾಲದಲ್ಲಿ ಬಂದ ನಾಲ್ಕು ಕೋರೆಗಳುಳ್ಳ ಆನೆಗಳನ್ನು ದ್ವಾರಕೆಗೆ ಕಳಿಸಿದನು, ದೇವ,ಗಂಧರ್ವ

ನಾಗರನ್ನು, ರಾಜರನ್ನು ಗೆದ್ದು ನರಕನಿಂದ ತರಲ್ಪಟ್ಟ, ಎರಡುನೂರು ಯೋಜನದ ಪ್ರದೇಶದ ತುಂಬ ವ್ಯಾಪಿಸಿದ, ಭಂಗಾರ-ರತ್ನಗಳ ರಾಶಿಯನ್ನೂ ದ್ವಾರಕೆಗೆ ಕಳಿಸಿದನು,ನಿಋತಿ ದೇವತೆಯ ಜೊತೆಗೆ ಯುದ್ಧಮಾಡಿ ನರಕನು ಸೆರೆತಂದ ಮಹಾಪರಾಕ್ರಮಿಗಳಾದ ನೈಋತ್ಯಗಣದವರಾದ ಶ್ರೇಷ್ಠ ಸಾತ್ವಿಕ ರಾಕ್ಷಸರಿಂದ ಸಂಪತ್ತನ್ನು ದ್ವಾರಕೆಗೆ ಕಳಿಸಿದನು. ಅಂತ:ಪುರದಲ್ಲಿ ಸುಂದರಿಯರಾದ, ಹದಿನಾರುಸಾವಿರದ ಒಂದುನೂರು ಕನ್ಯೆಯರನ್ನು ಶ್ರೀಕೃಷ್ಣನು ನೋಡಿದನು.ಅವರನ್ನು ನರಕಾಸುರನು ದೇವ ಗಂಧರ್ವರನ್ನು, ರಾಜರನ್ನು ಗೆದ್ದು ತಂದಿದ್ದನು. ಕೆಲವರು ದೇವಕನ್ಯೆಯರು, ಕೆಲವರು ಗಂಧರ್ವಕನ್ಯೆಯರು, ಕೆಲವರು ರಾಜಕನ್ಯೆಯರು ಆಗಿದ್ದರು. ಎಲ್ಲರೂ ರೂಪಶೀಲ ಗುಣವುಳ್ಳವರೂ, ರಜೋದರ್ಶನವಾಗದವರೂ, ಶ್ರೇಷ್ಠವೃತನಿಯಮವುಳ್ಳವರೂ ಆಗಿದ್ದರು. ಇವರೆಲ್ಲ ಮೂಲರೂಪದಲ್ಲಿ ಅಗ್ನಿಪುತ್ರರು. ಶ್ರೀಕೃಷ್ಣನ ಪತ್ನಿಯರಾಗಬೇಕೆಂಬ ಬಯಕೆಯಿಂದ ಸ್ತ್ರೀಯರಾಗಲು ತಪಸ್ಸನ್ನು ಮಾಡಿದರು. ಶ್ರೀ ವಾಯುದೇವರು ತಪಸ್ಸಿನಿಂದ ಸಂತುಷ್ಟರಾಗಿ ಆ ರೀತಿ ವರವನ್ನು ಕೊಟ್ಟರು, ಅವರು ಆ ಪ್ರಕಾರ ಸ್ತ್ರೀಯರಾಗಿ ಬದರಿಗೆ ಹೋಗಿ ಶ್ರೀನಾರಾಯಣದೇವರ ಸೇವೆಯನ್ನು ಮಾಡಿ ಅವರ ಅನುಗ್ರಹದಿಂದ ಅಪ್ಸರಾಸ್ತ್ರೀ ಜನ್ಮವನ್ನು ಪಡೆದು ದೇವ, ಗಂಧರ್ವ, ರಾಜರ ಕನ್ಯೆಯರಾಗಿ ಹುಟ್ಟಿದರು. ಇವರೆಲ್ಲರೂ ಶ್ರೀಕೃಷ್ಣನ ಗುಣಪೂರ್ಣತೆಯನ್ನು ಕೇಳಿ ಅವನನ್ನೇ ಪತಿಯನ್ನಾಗಿ ವರಿಸಿದ್ದರು. ಸ್ವರೂಪದಲ್ಲಿ ಇವರು ಅಜಾನಜ ದೇವತೆಗಳಿಗೆ ಸಮರು, ಈಗ ಶ್ರೀಲಕ್ಷ್ಮೀದೇವಿಯ ಆವೇಶವಿದ್ದುದರಿಂದ ಅವರಿಗಿಂತ ಅಧಿಕರಾಗಿದ್ದರು. ಶ್ರೀಕೃಷ್ಣನು ಇವರೆಲ್ಲರನ್ನು ಮೇಣಗಳಲ್ಲಿ ಹತ್ತಿಸಿ ದ್ವಾರಕೆಗೆ ಕಳಿಸಿದನು. ನರಕಾಸುರನ ವಶದಲ್ಲಿದ್ದ ಇಂದ್ರದೇವರದಾದ, ಎರಡುನೂರು ಯೋಜನ ವಿಸ್ತೃತವಾದ ರತ್ನಗಳಿಂದ ಸಹಿತವಾದ ಪರ್ವತವನ್ನು, ವರುಣದೇವರದಾದ ನಿತ್ಯ ಅಮೃತವನ್ನೇ ಸುರಿಸುವ ಛತ್ರವನ್ನು ಶ್ರೀಕೃಷ್ಣನು ಗರುಡನ ಮೇಲಿಟ್ಟು ತಾನೂ ಸತ್ಯಾ ಸಹಿತನಾಗಿ ಏರಿದನು. ಗರುಡನು ಯಾವ ಶ್ರಮವಿಲ್ಲದೇ ಸ್ವರ್ಗಕ್ಕೆ ಹಾರಿದನು. ಎಲ್ಲ ಲೋಕಪಾಲಕರೂ, ಶಚೀ ಸಹಿತನಾದ ಇಂದ್ರನೂ ಸ್ವಾಗತಮಾಡಿ ಪೂಜಿಸಿದರು, ಇಂದ್ರಗೃಹವನ್ನು ಪ್ರವೇಶಿಸಿ ದೇವಮಾತೆ ಅದಿತಿಗೆ ಕರ್ಣಕುಂಡಲಗಳನ್ನು ಕೊಟ್ಟನು. ಸರ್ವದೇವ ಋಷಿಗಳೂ ಶ್ರೀಕೃಷ್ಣನನ್ನು ನಮಸ್ಕರಿಸಿದರು.

ತನೂಸುರಾವೇಶವಶಾದಜಾನತೀ ಸತ್ಯಾಂ ಚ ಸರ್ವಪ್ರಭವೌ ಜಗತ್ಪ್ರಭೂ ।
ನಿರ್ದೋಷಸೌ ಖ್ಯೈಕತನೂ ಶುಭಾಶಿಷಸ್ತಾಭ್ಯಾಂ ದದೌ ಸಾऽದಿತಿರಾತ್ಮಪುತ್ರವತ್ ॥೧೧೯॥

ಸರ್ವಪ್ರಭವೌ – ಎಲ್ಲ ಜಗತ್ತಿನ ಉತ್ಪತ್ತಿ ಕಾರಣರಾದ, ಜಗತ್ಪ್ರಭೂ – ಜಗತ್ತಿನ ಪಾಲಕರಾದ, ನಿರ್ದೋಷ ಸೌ ಖ್ಯೈಕತನೂ – ನಿರ್ದೋಷ ಆನಂದವೇ ದೇಹವಾಗಿಉಳ್ಳ, ತಂ ಸತ್ಯಾಂ ಚ – ಆ ಶ್ರೀಕೃಷ್ಣನನ್ನು ಮತ್ತೆ ಸತ್ಯಭಾಮಾದೇವಿಯನ್ನು, ಅಸುರಾವೇಶವಶಾತ್ ಅಜಾನತೀ – ಅಸುರಾವೇಶದಿಂದ ತಿಳಿಯದಿರುವ, ಸಾ ಅದಿತಿ: – ಆ ಅದಿತಿದೇವಿಯು, ತಾಭ್ಯಾಂ—ಅವರಿಬ್ಬರಿಗೂ, ಆತ್ಮಪುತ್ರವತ್ = ತನ್ನ ಮಕ್ಕಳಂತೆ, ಶುಭಾಶಿಷಃ – ಶುಭಾಶೀರ್ವಾದಗಳನ್ನು, ದದೌ— ಕೊಟ್ಟಳು. (ಮಾಡಿದಳು) ॥೧೧೯॥

ಅಥೋ ಸದಾನಂದಚಿದಾತ್ಮದೇಹಸ್ಸ ನಂದನೋದ್ಯಾನಮಜೋऽನುರೂಪಯಾ ।
ಅನಂತಶಕ್ತಿಸ್ಸಹ ಸತ್ಯಭಾಮಯಾ ವಿವೇಶ ರಂತುಂ ಪ್ರಿಯಯಾ ऽಖಿಲೇಶ್ವರಃ ॥೧೨೦॥

ಅಥೋ —ಅನಂತರ,ಸದಾನಂದಚಿದಾತ್ಮದೇಹಃ-ನಿರ್ದುಷ್ಟಜ್ಞಾನಾನಂದಾತ್ಮಕದೇಹವುಳ್ಳ, ಅಜಃ — ಉತ್ಪತ್ತಿರಹಿತನಾದ, ಅನಂತಶಕ್ತಿ: – ಅಪರಿಮಿತ ಶಕ್ತಿಯುಳ್ಳ, ಅಖಿಲೇಶ್ವರಃ – ಸರ್ವಜಗನ್ನಿಯಾಮಕನಾದ, ಸ – ಆ ಶ್ರೀಕೃಷ್ಣನು, ಅನುರೂಪಯಾ = ತನ್ನನ್ನು ಅನುಸರಿಸಿಯೇ ಇರುವ, ತನಗೆ ಯೋಗ್ಯಳಾದ, ಪ್ರಿಯಯಾ–ಪ್ರಿಯಪತ್ನಿಯಾದ, ಸತ್ಯಭಾಮಯಾ ಸಹ – ಸತ್ಯಭಾಮಾದೇವಿಯಿಂದ ಕೂಡಿಕೊಂಡು, ರಂತುಂ – ವಿಹರಿಸಲು, ನಂದನೋದ್ಯಾನಂ—ನಂದನವನವನ್ನು, ವಿವೇಶ— ಪ್ರವೇಶಿಸಿದನು. ॥೧೨೦॥

ತಯಾಚ್ಯುತೋ ಽಸೌ ಕನಕಾವದಾತಯಾ ಸುಕುಂಕುಮಾದಿಗ್ಧಪಿಶಂಗವಾಸಸಾ ।
ಪೂರ್ಣೇಂದುಕೋಟ್ಯೌಘಜಯನ್ಮುಖಾಬ್ಜಯಾ ರೇಮೇ ಽಮಿತಾತ್ಮಾ ಜಗದೇಕಸುಂದರಃ ॥೧೨೧॥

ಜಗದೇಕಸುಂದರಃ – ಜಗತ್ತಿನಲ್ಲಿ ಮುಂಖ್ಯಸುಂದರನಾದ, ಅಚ್ಯುತಃ—ಯಾವ ಚ್ಯುತಿಯಿಂದಲೂ ರಹಿತನಾದ, ಅಮಿತಾತ್ಮಾ ಅಸೌ —ಅಪರಿಮಿತ ಸಾಮರ್ಥ್ಯವುಳ್ಳ ಆ ಶ್ರೀಕೃಷ್ಣನು, ಸುಕುಂಕುಮಾದಿಗ್ಧಪಿಶಂಗವಾಸಸಾ—ಕುಂಕುಮಾಲಿಪ್ತವಾದ ಪೀತಾಂಬರವನ್ನು ಧರಿಸಿರುವ, ಪೂರ್ಣೇಂದುಕೋಟ್ಯೌಘಜಯನ್ಮುಖಾಬ್ಜಯಾ—ಕೋಟಿ ಕೋಟಿ ಸಂಖ್ಯಾಕರಾದ ಪೂರ್ಣಚಂದ್ರರ ಸಮೂಹವನ್ನೂ ಕೂಡ ಮೀರಿಸುವ ಸೌಂದರ್ಯವುಳ್ಳ ಮುಖಕಮಲವುಳ್ಳ, ಕನಕಾವದಾತಯಾ—ಭಂಗಾರ ವರ್ಣವುಳ್ಳ, ತಯಾಸಹ—ಆ ಸತ್ಯಭಾಮೆಯಿಂದ ಕೂಡಿಕೊಂಡು, ರೇಮೇ—ವಿಹರಿಸಿದನು. ॥೧೨೧॥

ಸರ್ವರ್ತುನಿತ್ಯೋದಿತಸರ್ವವೈಭವೇ ಸುರತ್ನಚಾಮೀಕರವೃಕ್ಷಸದ್ವನೇ ।
ಸದೈವ ಪೂರ್ಣೇಂದುವಿರಾಜಿತೇ ಹರಿಶ್ಚಚಾರ ದೇವ್ಯಾ ಪವನಾನುಸೇವಿತೇ ೧೨೨॥

ಸರ್ವರ್ತುನಿತ್ಯೋದಿತಸರ್ವವೈಭವೇ — ಎಲ್ಲ ಋತುಗಳಲ್ಲಿ ಯಾವಾಗಲೂ ಸರ್ವಸಂಪತ್ಸಮೃದ್ಧಿಯುಳ್ಳ, ಸದೈವ— ಯಾವಾಗಲೂ, ಪೂರ್ಣೇಂದು ವಿರಾಜಿತೇ – ಪೂರ್ಣಚಂದ್ರನಿಂದ ಶೋಭಿಸುವ, ಪವನಾನುಸೇವಿತೇ – ಸುಖಕರವಾಯುವಿನಿಂದ ಕೂಡಿದ, ಸುರತ್ನಚಾಮೀಕರವೃಕ್ಷಸದ್ವನೇ – ತೇಜಃಪುಂಜರತ್ನಬಂಗಾರಗಳುಳ್ಳ ಶ್ರೇಷ್ಠವೃಕ್ಷಗಳಿಂದ ಕೂಡಿದ ವನದಲ್ಲಿ, ಹರಿಃ – ಶ್ರೀಕೃಷ್ಣನು, ದೇವ್ಯಾ(ಸಹ)-ಸತ್ಯಭಾಮೆಯಿಂದ ಕೂಡಿಕೊಂಡು, ಚಚಾರ—ವಿಹರಿಸುತ್ತಾ ಸಂಚರಿಸಿದನು. ॥೧೨೨॥

ವಿದೋಷಸಂವಿತ್ತನುರತ್ರ ಸತ್ತರುಂ ದದರ್ಶ ಸತ್ಯಾ ಽಮೃತಮಂಥನೋದ್ಭವಮ್ ॥
ಸಾ ಪಾರಿಜಾತಂ ಮಣಿಕಾಂಚನಾತ್ಮಕಂ ಸಮಸ್ತಕಾಮಪ್ರದಮಾರ್ತಿಹಾರಿಣಮ್ ॥೧೨೩॥

ವಿದೋಷಸಂವಿತ್ತನುಃ – ನಿರ್ದಿಷ್ಟಜ್ಞಾನಸ್ವರೂಪಳಾದ, ಸಾ ಸತ್ಯಾ—ಆ ಸತ್ಯಭಾಮಾದೇವಿಯು, ಅಮೃತಮಂಥನೋದ್ಭವಂ— ಅಮೃತಕ್ಕಾಗಿನಡೆದ ಕ್ಷೀರಸಮುದ್ರಮಂಥನಕಾಲದಲ್ಲಿ ಉತ್ಪನ್ನವಾದ, ಮಣಿಕಾಂಚನಾತ್ಮಕಂ—ಕಾಂಚನರತ್ನಯುಕ್ತವಾದ, ಸಮಸ್ತಕಾಮಪ್ರದಂ – ಎಲ್ಲರ ಎಲ್ಲ ಆಭೀಷ್ಟಗಳನ್ನು ಕೊಡತಕ್ಕ. ಆರ್ತಿಹಾರಿಣಂ – ದುಃಖಪರಿಹಾರಕವಾದ, ಪಾರಿಜಾತಂ ಸತ್ತರುಂ—ಪಾರಿಜಾತವೆಂಬ ಶ್ರೇಷ್ಠ(ಕಲ್ಪ)ವೃಕ್ಷವನ್ನು,ಅತ್ರ—ಇಲ್ಲಿ(ಈ ವನದಲ್ಲಿ),ದದರ್ಶ–ನೋಡಿದಳು.॥೧೨೩॥

ದೃಷ್ಟ್ವೈವ ತಂ ಸುಸ್ಮಿತಚಂದ್ರಿಕಾಸ್ಫುರನ್ಮುಖಾರವಿಂದಾಸಿತಲೋಲಲೋಚನಾ ।
ಕಪೋಲ ನಿರ್ಭಾತಚಲತ್ಕುಂಡಲಾ ಜಗಾದ ದೇವಾಧಿಪತಿಂ ಪತಿಂ ಸತೀ ॥೧೨೪॥

ಸುಸ್ಮಿತಚಂದ್ರಿಕಾಸ್ಫುರನ್ಮುಖಾರವಿಂದಾ—ಚಂದ್ರಪ್ರಕಾಶದಂತಿರುವ ಮಂದಹಾಸದಿಂದ ಕೂಡಿದ ಕಮಲದಂತಿರುವ ಮುಖವುಳ್ಳ, ಅಸಿತಲೋಲಲೋಚನಾ—ಕಪ್ಪಾದ, ಚಂಚಲವಾದ ಕಣ್ಣುಗಳುಳ್ಳ, ಕಪೋಲಗಳಿಂದ ಶೋಭಿಸುವ, ಚಂಚಲವಾದ ಶ್ರೇಷ್ಠಕರ್ಣಕುಂಡಲಗಳುಳ್ಳ,ಸತೀ— ಪತಿವ್ರತೆಯಾಡ ಆ ಸತ್ಯಭಾಮಾದೇವಿಯು, ತಂ—ಆ ವೃಕ್ಷವನ್ನು,ದೃಷ್ಟ್ವೈವ—ನೋಡಿಯೇ. ದೇವಾಧಿಪತಿಂ—ಸರ್ವದೇವನಿಯಾಮಕನಾದ, ಪತಿಂ— ತನ್ನಪತಿಯಾದ ಶ್ರೀಕೃಷ್ಣನನ್ನು ಕುರಿತು, ಜಗಾದ—ಹೇಳಿದಳು. ॥೧೨೪॥

ತರುರ್ಜಗಜ್ಜೀವದ ಮೇ ಗೃಹಾಂಕಣೇ ಸಂಸ್ಥಾಪನೀಯೋ೬ ಯಮುಚಿಂತ್ಯ ಪೌರುಷ ।
ಇತೀರಿತಸ್ತಾಂ ಕಲಶೋಪಮಸ್ತನೀಮಾಲಿಂಗ್ಯ ದೇವಸ್ತರುಮುದ್ಬಬರ್ಹ ॥೧೨೫॥

ಜಗಜ್ಜೀವದ – ಜಗತ್ತಿಗೆ ಜೀವನಪ್ರದನಾದ, ಅಚಿಂತ್ಯಪೌರುಷ – ಯಾರಿಂದಲೂ ಮನಸಾವಿಚಾರಿಸಲೂ ಆಶಕ್ಯವಾದ ಪರಾಕ್ರಮವುಳ್ಳ ಶ್ರೀಕೃಷ್ಣನೇ ,ಅಯಂ ತರುಃ — ಈ ಪಾರಿಜಾತವೃಕ್ಷವು,ಮೇ ಗೃಹಾಂಕಣೇ – ನನ್ನ ಮನೆಯಂಗಳದಲ್ಲಿ, ಸಂಸ್ಥಾಪನೀಯಃ –ಒಯ್ದು ಇಡಲ್ಪಡಬೇಕು. (ಎಂದು ಹೇಳಿದಳು ಎಂದು ಹಿಂದಿನ ಶ್ಲೋಕಕ್ಕೆ ಅನ್ವಯ.) ಇತಿ ಈರಿತಃ—ಈ ರೀತಿಯಾಗಿ ಹೇಳಿಸಿಕೊಳ್ಳಲ್ಪಟ್ಟ, ದೇವಃ— ಶ್ರೀಕೃಷ್ಣನು, ಕಲಶೋಪಮಸ್ತನೀಂ ತಾಂ – ಕಲಶಸದೃಶ ಸ್ತನಗಳುಳ್ಳ ಆ ಸತ್ಯಭಾಮೆಯನ್ನ, ಆಲಿಂಗ್ಯ—ಆಲಿಂಗಿಸಿಕೊಂಡು, ತರುಂ – ಆ ವೃಕ್ಷವನ್ನು ಉದ್ಬಬರ್ಹ – ಕೆತ್ತಿದನು ॥೧೨೫॥

ಸ ತೇನ ವೃಕ್ಷೇಣ ಸಹೈವ ಕೇಶವಸ್ತಯಾಚ ದೇವ್ಯಾ೬ರುಹದಗ್ರ್ಯಪೌರುಷಮ್ ।
ಖಗೇಶ್ವರಂ ತಚ್ಚ ನಿಶಮ್ಯ ಶಚ್ಯಾಪ್ರಚೋದಿತೋ ವಾಸವ ಆಗಮತ್ಸುರೈಃ ॥೧೨೬॥

ಸಃ ಕೇಶವಃ – ಆ ಶ್ರೀಕೃಷ್ಣಪರಮಾತ್ಮನು, ತೇನ ವೃಕ್ಷೇಣ ಸಹ ಏವ – ಆ ವೃಕ್ಷದಿಂದ ಕೂಡಿಕೊಂಡೇ ಚ—ಹಾಗೂ, ತಯಾ ದೇವ್ಯಾಸಹ – ಆ ಸತ್ಯಭಾಮಾದೇವಿಯಿಂದ ಕೂಡಿಕೊಂಡು, ಅಗ್ರ್ಯಪೌರುಷಂ ಖಗೇಶ್ವರಂ – ಶ್ರೇಷ್ಠ ಪರಾಕ್ರಮವುಳ್ಳ ಪಕ್ಷಿರಾಜನಾದ ಗರುಡನನ್ನು, ಅರುಹತ್ – ಏರಿದನು. ತತ್ – ಆ ಸುದ್ದಿಯನ್ನು, ನಿಶಮ್ಯ–ಕೇಳಿ, ಶಚ್ಯಾ – ಶಚೀದೇವಿಯಿಂದ, ಪ್ರಚೋದಿತ: ವಾಸವಃ— ಪ್ರೇರಿತನಾದ ಇಂದ್ರದೇವನು, ಸುರೈ: ಸಹ—ದೇವತೆಗಳಿಂದ ಕೂಡಿಕೊಂಡು, ಆಗಮತ್ – ಬಂದನು. ॥೧೨೬॥

ತಾನಾಸುರಾವೇಶಯುತಾನ್ಸುರೇಶ್ವರೇ ಬಲಪ್ರಕಾಶಾಯ ಸಮುದ್ಯತಾನ್ ಸುರಾನ್ ॥
ನ್ಯವಾರಯಚ್ಛಾರ್ಙ್ಗಶರಾಸನಚ್ಯುತೈರ್ಹರಿ ಪ್ರಿಯಾ ಬಾಣವರೈಸ್ಸಮಸ್ತಶಃ ॥೧೨೭॥

ಆಸುರಾವೇಶಯುತಾನ್ —ಅಸುರಾವೇಶದಿಂದ ಕೂಡಿದ, ಸುರಾನ್ —(ಕೆಲವು) ದೇವತೆಗಳನ್ನು, ಚ-ಮತ್ತು ಹರೇಃ—ಶ್ರೀಕೃಷ್ಣನ, ಬಲಪ್ರಕಾಶಾಯ – ಸಾಮರ್ಥ್ಯ ಪ್ರಕಟವಾಡುವದಕ್ಕಾಗಿ, ಸಮುದ್ಯತಾನ್ ಸುರಾನ್ – ಪ್ರವೃತ್ತರಾದ (ಕೆಲವು) ದೇವತೆಗಳನ್ನು, ಹೀಗೆ ಸಮಸ್ತಶಃ—ಎಲ್ಲರನ್ನು, ಹರಿಪ್ರಿಯಾ – ಶ್ರೀಕೃಷ್ಣ ಪತ್ನಿಯಾದ ಸತ್ಯಭಾಮಾದೇವಿಯು, ಶಾರ್ಙ್ಗಶರಾಸನಚ್ಯುತೈಃ— ಶಾರ್ಙ್ಗಧನುಸ್ಸಿನಿಂದ ಬಿಡಲ್ಪಟ್ಟ, ಬಾಣವರೈ :— ಶ್ರೇಷ್ಠ ಬಾಣಗಳಿಂದ. ನ್ಯವಾರಯತ್—ತಡೆದಳು. ॥೧೨೭॥

ನಿರಾಯುಧಂ ವೈಶ್ರವಣಂ ಚಕಾರ ಚಿಕ್ಷೇಪ ಚಾಬ್ಧೌ ಗರುಡೋ ಜಲೇಶ್ವರಮ್ ॥
ಪ್ರಧಾನವಾಯೋಸ್ತನಯಂ ಚ ವಾಯುಂ ಕೋಣಾಧಿಪಂವಹ್ನಿಯಮಾದಿಕಾನಪಿ ॥೧೨೮॥

ವಿಬೋಧ್ಯ ಶಾರ್ಙ್ಗೋತ್ತರವೈಃ ಸ್ವಕಾಂ ತನುಮಾವೇಶಿತಾನಾಮುಸುರೈರಗಾದ್ಧರಿಃ ॥
ತೇ ಬೋಧಿತಾಸ್ತೇನ ರಣಂ ವಿಸೃಜ್ಯ ಯಯುರ್ವಿದಿತ್ವಾ ತಮನಾದಿ ಪೂರುಷಮ್ ॥೧೨೯॥

(ಸಾ – ಆ ಸತ್ಯಭಾಮಾದೇವಿಯು), ವೈಶ್ರವಣಂ – ಕುಬೇರನನ್ನು, ನಿರಾಯುಧಂ ಚಕಾರ – ಆಯುಧಹೀನ

ನನ್ನಾಗಿ ಮಾಡಿದಳು, ಗರುಡಃ – ಗರುಡದೇವರು, ಜಲೇಶ್ವರಂ—ವರುಣನನ್ನು, ಎತ್ತಿ ಮಕರಂ – ಅವನ ವಾಹನವಾದ, ಮಕರವನ್ನೂ ಕೂಡ, ಆಬ್ಧೌ – ಸಮುದ್ರದಲ್ಲಿ, ಚಿಕ್ಷೇಪ – ಒಗೆದನು. ಚ – ಮತ್ತು, ಪ್ರಧಾನವಾಯೋಃ ತನಯಂ – ಮುಖ್ಯಪ್ರಾಣದೇವರ ಮಗನಾದ, ಕೋಣಾಧಿಪಂ—ವಾಯವ್ಯಕೋನ ದಿಕ್ಕಿಗೆ ಅಭಿಮಾನಿಯಾದ ವಾಯುಂ—ವಾಯುವನ್ನು ಕುರಿತು, ವಹ್ನಿಯಮಾದಿಕಾನಪಿ – ಅಗ್ನಿಯಮಾದಿದೇವತೆಗಳನ್ನು ಕುರಿತೂ ಕೂಡ, ಅಸುರೈಃ ಆವೇಶಿತಾನಾಂ – ಅಸುರಾವಿಷ್ಟರಾದ ಇತರ ದೇವತೆಗಳಿಗೂಕೂಡ, ಹರಿಃ – ಶ್ರೀಕೃಷ್ಣಪರಮಾತ್ಮನು, ಶಾಙ್ರ್ಗೋತ್ಥರವೈಃ – ಶಾರ್ಙ್ಗಧನುಸ್ಸಿನಿಂದ ಉಂಟಾದ ಧ್ವನಿಗಳಿಂದ, ಸ್ವಕಾಂ ತನುಂ—ತನ್ನ ಆ ಕೃಷ್ಣ ರೂಪದ ಬಗ್ಗೆ, ವಿಬೋಧ್ಯ – ತಿಳಿಸಿಕೊಟ್ಟು (ತಾನು ಭಗವದವತಾರನು ಎಂಬ ಜ್ಞಾನವನ್ನು ಮಾಡಿಕೊಟ್ಟು.) ಅಗಾತ್—ಹೊರಟನು, ತೈ ನ – ಆ ಶ್ರೀಕೃಷ್ಣಪರಮಾತ್ಮನಿಂದ, ಬೋಧಿತಾಃ ತೇ – ತಿಳಿಸಲ್ಪಟ್ಟ ಆ ದೇವತೆಗಳು, ತಂ ಅನಾದಿಪುರುಷಮ್ ವಿದಿತ್ವಾ – ಆ ಶ್ರೀಕೃಷ್ಣನನ್ನು ಭಗವಂತನನ್ನಾಗಿ ತಿಳಿದು, ರಣಂ ವಿಸೃಜ್ಯ – ಯುದ್ಧವನ್ನು ಬಿಟ್ಟು, ಯಯುಃ – ಹೋದರು. ॥೧೨೮-೧೨೯॥

ಶಿವಂ ಚ ಶಕ್ರಾರ್ಥಮುಪಾಗತಂ ಹರಿರ್ನ್ಯವಾರಯಚ್ಛಾರ್ಙ್ಗ ವಿನಿಸ್ಸೃತೈಃ ಶರೈಃ ॥
ಸವಾಹನೋ ದೂರತರೇ ನಿಪಾತಿತೋ ಗರುತ್ಮತಾ ಶಂಭುರಗಾಚ್ಛರಾಹತಃ ॥೧೩೦॥

ಶಕ್ರಾರ್ಥಂ – ಇಂದ್ರನ ಸಲುವಾಗಿ, ಉಪಾಗತಂ ಶಿವಂ ಚ—ಬಂದ ರುದ್ರದೇವನನ್ನೂ ಕೂಡ, ಹರಿಃ – ಶ್ರೀಕೃಷ್ಣಪರಮಾತ್ಮನು, ಶಾರ್ಙ್ಗ ವಿನಿಸ್ಸೃತೈಃ ಶರೈಃ ನ್ಯವಾರಯತ್ – ಶಾರ್ಙ್ಗಧನುಸ್ಸಿನಿಂದ ಬಿಟ್ಟ ಬಾಣಗಳಿಂದ ತಡೆದನು ಶರಾಹತಃ – ಆ ಬಾಣಗಳಿಂದ ಪೀಡಿತನಾದ, ಸವಾಹನ: ಶಂಭುಃ – ನಂದಿಸವೇತರಾದ ಆ ರುದ್ರದೇವರು, ಗರುತ್ಮತಾ – ಗರುಡದೇವರಿಂದ, ದೂರತರೇ ನಿಪಾತಿತಃ ಸನ್ – ದೂರದಲ್ಲಿ ಒಗೆಯಲ್ಪಟ್ಟವರಾಗಿ, ಅಗಾತ್ - ಹೋದರು. ॥೧೩೦

ವಿದ್ರಾವಿತೇ ಬಾಣಗಣೈಶ್ಚ ಶಾರ್ಙಿಣಾ ಹರೇ ಹರೌ ವಜ್ರಮುವಾಸೃಜದ್ದ್ರುತಮ್ ॥
ಶಕ್ರೋಽಗ್ರಹೀತ್ತಂ ಪ್ರಹಸನ್ ಜನಾರ್ದನಃ ಕರೇಣ ವಾಮೇನ ಸ ಚಾಪಜಗ್ಮಿವಾನ್ ॥೧೩೧॥

ಶಾರ್ಙಿಣಾ—ಶ್ರೀಕೃಷ್ಣನಿಂದ, ಹರೇ – ರುದ್ರದೇವನು, ಬಾಣಗಣೈಃ ಬಾಣ ಸಮೂಹಗಳಿಂದ, ವಿದ್ರಾವಿತೇ-ಸತಿ – ಓಡಿಸಲ್ಪಡುತ್ತಿರಲು, ಶಕ್ರ: – ಇಂದ್ರನು, ದ್ರುತಂ – ಕೂಡಲೇ, ವಜ್ರಂ – ವಜ್ರಾಯುಧವನ್ನು, ಹರೌ – ಶ್ರೀಕೃಷ್ಣನ ಮೇಲೆ, ಅವಾಸೃಜತ್—ಒಗೆದನು. ತಂ - ಆ ವಜ್ರಾಯುಧವನ್ನು, ಜನಾರ್ದನ: – ಶ್ರೀಕೃಷ್ಣನು, ಪ್ರಹಸನ್—ನಗುತ್ತಲೇ, ವಾಮೇನ ಕರೇಣ—ಎಡಗೈಯಿಂದ, ಅಗ್ರಹೀತ್ – ಹಿಡಿದನು. ಸ: ಚ ಆ ಇಂದ್ರದೇವನು, ಅಪಜಗ್ಮಿವಾನ್—ಯುದ್ಧವನ್ನು ಬಿಟ್ಟು ಹೊರಟನು. ॥೧೩೧॥

ಅಪಾಹಸತ್ತಂ ಜಗದೇಕ ಸುಂದರೀ ಹರಿಪ್ರಿಯಾs ಥೋ ಜಗದೇಕಮಾತರಮ್ ॥
ಉವಾಚ ಶಕ್ರೋ ಜಗತಾಂ ಜನಿತ್ರೇ ಪ್ರದರ್ಶಯಾಮೋ ವಯಮಾತ್ಮಶೈಶವಮ್ ॥೧೩೨॥

ತಂ—ಹೀಗತಕ್ಕ ಆ ಇಂದ್ರನನ್ನು, ಜಗದೇಕಸುಂದರೀ ಹರಿಪ್ರಿಯಾ—ಜಗತ್ತಿನಲ್ಲಿ ಮುಂಖ್ಯ ಸುಂದರಸ್ತ್ರೀಯಾದ ಶ್ರೀಲಕ್ಷ್ಮೀ ಅವತಾರಳಾದ, ಶ್ರೀಕೃಷ್ಣ ಪತ್ನಿಯಾದ ಸತ್ಯಭಾಮೆಯು, ಅಪಾಹಸತ್ – ಅಪಹಾಸ ಮಾಡಿದಳು. ಅಥೋ—ನಂತರ, ಶಕ್ರ: – ಇಂದ್ರನು, ಜಗದೇಕಮಾತರಂ – ಜಗನ್ಮಾತೆಯಾದ ಸತ್ಯಭಾಮಾದೇವಿಯನ್ನು ಕುರಿತು, ವಯಂ – ನಾವು, ಜಗತಾಂ ಜನಿತ್ರೇ – ಜಗಜ್ಜನಕನಾದ ಶ್ರೀಕೃಷ್ಣನಿಗೆ, ಆತ್ಮಶೈಶವಂ—ಅವನ ಬಗೆಗಿರುವ ನಮ್ಮ ಬಾಲ್ಯ (ಅಜ್ಞಾನ) ವನ್ನು ಪ್ರದರ್ಶಯಾಮ:—ತೋರಿಸುತ್ತಿದ್ದೇವೆ. ಇತಿ ಎಂದು, ಉವಾಚ – ಹೇಳಿದನು. ॥೧೩೨॥

ಜಗಾಮ ಚಾಥೋ ಶರಣಂ ಜನಾರ್ದನಂ ಸುರೈರ್ವೃತೋ ದೇವಪತಿಃ ಕ್ಷಮಾಪಯನ್ ॥
ಶೃಂಙ್ಗಂ ಚ ದತ್ವಾಮಣಿಪರ್ವತಸ್ಯ ಪ್ರಣಮ್ಯ ದೇವ್ಯಾ ಸಹಿತಂ ಜಗದ್ಗುರುಮ್ ॥೧೩೩॥

ಅಥೋ – ಅನಂತರ, ಸುರೈ: ವೃತಃ – ದೇವತೆಗಳಿಂದ ಕೂಡಿದ, ದೇವಪತಿಃ – ದೇವತೆಗಳ ರಾಜನಾದ ಇಂದ್ರನು, ಕ್ಷಮಾಪಯನ್ ಕ್ಷಮಾಯಾಚನೆ ಮಾಡುವವನಾಗಿ, ದೇವ್ಯಾ ಸಹಿತಂ—ಸತ್ಯಭಾಮಾಸಹಿತನಾದ, ಜಗದ್ಗುರುಂ—ಜಗತ್ತಿಗೆ ಗುರುವಾದ, ಜನಾರ್ದನಂ – ಶ್ರೀಕೃಷ್ಣನನ್ನು, ಪ್ರಣಮ್ಯ – ನಮಸ್ಕರಿಸಿ, ಚ – ಮತ್ತು, ಮಣಿಪರ್ವತಸ್ಯ ಶೃಂಗಂ ದತ್ವಾ – ರತ್ನ ಪರ್ವತದ ಶಿಖರವನ್ನು ಕೊಟ್ಟು, ಶರಣಂ ಜಗಾಮ—ಮೊರೆಹೊಂದಿದನು. ॥೧೩೩॥

ಯಯಾಚಏನಂ ಪರಿರಕ್ಷಣಾಯ ಶಚೀಪತಿಃ ಕೇಶವಮರ್ಜುನಸ್ಯ ॥
ಜಗಾದ ಕೃಷ್ಣೋಽಪಿ ಧರಾತಲಸ್ಥಿತೇ ನ ಮಯ್ಯಮುಂ ಕಶ್ಚನ ಜೇಷ್ಯತೀತಿ ॥೧೩೪॥

ಶಚೀಪತಿಃ—ಶಚೀಪತಿಯಾದ ಇಂದ್ರನು, ಏನಂ ಕೇಶವಂ – ಈ ಶ್ರೀಕೃಷ್ಣನನ್ನು, ಅರ್ಜುನಸ್ಯ ಪರಿರಕ್ಷಣಾಯ – ಅರ್ಜುನನ ರಕ್ಷಣೆ ಮಾಡುವದಕ್ಕಾಗಿ, ಯಯಾಚೇ – ಪ್ರಾರ್ಥಿಸಿದನು, ಕೃಷ್ಣಃಅಪಿ—ಶ್ರೀಕೃಷ್ಣನೂಕೂಡ, ಮಯಿ—ನಾನು, ಧರಾತಲಸ್ಥಿತೇಸತಿ – ಭೂಮಿಯಲ್ಲಿ ಇರುತ್ತಿರಲು, ಕಶ್ಚನ—ಯಾವನೂ, ಅಮುಂ—ಆ ಅರ್ಜುನನನ್ನು, ನ ಜೇಷ್ಯತಿ – ಗೆಲ್ಲುವದಿಲ್ಲ, ಇತಿ – ಎಂದು, ಜಗಾದ—ಹೇಳಿದನು. ॥೧೩೪॥

ಭಾವಾನುವಾದ ;೧೧೯–೧೩೪ ಅಸುರಾವೇಶ ಯುಕ್ತಳಾದ ಅದಿತಿದೇವಿಯು ಶ್ರೀಕೃಷ್ಣಸತ್ಯಭಾಮಾದೇವಿಯರನ್ನು ಜಗತ್ಪಾಲಕರಾದ, ನಿರ್ದೋಷರಾದ ಶ್ರೀನಾರಾಯಣ ಲಕ್ಷ್ಮೀದೇವಿಯರ ಅವತಾರರನ್ನಾಗಿ ತಿಳಿಯದೇ ತನ್ನ ಮಕ್ಕಳಿಗೆ ಆಶೀರ್ವದಿಸುವಂತೆ ಆಶೀರ್ವದಿಸಿದಳು. ನಂತರ ಶ್ರೀಕೃಷ್ಣನು ಸತ್ಯಭಾಮಾಸಹಿತನಾಗಿ ವಿಹರಿಸುವದಕ್ಕಾಗಿ ಎಂಬಂತೆ ನಂದನವನಕ್ಕೆ ಹೋದನು. ಸರ್ವವೈಭವ ಸುಖಪೂರ್ಣವಾದ ಆ ವನದಲ್ಲಿ ಜಗದೇಕಸುಂದರನಾದ ಶ್ರೀಕೃಷ್ಣನು ಜಗದೇಕ ಸುಂದರಿ ಶ್ರೀಸತ್ಯಾಳಿಂದ ಕೂಡಿಕೊಂಡು ವಿಹರಿಸುತ್ತಾ ಸಂಚರಿಸಿದನು. ಅಜ್ಞಾನ ಲೋಭ ಮೊದಲಾದ ದೋಷರಹಿತಳಾದ ಶ್ರೀಸತ್ಯಭಾಮಾದೇವಿಯು ಸರ್ವಅಭೀಷ್ಟಪ್ರದವಾದ, ದುಃಖ ಪರಿಹಾರಕವಾದ ಪಾರಿಜಾತ ವೃಕ್ಷವನ್ನು ನೋಡಿ ಇದನ್ನು ತನ್ನ ಮನೆಯಂಗಳದಲ್ಲಿ ಇಡಬೇಕು ಎಂದು ಶ್ರೀಕೃಷ್ಣನನ್ನು ಕೇಳಿದಳು. ಆಗ ಶ್ರೀಕೃಷ್ಣನು ಅವಳನ್ನು ಆಲಿಂಗಿಸಿ ಪಾರಿಜಾತ ವೃಕ್ಷವನ್ನು ಕೆತ್ತಿ ಗರುಡನ ಮೇಲಿಟ್ಟು ಪತ್ನೀ ಸಹಿತನಾಗಿ ಏರಿದನು. ಈ ವಾರ್ತೆಯನ್ನು ಕೇಳಿದ ಶಚೀದೇವಿಯ ಪ್ರೇರಣೆಯಂತೆ ಇಂದ್ರನು ಇತರ ದೇವತೆಗಳಿಂದ ಸಹಿತನಾಗಿ ಅಜ್ಞಾನ ಅಸುರಾವೇಶಗಳಿಂದ ಯುದ್ಧಕ್ಕೆ ಬಂದನು. ಆಗ ಶ್ರೀಸತ್ಯಭಾಮಾದೇವಿಯು ಸ್ವತಃ ಶಾರ್ಙ್ಗಧನುಸ್ಸನ್ನು ತೆಗೆದುಕೊಂಡು ಬಾಣಗಳನ್ನು ಬಿಟ್ಟು ಎಲ್ಲರನ್ನು ಎದುರಿಸಿ ಕುಬೇರನನ್ನು ನಿರಾಯಧನನ್ನಾಗಿ ಮಾಡಿದಳು. ಗರುಡದೇವರು ವರುಣನನ್ನು ಅವನ ವಾಹನ ಮಕರವನ್ನೂ ಸಮುದ್ರದಲ್ಲಿ ಬೀಸಾಡಿದರು. ಶ್ರೀಕೃಷ್ಣನು ಬಾಣಗಳನ್ನು ಮೆಲ್ಲನೇ (ನಾಟಿದರೂ ಕೂಡ ಅಪಾಯವಾಗದಂತೆ) ಬಿಟ್ಟು, ಶಾರ್ಙ್ಗಧನುಸ್ಸಿನ ಜ್ಯಾದಿಂದ ಟೇಂಕಾರವನ್ನು ಜೋರಾಗಿ ಮಾಡಿ, ಅದರಿಂದ ತನ್ನಬಗ್ಗೆ (ಇವನು ಸಾಕ್ಷಾತ್ ಭಗವದವತಾರನು ಎಂಬ) ಜ್ಞಾನವು ಅಗ್ನಿ, ಯಮ, ಪ್ರವಹವಾಯು ಇತ್ಯಾದಿ ಎಲ್ಲ ದೇವತೆಗಳಿಗೆ ಬರುವಂತೆ ಮಾಡಿದನು. ಅವರು ಹಾಗೆ ತಿಳಿದು ಯುದ್ಧಬಿಟ್ಟು ಹೋದರು. ಇಂದ್ರನ ಸಹಾಯಕ್ಕಾಗಿ ಬಂದ ರುದ್ರದೇವರನ್ನೂ ಕೂಡ ಶ್ರೀಕೃಷ್ಣನು ಬಾಣಗಳಿಂದ ಪೀಡಿಸಿದನು. ಗರುಡದೇವರು ಅವರನ್ನು ನಂದಿಸಹಿತವಾಗಿ ದೂರಕ್ಕೆಸೆದರು. ಶ್ರೀಕೃಷ್ಣ ಬಾಣ ಪೀಡಿತರಾದ ಅವರೂ ಹೋದರು. ಆಗ ಇಂದ್ರನು ತನ್ನವಜ್ರಾಯುಧವನ್ನು ಶ್ರೀಕೃಷ್ಣನ ಮೇಲೆ ಒಗೆದಾಗ ಅದನ್ನು ಶ್ರೀಕೃಷ್ಣ ಪರಮಾತ್ಮನು ನಗುತ್ತಾ ಎಡಗೈಯಿಂದಲೇ ಹಿಡಿದನು. ಆಗ ಇಂದ್ರನು ಯುದ್ಧ ಬಿಟ್ಟು ಹೊರಟನು. ಆಗ ಸತ್ಯಭಾಮಾದೇವಿಯು ಅಪಹಾಸ ಮಾಡಿದಳು. ಆಗ ಅಸುರಾವೇಶ ಅಜ್ಞಾನಗಳಿಂದ ರಹಿತನಾದ ಇಂದ್ರನು ನಾವು ಜಗಜ್ಜನಕನಾದ ಶ್ರೀಕೃಷ್ಣನ ಅಜ್ಞಾನದಿಂದ ಅವನೆದರು ಇಂಥ ಮೂರ್ಖತನದ ಕೆಲಸಗಳನ್ನು ಮಾಡಿದ್ದೇವೆ ಎಂದು

ಹೇಳಿ ಜಗಜ್ಜನನೀಜನಕರ ಎದುರು ಮಣಿಪರ್ವತದ ಶೃಂಗವನ್ನು ಇಟ್ಟು ಸರ್ವ ದೇವತೆಗಳಿಂದ ಸಹಿತನಾಗಿ ಭಕ್ತಪೂರ್ವಕ ನಮಸ್ಕರಿಸಿ, ಕ್ಷಮೆ ಕೇಳಿ ರಕ್ಷಿಸಬೇಕೆಂದು ಪ್ರಾರ್ಥಿಸಿದನು. ಅರ್ಜುನನ ರಕ್ಷಣೆ ಮಾಡಲೂ ಕೇಳಿದನು. ಆಗ ಶ್ರೀಕೃಷ್ಣನು ನಾನು ಭೂಮಿಯಲ್ಲಿರುವಾಗ ಅರ್ಜುನನನ್ನು ಯಾರೂ ಗೆಲ್ಲಲಾರರು ಎಂದು ಹೇಳಿದನು.

ತಮರ್ಜುನಾರ್ಥಂ ವರಮಾಪ್ಯ ವಾಸವಃ ಪುನಃ ಪುನಶ್ಚಕ್ರಧರಂ ಪ್ರಣಮ್ಯ ॥
ಪ್ರಸನ್ನದೃಷ್ಟ್ಯಾ ಹರಿಣಾಽಭಿವೀಕ್ಷಿತೋ ಯಯೌ ಮಹಾಭಾಗವತಃ ಸ್ವಮಾಲಯಮ್ ॥೧೩೫॥

ಮಹಾಭಾಗವತಃ ವಾಸವಃ – ಮಹಾಭಗವದ್ಭಕ್ತನಾದ ಇಂದ್ರನು, ಅರ್ಜುನಾರ್ಥಂ—ಅರ್ಜುನನ ಸಲುವಾಗಿ, ತಂ ವರಂ ಆಪ್ಯ – ಆ ವರವನ್ನು ಹೊಂದಿ, ಪುನಃ ಪುನಃ – ಮೇಲಿಂದಮೇಲೆ, ಚಕ್ರಧರಂ—ಸುದರ್ಶನ ಚಕ್ರಧಾರಿಯಾದ ಶ್ರೀಕೃಷ್ಣನನ್ನು, ಪ್ರಣಮ್ಯ – ನಮಸ್ಕರಿಸಿ, ಹರಿಣಾ – ಶ್ರೀಕೃಷ್ಣನಿಂದ, ಪ್ರಸನ್ನದೃಷ್ಟ್ಯಾ—ಅನುಗ್ರಹಪೂರ್ಣ ದೃಷ್ಟಿಯಿಂದ, ಅಭಿವೀಕ್ಷಿತಃ ಸನ್—ನೋಡಿಸಿಕೊಳ್ಳಲ್ಪಟ್ಟವನಾಗಿ, ಸ್ವ ಆಲಯಂ – ತನ್ನ ಗೃಹಕ್ಕೆ, ಯಯೌ —ಹೋದನು. ॥೧೩೫॥

ಕೃಷ್ಣೋಽಪ್ಯನುಜ್ಞಾಪ್ಯ ಪುರಂದರಂ ಪುರೀಂ ನಿಜಾಂ ವ್ಯಜನ್ನಭ್ಯಧಿಕಂ ವ್ಯರೋಚತ ॥
ಕೀರಿಟಧಾರೀ ವರಕುಂಡಲೋಲ್ಲಸನ್ಮುಖಾಂಬುಜಃ ಪೀತಪಟಿಸ್ಸಕೌಸ್ತುಭಃ ॥೧೩೬॥

ಪುರಂದರಂ ಅನುಜ್ಞಾಪ್ಯ—ಇಂದ್ರನಿಗೆ ಹೋಗಲು ಅನುಮತಿಸಿ, ನಿಜಾಂ ಪುರೀಂ – ತನ್ನ ದ್ವಾರಕೆಗೆ, ವ್ಯಜನ್-ಹೊರಟಂಥ, ಕೀರಿಟಧಾರೀ – ಕಿರೀಟವನ್ನು ಧರಿಸಿದಂಥ, ವರಕುಂಡಲೋಲ್ಲಸನ್ಮುಖಾಂಬುಜಃ—ಶ್ರೇಷ್ಠವಾದ ಕರ್ಣಕುಂಡಲಗಳಿಂದ ಶೋಭಿಸುವ, ಕಮಲದಂತಿರುವ ಮುಖವುಳ್ಳ, ಪೀತಪಟಃ – ಪೀತಾಂಬರಧಾರಿಯಾದ, ಸಕೌಸ್ತುಭಃ—ಕೌಸ್ತುಭ ಮಣಿಯಿಂದ ಕೂಡಿದ, ಕೃಷ್ಣಃ – ಶ್ರೀಕೃಷ್ಣನು, ಅಭ್ಯಧಿಕಂ ವ್ಯರೋಚತ—ಹೆಚ್ಚಾಗಿ ಶೋಭಿಸಿದನು. ॥೧೩೬॥

ಅವತಾರಿಕೆ—ಈಗ ಹೆಚ್ಚಾಗಿ ಶೋಭಿಸಿದನು ಎಂದು ಹೇಳಿದಾಗ, ಈ ಮೊದಲು ಶೋಭಿಸುತ್ತಿದ್ದಿಲ್ಲ ಎಂದ ಅರ್ಥವಾಗುವದು. ಆದ್ದರಿಂದ ಅದರ ಅಭಿಪ್ರಾಯವನ್ನು ತಿಳಿಸುತ್ತಾರೆ.–

ವಿರೋಚಮಾನಸ್ಯ ಸದಾ ಜಗತ್ಪ್ರಭೋರ್ನ ವೈ ವಿಶೇಷಃ ಕ್ವಚಿದಚ್ಯುತಸ್ಯ ॥
ತಥಾಪಿ ತತ್ ಸ್ಮಾರಯಿತುಂ ವಚೋ ಭವೇದಪೇಕ್ಷ್ಯಾಲ್ಪಜ್ಞಮತಿಂ ಪುರಾಣಗಮ್ ॥೧೩೭॥

ಸದಾ ವಿರೋಚಮಾನಸ್ಯ – ಯಾವಾಗಲೂ ಒಂದೇತರಹ ಶೋಭಿಸುವ, ಜಗತ್ಪ್ರಭೋಃ—ಜಗತ್ಪ್ರಭುವಿಯಾದ, ಅಚ್ಯುತಸ್ಯ—ಶ್ರೀಕೃಷ್ಣನಿಗೆ, ಕ್ವಚಿತ್—ಯಾವದೇ ಸಂದರ್ಭದಲ್ಲಿಯೂ, ವಿಶೇಷಃ—ಹೆಚ್ಚು ಕಡಿಮೆ ಇತ್ಯಾದಿ ವ್ಯತಾಸವು, ನ ವೈ—ಇಲ್ಲವೇ ಇಲ್ಲ. ತಥಾಪಿ—ಹಾಗಾದರೂಕೂಡ, ಪುರಾಣಗಂ ವಚಃ—ಪುರಾಣಾದಿಗ್ರಂಥಗಳಲ್ಲಿ ಬರುವ ಆಯಾಕಾಲದಲ್ಲಿ ಹೆಚ್ಚು ಶೊಭಿಸಿದನು ಎಂಬ ಮಾತು, ಅಲ್ಪಜ್ಞಮತಿಂ ಅಪೇಕ್ಷ್ಯ—ಅಲ್ಪ ಜನರ ತಿಳಿವಳಿಕೆಯನ್ನು ಅನುಸರಿಸಿ, ಅಥವಾ, ತತ್—ಭಗವಂತನು ಸದಾಶೋಭಾಪೂರ್ಣನಾದವನು ಎಂಬುದನ್ನು, ಸ್ಮಾರಯಿತುಂ-ನೆನಪಿಸಿಕೊಡುವದಕ್ಕಾಗಿ, ಭವೇತ್-ಇರುತ್ತದೆ. ॥೧೩೭॥

ಪ್ರವಿಶ್ಯ ಚೇಶಃ ಸ್ವಪುರೀಂ ಸ ಯಾದವೈಸ್ಸುಪೂಜಿತೋಽಂತಃ ಪುರಮೇತ್ಯ ಚಾಂಕಣೇ ॥
ತರುಂ ಪ್ರಿಯಾಯಾ ನ್ಯದಧಾದ್ಗೃಹಸ್ಯ ಸಹೈವ ಶೃಂಗೇಣ ಚ ರತ್ನಸದ್ಮನೇಃ ॥೧೩೮॥

ಈಶಃ ಸಃ—ಸರ್ವಜಗನ್ನಿಯಾಮಕನಾದ ಆ ಶ್ರೀಕೃಷ್ಣನು, ಸ್ವಪುರೀಂ—ತನ್ನ ದ್ವಾರಕೆಯನ್ನು, ಪ್ರವಿಶ್ಯ—ಪ್ರವೇಶಿಸಿ, ಯಾದವೈ: ಸುಪೂಜಿತ: ಸನ್—ಯಾದವರಿಂದ ಪೂಜಿತನಾಗಿ, ಅಂತಃ ಪುರಂ ಏತ್ಯ—ಅಂತಃಪುರಕ್ಕೆ ಹೋಗಿ ಪ್ರಿಯಾಯಾಃ ಗೃಹಸ್ಯ ಅಂಕಣೇ—ಶ್ರೀಸತ್ಯಭಾಮಾದೇವಿಯ ಮನೆಯ ಅಂಗಳದಲ್ಲಿ, ತರುಂ—ಪಾರಿಜಾತ ವೃಕ್ಷವನ್ನು, ರತ್ನಸದ್ಗಿರೇ: ಶೃಂಗೇಣ ಸಹೈವ—ಮಣಿ ಪರ್ವತದ ಶಿಖರ ಸಹಿತವಾಗಿಯೇ, ನ್ಯದಧಾತ್—ಇಟ್ಟನು. ॥೧೩೮॥

ಪ್ರದಾಯ ರತ್ನಾನಿ ಚ ಸರ್ವಸಾತ್ತ್ವತಾಂ ಯಥೇಷ್ಟತಸ್ತಾ ಅಪಿ ಕನ್ಯಕಾಃ ಪ್ರಭುಃ ॥
ಉದ್ವಾಹ್ಯ ರೇಮೇ ಪೃಥಗೇವ ರತ್ನಪ್ರಾಸಾದಸಂಸ್ಥಾಭಿರನಂತರೂಪಃ ॥೧೩೯॥

ಅನಂತರೂಪಃ—ಅನಂತರೂಪಉಳ್ಳ, ಪ್ರಭು:—ಸಮರ್ಥನಾದ ಶ್ರೀಕೃಷ್ಣನು, ಸರ್ವಸಾತ್ವತಾಂ—ಎಲ್ಲ ಯಾದವರಿಗೆ, ರತ್ನಾನಿ—ರತ್ನಗಳನ್ನು, ಯಥೇಷ್ಟತ:—ಅವರಿಗೆ ಬೇಕಾದಷ್ಟು, ಪ್ರದಾಯ—ಕೊಟ್ಟು, ತಾಃ ಕನ್ಯಕಾಃ ಅಪಿ ನರಕನ ಊರಿನಿಂದ ತಂದ ರಾಜ ಕನ್ಯೆಯರನ್ನೂ ಕೂಡ, ಉದ್ವಾಹ್ಯ—ವಿವಾಹ ಮಾಡಿಕೊಂಡು, ಪ್ರಥಕ್ ಏವ ರತ್ನ ಪ್ರಾಸಾದ ಸಂಸ್ಥಾಭಿಃ—ಬೇರೆ ಬೇರೆ ರತ್ನ ಖಚಿತ ಗೃಹಗಳಲ್ಲಿರುವ ಅವರಿಂದ, ರೇಮೇ—ವಿಹರಿಸಿದನು, ॥೧೩೯॥

ಪೃಥಕ್ ಪೃಥಕ್ತಾಸು ದಶೈವ ಪುತ್ರಕಾನಧತ್ತ ಕನ್ಯಾಮಪಿ ಸರ್ವಶಃ ಪ್ರಭುಃ ॥
ಪ್ರದ್ಯುಮ್ನಸಾಂಬಾವಪಿ ಭಾನುಚಾರುದೇಷ್ಣೌ ಚ ತೇಷಾಂ ನಿತರಾಂ ಗುಣಾಧಿಕೌ ॥೧೪೦॥

ಪ್ರಭು:—ಸಮರ್ಥನಾದ ಶ್ರೀಕೃಷ್ಣನು, ಸರ್ವಶ: ತಾಸು—ಅವರೆಲ್ಲರಲ್ಲಿ, ಪೃಥಕ್ ಪೃಥಕ್—ಪ್ರತ್ಯೇಕ ಪ್ರತ್ಯೇಕವಾಗಿ, ದಶಪುತ್ರಕಾನ್ ಏವ-ಹತ್ತು ಪುತ್ರರನ್ನೇ, ಕನ್ಯಾಮಪಿ-ಒಂದು ಒಂದು ಮಗಳನ್ನೂ ಕೂಡ, ಅಧತ್ತ—ಪಡೆದನು, ತೇಷಾಂ ಮಧ್ಯೇ-ಅವರೆಲ್ಲರನಡುವೆ, ಪ್ರದ್ಯುಮ್ನಸಾಂಬೌ—ಪ್ರದ್ಯುಮ್ನ ಹಾಗೂ ಸಾಂಬರು, ಅಪಿ—ಮತ್ತು, ಭಾನುಚಾರುದೇಷ್ಣೌ—ಭಾನು ಹಾಗು ಚಾರುದೇಷ್ಣರು, ನಿತರಾಂ ಗುಣಾಧಿಕೌ—ಉಳಿದವರಿಗಿಂತ ಹೆಚ್ಚು ಗುಣಗಳಿಂದ ಶ್ರೇಷ್ಠರು. ॥೧೪೦॥

ವಿವಸ್ವತೋ ಯೋಽವರಜೋಽದಿತೇಸ್ಸುತಃ ಖ್ಯಾತಶ್ಚ ನಾಮ್ನಾ ಸವಿತೇತಿ ಕೃಷ್ಣಾತ್ ॥
ಜಾತಸ್ಸ ಸತ್ಯಾಜಠರೇಽತ್ರ ನಾಮ್ನಾ ಭಾನುಸ್ತು ಭೈಷ್ಮ್ಯಾ ಅಪಿ ಚಾರುದೇಷ್ಣಃ ॥೧೪೧॥

ಯಃ—ಯಾವನು, ಅದಿತೇ: ಸುತ:—ಅದಿತಿದೇವಿಯ ಮಗನಾದ, ವಿವಸ್ವತ: ಅವರಜ:—ವಿವಸ್ವಾನ್ ಎಂಬ ಸೂರ್ಯನ ತಮ್ಮನಾದ, ಸವಿತಾ ಇತಿ ನಾಮ್ನಾ ಖ್ಯಾತಃ—ಸವಿತಾ ಎಂಬ ಹೆಸರಿನಿಂದ ಪ್ರಸಿದ್ಧನಾದವನೋ, ಸ:—ಅವನು, ಅತ್ರ—ಈ ಭೂಮಿಯಲ್ಲಿ, ಸತ್ಯಾಜಠರೇ—ಸತ್ಯಭಾಮಾದೇವಿಯ ಉದರದಲ್ಲಿ, ಭಾನುಃ ಇತಿ ನಾಮ್ನಾಜಾತ:—ಭಾನು ಎಂಬ, ಹೆಸರಿನಿಂದ ಹುಟ್ಟಿದನು, ಚಾರುದೇಷ್ಣ: ಅಪಿ—ಚಾರುದೇಷ್ಣನೂ ಕೂಡ, ಭೈಷ್ಮ್ಯಾತು ರುಕ್ಮಣೀದೇವಿಯಿಂದಲೇ, ಜಾತಃ—ಹುಟ್ಟಿದನು. ॥೧೪೧॥

ಸ ಚಾರುದೇಷ್ಣೋಽಪಿ ಹಿ ವಿಘ್ನರಾಜೋ ಯೋಽನ್ಯೇಚ ಕೃಷ್ಣಸ್ಯ ಸುತಾಸ್ಸಮಸ್ತಾಃ ॥
ತೇ ಚೈವ ಗೀರ್ವಾಣಗಣಾಸ್ತಥಾಽನ್ಯೇ ಯೇ ದ್ವಾರಕಾಯಾಂ ನಿವಸಂತಿ ಸರ್ವೇ ॥೧೪೨॥

ಸಃಚಾರುದೇಷ್ಣ: ಅಪಿ—ಆ ಚಾರುದೇಷ್ಣನೂ ಕೂಡ, ವಿಘ್ನರಾಜಃಹಿ—ಗಣಪತಿಯ ಅವತಾರನೇ, ಚ—ಮತ್ತು

ಯೇ ಅನ್ಯೇ—ಬೆರೇಯಾವ, ಕೃಷ್ಣಸುತಾ: – ಶ್ರೀಕೃಷ್ಣನ ಮಕ್ಕಳೋ, ತೇ ಸಮಸ್ತಾ: – ಅವರೆಲ್ಲರೂ, ತಥಾ – ಹಾಗು, ಯೇ – ಯಾರು, ದ್ವಾರಕಾಯಾಂ – ದ್ವಾರಕೆಯಲ್ಲಿ, ನಿವಸಂತಿ – ವಾಸಿಸುತ್ತಿದ್ದರೋ, ತೇ ಚ—ಅವರೂಕೂಡ, ಗೀರ್ವಾಣಗಣಾ:ಏವ—ದೇವತೆಗಳೇ. ॥೧೪೨॥

ತಸ್ಯಾಂ ಸಮಸ್ತೈರಭಿಪೂಜ್ಯಮಾನೇ ದೇವೇ ಸ್ವಪುರ್ಯಾಂ ನಿವಸತ್ಯನಂತೇ ॥
ಯಯೌ ಕದಾಚಿತ್ಸ ತು ರೌಕ್ಮಿಣೇಯಃ ಸಾಂಬೇನ ಸಾಕಂ ಭುಜಗೇಂದ್ರಲೋಕಮ್ ॥೧೪೩॥

ದೇವೇ – ಕ್ರೀಡಾದಿ ಗುಣ ವಿಶಿಷ್ಟನಾದ, ಸಮಸ್ತೈಃ ಅಭಿಪೂಜ್ಯಮಾನೇ – ಎಲ್ಲರಿಂದ ಪೂಜಿತನಾದ, ಅನಂತೇ–ಶ್ರೀಕೃಷ್ಣನು, ತಸ್ಯಾಂ – ದ್ವಾರಕೆಯಲ್ಲಿ, ನಿವಸತಿ ಸತಿ ವಾಸಮಾಡಿರಲು, ಸ: ರೌಕ್ಮಿಣೇಯ:—ರುಕ್ಮಿಣೀ ಪುತ್ರನಾದ ಆ ಪ್ರದ್ಯುಮ್ನನು, ಕದಾಚಿತ್ – ಒಮ್ಮೆ, ಸಾಂಬೇನ ಸಾಕಂ – ಸಾಂಬನಿಂದ ಕೂಡಿಕೊಂಡು, ಭುಜಗೇಂದ್ರಲೋಕಂ – ನಾಗ ಲೋಕವನ್ನು ಕುರಿತು, ಯಯೌ – ಹೋದನು. ॥೧೪೩॥

ಆಜ್ಞಾನತಸ್ತೈರಭಿಯೋಧಿತಸ್ಯ ಜಿಗಾಯ ಸರ್ವಾನಪಿ ವಾಸುಕಿಂ ಚ ॥
ವಿದ್ರಾವ್ಯ ಬಾಣೈರಥ ರತ್ನಸಂಚಯಾನ್ ಸಮಾದದೇ ನೇಮುರಮುಂ ತತಸ್ತೇ ॥೧೪೪॥

ತೈಃ—ಆ ನಾಗಗಳಿಂದ, ಅಜ್ಞಾನತ: – ಅಜ್ಞಾನದಿಂದ. ಅಭಿಯೋಧಿತ: – ಯುದ್ಧಕ್ಕಾಗಿ ಕರೆಯಲ್ಪಟ್ಟ, ಸ:—ಆ ಪ್ರದ್ಯುಮ್ನನು, ಸರ್ವಾನ್ ಅಪಿ—ಎಲ್ಲರನ್ನೂ ಕೂಡ, ಚ—ಮತ್ತು, ವಾಸುಕಿಂ – ವಾಸುಕಿಯನ್ನು, ಜಿಗಾಯ – ಗೆದ್ದನು, ಅಥ – ಅನಂತರ, ಭಾಣೈ:ವಿದ್ರಾವ್ಯ—ಅವರನ್ನೆಲ್ಲ ಬಾಣಗಳಿಂದ ಓಡಿಸಿ, ರತ್ನಸಂಚಯಾನ್ – ರತ್ನ ಸಮೂಹಗಳನ್ನು, ಸಮಾದದೇ – ತೆಗೆದು ಕೊಂಡನು, ತತ: – ಅನಂತರ, ತೇ—ಅವರು, ಅಮುಂ—ಆ ಪ್ರದ್ಯುಮ್ನನನ್ನು, ನೇಮು:—ನಮಸ್ಕರಿಸಿದರು. ॥೧೪೪॥

ತೈಃ ಪೂಜಿತಸಾಂಬಸಹಾಯ ಆಶು ಮಯಂಚ ಮಾಯಾವಿನಮಸ್ತ್ರವರ್ಷೈಃ ॥
ವಿಜಿತ್ಯ ರುಂಧಾನಮನೇನ ಪೂಜಿತೋ ಯಯೌ ರಥೇನಾಂಬರಗೇನ ನಾಕಮ್ ॥೧೪೫॥

ತೈ: – ಆ ನಾಗಗಳಿಂದ, ಪೂಜಿತಃ—ಪೂಜಿಸಲ್ಪಟ್ಟ, ಸಾಂಬಸಹಾಯ: – ಸಾಂಬನಿಂದ ಕೂಡಿದ ಆ ಪ್ರದ್ಯುಮ್ನನು ಆಶು – ಬೇಗನೇ, ರುಂಧಾನಂ – ತಡೆಯುತಕ್ಕ, ಮಾಯಾವಿನಂ ಮಯಂ ಚ—ಮಾಯಾವಿಯಾದ ಮಯನನ್ನೂ ಕೂಡ, ವಿಜಿತ್ಯ—ಗೆದ್ದು, ಅನೇನ—ಈ ಮಯನಿಂದಲೂ, ಪೂಜಿತ:ಸನ್—ಪೂಜಿಸಲ್ಪಟ್ಟವನಾಗಿ, ಅಂಬರಗೇನ ರಥೇನ—ಆಕಾಶದಲ್ಲಿ ಪ್ರಯಾಣಿಸುವ ರಥದಿಂದ, ನಾಕಮ್ ಯಯೌ—ಸ್ವರ್ಗಕ್ಕೆ ಹೋದನು. ॥೧೪೫॥

ತತ್ರೈವ ಕೃಷ್ಣೇನ ತು ಪಾರಿಜಾತೇ ಹೃತೇ ಜಯಂತಂ ಪ್ರಜಿಗಾಯ ಚಾಜೌ ॥
ಸಂಸ್ಪರ್ಧಯಾಯಾತ ಮನುಷ್ಯ ಚಾನುಜಂ ಸಾಂಬೋऽಜಯದ್ವೃಷಭಂ ನಾಮ ಶಸ್ತ್ರೈಃ ॥೧೪೬॥

ಕೃಷ್ಣೇನ ಪಾರಿಜಾತೇ ಹೃತೇ—ಶ್ರೀಕೃಷ್ಣನಿಂದ ಪಾರಿಜಾತ ವೃಕ್ಷವು ಒಯ್ಯಲ್ಪಡುತ್ತಿರಲು, ಸಂಸ್ಪರ್ಧಯಾ—ಅದರ ಸ್ಪರ್ಧೆಯಿಂದ, ಆಯಾತಂ—ಯುದ್ಧಕ್ಕೆ ಬಂದಿರುವ, ಜಯಂತಂ—ಜಯಂತನನ್ನು, ತತ್ರೈವ – ಆದೇ ಸಮಯದಲ್ಲಿ, ಆಜೌ – ಯುದ್ಧದಲ್ಲಿ, ಪ್ರಜಿಗಾಯ – ಪ್ರದ್ಯುಮ್ನನು ಗೆದ್ದನು. ಅಮುಷ್ಯ – ಆ ಜಯಂತನ, ಅನುಜಂ—ತಮ್ಮನಾದ,

ವೃಷಭಂ ನಾಮ — ವೃಷಭನೆಂಬವನನ್ನು, ಸಾಂಬ:—ಸಾಂಬನು, ಶಸ್ತ್ರೈ:—ಆಯುಧಗಳಿಂದ, ಅಜಯತ್ — ಗೆದ್ದನು. ॥೧೪೬॥

ಅಸ್ತ್ರಾಣಿ ತಾವಸ್ತ್ರವರೈರ್ನಿಹತ್ಯ ತಯೋಶ್ಚ ತಾಭ್ಯಾಂ ಪ್ರತಿದಗ್ಧಯಾನೌ ॥
ವಿದ್ರಾವ್ಯ ತೌ ಬಾಣವರೈಸ್ಸುರೇಂದ್ರಸಂಪೂಜಿತೌ ಯಯತುರ್ವಿದ್ಯಯಾ ಖೇ ॥೧೪೭॥

ತೌ — ಆ ಪ್ರದ್ಯುಮ್ನಸಾಂಬರು, ಅಸ್ತ್ರವರೈಃ— ತಮ್ಮ ಶ್ರೇಷ್ಠ ಅಸ್ತ್ರಗಳಿಂದ, ತಯೋಃ — ಆ ಜಯಂತ ವೃಷಭರ ಅಸ್ತ್ರಾಣಿ — ಅಸ್ತ್ರಗಳನ್ನು, ನಿಹತ್ಯ — ನಾಶಮಾಡಿ, ತಾಭ್ಯಾಂ - ಆವರಿಬ್ಬರಿಂದ (ಜಯಂತ ವಷಭರಿಂದ), ಪ್ರತಿದಗ್ಧಯಾನೌ ಸಂತೌ — ಸುಡಲ್ಪಟ್ಟ ರಥವುಳ್ಳವರಾಗಿ, ತೌ —ಅವರಿಬ್ಬರನ್ನು, ವಿದ್ರಾವ್ಯ —ಓಡಿಸಿ, ಸುರೇಂದ್ರ ಸಂಪೂಜಿತೌ — ದೇವೇಂದ್ರನಿಂದಪೂಜಿಸಲ್ಪಟ್ಟವರಾಗಿ, ವಿದ್ಯಯಾ—ಆಕಾಶದಲ್ಲಿ ಹೋಗುವ ವಿದ್ಯೆಯಿಂದ, ಖೇ — ಆಕಾಶದಲ್ಲಿ, ಯಯತುಃ: — ಹೋದರು. ॥೧೪೭॥

ಅವತಾರಿಕೆ — ಆ ವಿದ್ಯೆಯು ಪ್ರದ್ಯುಮ್ನನಿಗೆ ಬಂದ ರೀತೀಯನ್ನು ನೆನಪಿಸಿಕೊಡುತ್ತಾರೆ —

ಸ ವಿದ್ಯಯಾ ಸಾಂಬಮುದೂಹ್ಯ ರತ್ಯಾ ಪ್ರದತ್ತಯಾ ರುಕ್ಮಿಣೀನಂದನಃ ಪುರೀಮ್ ॥
ಯಯೌ ತತೋ ನಾರದ ಆಗಮದ್ ದ್ರುತಂ ಜ್ಞಾತುಂ ಹರೇರ್ಬಹುಭಾರ್ಯಾಸು ವೃತ್ತಿಮ್ ॥೧೪೮॥

ಸಃ ರುಕ್ಮಿಣೀನಂದನಃ ಆ ಪ್ರದ್ಯುಮ್ನನು, ರತ್ಯಾ ಪ್ರದತ್ತಯಾ — ಶಂಬರಾಸುರನ ಹತ್ತಿರವಿರುವಾಗ ರತಿದೇವಿ (ಮಾಯಾವತೀ ಎಂಬ ಹೆಸರಿನ) ಯಿಂದ ಕೊಡಲ್ಪಟ್ಟ, ವಿದ್ಯಯಾ—ಅಂತರಿಕ್ಷಗಮನ ವಿದ್ಯೆಯಿಂದ, ಸಾಂಬಂ ಉದೂಹ್ಯ — ಸಾಂಬನನ್ನು ಹೊತ್ತುಕೊಂಡು, ಪುರೀಮ್—ದ್ವಾರಕೆಗೆ, ಯಯೌ — ಹೋದನು, ತತಃ—ಅದರ ನಂತರ, ನಾರದಃ— ನಾರದರು, ಹರೇಃ — ಶ್ರೀಕೃಷ್ಣನ, ಬಹುಭಾರ್ಯಾಸು ವೃತ್ತಿಂ — ಬಹುಪತ್ನಿಯರ ಜೊತೆಗೆ ಇರುವ ಜೀವನ ಕ್ರಮವನ್ನು, ಜ್ಞಾತುಂ—ತಿಳಿಯಲು, ದ್ರುತಂ - ಬೇಗನೇ, ಆಗಮತ್—ಬಂದರು. ॥೧೪೮॥

ತಂ ದ್ವ್ಯಷ್ಟಸಾಹಸ್ರಗೃಹೇಷು ದೃಷ್ಟ್ವಾ ತಾವತ್ಸ್ವರೂಪೈರ್ವಿಹರಂತಮೇಕಮ್ ॥
ಸುವಿಸ್ಮಿತಃ ಪ್ರಯಯೌ ತಂ ಪ್ರಣಮ್ಯ ಶಕ್ರಪ್ರಸ್ಥಂ ಪೂಜಿತಶ್ಚಾತ್ರ ಪಾರ್ಥೈಃ ॥೧೪೯॥

(ಸ: - ಆ ನಾರದರು,) ದ್ವ್ಯಷ್ಟಸಾಹಸ್ರಗೃಹೇಷಂ — ಹದಿನಾರುಸಾವಿರ ಮನೆಗಳಲ್ಲಿ, ತಾವತ್ಸ್ವ ರೂಪೈಃ— ಅಷ್ಟೇ ತನ್ನ ರೂಪಗಳಿಂದ, ವಿಹರಂತಂ— (ಆ ಸ್ತ್ರೀಯರಿಂದ) ವಿಹರಿಸತಕ್ಕಂಥ, ಏಕಂ—ಎಲ್ಲರೂಪಗಳಲ್ಲೂ ಅಭಿನ್ನನಾದಂಥ, ತಂ—ಆ ಕೃಷ್ಣನನ್ನು, ದೃಷ್ಟ್ವಾ — ನೋಡಿ, ಸುವಿಸ್ಮಿತ: ಸನ್—ಬಹು ಆಶ್ಚರ್ಯಚಕಿತರಾಗಿ, ತಂ ಪ್ರಣಮ್ಯ — ಆ ಶ್ರೀಕೃಷ್ಣನನ್ನು ನಮಸ್ಕರಿಸಿ, ಶಕ್ರಪ್ರಸ್ಥಂ — ಇಂದ್ರಪ್ರಸ್ಥಕ್ಕೆ, ಪ್ರಯಯೌ —ಹೋದರು, ಚ — ಮತ್ತು, ಅತ್ರ — ಇಲ್ಲಿ ಪಾರ್ಥೈಃ — ಪಾಂಡವರಿಂದ, ಪೂಜಿತ: - ಪೂಜಿಸಲ್ಪಟ್ಟರು. ॥೧೪೯॥

ಭಾವಾನುವಾದ — ೧೩೫-೧೪೯ ಇಂದ್ರದೇವನು ತನ್ನ ಅವತಾರನಾದ ಅರ್ಜುನನ ಸಲುವಾಗಿ ಶ್ರೀಕೃಷ್ಣನಿಂದ ಆ ವರವನ್ನು ಪಡೆದು ಅನೇಕಸಲ ಬಹುವಾಗಿ ಪ್ರಣಾಮಿಸಿ ಶ್ರೀಕೃಷ್ಣನ ಅನುಗ್ರಹವನ್ನು ಪಡೆದು ತನ್ನ ಗೃಹಕ್ಕೆ ಹೋದನು. ಕೀರಿಟ, ಕುಂಡಲಪೀತಾಂಬರಧಾರಿಯಾದ ಶ್ರೀಕೃಷ್ಣನು ಇಂದ್ರನಿಗೆ ಹೋಗಲು ಅನುಮತಿಯನ್ನಿತ್ತು ದ್ವಾರಕೆಗೆ ಬರುತ್ತಿರುವಾಗ ವಿಶೇಷವಾಗಿ ಶೋಭಿಸಿದನು. ಆಗ ವಿಶೇಷವಾಗಿ ಶೋಭಿಸಿದನು ಎಂದ ಕೂಡಲೇ ಅದಕ್ಕಿಂತ ಮೊದಲು

ಶೋಭಿಸಿಲ್ಲ ಎಂದು ಅರ್ಥವಾಡಿಕೊಳ್ಳಬಾರದು. ಸದಾ ಒಂದೇ ರೀತಿ ಶೋಭಿಸತಕ್ಕ ಭಗವಂತನಿಗೆ ಶೋಭಾ ಪರಿಪೂರ್ಣತೆಯು ಇದೆ ಎಂದು ನೆನಪಿಸುವದಕ್ಕಾಗಿ ಆ ರೀತಿಯಾಗಿ ಗ್ರಂಥಗಳಲ್ಲಿ ಹೇಳಿರುತ್ತಾರೆ. ಅಲ್ಪ ಜನರ ದೃಷ್ಟಿಗೆ ಆಗ ಹೆಚ್ಚು, ಶೋಭೆಯಿಂದ ಕೂಡಿದವನಂತೆ ತೋರಿದನು ಎಂಬ ಅರ್ಥದಲ್ಲಿಯೂ ಹೇಳಿರುತ್ತಾರೆ. ಎಂಬ ನಿರ್ಣಯವನ್ನು ಆಚಾರ್ಯರು ಇಲ್ಲಿ ಅನುಗ್ರಹಿಸಿದ್ದಾರೆ. ಶ್ರೀಕೃಷ್ಣನು ದ್ವಾರಕೆಗೆ ಬಂದು ಯಾದವರಿಂದ ಪೂಜಿತನಾಗಿ, ಅಂತಃಪುರಕ್ಕೆ ಬಂದು ಪಾರಿಜಾತ ವೃಕ್ಷವನ್ನು ಸತ್ಯಭಾಮಾಳ ಅಂಗಳದಲ್ಲಿ ಸ್ಥಾಪಿಸಿದನು ಹಾಗು ರತ್ನ ಪರ್ವತವನ್ನು ಇಟ್ಟನು. ಬಹು ರತ್ನಗಳನ್ನು ಎಲ್ಲ ಯಾದವರಿಗೂ ಸಾಕಷ್ಟು ಕೊಟ್ಟನು. ೧೬೧೦೦ ಸ್ತ್ರೀಯರನ್ನು ವಿವಾಹ ಮಾಡಿಕೊಂಡು ಎಲ್ಲರನ್ನು ಪ್ರತ್ಯೇಕ ಗೃಹಗಳಲ್ಲಿಟ್ಟು ಅಷ್ಟೇ ರೂಪಗಳಿಂದ ಪ್ರತ್ಯೇಕವಾಗಿ ವಿಹರಿಸಿದನು. ಅವರೊಬ್ಬೊಬ್ಬರಲ್ಲಿ ಹತ್ತು ಪುತ್ರರನ್ನು ಒಂದೊಂದು ಪುತ್ರಿಯನ್ನು ಪಡೆದನು. ಆ ಮಕ್ಕಳಲ್ಲಿ ಪ್ರದ್ಯುಮ್ನ, ಸಾಂಬ, ಭಾನು, ಚಾರುದೇಷ್ಣ ಇವರು ಉಳಿದೆಲ್ಲರಿಗಿಂತ ಶ್ರೇಷ್ಠರು. ಅದಿತಿದೇವಿಯು ಮಗನಾದ, ವಿವಸ್ವಾನ್ ಎಂಬ ಆದಿತ್ಯನ ತಮ್ಮನಾದ ಸವಿತಾ ಎಂಬವನು ಸತ್ಯಭಾವತಾದೇವಿಯಲ್ಲಿ ಭಾನು ಎಂಬ ಹೆಸರಿನಿಂದ ಹುಟ್ಟಿದನು. ಚಾರುದೇಷ್ಣನು ರುಕ್ಮಿಣಿಯ ಮಗನು, ಗಣಪತಿಯ ಅವತಾರನು. ದ್ವಾರಕಾದಲ್ಲಿ ವಾಸಿಸುವವ ಉಳಿದವರು ಎಲ್ಲರೂ ದೇವಾವತಾರಿಗಳು. ಹೀಗೆ ಶ್ರೀಕೃಷ್ಣನು ದ್ವಾರಕೆಯಲ್ಲಿರುವಾಗ ಪ್ರದ್ಯುಮ್ನನು ಸಾಂಬನಿಂದೊಡಗೂಡಿ ಒಮ್ಮೆ ನಾಗಲೋಕಕ್ಕೆ ಹೋದನು. ಇವನು ಶ್ರೀಕೃಷ್ಣಪುತ್ರನು ಎಂಬ ಜ್ಞಾನವಿಲ್ಲದೇ ಆ ನಾಗಗಳು ಇವನ ಜೊತೆಗೆ ಯುದ್ಧಕ್ಕೆ ಬಂದಾಗ ಎಲ್ಲ ನಾಗಗಳನ್ನು, ವಾಸುಕಿಯನ್ನೂಕೂಡ ಪ್ರದ್ಯುಮ್ನನು ಗೆದ್ದನು, ರತ್ನರಾಶಿಗಳನ್ನು ಸಂಗ್ರಹಿಸಿದನು. ಆ ನಾಗಗಳು ನಮಸ್ಕರಿಸಿದರು. ಅವರಿಂದ ಸತ್ಕೃತನಾಗಿ ಹೊರಟಾಗ ತಡೆದ ಮಾಯಾವಿಯಾದ ಮಯಾಸುರನನ್ನೂ ಕೂಡ ಗೆದ್ದು ಅವನಿಂದಲೂ ಪೂಜಿತನಾಗಿ ಆಕಾಶದಲ್ಲಿ ಹೋಗುವಂಥರಥದಿಂದ ಸ್ವರ್ಗಕ್ಕೆ ಹೋದನು. ಆಗ ಅಲ್ಲಿ ಜಯಂತನು ಹಿಂದೆ ಶ್ರೀಕೃಷ್ಣನು ಪಾರಿಜಾತ ವೃಕ್ಷವನ್ನು ಒಯ್ದ ಸಿಟ್ಟಿನಿಂದ ಅವನ ಪುತ್ರನಾದ ಇವನನ್ನು ಸೋಲಿಸಬೇಕೆಂದು ಇಚ್ಛಿಸಿ ಯುದ್ಧಕ್ಕೆ ಬಂದನು. ಅವನನ್ನು ಪ್ರದ್ಯುಮ್ನನು ಗೆದ್ದನು; ಸಾಂಬನು ಜಯಂತನ ತಮ್ಮನಾದ ವೃಷಭನನ್ನು ಗೆದ್ದನು. ಅವರಿಬ್ಬರು ಪ್ರದ್ಯುಮ್ನ ಸಾಂಬರ ರಥವನ್ನು ಸುಟ್ಟಾಗ ಬಾಣಗಳಿಂದ ಅವರನ್ನು ಓಡಿಸಿ, ಇದನ್ನೆಲ್ಲ ತಿಳಿದ ಇಂದ್ರನಿಂದ ಪೂಜಿತರಾಗಿ ಆಕಾಶದಲ್ಲಿಯೇ ಹೊಗುವಂಥ ವಿದ್ಯಾ ಪ್ರಾವಿಣ್ಯದಿಂದ ಸಾಂಬನನ್ನು ಹೊತ್ತುಕೊಂಡು ಪ್ರದ್ಯುಮ್ನನು ಆಕಾಶದಲ್ಲಿ ಹೋದನು. ಮಾಯಾವ ರೂಪದಿಂದ ಶಂಬರಾಸುರನಲ್ಲಿದ್ದ ರತಿದೇವಿಯು ಪ್ರದ್ಯುಮ್ನನು ಮತ್ಸ್ಯದ್ವಾರಾ ಬಂದಾಗ ಅವನನ್ನು ಪೋಷಿಸಿ ಅವನಿಗೆ ಆ ವಿದ್ಯೆಯನ್ನು ಕೊಟ್ಟಿದ್ದಳು. ಪ್ರದ್ಯುಮ್ನನು ಸಾಂಬ ಸಹಿತನಾಗಿ ದ್ವಾರಕೆಗೆ ಬಂದನು. ಇದರ ನಂತರ ನಾರದರು ಒಮ್ಮೆ ಶ್ರೀಕೃಷ್ಣನು ೧೬೧೦೦ ಹೆಂಡಂದಿರಲ್ಲಿ ಪ್ರತ್ಯೇಕ ಇರುವ ವೈಭವವನ್ನು ನೋಡುವ ಇಚ್ಛೆಯಿಂದ ಬಂದರು. ಅಲ್ಲಿ ಅಷ್ಟು ಪ್ರತ್ಯೇಕ ರೂಪಗಳಿಂದ ಅಷ್ಟು ಪ್ರತ್ಯೇಕ ಗೃಹಗಳಲ್ಲಿ ವಿಹರಿಸತಕ್ಕ ಶ್ರೀಕೃಷ್ಣ ಪರಮಾತ್ಮನನ್ನು ನೋಡಿ ವಿಸ್ಮಿತರಾಗಿ, ನಮಸ್ಕರಿಸಿ ಅಲ್ಲಿಂದ ಇಂದ್ರಪ್ರಸ್ಥಕ್ಕೆ ಹೋಗಿ ಅಲ್ಲಿ ಪಾಂಡವರಿಂದ ಪೂಜಿತರಾದರು.

ಸ ಆಜ್ಞಯಾ ಬ್ರಹ್ಮಣ ಆಹ ಕೃಷ್ಣಾಂ ಕ್ರಮಾತ್ಕರ್ತುಂ ಭೀಮ ಏವೈಕ ಸಂಸ್ಥಾಮ್ ॥
ಅನ್ಯಾ ದೇವೀಃ ಸ್ಥಾಪಯಿತ್ವಾ ಶರೀರೇ ತಸ್ಯಾ ಭಾರತ್ಯಾಃ ಪೂರ್ಣಭೋಗಾರ್ಥಮೇವ ॥೧೫೦॥

ಸಃ — ಆ ನಾರದರು, ಕೃಷ್ಣಾಂ—ದ್ರೌಪದೀದೇವಿಯನ್ನು, ಕ್ರಮಾತ್ — ಕ್ರಮವಾಗಿ, ತಸ್ಯಾಃ — ಆ ದ್ರೌಪದೀದೇವಿಯ, ಶರೀರೇ — ಶರೀರದಲ್ಲಿ, ಅನ್ಯಾಃದೇವೀಃ — ಉಳಿದ ದೇವಸ್ತ್ರೀಯರನ್ನು, ಸ್ಥಾಪಯಿತ್ವಾ — ಮಲಗಿಸಿ, ಭಾರತ್ಯಾಃ — ಭಾರತೀ ದೇವಿಗೆ. ಪೂರ್ಣಭೋಗಾರ್ಥಮೇವ — ಪೂರ್ಣಭೋಗವಾಗುವದಕ್ಕಾಗಿ, ಭೀಮೇ ಏವ — ಭೀಮಸೇನದೇವರಲ್ಲಿಯೇ, ಏಕ ಸಂಸ್ಥಾಂ — ಮುಖ್ಯವಾಗಿ ಇರುವವಳನ್ನಾಗಿ, ಕರ್ತುಂ — ಮಾಡಲು, ಬ್ರಹ್ಮಣಃ ಆಜ್ಞಯಾ — ಬ್ರಹ್ಮದೇವರ ಆಜ್ಞಾಪ್ರಕಾರ, ಆಹ — ಹೇಳಿದರು. ॥೧೫೦॥

ಸುಂದೋಪ ಸುಂದೌ ಭ್ರಾತರೌ ಬ್ರಹ್ಮವಾಕ್ಯಾತ್ ಪರಸ್ಪರಾದನ್ಯತೋ ನೈವ ವಧ್ಯೌ ॥
ತಿಲೋತ್ತಮಾರ್ಥೇ ನಿಹತೌ ಪರಸ್ಪರಂ ತಯೋರ್ವಧಾರ್ಥೇ ಸೃಷ್ಟಯಾ ತೇನ ದೈತ್ಯೌ ॥೧೫೧॥

ಬ್ರಹ್ಮವಾಕ್ಯಾತ್—ಬ್ರಹ್ಮದೇವರ ವರದ ಪ್ರಕಾರ, ಪರಸ್ಪರಾತ್ ಅನ್ಯತಃ—ಪರಸ್ಪರರಿಗಿಂತ ಬೇರೆಯವರಿಂದ, ನೈವ ಚ ಘ್ನೌ—ವಧ್ಯರಲ್ಲದ, ಭ್ರಾತರೌ – ಸಹೋದರರಾದ, ಸುಂದೋಪಸುಂದೌ ದೈತ್ಯೌ – ಸುಂದಹಾಗೂ ಉಪಸುಂದ ಎಂಬಿಬ್ಬರು ದೈತ್ಯರು, ತಯೋಃ - ಅವರಿಬ್ಬರ, ವಧಾರ್ಥಂ – ವಧಕ್ಕಾಗಿ ತೇನ—ಆ ಚತುರ್ಮುಖ ಬ್ರಹ್ಮದೇವರಿಂದ, ಸೃಷ್ಟಯಾ – ಹುಟ್ಟಿಸಲ್ಪಟ್ಟ ಕಾರಣದಿಂದ, ತಿಲೋತ್ತಮಾರ್ಥೇ – ತಿಲೋತ್ತಮಾಎಂಬ ಆ ಅಪ್ಸರಾ ಸ್ತ್ರೀಯ ಸಲುವಾಗಿ, ಪರಸ್ಪರಂ ನಿಹತೌ - ಒಬ್ಬರಿಗೊಬ್ಬರು ಹೊಡೆದಾಡಿ ಕೊಲ್ಲಲ್ಪಟ್ಟರು. (ಅಥವಾ ಸೃಷ್ಟಯಾ ಮೋಹಿತೌ ಸಂತೌ ಈ ರೀತಿ ಅನ್ವಯ ಮಾಡಿ ಕೊಳ್ಳಬಹುದು) ॥೧೫೦॥

ಅತಃ ಪೃಥಗ್ವತ್ಸರತೋ ಭವತ್ಸ್ಕ್ರಮಾತ್ಕೃಷ್ಣಾ ತಿಷ್ಠತಾಂ ಯೋಽನ್ಯಯುಕ್ತಾಮ್ ॥
ಪಶ್ಯೇದ್ಪೋಽಸೌ ವತ್ಸರಂ ತೀರ್ಥಯಾತ್ರಾಂ ಕುರ್ಯಾದಿತಿ ಸ್ಮಾಥ ಚಕ್ರುಸ್ತಥಾತೇ ॥೧೫೨॥

ಅತಃ – ಹೀಗೆ ಒಂದು ಹೆಣ್ಣಿನ ಸಲುವಾಗಿ ಜಗಳಾಡಿ ಇಬ್ಬರು ಸತ್ತ ದೃಷ್ಟಾಂತವಿರುವದರಿಂದ, (ನೀವು ಐದು ಜನರು ಜಗಳಾಡದಂತೆ ಆಗಬೇಕಾದ್ದರಿಂದ, ಕೃಷ್ಣಾ - ದ್ರೌಪದೀದೇವಿಯು, ಭವತ್ಸು – ನಿಮ್ಮಲ್ಲಿ, ಕ್ರಮಾತ್ – ಜ್ಯೇಷ್ಠತೆಯ ಕ್ರಮದಿಂದ, ಪೃಥಕ್ – ಪ್ರತ್ಯೇಕವಾಗಿ, ವತ್ಸರತಃ – ಒಂದೊಂದು ವರ್ಷ ಪರ್ಯಂತವಾಗಿ, ತಿಷ್ಠತಾಂ – ಇರಲಿ, ವಃ – ನಿಮ್ಮ ಪೈಕಿ, ಯಃ – ಯಾವನು, ಅನ್ಯಯುಕ್ತಾಂ – ಇನ್ನೊಬ್ಬನಿಂದ ಕೂಡಿರುವ ದ್ರೌಪದಿಯನ್ನು, ಪಶ್ಯೇತ್—ನೋಡುತ್ತಾನೋ, ಅಸೌ — ಅವನು, ವತ್ಸರಂ – ಒಂದು ವರ್ಷ ಪರ್ಯಂತ, ತೀರ್ಥಯಾತ್ರಾಂ - ತೀರ್ಥಯಾತ್ರೆಯನ್ನು, ಕುರ್ಯಾತ್ – ಮಾಡಲಿ, ಇತಿ – ಎಂದು, (ನಾರದರು ಹೇಳಿದರು ಎಂದು ೧೫೦ನೆಯ ಶ್ಲೋಕಕ್ಕೆ ಅನ್ವಯ.)ಅಥ – ಈ ರೀತಿ ಕ್ರಮನಿಯಮವನ್ನು ಮಾಡಿದ ನಂತರ, ತೇ – ಆ ಪಾಂಡವರು ತಥಾ – ನಾರದರು ಹೇಳಿದ ಕ್ರಮವಾಗಿಯೇ, ಚಕ್ರುಃಸ್ಮ – ಮಾಡಿದರು (ನಡೆದರು). ॥೧೫೨॥

ತತಃ ಕದಾಚಿದ್ಧರ್ಮರಾಜೇನ ಯುಕ್ತಾಂ ಶಸ್ತ್ರಾಗಾರೇ ವಿಪ್ರಗೋರಕ್ಷಣಾರ್ಥಮ್ ॥
ಶಸ್ತ್ರಾದಿತ್ಸುಃ ಫಲ್ಗುನೋಽದ್ರಾಕ್ಸ್ಸಶಸ್ತ್ರೈರ್ದಸ್ಯೂನ್ಹತ್ವಾ ತೀರ್ಥಯಾತ್ರೋನ್ಮುಖೋಽ ಭೂತ್ ॥೧೫೩॥

ತತಃ—ಅನಂತರ, ಕದಾಚಿತ್ – ಒಂದು ಸಂದರ್ಭದಲ್ಲಿ – ಫಲ್ಗುನಃ – ಅರ್ಜುನನು, ವಿಪ್ರಗೋರಕ್ಷಣಾರ್ಥಂ— ಗೋಬ್ರಾಹ್ಮಣ ರಕ್ಷಣೆಗಾಗಿ, ಶಸ್ತ್ರಾದಿತ್ಸುಃಸನ್ – ಆಯುಧಗಳನ್ನು ತೆಗೆದುಕೊಳ್ಳುವ ಉದ್ದೇಶವುಳ್ಳವನಾಗಿ, ಶಸ್ತ್ರಾಗಾರೇ – ಆಯುಧ ಶಾಲೆಯಲ್ಲಿ, ಧರ್ಮರಾಜನಿಂದ ಕೂಡಿರುವ ದ್ರೌಪದಿಯನ್ನು, ಅದ್ರಾಕ್—ನೋಡಿದನು, ಸಃ – ಆ ಅರ್ಜುನನು ಶಸ್ತ್ರೈಃ – ಆಯುಧಗಳಿಂದ. ದಸ್ಯೂನ್ – ಗೋಬ್ರಾಹ್ಮಣ ಪೀಡಕರಾದ ದುಷ್ಟರನ್ನು, ಹತ್ವಾ—ಸಂಹರಿಸಿ, ತೀರ್ಥಯಾತ್ರೋನ್ಮುಖಃ ಅಭೂತ್ – ತೀರ್ಥಯಾತ್ರೆಮಾಡಲು ಉದ್ಯುಕ್ತನಾದನು. ॥೧೫೩॥

ಯುಧಿಷ್ಠಿರಾದ್ಯೈಸ್ಸೌಹೃದಾದ್ವಾರಿತೋಽಪಿ ಯಯೌ ಸತ್ಯಾರ್ಥಂ ಸ ಕದಾಚಿತ್ ದ್ಯುನದ್ಯಾಮ್ ॥
ಕುರ್ವನ್ಸ್ನಾನಂ ಮಾಯಯಾ ನಾಗವಧ್ವಾ ಹೃತೋ ಲೋಕಂ ಭುಜಗಾನಾಂ ಕ್ಷಣೇನ ॥೧೫೪॥

ಸಃ—ಆ ಅರ್ಜುನನು, ಯುಧಿಷ್ಠಿರಾದ್ಯೈಃ—ಧರ್ಮರಾಜ ಮೊದಲಾದ ಸಹೋದರರಿಂದ, ಸೌಹೃದಾತ್ – ಅಂತಃಕರಣ ನಿಮಿತ್ತದಿಂದ ವಾರಿತಃ ಅಪಿ – ತಡೆಯಲ್ಪಟ್ಟರೂ ಕೂಡ (ತೀರ್ಥಯಾತ್ರೆಗೆ ಹೋಗುವದುಬೇಡ ಎಂದು ನಿಷೇಧಿಸಲ್ಪಟ್ಟರೂ ಕೂಡ,) ಸತ್ಯಾರ್ಥಂ – ತಾವು ಮಾಡಿಕೊಂಡ ನಿಯಮವನ್ನು ನಡೆಸುವದಕ್ಕಾಗಿ, ಯಯೌ—ತೀರ್ಥಯಾತ್ರೆಗೆ ಹೋದನು. ಕದಾಚಿತ್—ಒಮ್ಮೆ, ದ್ಯುನದ್ಯಾಂ—ಭಾಗೀರಥಿಯಲ್ಲಿ, ಸ್ನಾನಂ ಕುರ್ವನ್—ಸ್ನಾನವನ್ನು ಮಾಡುತ್ತಿದ್ದ

ಅರ್ಜುನನು, ನಾಗವಧ್ವಾ ಒಬ್ಬ ನಾಗಕನ್ಯಕೆಯಿಂದ, ಮಾಯಯಾ—ಮಾಯೆಯಿಂದ, ಕ್ಷಣೇನ—ಅತ್ಯಲ್ಪ ಸಮಯದಲ್ಲಿಯೇ ಭುಜಗಾನಾಂ ಲೋಕಂ - ನಾಗಗಳ ಲೋಕವನ್ನು ಕುರಿತು, ಹೃತಃ - ಒಯ್ಯಲ್ಪಟ್ಟನು. ॥೧೫೪॥

ತಸ್ಯಾ: ಪಿತಾ ಗರುಡೇನಾತ್ತಪತ್ಯ: ಪುತ್ರಾಕಾಂಕ್ಷೀ ಚೋದಯಾಮಾಸ ಪಾರ್ಥಮ್ ॥
ಸಂವತ್ಸರಂ ಬ್ರಹ್ಮಚರ್ಯೀ ತು ಪಾರ್ಥೈ: ಕೃಷ್ಣಾಹೇತೋಃ ಸಮಯೇ ಸಾಧು ಬದ್ಧವ್ ॥೧೫೫॥

ಗರುಡೇನ—ಗರುಡನಿಂದ, ಆತ್ತಪತ್ಯ:—ತಿನ್ನಲ್ಪಟ್ಟ (ಕೊಲ್ಲಲ್ಪಟ್ಟ)ಗಂಡನುಳ್ಳ, ತಸ್ಯಾ: —ಆ ನಾಗಕನ್ಯಕೆಯ, ಪಿತಾ—ತಂದೆಯು, ಪುತ್ರಾಕಾಂಕ್ಷೀಸನ್ – ತನ್ನ ಮಗಳಲ್ಲಿ ಮಗನಾಗ ಬೇಕೆಂಬ ಇಚ್ಛೆಯುಳ್ಳವನಾಗಿ, ಪಾರ್ಥೈಃ—ಪಾಂಡವರಿಂದ, ಕೃಷ್ಣಾಹೇತೋಃ—ದ್ರೌಪದೀಸಂಗದ ನಿಮಿತ್ತದಿಂದ ಮಾಡಿಕೊಂಡ ಸಂವತ್ಸರಂ – ಒಂದು ವರ್ಷ ಪರ್ಯಂತ, ಬ್ರಹ್ಮಚರ್ಯೇ ಸಮಯೇ—ಬ್ರಹ್ಮ ಚರ್ಯದಿಂದ ತೀರ್ಥಯಾತ್ರೆ ಮಾಡುವ ನಿಯಮದಲ್ಲಿ, ಸಾಧು ಬದ್ಧಂ—ದೃಢವಾಗಿಪ್ರವೃತ್ತನಾದ, ಪಾರ್ಥಂ—ಅರ್ಜುನನನ್ನು, ಚೋದಯಾಮಾಸ—ನನ್ನ ಮಗಳಲ್ಲಿ ಮಂಗನನ್ನು ಪಡೆದು ಕೊಡು ಎಂದು ಪ್ರಾರ್ಥಿಸಿದನು. ॥೧೫೫॥

ಪುನ: ಪುನರ್ಯಾಚ್ಯಮಾನಸ್ಯ ಪಾರ್ಥಃ ಪುತ್ರಾರ್ಥಮಸ್ಯಾ ಭುಜಗೇನ ತಸ್ಯಾಮ್ ॥
ಉತ್ಪಾದಯಾಮಾಸ ಸುತಂ ಕುಜಾಂಶಂ ನಾಮ್ನೇರಾವಂತಂ ವರುಣಾವೇಶಯುಕ್ತಮ್ ॥೧೫೬॥

ಅಸ್ಯಾಃ—ಈ ನಾಗಕನ್ಯೆಗೆ, ಪುತ್ರಾರ್ಥಂ – ಮಗನಾಗಲು, ಭುಜಗೇನ – ಆ ತಂದೆ ನಾಗದಿಂದ, ಪುನಃಪುನಃ ಯಾಚ್ಯಮಾನಃ—ಪುನಃಪುನಃಪ್ರಾರ್ಥಿಸಲ್ಪಟ್ಟ, ಸ:ಪಾರ್ಥ:—ಆ ಅರ್ಜುನನು, ತಸ್ಯಾಂ – ಆ ನಾಗ ಕನ್ಯೆಯಲ್ಲಿ, ಕುಜಾಂಶಂ—ಮಂಗಳಗ್ರಹದೇವತೆಯ ಅವತಾರನಾದ, ವರುಣಾವೇಶಯುಕ್ತಂ – ವರುಣನ ಆವೇಶದಿಂದ ಕೂಡಿದ, ನಾಮ್ನಾ ಇರಾವಂತಂ—ಇರಾವಾನ್ ಎಂಬ ಹೆಸರಿನಿಂದ ಪ್ರಸಿದ್ಧನಾದ, ಸುತಂ—ಮಗನನ್ನು, ಉತ್ಪಾದಯಾಮಾಸ—ಪಡೆದನು. ॥೧೫೬॥

ಗುಣಾ: ಪಿತುರ್ಮಾತೃಜಾತಿಸ್ತಾನಾಂ ಯಸ್ಮಾತ್ಸತಾಂ ಪ್ರಾಯಶಸ್ತೇನ ನಾಗಃ ॥
ಬಲೀಚ ಪಾರ್ಥಪ್ರಥನೋದ್ಭವತ್ವಾನ್ಮಾಯಾವಿದಸ್ತ್ರೀ ಚ ಸುಧಾರ್ಮಿಕಶ್ಚ ॥೧೫೭॥

ಯಸ್ಮಾತ್ – ಯಾವಕಾರಣದಿಂದ, (ಸಾಮಾನ್ಯವಾಗಿ) ಸತಾಂ ಸುತಾನಾಂ—ಯೋಗ್ಯ ಮಕ್ಕಳಿಗೆ, ಪಿತುಃ – ಗುಣಾಃ – ತಂದೆಯ ಗುಣಧರ್ಮಗಳು, ಮಾತೃಜಾತಿಃ—ತಾಯಿಯ ಜಾತಿಯು, (ಬರುವವೋ). ತೇನ – ಆ ಕಾರಣದಿಂದ, (ಸ: – ಆ ಇರಾವಂತನು). ನಾಗಃ—ನಾಗಜಾತಿಯವನು, (ಬಭೂವ – ಆದನು) ಪಾರ್ಥಪ್ರಥಮೋದ್ಭವತ್ವಾತ್—ಅರ್ಜುನನ ಪ್ರಥಮ ಪುತ್ರನಾದ್ದರಿಂದ, ಬಲೀ—ಬಲಿಷ್ಠನು, ಅಸ್ತ್ರೀ – ಅಸ್ತ್ರ ನಿಪುಣನು, ಚ—ಮತ್ತು, ಸುಧಾರ್ಮಿಕಃ - ಅತ್ಯಂತ ಧಾರ್ಮಿಕನು. ಮಾಯಾವಿತ್ – (ತಾಯಿಯ ವಿದ್ಯೆಯನುಸಾರ) ಮಾಯಾವನ್ನು ತಿಳಿದವನೂ, (ಬಭೂವ—ಆದಿದ್ದನು). ॥೧೫೭॥

ತತೋ ಯಯಾವರ್ಜುನಸ್ತೀರ್ಥಯಾತ್ರಾಕ್ರಮೇಣ ಪಾಂಡ್ಯಾನ್ ತನಯೋಽಸ್ಯ ಮಾತ್ರಾ ॥
ಸಹ ತ್ಯಕ್ತೋ ಭುಜಗೈರ್ದೇವಲೋಕೇ ಸಂಪೂಜಿತೋ ನ್ಯವಸದ್ದೈವತೈಶ್ಚ ॥೧೫೮॥

ತತಃ—ನಾಗಕನ್ಯೆಯಲ್ಲಿ ಮಂಗನನ್ನು ಪಡೆದ ನಂತರ, ಅರ್ಜುನಃ—ಅರ್ಜುನನು, ತೀರ್ಥಯಾತ್ರಾಕ್ರಮೇಣ—

ತೀರ್ಥ ಯಾತ್ರಾಕ್ರಮದಿಂದ, ಪಾಂಡ್ಯಾನ್ – ಪಾಂಡ್ಯ ದೇಶಕ್ಕೆ, ಯಯೌ – ಹೋದನು, ಅಸ್ಯ ತನಯಃ – ಅರ್ಜುನನ ಪುತ್ರನಾದ ಇರಾವಂತನು, ಮಾತ್ರಾ ಸಹ – ತಾಯಿಯಿಂದ ಸಹಿತವಾಗಿ, ಭುಜಗೈಃ – ಇತರ ನಾಗಗಳಿಂದ, ತ್ಯಕ್ತಃಸನ್ – (ವಿಧವೆಯಲ್ಲಿ ಮನುಷ್ಯನಿಂದ ಹುಟ್ಟಿದವನು ಎಂಬ ಕಾರಣದಿಂದ) ಬಿಡಲ್ಪಟ್ಟವನಾಗಿ, ದೇವಲೋಕೇ – ದೇವಲೋಕದಲ್ಲಿ, ದೈವತೈಶ್ಚ – ದೇವತೆಗಳಿಂದಲೂ ಕೂಡ, ಸಂಪೂಜಿತಃ ಸನ್ – ಮರ್ಯಾದಿಸಲ್ಪಟ್ಟವನಾಗಿ, ನ್ಯವಸತ್ – ವಾಸಮಾಡಿದನು. ॥೧೫೮॥

ಭಾವಾನುವಾದ : ೧೫೦-೧೫೮ ಶ್ರೀಮನ್ನಾರದರು ಪಾಂಡವರ ಹತ್ತಿರ ಬ್ರಹ್ಮದೇವರ ಆಜ್ಞಾಪ್ರಕಾರ ಬಂದವರು. ದ್ರೌಪದೀದೇವಿಯಲ್ಲಿರುವ ಭಾರತೀದೇವಿಗೆ ಭೀಮರಿಂದ ಪೂರ್ಣ ಭೋಗವಾಗುವದಕ್ಕಾಗಿ, ದ್ರೌಪದೀದೇವಿಯನ್ನು ಕೇವಲ ಭೀಮಸೇನದೇವರಲ್ಲಿ ಇರುವವಳನ್ನಾಗಿ ಕ್ರಮವಾಗಿ ಒಡಲು ಪೀಠಿಕಾರೂಪವಾಗಿ ಸುಂದ-ಉಪಸುಂದ ಎಂಬ ಇಬ್ಬರು ದೈತ್ಯರು ಒಂದು ಹೆಣ್ಣಿನ ಸಲುವಾಗಿ ಹೊಡೆದಾಡಿ ಸತ್ತ ದೃಷ್ಟಾಂತವನ್ನು ಹೇಳಿದರು, ಅವರಿಬ್ಬರೂ ಬ್ರಹ್ಮದೇವರ ವರದಿಂದ ಪರಸ್ಪರರನ್ನು ಬಿಟ್ಟು ಬೇರೆ ಯಾರಿಂದಲೂ ಅವಧ್ಯರಾದವರು ಅವರನ್ನು ಸಂಹರಿಸಲಿಂದೇ ಬ್ರಹ್ಮದೇವರೇ ಒಬ್ಬ ತಿಲೋತ್ತಮಾ ಎಂಬ ಅಪ್ಸರೆಯನ್ನು ಸೃಷ್ಟಿಸಿದರು. ಅವಳನ್ನು ಕಂಡ ಇಬ್ಬರೂ ಒಬ್ಬರಿಗೊಬ್ಬರು ಹೊಡೆದಾಡಿ ಸತ್ತರು, ಅದಕ್ಕಾಗಿ ನೀವು ಐದುಮಂದಿ ಹೊಡೆದಾಡದಂತೆ ಆಗಲು ದ್ರೌಪದೀದೇವಿಯು ಜೊತೆಗೆ ವಿಹರಿಸುವ ವಿಷಯದಲ್ಲಿ ಒಂದು ನಿಯಮ ಮಾಡಿಕೊಳ್ಳಿರಿ. ಒಂದೊಂದು ವರ್ಷ ಒಬ್ಬೊಬ್ಬರು ಅವಳ ಜೊತೆಗೆ ಇರಬೇಕು. ಅವಳು ಒಬ್ಬನ ಜೊತೆಗೆ ಇರುವಾಗ ಇನ್ನೊಬ್ಬನು ನೋಡಿದರೆ ಅವನು ತೀರ್ಥಯಾತ್ರೆಗೆ ಹೋಗಬೇಕು, ಬ್ರಹ್ಮಚರ್ಯದಿಂದ ಇರಬೇಕು. ಈ ರೀತಿ ನಿಯಮವನ್ನು ಮಾಡಿಕೊಂಡು ವರ್ತಿಸಿರಿ. ಈ ನಿಯಮವು ಜ್ಯೇಷ್ಠ್ಯ ಕ್ರಮದಿಂದ ನಡೆಯಲಿ ಎಂದು ಹೇಳಿದರು, ಪಾಂಡವರು ಒಪ್ಪಿ ಅದರಂತೆ ನಡೆಯುತ್ತಿದ್ದರು. ಒಮ್ಮೆ ಧರ್ಮರಾಜನಿಂದ ಕೂಡಿರುವ ದ್ರೌಪದೀದೇವಿಯನ್ನು ಅರ್ಜುನನು ನೋಡುವ ಪ್ರಸಂಗ ಒದಗಿ ಬಂತು, ಗೋಬ್ರಾಹ್ಮಣರಿಗೆ ಹಿಂಸೆ ಮಾಡುತ್ತಾ ಅನೇಕ ದುಷ್ಟರು ಬಂದಿದ್ದರು, ಅವರನ್ನು ಸಂಹರಿಸಲು ಎಂದು ಆಯುಧಗಳನ್ನು ತೆಗೆದುಕೊಳ್ಳಲ್ಕೆ ಆಯುಧ ಗೃಹಕ್ಕೆ ಹೋದಾಗ ಅಲ್ಲಿ ಧರ್ಮಜಯುಕ್ತಳಾದದ್ರೌಪದಿಯನ್ನು ನೋಡಿ, ದುಷ್ಟರನ್ನು ಕೊಂದು ನಿಯಮಾನುಸಾರ ತೀರ್ಥಯಾತ್ರೆಗೆ ಹೊರಟನು. ಉಳಿದ ಸಹೋದರರೇನೋ. ಅಂತಃಕರಣದಿಂದ ಬೇಡವೆಂದರೂ ಕೇಳಲಿಲ್ಲ. ತೀರ್ಥಯಾತ್ರೆಯಲ್ಲಿ ಗಂಗೆಗೆ ಬಂದು ಸ್ನಾನ ಮಾಡುತ್ತಿರುವಾಗ, ಒಬ್ಬ ನಾಗಕನ್ಯಕೆಯು ಅವನನ್ನು ತನ್ನ ಮಾಯಾಶಕ್ತಿಯಿಂದ ನಾಗಲೋಕಕ್ಕೆ ಕರೆದುಕೊಂಡು ಹೋದಳು. ಅವಳ ಗಂಡನನ್ನು ಗರುಡನು ಕೊಂದಿದ್ದನು. ಅವಳಲ್ಲಿ ಮಗನಾಗಬೇಕೆಂದು ಅವಳ ತಂದೆಯಾದ ನಾಗನಿಗೆ ಇಚ್ಛೆ ಇತ್ತು. ಅದಕ್ಕಾಗಿ ಅರ್ಜುನನಿಗೆ ಪ್ರಾರ್ಥನೆಮಾಡಿದಳು. ಮೇಲಿಂದ ಮೇಲೆ ಪ್ರಾರ್ಥನೆ ಮಾಡಿದಾಗ, ದಯಾಳುವಾದ ಅರ್ಜುನನು ಸಮ್ಮತಿಸಿ ಇರಾವಂತನೆಂಬ ಪುತ್ರನನ್ನು ಪಡೆದು ಕೊಟ್ಟನು. ಅವನು ಮಂಗಳನ ಅವತಾರ; ವರುಣಾವೇಶವುಳ್ಳವನು. ತಾಯಿಯಂತೆ ದೇಹಾಕಾರ ಮಾಯಾವಿದ್ಯೆ ಬಂದರೆ, ತಂದೆಯಂತೆ ಬಲಿಷ್ಠನು, ಅಸ್ತ್ರನಿಪುಣನು, ಧಾರ್ಮಿಕನೂ ಆಗಿದ್ದನು. ಪ್ರಾಯಶಃ ಮಕ್ಕಳಿಗೆ ತಾಯಿಯಂತೆ ಜಾತಿ ತಂದೆಯಂತೆ ಗುಣಗಳು ಬರುತ್ತವೆ. ಈ ಇರಾವಂತನು ವಿಧವೆಯಲ್ಲಿ ಮನುಷ್ಯನಿಂದ ಹುಟ್ಟಿದವನು ಎಂಬ ನಿಮಿತ್ತದಿಂದ ನಾಗಗಳು ಇವನನ್ನೂ ಇವನತಾಯಿಯನ್ನೂ ಬಿಟ್ಟುಬಿಟ್ಟವು. ಆಗ ಅವನು ತಾಯಿ ಸಮೇತ ದೇವಲೋಕಕ್ಕೆ ಹೋಗಿ ದೇವತೆಗಳಿಂದ ಸನ್ಮಾನಿತನಾಗಿ ವಾಸಮಾಡಿದನು.

ಅವತಾರಿಕೆ ; ಅರ್ಜುನನಿಗೆ ನಿಯಮೋಲ್ಲಂಘನ ದೋಷ ಬಂದಿತಲ್ಲ ಎಂಬಶಂಕೆಯನ್ನು ನಿವಾರಿಸುತ್ತಾರೆ.–

ಸತ್ಯಾತ್ಯಯಾನ್ನೈವ ದೋಷೋಽರ್ಜುನಸ್ಯ ತೇಜೀಯಸಶ್ಚಿಂತನೀಯಃ; ಕಥಂಚಿತ್ ॥
ಶ್ರೇಷ್ಠಾಪರಾಧಾನ್ನಾನ್ಯದೋಷಸ್ಯ ಲೇಪಸ್ತೇಜೀಯಸಾಂ ನಿರ್ಣಯೋಽಯಂ ಹಿ ಶಾಸ್ತ್ರೇ ॥೧೫೯॥

ತೇಜೀಯಸಃ ಅರ್ಜುನಸ್ಯ–ಅಪರೋಕ್ಷಜ್ಞಾನಿಯಾದ ಅರ್ಜುನನಿಗೆ, ಸತ್ಯಾತ್ಯಯಾತ್–ಬ್ರಹ್ಮಚರ್ಯ ನಿಯಮಾತಿ–

ಕ್ರಮಣ ಸಮುತ್ಥದಂದ. ದೋಷ:--ದೋಷವು, ಕಥಂಚಿತ್—ಯಾವರೀತಿಯಿಂದಲೂ, ನೈವ ಚಿಂತನೀಯಃ – ವಿಚಾರಿಸ–ಲ್ಪಡಬಾರದು, ಹಿ – ಏಕೆಂದರೆ, ತೇಜೀಯಸಾಂ ಮಹಾತ್ಮರಿಗೇ (ಅಪರೋಕ್ಷ ಜ್ಞಾನಿಗಳಿಗೆ), ಶ್ರೇಷ್ಠಾಪರಾಧಾತ್—ಸ್ವೋತ್ತಮಾಪರಾಧಕ್ಕಿಂತ, ಅನ್ಯದೋಷಸ್ಯ—ಬೇರೇ ದೋಷದ, ಲೇಪ:—ಸಂಬಂಧ (ಸಂಪರ್ಕ)ವು, ನ – ಇಲ್ಲ, (ಇತಿ) ಅಯಂ—ಎಂಬ ಈ ವಿಷಯವು, ಶಾಸ್ತ್ರೇ ನಿರ್ಣಯಃ—ಶಾಸ್ತ್ರದಲ್ಲಿ, ನಿರ್ಣಯವು. ॥೧೫೯॥

ಅವತಾರಿಕೆ ; ಈ ನಿಯಮಾತಿಕ್ರಮವೂ ಕೂಡ, ಸ್ವೋತ್ತಮರಾದ ಅಣ್ಣಂದಿರ ಜೊತೆಗೆ ಮಾಡಿಕೊಂಡ ಮಾತಿನ ಉಲ್ಲಂಘನೆಯು ರೂಪವಾದ್ದರಿಂದ ಸ್ವೋತ್ತಮಾಪರಾಧ ರೂಪವಾದ್ದರಿಂದ ಲೇಪವಾಗಬೇಕಿತ್ತು ಎಂಬಶಂಕೆಗೆ ಉತ್ತರಿಸುತ್ತಾರೆ–

ಅತಿಸ್ನೇಹಾಚ್ಚಾಗ್ರಜಾಭ್ಯಾಂ ತದಸ್ಯ ಕ್ಷಾಂತಂ ಸುತಾ ಪಾಂಡ್ಯರಾಜೇನ ದತ್ತಾ ॥
ಸಂವತ್ಸರಾಂತೇ ಫಲ್ಗುನಸ್ಯಾಭಿರೂಪಾ ಚಿತ್ರಾಂಗದಾ ವೀರಸೇನೇನ ತೋಷಾತ್ ॥೧೬೦॥

ಅಗ್ರಜಾಭ್ಯಾಂ—ಅಣ್ಣಂದಿರಾದ ಧರ್ಮ, ಭೀಮಸೇನರಿಬ್ಬರಿಂದಲೂ, ಅಸ್ಯ – ಈ ಅರ್ಜುನನ, ತತ್—ಆ ವಚನೋಲ್ಲಂಘನೆ ಎಂಬ ಅಪರಾಧವು, ಅತಿಸ್ನೇಹಾತ್—ಅರ್ಜುನನ ಮೇಲಿನ ಅತಿ ಪ್ರೀತಿಯಿಂದ, ಕ್ಷಾಂತಂ—ಕ್ಷಮಿಸಲ್ಪಟ್ಟಿತ್ತು, (ಆದ್ದರಿಂದ ಅರ್ಜುನನಿಗೆ ಯಾವದೋಷದ ಸಂಪರ್ಕವೂ ಆಗಿಲ್ಲ.) ಸಂವತ್ಸರಾಂತೇ—ವರ್ಷದ ಕೋನೆಯಲ್ಲಿ, ಪಾಂಡ್ಯರಾಜೇನ—ಪಾಂಡ್ಯದೇಶದ ರಾಜನಾದ, ವೀರಸೇನೇನ – ವೀರಸೇನನಿಂದ, ಫಲ್ಗುನಸ್ಯ ಅಭಿರೂಪಾ – ಅರ್ಜುನನಿಗೆ ಯೋಗ್ಯಳಾದ, ಸುತಾ – ತನ್ನಮಗಳಾದ, ಚಿತ್ರಾಂಗದಾ—ಚಿತ್ರಾಂಗದೆ ಎಂಬವಳು. ತೋಷಾತ್ – ಸಂತೋಷದಿಂದ, ದತ್ತಾ—ಕೊಡಲ್ಪಟ್ಟಳು ॥೧೬೦॥

ಸ ವೀರಸೇನಸ್ತ್ವಷ್ಟು ರಂಶೋ ಯಮಸ್ಯಾಪ್ಯಾವೇಶಯುಕ್ ಸಾ ಚ ಕನ್ಯಾ ಶಚೀ ಹಿ ।
ತಾರಾದೇಹೇ ಸೂರ್ಯಜಸ್ಯಾಂಗ ಸಂಗಾತ್ ಸ್ವರ್ಗಂ ನಾಗಾದಂತರಿಕ್ಷಾದಿಹಾಸೀತ್ ॥೧೬೧

ಸ:ವೀರಸೇನ:—ಆ ವೀರಸೇನನು, ತ್ವಷ್ಟು:—ತ್ವಷ್ಟೃದೇವತೆಯು, ಅಂಶಃ – ಅವತಾರನು. ಯಮಸ್ಯ—ಯಮದೇವರ, ಆವೇಶಯುಕ್ ಅಪಿ—ಆವೇಶದಿಂದ ಕೂಡಿದವನೂ ಆಗಿದ್ದಾನೆ. ಸಾ ಕನ್ಯಾ ಚ – ಆ ಚಿತ್ರಾಂಗದಾ ಕನ್ಯೆಯಾದರೂ ಕೂಡ – ಶಚೀ ಹಿ ಶಚೀದೇವಿಯು ಅವತಾರಳೇ ಆಗಿರುವಳು, ತಾರಾದೇಹೇ—ವಾಲಿ ಪತ್ನಿಯಾದ ತಾರಾ ಅವತಾರದಲ್ಲಿ, ಸೂರ್ಯಜಸ್ಯ – ಸೂರ್ಯಪುತ್ರನಾದ ಸುಗ್ರೀವನ, ಅಂಗಸಂಗಾತ್ – ದೇಹ ಸಂಬಂಧ ಮಾಡಿದ್ದರಿಂದ, ಸ್ವರ್ಗಂ—ತನ್ನ ಸ್ವರ್ಗಲೋಕಕ್ಕೆ, ನ ಅಗಾತ್ – (ಶಚೀದೇವಿಯು) ಹೋಗಿರಲಿಲ್ಲ. (ಅತ:—ಆದ್ದರಿಂದ), ಅಂತರಿಕ್ಷಾತ್ – ಅಂತರಿಕ್ಷಲೋಕದಿಂದ, ಇಹ—ಈ ಭೂಮಿಯಲ್ಲಿ, ಆಸೀತ್ – ಅವತರಿಸಿದಳು ॥೧೬೧॥

ತೇನೈವ ಹೇತೋರ್ನಾತಿಸಾಮೀಪ್ಯಮಾಸೀತ್ತಸ್ಯಾ: ಪಾರ್ಥೇ ಪುತ್ರಿಕಾಪುತ್ರಧರ್ಮಾತ್ ॥
ತಸ್ಯಾಂ ಜಾತೋ ಬಬ್ರುವಾಹೋಽರ್ಜುನೇನ ಪೂರ್ವಂ ಜಯಂತಃ ಕಾಮದೇವಾಂಶಯುಕ್ತಃ ॥೧೬೨॥

ತೇನ ಹೇತೋ: ಏವ – ಆ ಕಾರಣ(ಸುಗ್ರೀವ ಸಂಗ)ದಿಂದಲೇ, ತಸ್ಯಾಃ—ಆ ಚಿತ್ರಾಂಗದೆಗೆ, ಪಾರ್ಥೇ ಅತಿ ಸಾಮೀಪ್ಯಂ—ಅರ್ಜುನನ ಅತಿಸಾಮೀಪ್ಯವು, ನ ಆಸೀತ್ – ಸಿಗಲಿಲ್ಲ. ತಸ್ಯಾಂ—ಆ ಚಿತ್ರಾಂಗದೆಯಲ್ಲಿ, ಪುತ್ರಿಕಾಪುತ್ರ ಧರ್ಮಾತ್—ಮಗಳಲ್ಲಿ ಹುಟ್ಟಿದ ಮಗನು ನನ್ನ ಮಗನಾಗಬೇಕೆಂಬ ಇಚ್ಛೆಯಿಂದ ಕನ್ಯಾದಾನ ಮಾಡಿದ ಧರ್ಮದ ಪ್ರಕಾರ, ಅರ್ಜುನೇನ – ಅರ್ಜುನನಿಂದ, ಜಾತಃ—ಹುಟ್ಟಿದ, ಬಬ್ರುವಾಹ:—ಬಬ್ರುವಾಹನನು, ಪೂರ್ವಂ – ಮೂಲರೂಪದಲ್ಲಿ, ಜಯಂತ:—ಇಂದ್ರ ಪುತ್ರನಾದ ಜಯಂತನು, ಕಾಮದೇವಾಂಶಯುಕ್ತ:—ಈಗ ಕಾಮದೇವನ ಆವೇಶದಿಂದ ಕೂಡಿದವನು. ॥೧೬೨॥

ಪುತ್ರಂ ವೀರಂ ಜನಯಿತ್ವಾಽರ್ಜುನೋಽತೋ ಗಚ್ಛನ್ಪ್ರಭಾಸಂ ಶಾಪತೋ ಗ್ರಾಹದೇಹಾಃ ॥
ಅಮೂಮುಚಚ್ಚಾಪ್ಸರಸಃ ಸ ಪಂಚ ತಾಭಿರ್ಗೃಹೀತಃ ಪ್ರವಿಕೃಷ್ಯ ತೀರಮ್ ॥೧೬೩॥

ಅರ್ಜುನಃ – ಅರ್ಜುನನು, ವೀರಂ ಪುತ್ರಂ – ಪರಾಕ್ರಮಿಯಾದ ಬಬ್ರುವಾಹನನೆಂಬ ಮಗನನ್ನು, ಜನಯಿತ್ವಾ– ಪಡೆದು, ಅತಃ— ಈ ಪಾಂಡ್ಯದೇಶದಿಂದ, ಪ್ರಭಾಸಂ – ಪ್ರಭಾಸಕ್ಷೇತ್ರಕ್ಕೆ, ಗಚ್ಛನ್ – ಹೋಗುವವನಾಗಿ, ಗ್ರಾಹದೇಹಾಃ – ಮೊಸಳೆಯ ದೇಹವುಳ್ಳ, ಪಂಚ ಅಪ್ಸರಸಃ—ಐದು ಅಪ್ಸರಾಸ್ತ್ರೀಯರನ್ನು, ತಾಭಿಃ ಗೃಹೀತಃ ಸನ್ – ಅವುಗಳಿಂದ ಹಿಡಿಯಲ್ಪಟ್ಟವನಾಗಿ, ತೀರಮ್—ದಂಡೆಯನ್ನು ಕುರಿತು, ಪ್ರವಿಕೃಷ್ಯ—ಎಳೆದುಕೊಂಡು ಬಂದು, ಶಾಪತಃ – ಶಾಪದಿಂದ, ಅಮೂಮುಚತ್ – ಬಿಡಿಸಿದನು. ॥೧೬೩॥

ಏವಂ ಹಿ ತಾಸಾಂ ಶಾಪಮೋಕ್ಷಃ ಪ್ರದತ್ತೋ ಯದಾಽಖಿಲಾ ವೋ ಯುಗಪತ್ಸಂಪ್ರಕರ್ಷೇತ್ ॥
ಏಕಸ್ತದಾ ನಿಜರೂಪಾಪ್ತಿರೇವೇತ್ಯಲಂ ತುಷ್ಟೇನ ಬ್ರಾಹ್ಮಣೇನಾನತಾನಾಮ್ ॥೧೬೪॥

ಯದಾ–ಯಾವಾಗ, ಏಕಃ—ಒಬ್ಬನು, ವಃ ಅಖಿಲಾಃ–ನಿಮ್ಮೆಲ್ಲರನ್ನು, ಯುಗಪತ್–ಏಕಕಾಲದಲ್ಲಿ, ಸಂಪ್ರಕರ್ಷೇತ್– ಸೆಳೆಯುತ್ತಾನೋ, ತದಾ ಏವ – ಆಗಲೇ, ನಿಜರೂಪಾಪ್ತಿಃ—ನಿಮ್ಮ ಸ್ವಂತ ರೂಪ ಪ್ರಾಪ್ತಿಯು ಆಗುತ್ತದೆ, ಇತಿ ಏವಂ – ಈ ರೀತಿಯಾಗಿ, ಶಾಪಮೋಕ್ಷಃ—ಶಾಪದ ಬಿಡುಗಡೆಯು, ಆನತಾನಾಂ ತಾಸಾಂ—ನಮ್ರರಾಗಿ ನಮಸ್ಕರಿಸತಕ್ಕ ಆ ಅಪ್ಸರಾಸ್ತ್ರೀಯರಿಗೆ, ಅಲಂ ತುಷ್ಟೇನ ಬ್ರಾಹ್ಮಣೇನ—ಅತ್ಯಂತ ಸಂತುಷ್ಟನಾದ ಬ್ರಾಹ್ಮಣನಿಂದ, ಪ್ರದತ್ತಃ—ಕೊಡಲ್ಪಟ್ಟಿತ್ತು. ॥೧೬೪॥

ವಿಪ್ರಾಪಹಾಸಾತ್ಕುತ್ಸಿತಯೋನಿತಸ್ತಾಃ ಕನ್ಯಾತೀರ್ಥೇ ಪಾಂಡವಸ್ಸಂಪ್ರಮೋಚ್ಯ ॥
ಪ್ರಾಪ್ತಃ ಪ್ರಭಾಸಂ ವಾಸುದೇವಾನುಜಾಂ ತಾಂ ಶುಶ್ರಾವ ರಾಮೇಣ ಸುಯೋಧನೋದ್ಯತಾಮ್ ॥೧೬೫॥

ಪಾಂಡವಃ–ಅರ್ಜುನನು, ವಿಪ್ರಾಪಹಾಸಾತ್–(ಆ ಸ್ತ್ರೀಯರು)ಬ್ರಾಹ್ಮಣನಿಗೆ ಅಪಹಾಸ ಮಾಡಿದ್ದರಿಂದ ಬಂದಿರುವ, ಕುತ್ಸಿತಯೋನಿತಃ – ನೀಚವಾದ ಮೊಸಳೆ ಜನ್ಮದಿಂದ, ತಾಃ – ಆ ಅಪ್ಸರಾಸ್ತ್ರೀಯರನ್ನು, ಸಂಪ್ರಮೋಚ್ಯ—ಬಿಡಿಸಿ, ಪ್ರಭಾಸಂ ಪ್ರಾಪ್ತಃಸನ್ – ಪ್ರಭಾಸ ಕ್ಷೇತ್ರಕ್ಕೆ ಬಂದವನಾಗಿ, ವಾಸುದೇವಾನುಜಾಂ ತಾಂ—ಶ್ರೀಕೃಷ್ಣನ ತಂಗಿಯಾದ ಸುಭದ್ರೆಯನ್ನು, ರಾಮೇಣ – ಬಲರಾಮನಿಂದ, ಸುಯೋಧನೋದ್ಯತಾಂ – ದುರ್ಯೋಧನನಿಗೆ ಕೊಡಲ್ಪಡುವವಳನ್ನಾಗಿ, ಶುಶ್ರಾವ – ಕೇಳಿದನು. ॥೧೬೫॥

ವಿಚಿಂತ್ಯ ಕಾರ್ಯಂ ಯತಿರೂಪಂ ಗೃಹೀತ್ವಾ ಕುಶಸ್ಥಲೀಂ ಪ್ರಯಯೌ ತಂ ಸಮೀಪೇ ॥
ಪ್ರಾಪ್ತಂ ಕೃಷ್ಣಃ ಪ್ರಾಹಸತ್ಸಂವಿಜಾನನ್ ಸತ್ಯಾಸಹಾಯಶ್ಶಯನೀಯಾಧಿರೂಢಃ ॥೧೬೬॥

(ಸಃ–ಆ ಅರ್ಜುನನು), ಕಾರ್ಯಂ—ತನಗೆ ಸುಭದ್ರೆ ಸಿಗುವಂತಾಗಲು ಮಾಡಬೇಕಾದ ಕಾರ್ಯದಬಗ್ಗೆ, ವಿಚಿಂತ್ಯ – ವಿಚಾರಿಸಿ, ಯತಿರೂಪಂ ಗೃಹೀತ್ವಾ – ಸನ್ಯಾಸಿ ವೇಷವನ್ನು ತೆಗೆದುಕೊಂಡು, ಕುಶಸ್ಥಲೀಂ = ದ್ವಾರಕೆಗೆ, ಯಯೌ – ಹೋದನು. ತಂ – ಆ ಅರ್ಜುನನನ್ನು, ಸಮೀಪೇ ಪ್ರಾಪ್ತಂ – ದ್ವಾರಕಾ ಸಮೀಪಕ್ಕೆ ಬಂದವನನ್ನಾಗಿ, ಸಂವಿಜಾನನ್— ತಿಳಿದಂಥ, ಶಯನೀಯಾಧಿರೂಢಃ – ಹಾಸಿಗೆಯಲ್ಲಿರುವ, ಸತ್ಯಾಸಹಾಯಃ — ಸತ್ಯಭಾಮಾ ಸಹಿತನಾದ, ಕೃಷ್ಣಃ–ಶ್ರೀಕೃಷ್ಣನು ಪ್ರಾಹಸತ್—ನಕ್ಕನು. ॥೧೬೬॥

ಸರ್ವಜ್ಞಾ ಸಾ ಲೀಲಯಾ ಹಾಸಹೇತುಮುಪೃಚ್ಛತ್ತಂ ಸೋಽಪಿ ತಸ್ಯೈ ಬಭಾಷೇ ॥
ಲೀಲಾಭಾಜೌ ದರ್ಶನಾರ್ಥಂ ಪುನಸ್ತಾವಗಚ್ಛತಾಂ ರೈವತಂ ಶೈಲರಾಜಮ್ ॥೧೬೭॥

ಸರ್ವಜ್ಞಾ ಸಾ – ಎಲ್ಲವನ್ನು ತಿಳಿದಿರುವ ಆ ಸತ್ಯಭಾಮೆಯು, ಲೀಲಯಾ – ವಿಡಂಬನೆ ಮಾಡುವ ಕಾರಣದಿಂದ, ಹಾಸಹೇತುಂ – ನಗುವಿನ ಕಾರಣವನ್ನು, ಅಪೃಚ್ಛತ್ – ಕೇಳಿದಳು, ಸ:ಅಪಿ—ಆ ಶ್ರೀಕೃಷ್ಣನಾದರೂ ಕೂಡ, ತಂ—ಆ ಕಾರಣವನ್ನು, ತಸ್ಯೈ—ಆ ಸತ್ಯಭಾಮೆಗೆ, ಬಭಾಷೇ—ಹೇಳಿದನು, ಲೀಲಾಭಾಜೌ – ಹೀಗೆ ವಿಡಂಬನೆಯನ್ನು ಮಾಡುತ್ತಿರುವ, ತೌ – ಅವರಿಬ್ಬರೂ, ಪುನಃ – ನಂತರ, ದರ್ಶನಾರ್ಥಂ—ಆ ಯತಿಗಳ ದರ್ಶನಕ್ಕಾಗಿ, ಶೈಲರಾಜಂ ರೈವತಂ – ರೈವತ ಪರ್ವತವನ್ನು ಕುರಿತು, ಆಗಚ್ಛತಾಂ – ಬಂದರು. ॥೧೬೭॥

ಅಕ್ರೀಡೋಽಸೌ ವೃಷ್ಣಿಭೋಜಾಂಧಕಾನಾಂ ತತ್ರಾಪಶ್ಯತ್ಕೇಶವ: ಫಲ್ಗುನಂ ತಮ್ ॥
ಸ್ವಸುರ್ದಾನೇ ಸ ಪ್ರತಿಜ್ಞಾಂ ರಹೋಽಸ್ಮೈ ಚಕ್ರೇಕೃಷ್ಣೋಽಥಾಸದತ್ಸರ್ವವೃಷ್ಣೀನ್ ॥೧೬೮॥

ಅಸೌ – ಆ ರೈವತಪರ್ವತವು, ವೃಷ್ಣಿಭೋಜಾಂಧಕಾನಾಂ – ವೃಷ್ಣಿ, ಭೋಜ, ಅಂಧಕ ಮೊದಲಾದ ಕುಲಗಳಯಾದವರಿಗೆ, ಅಕ್ರೀಡ: – ವಿಹಾರಸ್ಥಾನವಾಗಿತ್ತು, ತತ್ರ – ಆ ಪರ್ವತದಲ್ಲಿ. ಕೇಶವಃ—ಶ್ರೀಕೃಷ್ಣನು, ತಮ್ ಫಲ್ಗುನಂ—ಸನ್ಯಾಸಿ ವೇಷವುಳ್ಳ ಆ ಅರ್ಜುನನನ್ನು, ಅಪಶ್ಯತ್—ನೋಡಿದನು. ಸಃಕೃಷ್ಣಃ—ಆ ಶ್ರೀಕೃಷ್ಣನು, ಅಸ್ಮೈ – ಈ ಅರ್ಜುನನಿಗೆ, ಸ್ವಸುಃದಾನೇ—ತನ್ನ ತಂಗಿಯನ್ನು ಅವನಿಗೆ ಕೊಡುವದರ ಬಗ್ಗೆ, ಪ್ರತಿಜ್ಞಾಂ—ಪ್ರತಿಜ್ಞೆಯನ್ನು, ರಹಃ – ಏಕಾಂತದಲ್ಲಿ, ಚಕ್ರೇ—ಮಾಡಿದನು. ಅಥ – ನಂತರ, ಸರ್ವವೃಷ್ಣೀನ್ – ಎಲ್ಲ ಯಾದವರನ್ನು ಕುರಿತು, ಆಸದತ್–ಬಂದನು. ॥೧೬೮॥

~~ದೃಷ್ಟ್ವಾ ಗಿರೌ ರೌಹಿಣೇಯೋ ಯತೀಂದ್ರವೇಷಂ ಪಾರ್ಥಂ ಜ್ಞಾತಿಯುಕ್ತ: ಪ್ರಣಮ್ಯ ॥~~
ಚಕ್ರೇ ಪೂಜಾಂ ಫಲ್ಗುನೋಽಪಿ ಪ್ರಣಾಮಂ ಗುಣಜ್ಯೇಷ್ಠೋಽಸೀತಿ ಚಕ್ರೇ ಬಲಾಯ ॥೧೬೯॥

ಜ್ಞಾತಿಯುಕ್ತ:—ಬಾಂಧವರಿಂದ ಕೂಡಿಕೊಂಡುಬಂದ, ರೌಹಿಣೇಯಃ—ಬಲರಾಮದೇವನೂ ಕೂಡ, ಗಿರೌ—ಪರ್ವತದಲ್ಲಿ, ಯತೀಂದ್ರವೇಷಂ ಪಾರ್ಥಂ—ಯತಿವೇಷದಲ್ಲಿರುವ ಅರ್ಜುನನನ್ನು, ದೃಷ್ಟ್ವಾ – ನೋಡಿ, ಪ್ರಣಮ್ಯ – ನಮಸ್ಕರಿಸಿ, ಪೂಜಾಂ ಚಕ್ರೇ—ಪೂಜೆಯನ್ನು ಮಾಡಿದನು. ಫಲ್ಗುನಃಅಪಿ—ಅರ್ಜುನನೂ ಕೂಡ, ಗುಣಜ್ಯೇಷ್ಠಃ ಅಸಿ ಇತಿ—ಗುಣಗಳಿಂದ ಶ್ರೇಷ್ಠನಿರುವಿ ಎಂದು ಕಾರಣವನ್ನು ಹೇಳುತ್ತಾ, ಬಲಾಯ – ಬಲರಾಮನಿಗೆ, ಪ್ರಣಾಮಂ ಚಕ್ರೇ – ಪ್ರಣಾಮವನ್ನು ಮಾಡಿದನು. ॥೧೬೯॥

ಸರ್ವಜ್ಞಂ ತಂ ವಾಗ್ಮಿನಂ ವೀಕ್ಷ್ಯ ರಾಮ: ಕನ್ಯಾಗಾರೇ ವರ್ಷಕಾಲೇ ನಿವಾಸಮ್ ॥
ಸತ್ಕಾರಪೂರ್ವಂ ಕಾರಯೇತ್ಯಾಹ ಕೃಷ್ಣಂ ನೈವೇತ್ಯೂಚೇ ಕೇಶವೋ ದೋಷವಾದೀ ॥೧೭೦॥

ರಾಮಃ – ಬಲರಾಮನು, ಸರ್ವಜ್ಞಂ – ಸರ್ವಜ್ಞನಾದ,ವಾಗ್ಮಿನಂ – ವಾಕ್ಚತುರನಾದ, ತಂ—ಆ ಸನ್ಯಾಸಿಯನ್ನು ವೀಕ್ಷ್ಯ-ನೋಡಿ,ವರ್ಷಕಾಲೇ–ಮಳೆಗಾಲದಲ್ಲಿ(ಚಾತುರ್ಮಾಸ್ಯದಲ್ಲಿ),ಕನ್ಯಾಗಾರೇ–ಕನ್ಯಾಗೃಹದಲ್ಲಿ, ನಿವಾಸಂ–ಅವರ ವಾಸವನ್ನು, ಸತ್ಕಾರಪೂರ್ವಂ—ಆದರಪೂರ್ವಕವಾಗಿ, ಕಾರಯ–ಮಾಡಿಸು, ಇತಿ – ಎಂದು, ಕೃಷ್ಣಂ—ಶ್ರೀಕೃಷ್ಣನನ್ನು ಕುರಿತು,ಊಚೇ—ಹೇಳಿದನು. (ಕಿಂತು—ಆದರೆ), ದೋಷವಾದೀ ಕೇಶವಃ—ಕನ್ಯಾಗೃಹದಲ್ಲಿ ವಾಸಮಾಡುವದರ ಬಗ್ಗೆ ದೋಷವನ್ನು ಹೇಳಿದ ಶ್ರೀಕೃಷ್ಣನು, ನೈವ ಇತಿ—ಆ ರೀತಿ ಕೂಡದು ಎಂದು, ಊಚೇ—ಹೇಳಿದನು. ॥೧೭೦॥

ಭಾವಾನುವಾದ : ೧೫೯—೧೭೦ ಅರ್ಜುನನು ಬ್ರಹ್ಮಚರ್ಯ ನಿಯಮವನ್ನು ಉಲ್ಲಂಘಿಸಿದ್ದರಿಂದ ದೋಷವೇನೂ ಬಂದಿಲ್ಲ. ಅವನು ಅಪರೋಕ್ಷ ಜ್ಞಾನಿಯು. ಅಪರೋಕ್ಷ ಜ್ಞಾನಿಗಳಿಗೆ ಸ್ವೋತ್ತಮದ್ರೋಹ ಬಿಟ್ಟು ಬೇರೆ ಯಾವ ಪಾಪದ ಲೇಪವೂ ಆಗುವದಿಲ್ಲ ಎಂದು ಶಾಸ್ತ್ರದಲ್ಲಿ ನಿರ್ಣೀತವಾಗಿದೆ. ಅರ್ಜುನನು ಬ್ರಹ್ಮಚರ್ಯನಿಯಮವನ್ನು ಹಿರಿಯರಾದ ಧರ್ಮ-ಭೀಮರ ಎದುರು ಮಾಡಿದ್ದರಿಂದ ನಂತರ ಬಿಟ್ಟದ್ದರಿಂದ ಉತ್ತಮ ದ್ರೋಹವು ಆಗುವದು ಎಂದು ಶಂಕಿಸಬಾರದು. ಏಕೆಂದರೆ ಉತ್ತಮರಾದ ಅವರಿಬ್ಬರೂ ಅರ್ಜುನಸ್ನೇಹದಿಂದ ಇದನ್ನು ಕ್ಷಮಿಸಿದ್ದಾರೆ ಅವರಿಗೆ ತಾಪ ಕರವಾಗಿಲ್ಲ. ಆದ್ದರಿಂದ ದೋಷಲೇಪವಾಗಲಿಲ್ಲ. ಒಂದು ವರ್ಷದ ಯಾತ್ರೆಯು ಕೊನೆಯಲ್ಲಿ ಪಾಂಡ್ಯ ದೇಶದ ರಾಜನಾದ ವೀರಸೇನನು ತನ್ನ ಮಗಳಾದ ಚಿತ್ರಾಂಗದೆಯನ್ನು ಪುತ್ರಿಕಾ ಪುತ್ರ ಧರ್ಮದಿಂದ ಅರ್ಜುನನಿಗೆ ಕೊಟ್ಟನು. ವೀರ ಸೇನರಾಜನು ತ್ವಷ್ಟೃ ದೇವಾವತಾರನು, ಯಮಾವೇಶಉಳ್ಳವನು, ಚಿತ್ರಾಂಗದೆಯು ಶಚೀದೇವಿಯ ಅವತಾರಳು. ವಾಲಿ ಪತ್ನಿ ತಾರೆಯಾಗಿ ಅವತರಿಸಿದಾಗ ಸುಗ್ರೀವಸಂಗರೂಪ ದೋಷ ಮಾಡಿದ್ದರಿಂದ ಅವಳಿಗೆ ಸ್ವಮೂಲರೂಪಕ್ಕೆ ಹೋಗ ಲಾರದೇ ಅಂತರಿಕ್ಷಲೋಕದಲ್ಲಿದ್ದಳು. ಅಲ್ಲಿಂದಲೇ ಈಗ ಭೂಮಿಯಲ್ಲಿ ಬಂದು ಚಿತ್ರಾಂಗದೆಯಾಗಿ ಅವತರಿಸಿದಳು. ಆ ದೋಷದ ಫಲವಾಗಿಯೇ ಈ ಚಿತ್ರಾಂಗದಾ ರೂಪದಲ್ಲಿಯೂ ಕೂಡ ಅರ್ಜುನನ ಹತ್ತಿರವೇ ಯಾವಾಗಲೂ ಇರುವ ಅವಕಾಶವೂ ಸಿಗಲಿಲ್ಲ. ಅವಳಲ್ಲಿ ಇಂದ್ರಪುತ್ರನಾದ ಜಯಂತನು ಕಾಮಾವೇಶವುಳ್ಳವನಾಗಿ ಬಬ್ರುವಾಹನನೆಂಬುದಾಗಿ ಅವತರಿಸಿದನು. ಇಂಥ ಪರಾಕ್ರಮಿ ಪುತ್ರನನ್ನು ಪಡೆದು ಅರ್ಜುನನು ಮುಂದೆ ಹೊಗುತ್ತಾ, ಕನ್ಯಾತೀರ್ಥಕ್ಕೆ ಬಂದು ಅಲ್ಲಿ ಸ್ನಾನಮಾಡುವಾಗ ಐದು ಮೊಸಳೆಗಳಿಂದ ಹಿಡಿಯಲ್ಪಟ್ಟನು. ಆಗ ಅವುಗಳನ್ನು ತಾನೊಬ್ಬನೇ ದಂಡೆಗೆ ಎಳೆದು ತಂದಾಗ ಅವುಗಳ ಆ ಮೊಸಳೆ ರೂಪ ಹೋಗಿ ಅಪ್ಸರಾ ಸ್ತ್ರೀಯರಾದರು. ಅವರು ಒಬ್ಬ ಬ್ರಾಹ್ಮಣನ ಅಪಹಾಸ ಮಾಡಿದಾಗ ಮೊಸಳೆ ಜನ್ಮವು ಅವರಿಗೆ ಬರುವಂತೆ ಅವನು ಶಪಿಸಿದಾಗ, ಇವರು ನಮಿಸಿ ಪ್ರಾರ್ಥಿಸಿದಾಗ, ಆ ಬ್ರಾಹ್ಮಣನು ನಿಮ್ಮೆಲ್ಲರನ್ನೊಬ್ಬನೇ ಯಾವಾಗ ಎಳೆಯುವನೋ ಆಗ ನಿಮ್ಮ ಈ ಮೊಸಳೆ ಜನ್ಮದಿಂದ ಮುಕ್ತಿ ಸಿಗುವದು ಎಂದು ಹೇಳಿದನು. ಈ ರೀತಿ ಅವರ ನೀಚ ಯೋನಿಯನ್ನು ಬಿಡಿಸಿ, ಅರ್ಜುನನು ಪ್ರಭಾಸ ಕ್ಷೇತ್ರಕ್ಕೆ ಬಂದು ಸುಭದ್ರಾಳನ್ನು ಬಲರಾಮನು ದುರ್ಯೋಧನನಿಗೆ ಕೊಡುವವ ನಿದ್ದಾನೆ ಎಂದು ಸುದ್ದಿಯನ್ನು ಕೇಳಿ, ತನಗೆ ಸಿಗುವಂತೆ ಆಗಲು ಏನು ಮಾಡಬೇಕೆಂದು ಯೋಚಿಸಿ, ಸನ್ಯಾಸಿ ವೇಷವನ್ನು ತಾಳಿ, ದ್ವಾರಕಾ ಸಮೀಪದ ರೈವತ ಪರ್ವತಕ್ಕೆ ಹೋದನು. ಅದು ಯಾದವರ ವಿಹಾರ ಸ್ಥಳವು. ಅಲ್ಲಿಗೆ ಬಂದ ವಿಷಯವನ್ನು ತಿಳಿದ ಸರ್ವಜ್ಞನಾದ ಶ್ರೀಕೃಷ್ಣನು ಆಗ ತಾನು ಶ್ರೀಸತ್ಯಭಾಮಾದೇವಿಯೊಡಗೂಡಿ ಶಯ್ಯಾದಲ್ಲಿರುವವನು ಒಮ್ಮೆಲೆ ನಕ್ಕನು. ಸತ್ಯಭಾಮೆಯೂ ಕೂಡ ತಿಳಿದವಳಾದರೂ ಮನುಷ್ಯರಂತೆ ವಿಡಂಬನೆಯನ್ನು ಮಾಡುತ್ತಾ, ನಗುವಿನ ಕಾರಣವನ್ನು ಕೇಳಿದಳು. ಅವಳಿಗೆ ಗೊತ್ತಿದ್ದರೂ ನಾಟಕ ಮಾಡುತ್ತಿದ್ದಾಳೆ ಎಂದು ತಿಳಿದ ಶ್ರೀಕೃಷ್ಣನು ತಾನೂ ಉತ್ತರಿಸುವ ನಾಟಕ ಮಾಡಿದನು. ಇಬ್ಬರೂ ಕೂಡಿ ರೈವತಕ್ಕೆ ಬಂದು ಅರ್ಜುನನನ್ನು ಕಂಡರು. ಶ್ರೀಕೃಷ್ಣನು ಏಕಾಂತದಲ್ಲಿ ಅರ್ಜುನನಿಗೆ ಸುಭದ್ರೆಯನ್ನು ಕೊಡುವ ಪ್ರತಿಜ್ಞಾ ಮಾಡಿ, ಯಾದವರ ಸಮೀಪಕ್ಕೆ ಬಂದನು. ಬಲರಾಮದೇವನು ಸನ್ಯಾಸಿಗಳು ಊರ ಸಮೀಪಕ್ಕೆ ಬಂದದ್ದನ್ನು ತಿಳಿದು ಬಂಧುಯುಕ್ತನಾಗಿ ಹೋಗಿ ದರ್ಶನ ಮಾಡಿ ಅವರಿಗೆ ನಮಸ್ಕರಿಸಿದನು, ಅವರೂ ಇವನಿಗೆ ನಮಸ್ಕಾರ ಮಾಡಿದಾಗ, ಸನ್ಯಾಸಿಗಳು ನಮಗೆ ನಮಸ್ಕಾರ ಮಾಡಬಾರದು ಎಂದು ಬಲರಾಮದೇವನು ಅಂದರೆ, ಆ ಸನ್ಯಾಸಿಗಳು ನಾವು ಆಶ್ರಮದಿಂದ ಶ್ರೇಷ್ಠರಾದರೂ, ನೀನು ಗುಣಗಳಿಂದ ನನಗಿಂತ ಶ್ರೇಷ್ಠನಿರುವಿ ಎಂದು ಹೇಳಿದರು. ಈ ರೀತಿ ನಮ್ರರಾದ ವಾಗ್ಮಿಯಾದ, ಸರ್ವಜ್ಞರಾದ ಆ ಯತಿಯನ್ನು ಕಂಡು ಆಕರ್ಷಿತನಾಗಿ ಅವರಿಗೆ ಚಾತುರ್ಮಾಸ್ಯಕ್ಕೆ ತಮ್ಮಲ್ಲಿಗೆ ಬರಲು ಆ ಹ್ವಾನ ಕೊಟ್ಟು ಅವರಿಗೆ ಕನ್ಯಾಗೃಹದಲ್ಲಿ ವಾಸಿಸಲು ಆದರ ಪೂರ್ವಕ ಎಲ್ಲ ವ್ಯವಸ್ಥೆ ಮಾಡಬೇಕು ಎಂದು ಶ್ರೀಕೃಷ್ಣನಿಗೆ ಹೇಳಿದನು. ಆಗ ಶ್ರೀಕೃಷ್ಣನು ಕನ್ಯಾಗೃಹದಲ್ಲಿ ಅವಕಾಶ ಮಾಡಿಕೊಡುವದರಿಂದ ಆಗ ಬಹುದಾದ ದೋಷಗಳನ್ನು ನಿರೂಪಿಸುತ್ತಾ ಇದು ಸರಿಯಲ್ಲವೆಂದು ಹೇಳಿದನು.

ಯುವಾ ಬಲೀ ದರ್ಶನೀಯೋಽತಿವಾಗ್ಮೀ ನಾಯಂ ಯೋಗ್ಯಃ ಕನ್ಯಕಾಗಾರವಾಸಮ್ ।
ಇತ್ಯುಕ್ತವಂತಂ ರಾಮ ಆಹಾಪ್ತವಿದ್ಯೇ ನಾಸ್ಮಿನ್ ಶಂಕೇತ್ಯೇವ ಲೋಕಾಧಿನಾಥಮ್ ॥೧೭೧॥

ಅಯಂ – ಈ ಸನ್ಯಾಸಿಯು, ಯುವಾ – ತರುಣನು ಬಲೀ – ಬಲಿಷ್ಠನು, ದರ್ಶನೀಯಃ – ಸುಂದರನು, ಅತಿ ವಾಗ್ಮೀ – ಅತ್ಯಂತ ವಾಕ್ಚತುರನು, (ಆದ್ದರಿಂದ) ಕನ್ಯಕಾಗಾರವಾಸಂ – ಕನ್ಯಾಗೃಹದ ವಾಸಕ್ಕೆ, ನ ಯೋಗ್ಯಃ – ಯೋಗ್ಯನಲ್ಲ, ಇತಿ – ಎಂದು, ಉಕ್ತವಂತಂ – ಹೇಳಿದಂತಹ, ಲೋಕಾಧಿನಾಥಂ – ಲೋಕನಿಯಾಮಕನಾದ, ಶ್ರೀಕೃಷ್ಣ ಪರಮಾತ್ಮನನ್ನು ಕುರಿತು, ರಾಮಃ – ಬಲರಾಮದೇವರು, ಆಪ್ತವಿದ್ಯೇ – ವಿದ್ಯಾವಂತನಾದ, ಅಸ್ಮಿನ್ – ಇವನ ಬಗ್ಗೆ, ಕಂಕಾ – ಸಂಶಯವು, ನ(ಕಾರ್ಯಾ) – ಮಾಡಲ್ಪಡಬಾರದು, ಇತಿ – ಎಂದು, ಆಹ – ಹೇಳಿದರು. ॥೧೭೦॥

ನಾಸ್ಮನ್ಮತೇ ರೋಚತೇ ತ್ವನ್ಮತಂ ತು ಸರ್ವೇಷಾಂ ನಃ ಪೂಜ್ಯಮೇವಾಸ್ತು ತೇನ ॥
ಇತ್ಯುಕ್ತ್ವಾ ತಂ ಕೇಶವಸ್ಸೋದರಾಯೈ ಶುಶ್ರೂಷಸ್ವೇತ್ಯಾಹ ಸಂತಂ ಯತೀಂದ್ರಮ್ ॥೧೭೨॥

ಕೇಶವಃ – ಶ್ರೀಕೃಷ್ಣನು, ಅಸ್ಮನ್ಮತೇ – ನನ್ನ ಅಭಿಪ್ರಾಯದಲ್ಲಿ, ನ ರೋಚತೇ – ಸರಿ ಎಂದು ತೋರುವದಿಲ್ಲ, ತು – ಆದರೆ, ತ್ವನ್ಮತಂ – ನಿನ್ನ ಅಭಿಪ್ರಾಯವು, ನಃ ಸರ್ವೇಷಾಂ – ನಮ್ಮೆಲ್ಲರಿಗೂ, ಪೂಜ್ಯಮೇವ – ಪೂಜ್ಯವೇ ಆಗಿದೆ, ತೇನ – ಆ ಕಾರಣದಿಂದ, ಅಸ್ತು – ಆಗಲಿ, ಇತಿ – ಎಂದು, ತಂ – ಆ ಶ್ರೀಕೃಷ್ಣ ಪರಮಾತ್ಮನಿಗೆ, ಉಕ್ತ್ವಾ – ಹೇಳಿ, ಸೋದರಾಯೈ – ಸುಭದ್ರೆಗೆ, ಸಂತಂ – ಉತ್ತಮರಾದ, ಯತೀಂದ್ರಂ – ಸನ್ಯಾಸಿಗಳನ್ನು, ಶುಶ್ರೂಷಸ್ವ – ಸೇವಿಸು, ಇತಿ ಆಹ – ಎಂದು ಹೇಳಿದನು. ॥೧೭೨॥

ನಿತ್ಯಾಪ್ರಮತ್ತಾ ಸಾಧು ಸಂತೋಷಯೇತಿ ಪ್ರೋಕ್ತಾ ತಥಾಸಾsಕರೋತ್ಸೋsಪಿ ತತ್ರ ॥
ಚಕ್ರೇ ಮಾಸಾನ್ವಾರ್ಷಿಕಾನ್ ಸತ್ಕಥಾಭಿರ್ವಾಸಂ ವಾಕ್ಯಂ ಶ್ರದ್ದಧಾನೋ ಹರೇಸ್ತತ್ ॥೧೭೩॥

ನಿತ್ಯಾಪ್ರಮತ್ತಾ – ಸತೀ – ಯಾವಾಗಲೂ ಅಲಕ್ಷ್ಯತೆ ಇಲ್ಲದವಳಾಗಿ, ಸಾಧು – ಚೆನ್ನಾಗಿ, ಸಂತೋಷಯ – (ಯತಿಯನ್ನು) ಸಂತೋಷಪಡಿಸು, ಇತಿ – ಎಂದು, ಪ್ರೋಕ್ತಾ – ಶ್ರೀಕೃಷ್ಣನಿಂದ ಹೇಳಿಸಿಕೊಳ್ಳಲ್ಪಟ್ಟ, ಸಾ – ಆ ಸುಭದ್ರೆಯು, ತಥಾ ಅಕರೋತ್ – ಹಾಗೆ ಸೇವೆ ಮಾಡಿದಳು. ಸಃ ಅಪಿ – (ಅರ್ಜುನನು) ಸನ್ಯಾಸಿಗಳು, ತತ್ರ – ಅಲ್ಲಿ ವಾರ್ಷಿಕಾನ್ ಮಾಸಾನ್ – ಮಳೆಗಾಲದ ನಾಲ್ಕು ತಿಂಗಳುಗಳ ವರೆಗೆ, ಹರೇಃ ತತ್ ವಾಕ್ಯಂ – ಶ್ರೀಕೃಷ್ಣನು ಏಕಾಂತದಲ್ಲಿ ತನಗೆ ಹೇಳಿದ ಆ ಮಾತನ್ನು ಶ್ರದ್ದಧಾನಃ ಸನ್ – ನಂಬಿದವನಾಗಿ. ಸತ್ಕಥಾಭಿಃ – ಸತ್ಕಥೆಗಳನ್ನು, ನಡೆಸುತ್ತಾ, ವಾಸಂ ಚಕ್ರೇ – ವಾಸ ಮಾಡಿದನು. ॥೧೭೩॥

ಸಂಯಾಚಿತಃ ಫಲ್ಗುನೇನಾಹ ವಾಕ್ಯಂ ಯದ್ವಾಸುದೇವಸ್ತನ್ನ ಜಾನಾತಿ ಕಶ್ಚಿತ್ ॥
ಋತೇ ಪಿತ್ರೋರ್ವಿಪೃಥೋಸ್ಸಾತ್ಯಕೇರ್ವಾ ಸುಭದ್ರಾಂ ತೇ ಪ್ರದದಾನೀತಿ ಸತ್ಯಮ್ ॥೧೭೪॥

ಫಲ್ಗುನೇನ – ಅರ್ಜುನನಿಂದ, ಸಂಯಾಚಿತಃ ಸನ್ – ಪ್ರಾರ್ಥಿತನಾಗಿ, ವಾಸುದೇವಃ – ಶ್ರೀಕೃಷ್ಣನು, ತೇ – ನಿನಗೆ, ಸುಭದ್ರಾಂ ಪ್ರದದಾನಿ – ಸುಭದ್ರೆಯನ್ನು ಕೊಡುತ್ತೇನೆ. ಸತ್ಯಂ – ನಿಜವು, ಇತಿ – ಎಂಬ. ಯತ್ ವಾಕ್ಯಂ – ಯಾವ ಮಾತನ್ನು, ಆಹ – ಹೇಳಿದ್ದನೋ, ತತ್ – ಆ ಮಾತನ್ನು, ಪಿತ್ರೋಃ ಋತೇ – ತಂದೆತಾಯಿಗಳನ್ನು ಬಿಟ್ಟು, ವಿಪೃಥೋಃ ಋತೇ – ವಿಪೃಥು ಎಂಬವನನ್ನು ಬಿಟ್ಟು, ಸಾತ್ಯಕೇಃ ಋತೇ – ಸಾತ್ಯಕಿಯನ್ನು ಬಿಟ್ಟು, ಕಶ್ಚಿತ್ – ಬೇರೆ ಯಾವನೂ ನ ಜಾನಾತಿ – ತಿಳಿದಿರುವದಿಲ್ಲ. ॥೧೭೪॥

ಅವತಾರಿಕೆ : – ಸಾತ್ಯಕ ಹಾಗು ವಿಪೃಥು ಇವರಿಗೆ ತಿಳಿದಿರುವದಕ್ಕೆ ಕಾರಣವನ್ನು ಹೇಳುತ್ತಾರೆ –

ಅಸ್ತ್ರೇ ಶಸ್ತ್ರೇ ತತ್ತ್ವವಿದ್ಯಾಸು ಚೈವ ಶಿಷ್ಯಶ್ಚೈನೇಯೋ ವಾಸುದೇವೇಂದ್ರಸೂನ್ವೋಃ ॥
ತಸ್ಮಾದಸ್ಮೈ ಕಥಯಾಮಾಸ ಕೃಷ್ಣಃ ಸ್ವಶಿಷ್ಯತ್ವಾದ್ವಿಪೃಥೋಶ್ಚಾಪಿ ಸರ್ವಮ್ ॥೧೭೫॥

ಶೈನೇಯಃ – ಸಾತ್ಯಕಿಯು, ಅಸ್ತ್ರೇ ಶಸ್ತ್ರೇ ತತ್ತ್ವವಿದ್ಯಾಸು ಚ –ಅಸ್ತ್ರವಿದ್ಯೆಯಲ್ಲಿ, ಶಸ್ತ್ರವಿದ್ಯೆಯಲ್ಲಿ, ತತ್ತ್ವಜ್ಞಾನದಲ್ಲಿಯೂ ಕೂಡ, ವಾಸುದೇವೇಂದ್ರಸೂನ್ವೋಃ—ಶ್ರೀಕೃಷ್ಣಾರ್ಜುನರಿಗೆ, ಶಿಷ್ಯಃ—ಶಿಷ್ಯನು, ತಸ್ಮಾತ್ – ಆದ್ದರಿಂದ, ಕೃಷ್ಣಃ – ಶ್ರೀಕೃಷ್ಣನು, ಅಸ್ಮೈ—ಈ ಸಾತ್ಯಕಿಗೆ, ಚ—ಹಾಗು, ಸ್ವಶಿಷ್ಯತ್ವಾತ್ – (ವಿಪೃಥು ಎಂಬವನು) ಕೇವಲ ತನ್ನ (ಶ್ರೀಕೃಷ್ಣನ) ಶಿಷ್ಯನಾದ್ದರಿಂದ, ವಿಪೃಥೋಃ ಅಪಿ – ವಿಪೃಥು ಎಂಬವನಿಗೂ ಕೂಡ, ಸರ್ವಂ—ಎಲ್ಲ ವಿಷಯವನ್ನು, ಕಥಯಾಮಾಸ—ಹೇಳಿದನು. ॥೧೭೫॥

ಅವತಾರಿಕೆ : – ಉಳಿದವರಿಗೆ ಹೇಳದಿರಲು ಕಾರಣ ಹೇಳುತ್ತಾರೆ. –

ಅನ್ಯೇ ಸರ್ವೇ ವಾಸುದೇವಸ್ಯ ಪಾರ್ಥಾನ್ಪ್ರಿಯಾನ್ನಿತ್ಯಂ ಜಾನವಾನಾ ಅಪಿ ಸ್ಮ ॥
ರಾಮೇಣಾದಿಷ್ಟಾ ಉದ್ಧವೋಽಥಾಽಹುಕಾದ್ಯಾ ಹಾರ್ದಿಕ್ಯಾದ್ಯಾ ನೈವದಿತ್ಸಂತಿ ಜಿಷ್ಣೋಃ ॥೧೭೬॥

ಉದ್ಧವಃ—ಉದ್ಧವನು, ಆಹುಕಾದ್ಯಾಃ–ಉಗ್ರಸೇನನೇ ಮೊದಲಾದ, ಹಾರ್ದಿಕ್ಯಾದ್ಯಾಃ–ಕೃತವರ್ಮನೇ ಮೊದಲಾದ, ಅನ್ಯೇ ಸರ್ವೇ – ಉಳಿದೆಲ್ಲರೂ, ಪಾರ್ಥಾನ್–ಪಾಂಡವರನ್ನು. ನಿತ್ಯಂ—ಯಾವಾಗಲೂ, ವಾಸುದೇವಸ್ಯ ಪ್ರಿಯಾನ್–ಶ್ರೀಕೃಷ್ಣನಿಗೆ ಪ್ರಿಯರಾದವರನ್ನಾಗಿ, ಜಾನವಾನಾಃ ಅಪಿ – ತಿಳಿದವರಾದರೂ ಕೂಡ, ರಾಮೇಣ—ಬಲರಾಮದೇವರಿಂದ ಆದಿಷ್ಟಾಃ ಸಂತಃ – ಆಜ್ಞಪ್ತರಾದವರಾಗಿ, ಜಿಷ್ಣೋಃ – ಅರ್ಜುನನಿಗೆ, ನೈವ ದಿತ್ಸಂತಿಸ್ಮ – (ಸುಭದ್ರೆಯನ್ನು) ಕೊಡಲು, ಇಚ್ಛಿಸುತ್ತಿದ್ದಿಲ್ಲ. ॥೧೭೬॥

ದುರ್ಯೋಧನೇ ದಾತುಮಿಚ್ಛಂತಿ ಸರ್ವೇ ರಾಮಪ್ರಿಯಾರ್ಥಂ ಜಾನವಾನಾ ಹರೇಸ್ತತ್ ॥
ಅಪ್ರಿಯಂ ರಾಕ್ಷಸಾವೇಶಯುಕ್ತಾಸ್ತಸ್ಮಾತ್ಸರ್ವಾನ್ವಂಚಯಾಮಾಸ ಕೃಷ್ಣಃ ॥೧೭೭॥

ಸರ್ವೇ—ಎಲ್ಲರೂ, ರಾಮಪ್ರಿಯಾರ್ಥಂ—ಬಲರಾಮನ ಸಂತೋಷಕ್ಕಾಗಿ, ತತ್–ದುರ್ಯೋಧನನಿಗೆ ಕೊಡುವದನ್ನು, ಹರೇಃ—ಶ್ರೀಕೃಷ್ಣನಿಗೆ, ಅಪ್ರಿಯಂ – ಅಸಮ್ಮತವನ್ನಾಗಿ, ಜಾನವಾನಾ ಅಪಿ—ತಿಳಿದವರಾದರೂ ಕೂಡ, ರಾಕ್ಷಸಾವೇಶಯುಕ್ತಾಃ ಸಂತಃ – ರಾಕ್ಷಸಾವೇಶದಿಂದ ಕೂಡಿದವರಾಗಿ, ದುರ್ಯೋಧನೇ–ದುರ್ಯೋಧನನಿಗೆ, ದಾತುಂ ಇಚ್ಛಂತಿ–ಕೊಡಲು ಇಚ್ಛಿಸುತ್ತಿದ್ದರು. ತಸ್ಮಾತ್—ಆ(ಭಗವನ್ನಿಷ್ಠೆ ದೃಢವಾಗಿರದ)ಕಾರಣದಿಂದ, ಕೃಷ್ಣಃ – ಶ್ರೀಕೃಷ್ಣನು; ಸರ್ವಾನ್—ಎಲ್ಲರನ್ನು, ವಂಚಯಾಮಾಸ – ವಂಚಿಸಿದನು. ॥೧೭೭॥

ಪ್ರದ್ಯುಮ್ನಸಾಂಬಪ್ರಮುಖಾಶ್ಚ ವಂಚಿತಾ ಯೆಯುಸ್ತೀರ್ಥಾರ್ಥಂ ರಾಮಯುಕ್ತಾಸ್ಸಮಗ್ರಾಃ ॥
ಪಿಂಡೋದ್ಧಾರಂ ತತ್ರ ಮಹೋತ್ಸವೇಷು ಪ್ರವರ್ತಮ್ಸ್ಕ್ವಚಿದೂಚೇ ಸುಭದ್ರಾ ॥೧೭೮॥

ಪ್ರದ್ಯುಮ್ನಸಾಂಬಪ್ರಮುಖಾಃ ಚ—ಪ್ರದ್ಯುಮ್ನ ಸಾಂಬ ಮೊದಲಾದವರೂ ಕೂಡ, ವಂಚಿತಾಃ – ಶ್ರೀಕೃಷ್ಣನಿಂದ ವಂಚಿಸಲ್ಪಟ್ಟರು, ರಾಮಯುಕ್ತಾಸಮಗ್ರಾಃ—ಬಲರಾಮದೇವರಿಂದ ಕೂಡಿದ ಎಲ್ಲರೂ, ತೀರ್ಥಾರ್ಥಂ – ತೀರ್ಥಯಾತ್ರೆಗಾಗಿ, ಪಿಂಡೋದ್ಧಾರಂ—ಪಿಂಡೋದ್ಧಾರ ಕ್ಷೇತ್ರವನ್ನು ಕುರಿತು, ಯಯುಃ:—ಹೋದರು, ತತ್ರ—ಅಲ್ಲಿ, ಮಹೋತ್ಸ

ವೇಷು – ಶ್ರೇಷ್ಠ ಉತ್ಸವಗಳು, ಪ್ರವರ್ತತ್ಸ ಸತ್ಸು – ನಡೆದಿರಲು, ಕ್ವಚಿತ್—ಒಮ್ಮೆ, ಸುಭದ್ರಾ – ಸುಭದ್ರೆಯು, ಊಚೇ—ಮಾತನಾಡಿದಳು. ॥೧೭೯॥

ಯತೇ ತೀರ್ಥಾನ್ಯಾಚರನ್ ಬಾಂಧವಾಂಸ್ತ್ವಮದ್ರಾಕ್ಷೀರ್ನಃ ಕಚ್ಚಿದಿಷ್ಟಾನ್ಸ್ವಪಾರ್ಥಾನ್ ॥
ಕುಂತೀಂ ಕೃಷ್ಣಾಂ ವೇತ್ಯಾಹ ಪೃಷ್ಟಸ್ಸ ಪಾರ್ಥ ಓಮಿತ್ಯೇಷಾಮಾಹ ಚಾನಾಮಯಂ ಸಃ ॥೧೭೯॥

ಯತೇ—ಸ್ವಾಮಿಗಳೇ, ತೀರ್ಥಾನಿ—ತೀರ್ಥಕ್ಷೇತ್ರಗಳನ್ನು, ಆಚರನ್—ಸಂಚರಿಸತಕ್ಕ, ತ್ವಂ-—ನೀವು, ನಃ-ಬಾಂಧವಾನ್—ನಮಗೆ ಬಂಧುಗಳಾದ, ಇಷ್ಟಾನ್ – ಪ್ರಿಯರಾದ, ಪಾರ್ಥಾನ್—ಪಾಂಡವರನ್ನು, ಕುಂತೀಂ – ಕುಂತೀದೇವಿಯನ್ನು, ಕೃಷ್ಣಾಂ ವಾ-ದ್ರೌಪದೀದೇವಿಯನ್ನಾಗಲಿ, ಕಚ್ಚಿತ್ – ಎಲ್ಲಿಯಾದರೂ, ಅದ್ರಾಕ್ಷೀಃ – ನೋಡಿದಿರಾ, ಇತಿ – ಎಂದು (ಮಾತನಾಡಿದಳು ಎಂದು ಹಿಂದಿನ ಶ್ಲೋಕಕ್ಕೆ ಅನ್ವಯ). ಇತಿ ಪೃಷ್ಟಃಸ:ಪಾರ್ಥಃ—ಈ ರೀತಿಯಾಗಿ ಕೇಳಿಸಿಕೊಳ್ಳಲ್ಪಟ್ಟ ಆ ಅರ್ಜುನನು, ಓಂ ಇತಿ – 'ಆಹುದು' ಎಂದು, ಆಹ—ಹೇಳಿದನು. ಚ—ಮತ್ತು, ಏಷಾಂ – ಈ ಪಾಂಡವರ, ಅನಾಮಯಂ ಚ—ಆರೋಗ್ಯದ ಬಗ್ಗೆ ಕೂಡ, ಸ: – ಆ (ಅರ್ಜುನ) ಸನ್ಯಾಸಿಯು, ಆಹ – ಹೇಳಿದನು. ॥೧೭೯॥

ಭೂಯಸ್ಸಾsವಾದೀದ್ಭಗವನ್ನಿಂದ್ರಸೂನುರ್ಗತಸ್ತೀರ್ಥಂ ಬ್ರಾಹ್ಮಣೇಭ್ಯಃ ಶ್ರುತೋ ಮೇ ॥
ಕ್ವಚಿದ್ದೃಷ್ಟೋ ಭವತೇತ್ಯೋಮಿತಿ ಸ್ಮ ಪಾರ್ಥೋsಪ್ಯೂಚೇಕ್ವೇತಿ ಸಾsಪೃಚ್ಛದೇನಮ್ ॥೧೭೦॥

ಸಾ – ಆ ಸುಭದ್ರೆಯು, ಭೂಯ:-ಮತ್ತೆ, ಭಗವನ್-ಪೂಜ್ಯಯತಿಗಳೇ, ಇಂದ್ರಸೂನು:-ಅರ್ಜುನನು, ತೀರ್ಥಂ ಗತಃ-ತೀರ್ಥಯಾತ್ರೆಗೆ ಹೋದವನಾಗಿ,ಮೇ-ನನ್ನಿಂದ, ಬ್ರಾಹ್ಮಣೇಭ್ಯ:-ಬ್ರಾಹ್ಮಣರ ಮುಖದಿಂದ, ಶ್ರುತ:-ಕೇಳಲ್ಪಟ್ಟವನಾದ (ಸಃ-ಅವನು,)ಕ್ವಚಿತ್ – ಎಲ್ಲಿಯಾದರೂ, ಭವತಾ ದೃಷ್ಟ: – ನಿಮ್ಮಿಂದ ನೋಡಲ್ಪಟ್ಟವನೋ? ಇತಿ—ಎಂದು ಏವಾದೀತ್ – ಹೇಳಿದಳು. ಓಂ ಇತಿ —ಆಹುದು ಎಂದು, ಪಾರ್ಥ:ಅಪಿ-ಅರ್ಜುನನೂ ಕೂಡ, ಊಚೇ—ಹೇಳಿದನು. ಸಾ —ಆ ಸುಭದ್ರೆಯು, ಕ್ವ ಇತಿ-ಎಲ್ಲಿ (ನೋಡಿದಿ)ಎಂದು, ಏನಂ – ಈ(ಅರ್ಜುನ) ಸನ್ಯಾಸಿಯನ್ನು, ಅಪೃಚ್ಛತ್—ಕೇಳಿದಳು. ॥೧೮೦॥

ಅತ್ರೈವೇತಿ ಸ್ಮಯಮಾನಂ ಚ ಪಾರ್ಥಂಪುನಃ ಪುನಃ ಪರ್ಯಪೃಚ್ಛಚ್ಛುಭಾಂಗೀ ॥
ಸೋsಪ್ಯಾಹೋನ್ಮತ್ತೇ ಸೋsಸ್ಮಿ ಹೀತಿ ಸ್ಮಯಂಸ್ತಾಂ ಫುಲ್ಲಾಕ್ಷೀತಂ ಸಾ ದದರ್ಶಾತಿಹೃಷ್ಟಾ॥ ೧೮೧॥

ಅತ್ರ ಏವ—ಇಲ್ಲಿಯೇ (ನೋಡಿರಬಹುದೆನೆ) ಎಂದು, (ಉಕ್ತಾವ – ಹೇಳಿ) ಸ್ಮಯಮಾನಂ—ಆಶ್ಚರ್ಯಪಡಿಸತಕ್ಕ, ಪಾರ್ಥಂ—ಅರ್ಜುನನನ್ನು, ಪುನಃಪುನಃ – ಮತ್ತೂ ಮತ್ತೂ, ಶುಭಾಂಗೀ—ಸುಂದರಾಂಗಳಾದ ಸುಭದ್ರೆಯು, ಪರ್ಯಪೃಚ್ಛತ್-ಕೇಳಿದಳು. ಸಃಅಪಿ-ಆ ಅರ್ಜುನನೂ ಕೂಡ, ಉನ್ಮತ್ತೇ-ಎಲೋ ಕಾಮವಶಳೇ, ಅಜ್ಞಳೆ ಸ:'ಆ ಅರ್ಜುನನು, ಅಹಂ ಅಸಿ – (ನಾನೇ) ಇರುತ್ತೇನೆ, ಇತಿ— ಎಂದು, ತಾಂ ಸ್ಮಯನ್ ಸನ್ – ಅವಳನ್ನು ಆಶ್ಚರ್ಯ ಪಡಿಸುತ್ತಾ, ಆಹ—ಹೇಳಿದನು (ತದಾ – ಆಗ) ಅತಿಹೃಷ್ಟಾ – ಅತಿಸಂತೋಷಗೊಂಡ, ಫುಲ್ಲಾಕ್ಷೀ—ವಿಕಸಿತ ಕಣ್ಣುಗಳುಳ್ಳ, ಸಾ – ಅವಳು, ತಂ – ಆ ಅರ್ಜುನನನ್ನು, ದದರ್ಶ – ನೋಡಿದಳು. ॥೧೮೧॥

ತತೋ ಹರ್ಷಾಲ್ಲಜ್ಜಯಾ ಚೋತ್ಪಲಾಕ್ಷೀ ಕಿಂಚಿನ್ನೋಚೇ ಪಾರ್ಥ ಏನಾಮುವಾಚ ॥
ಕಾಮಾವಿಷ್ಟೋ ಮುಖ್ಯಕಾಲೋ ಹ್ಯಯಂ ನಾವು ದ್ವಾಹಾರ್ಥಂತ್ವಿತಿ ಸಾ ಚೈನ ಮಾಹ ॥೧೮೨॥

ತತಃ – ಅನಂತರ, ಉತ್ಪಲಾಕ್ಷೀ – ನೀಲಕಮಲದಂತೆ ಕಣ್ಣುಗಳುಳ್ಳ ಸುಭದ್ರೆಯು, ಹರ್ಷಾತ್ – ಆನಂದದಿಂದ, ಲಜ್ಜಯಾ ಚ – ನಾಚಿಕೆಯಿಂದಲೂ ಕೂಡ, ಕಿಂಚಿತ್ – ಏನನ್ನೂ, ನ ಊಚೇ – ಮಾತನಾಡಲಿಲ್ಲ, ಕಾಮಾವಿಷ್ಟಃ ಪಾರ್ಥಃ – ಕಾಮಾವಿಷ್ಟನಾದ ಅರ್ಜುನನು, ಏನಾಂ – ಈ ಸುಭದ್ರೆಯನ್ನು ಕುರಿತು, ನೌ – ನಮ್ಮಿಬ್ಬರ, ಉದ್ವಾಹಾರ್ಥಂ – ವಿವಾಹಕ್ಕಾಗಿ ಅಯಂ – ಈ ಸಮಯವು, ಮುಖ್ಯಕಾಲಃ – ಮುಖ್ಯ ಸಮಯವು. ಹಿ – ನಿಶ್ಚಯವು. ಇತಿ – ಎಂದು, ಉವಾಚ – ಮಾತನಾಡಿದನು. ಸಾ ಚ – ಆ ಸುಭದ್ರೆಯಾದರೂ, ಏನಂ – ಈ ಅರ್ಜುನನನ್ನು ಕುರಿತು, ಆಹ – ಹೇಳಿದಳು. ॥೧೮೨॥

ನಾತಿಕ್ರಮೋ ವಾಸುದೇವಸ್ಯ ಯುಕ್ತಸ್ತಸ್ಮಾತ್ತೇನ ಸ್ವಪಿತೃಭ್ಯಾಂ ಚ ದತ್ತಾಮ್ ॥
ಯುಕ್ತೋ ನಿಜೈರ್ಬಂಧುಭಿಶ್ಚೋತ್ಸವೇ ಮಾಂ ಸಮುದ್ವಹೇತ್ಯಥ ಕೃಷ್ಣಂ ಸದಧ್ಯೌ ॥೧೮೩॥

ವಾಸುದೇವಸ್ಯ – ಶ್ರೀಕೃಷ್ಣನ, ಅತಿಕ್ರಮಃ – ಮೀರುವಿಕೆಯು (ಅಂದರೆ ಅವನ್ನು ಬಿಟ್ಟೇ ವಿವಾಹವಾಗುವದು), ನ ಯುಕ್ತಃ – ಯೋಗ್ಯವಲ್ಲ, ತಸ್ಮಾತ್ – ಆದ್ದರಿಂದ, ತೇನ – ಶ್ರೀಕೃಷ್ಣನಿಂದ, ಚ – ಮತ್ತು, ಸ್ವಪಿತೃಭ್ಯಾಂ – ನನ್ನ ತಂದೆ ತಾಯಿಗಳಿಂದ, ದತ್ತಾಂ – ಕೊಡಲ್ಪಟ್ಟ, ಮಾಂ – ನನ್ನನ್ನು, ನಿಜೈಃಬಂಧುಭಿಃ ಚ – ನಿನ್ನ ಬಾಂಧವರಿಂದಲೂ, ಯುಕ್ತ ಸನ್ – ಕೂಡಿದವನಾಗಿ, ಉತ್ಸವೇ – ವೈಭವದಿಂದ ಕೂಡಿದ ವಿವಾಹ ಸಮಾರಂಭದಲ್ಲಿ, ಸಮುದ್ವಹ – ಸ್ವೀಕರಿಸು, ಇತಿ – ಎಂದು, (ಆಹ – ಹೇಳಿದಳು, ಎಂದು ಹಿಂದಿನ ಶ್ಲೋಕಕ್ಕೆ ಅನ್ವಯ.) ಅಥ – ಅನಂತರ, ಸಃ – ಆ ಅರ್ಜುನನು, ಕೃಷ್ಣಂ – ಶ್ರೀಕೃಷ್ಣ ಪರಮಾತ್ಮನನ್ನು, ದಧ್ಯೌ – ಸ್ಮರಿಸಿದನು. ॥೧೮೩॥

ಮಾತಾಪಿತೃಭ್ಯಾಂ ಸಹಿತೋಽಥ ಕೃಷ್ಣಸ್ತತ್ರೈವಾಯಾದ್ವಾಸವಶ್ಚಾಥ ಶಚ್ಯಾ ॥
ಸಮಂ ಮುನೀಂದ್ರೈಃ ಫಲ್ಗುನೇನ ಸ್ಮೃತಸ್ಸಂಸ್ತತ್ರೈವಾಗಾತ್ಪ್ರೀತಿಯುಕ್ತೋ ನಿಶಾಯಾಮ್ ॥೧೮೪॥

ಅಥ – ಅರ್ಜುನನು ಸ್ಮರಿಸಿದನಂತರ, ಕೃಷ್ಣಃ – ಶ್ರೀಕೃಷ್ಣನು, ಮಾತಾಪಿತೃಭ್ಯಾಂ ಸಹಿತಃಸನ್ – ತಂದೆತಾಯಿ ವಸುದೇವದೇವಕಿಯರಿಂದ ಕೂಡಿದವನಾಗಿ, ತತ್ರಏವ – ಆ ಸ್ಥಳಕ್ಕೇನೇ, ಆಯಾತ್ – ಬಂದನು, ಅಥ – ಹಾಗು, ಫಲ್ಗುನೇನ ಸ್ಮೃತಃ – ಅರ್ಜುನನಿಂದ ನೆನೆಸಲ್ಪಟ್ಟ, ವಾಸವಃ ಚ – ಇಂದ್ರನೂ ಕೂಡ. ಶಚ್ಯಾ – ಶಚೀದೇವಿಯಿಂದ, ಮುನೀಂದ್ರೈಃ – ಶ್ರೇಷ್ಠ ಮುನಿಗಳಿಂದ, ಸಮಂ – ಕೂಡಿಕೊಂಡು, ಪ್ರೀತಿಯುಕ್ತಃಸನ್ – ಸಂತೋಷದಿಂದ ಕೂಡಿದವನಾಗಿ, ತತ್ರ ನಿಶಾಯಾಂ ಏವ – ಆ ರಾತ್ರಿ ಸಮಯದಲ್ಲಿಯೇ, ಆಗಾತ್ – ಬಂದನು. ॥೧೮೪॥

ಕೃಷ್ಣಸ್ತತಃ ಪುರುಹೂತೇನ ಸಾಕಂ ತಯೋರ್ವಿವಾಹಂ ಕಾರಯಾಮಾಸ ಸಮ್ಯಕ್ ॥
ಮಾತಾಪಿತೃಭ್ಯಾಂ ಸಾತ್ಯಕಿನಾಪಿ ಯುಕ್ತೋ ಮಹೋತ್ಸವೇಽನ್ಯಾವಿದಿತೇ ಮುನೀಂದ್ರೈಃ ॥೧೮೫॥

ತತಃ – ಇವರೆಲ್ಲರು ಬಂದನಂತರ, ಕೃಷ್ಣಃ – ಶ್ರೀಕೃಷ್ಣನು, ಪುರುಹೂತೇನ ಸಾಕಂ – ಇಂದ್ರನಿಂದ ಕೂಡಿಕೊಂಡು ಮಾತಾಪಿತೃಭ್ಯಾಂ – ತಾಯಿತಂದೆಗಳಿಂದ, ಮುನೀಂದ್ರೈಃ – ಋಷಿಗಳಿಂದ, ಸಾತ್ಯಕಿನಾ ಅಪಿ – ಸಾತ್ಯಕಿಯಿಂದಲೂ ಕೂಡ, ಯುಕ್ತಃ ಸನ್ – ಕೂಡಿದವನಾಗಿ, ಅನ್ಯಾವಿದಿತೇ – ಬೇರೆಯಾರಿಗೂ ತಿಳಿಯದ, ಮಹೋತ್ಸವೇ – ಆ ಸಂಭ್ರಮದ ಉತ್ಸವದಲ್ಲಿ, ತಯೋಃ – ಆ ಸುಭದ್ರೆ ಅರ್ಜುನರ, ವಿವಾಹಂ – ವಿವಾಹವನ್ನು, ಸಮ್ಯಕ್ ಕಾರಯಾಮಾಸ – ಚೆನ್ನಾಗಿ ಮಾಡಿಸಿದನು. ॥೧೮೫॥

ಭಾವಾನುವಾದ ; ೧೭೧-೧೭೫ – ಶ್ರೀಕೃಷ್ಣ ಪರಮಾತ್ಮನು ಅಣ್ಣನಾದ ಬಲರಾಮನು ಸನ್ಯಾಸಿಗಳನ್ನು ಕನ್ಯಕಾಗೃಹದಲ್ಲಿ ಚಾತುರ್ಮಾಸ್ಯಕ್ಕೆ ಕೂಡಿಸುವದಕ್ಕೆ ಹೇಳಿದಾಗ ಅದನ್ನು ನಿಷೇಧಿಸಿ ಈ ಸನ್ಯಾಸಿಯು ತರುಣ, ಬಲಿಷ್ಠನು,ಸುಂದರನು ಹಾಗೂ ವಾಚ್ಚತುರನು ಇದ್ದ ಇವನನ್ನು ಕನ್ಯಕಾಗೃಹವಲ್ಲಿ ವಾಸಮಾಡಿಸುವದು ಸರಿಯಲ್ಲ ಎಂದು ಹೇಳಿದನು. ಆಗ ಬಲರಾಮನು ಜ್ಞಾನಿಯಾದ ಈಸನ್ಯಾಸಿಗಳ ಬಗ್ಗೆ ಸಂಶಯ ಬೇಡ ಎಂದು ಹೇಳಿದನು, ಆಗ ಶ್ರೀಕೃಷ್ಣನು ನನ್ನ ಅಭಿಪ್ರಾಯದಲ್ಲಿ ಇದೇನೂ ಸಮಂಜಸವೆನಿಸುವದಿಲ್ಲ. ಆದರೆ ಅಣ್ಣನಾದ ನಿನ್ನ ಮಾತು ನಮ್ಮೆಲ್ಲರಿಗೂ ಮಾನ್ಯವೇ. ಆದ್ದರಿಂದ ಆಗಲಿ ಎಂದು ಹೇಳಿ ಈ ಯತಿಯ ಸೇವೆಯನ್ನು ಚೆನ್ನಾಗಿ ಮಾಡು ಎಂದು ತಂಗಿ ಸುಭದ್ರೆಗೆ ಹೇಳಿದನು, ಅವಳು ಹಾಗೆ ಸೇವಿಸುತ್ತಿದ್ದಳು. ಅರ್ಜುನ ಸನ್ಯಾಸಿಯು ಸತ್ಕಥಾಗಳನ್ನು ಹೇಳುತ್ತಾ ಶ್ರೀಕೃಷ್ಣನು ತನಗೆ ಹೇಳಿದ ಸುಭದ್ರಾದಾನದ ಮಾತನ್ನು ವಿಶ್ವಾಸದಿಂದ ನಿರೀಕ್ಷಿಸುತ್ತಾ ಇದ್ದನು. ಶ್ರೀಕೃಷ್ಣನುಅರ್ಜುನನಿಗೆ ಹೇಳಿವ ಮಾತನ್ನು ತಂದೆತಾಯಿಗಳಾದ್ದರಿಂದ ವಸುದೇವದೇವಕಿಯರಿಗೆ ಹೇಳಿದ್ದ ತನಗೂ ಅರ್ಜುನನಿಗೂ ಶಿಷ್ಯನಾದ್ದರಿಂದ ಸಾತ್ಯಕಿಗೆ ಕೇವಲ ತನ್ನ ಶಿಷ್ಯನಾದ ವಿಪೃಥುವಿಗೆ ಹೇಳಿದ್ದನು.ಉದ್ಧವ,ಉಗ್ರಸೇನ ಮೊದಲಾದ ಉಳಿದ ಪಾಂಡವರು ಶ್ರೀಕೃಷ್ಣಪ್ರಿಯರು ಎಂದು ಗೊತ್ತಿದ್ದರೂ, ದುರ್ಯೋಧನನಿಗೆ ಸುಭದ್ರೆಯನ್ನು ಕೊಡುವದು ಅಸಮ್ಮತ ಎಂದು ತಿಳಿದೂ ಕೂಡ ಬಲರಾಮನಿಗೆ ಸಂತೋಷವಾಗಬೇಕೆಂದು ಅವನ ಅಪ್ಪಣೆಯಂತೆ ಅರ್ಜುನನಿಗೆ ಕೊಡುವದನ್ನು ಸಮ್ಮತಿಸದೇ, ದುರ್ಯೋಧನನಿಗೆ ಕೊಡಲು ಇಚ್ಛಿಸುತ್ತಿದ್ದರು. ಇವರೆಲ್ಲರಲ್ಲಿ ರಾಕ್ಷಸಾವೇಶವಿದ್ದದ್ದರಿಂದ ಈ ರೀತಿ ಶ್ರೀಕೃಷ್ಣನಿಗೆ ಅಸಮ್ಮತವಾದ ಕಾರ್ಯದಲ್ಲಿ ಪ್ರವೃತ್ತರಾಗಿದ್ದರು. ಆದ್ದರಿಂದ ಶ್ರೀಕೃಷ್ಣನು ಅವರೆಲ್ಲರನ್ನು ವಂಚಿಸಿದನು. ಶ್ರೀಕೃಷ್ಣನ ಮಕ್ಕಳಾದ ಪ್ರದ್ಯುಮ್ನ, ಸಾಂಬ ಮೊದಲುದವರೂ ಕೂಡ ಆ ಗುಂಪಿನಲ್ಲಿ ಸೇರಿದ್ದರು. ಒಮ್ಮೆ ತೀರ್ಥಯಾತ್ರೆಗಾಗಿ ಬಲರಾಮ ಮೊದಲಾಗಿ ಎಲ್ಲರೂ ಪಿಂಡೋದಾರ ಕ್ಷೇತ್ರಕ್ಕೆ ಹೋದರು. ಅಲ್ಲಿ ಅನೇಕ ಯಜ್ಞ, ದಾನ ಮೊದಲಾದ ಉತ್ಸವಗಳಲ್ಲಿ ತೊಡಗಿದ್ದರು. ಈ ಕಡೆಗೆ ಸುಭದ್ರೆಯು ಒಮ್ಮೆ ಪೂಜ್ಯಯತಿಗಳೇ, ತೀರ್ಥಕ್ಷೇತ್ರ ಸಂಚರಿಸುತ್ತಾ ಬಂದ ನೀವು ನಮ್ಮ ಅತಿಪ್ರಿಯ ಬಾಂಧವರಾದ ಪಾಂಡವರನ್ನು, ಅವರ ತಾಯಿ ಕುಂತಿಯಮ್ಮನ್ನು, ಪತ್ನಿ ದ್ರೌಪದಿಯನ್ನು ಎಲ್ಲಿಯಾದರೂ ನೋಡಿದ್ದೀರಾ ? ಎಂದು ಕೇಳಿದಳು. ಆಗ ಸನ್ಯಾಸಿಗಳು ಅಹುದು ನೋಡಿದ್ದೇನೆ, ಅವರೆಲ್ಲ ಕ್ಷೇಮದಿಂದ ಇದ್ದಾರೆ ಎಂದು ಹೇಳಿದರು. ಆಗ ಆ ಸುಭದ್ರೆಯು ಅರ್ಜುನನು ತೀರ್ಥ ಯಾತ್ರೆಗೆ ಹೋಗಿದ್ದಾನೆ ಎಂದು ಬ್ರಾಹ್ಮಣರ ಮುಖದಿಂದ ಕೇಳಿದ್ದೇನೆ. ಅವನನ್ನೆಲ್ಲಿಯಾದರೂ ಕಂಡಿದ್ದೀರಾ? ಎಂದು ಉತ್ಸಾಹದಿಂದ ಪುನಃ ಪುನಃ ಕೇಳಿದಾಗ ಅಹುದು ಎಂದು ಹೇಳಿದರು. ಆಗ ಅವಳು ಎಲ್ಲಿ ನೋಡಿದಿರಿ, ಎಂದು ಉತ್ಸಾಹದಿಂದ ಕೇಳುತ್ತಿರುವಾಗ ಇಲ್ಲಿಯೇ ಎಂದು ಉತ್ತರಿಸಿದನು. ಅದನ್ನು ಕೇಳಿದ ಅವಳು ಆಶ್ಚರ್ಯದಿಂದ ಎಲ್ಲಿ? ಎಲ್ಲಿ? ಎಂದು ಪುನಃ ಪುನಃ ಕೇಳಿದಾಗ, ಆ ಅರ್ಜುನನು ನಾನೇ ಎಂದು ಹೇಳಿದಾಗ ಅವಳು ಬಹಳ ಹರ್ಷಪಟ್ಟು ಅವನನ್ನು ನೋಡಿದಳು, ನಂತರ ಲಜ್ಜೆಯಿಂದ ಏನನ್ನೂ ಮಾತನಾಡದಾದಳು. ಆಗ ಕಾಮಾವಿಷ್ಟನಾದ ಅರ್ಜುನನು ಈ ಸಮಯವೇ ನಮಗೆ ವಿವಾಹವಾಗಲು ಯೋಗ್ಯಸಮಯವೆಂದು ಹೇಳಿದನು. ಆಗ ಸುಭದ್ರೆಯು ಶ್ರೀಕೃಷ್ಣನನ್ನು ಬಿಟ್ಟು ನಾವು ವಿವಾಹವಾಗುವದು ಸರಿಯಲ್ಲ. ಏಕಾಕಿಗಳಾಗಿ ವಿವಾಹವಾಗುವದೂ ಬೇಡ, ನಮ್ಮ ಅಣ್ಣ ಶ್ರೀಕೃಷ್ಣ, ನಮ್ಮ ತಂದೆ ತಾಯಿ ಸಹಿತನಾಗಿ ವಿವಾಹ ಮಹೋತ್ಸವದಲ್ಲಿ ನನ್ನನ್ನು ನಿನಗೆ ಕೊಡುವಾಗ ನಿನ್ನ ಬಂಧುಗಳಿಂದ ಸಹಿತನಾಗಿ ಸ್ವೀಕರಿಸು ಎಂದು ಹೇಳಿದಳು. ಆಗ ಅರ್ಜುನನು ಕೂಡಲೇ ಶ್ರೀಕೃಷ್ಣನನ್ನು, ತನ್ನ ಮೂಲರೂಪಿ ಇಂದ್ರನನ್ನು ಸ್ಮರಿಸಿದನು. ಆಗ ಕೂಡಲೇ ರಾತ್ರಿ ಸಮಯದಲ್ಲಿಯೇ ಅಲ್ಲಿಗೆ ಶ್ರೀಕೃಷ್ಣನು ವಸುದೇವ ದೇವಕಿ ಸಹಿತನಾಗಿ ಬಂದನು, ಇಂದ್ರನು ಶಚೀಸಮೇತನಾಗಿ, ಮುನಿಗಳಿಂದ ಕೂಡಿದವನಾಗಿ ಬಂದನು, ಆಗ ಶ್ರೀಕಷ್ಣನು ಇಂದ್ರನಿಂದ ವಸುದೇವ ದೇವಕಿಯರಿಂದ, ಮುನಿಗಳಿಂದ ಸಾತ್ಯಕಿಯಿಂದ ಕೂಡಿದವನಾಗಿ, ಬೇರೆ ಯಾರಿಗೂ ಗೊತ್ತಾಗದಂತೆ ಶ್ರೇಷ್ಠ ವೈಭವದ ವಿವಾಹ ಮಹೋತ್ಸವದಲ್ಲಿ ಆವರಿಬ್ಬರ ವಿವಾಹವನ್ನು ಮಾಡಿಸಿದನು.

ತತಃ ಕೃಷ್ಣಃ ಸ್ಯಂದನಂ ಫಲ್ಗುನಾರ್ಥೇ ನಿಧಾಯ ಸ್ವಂ ಪ್ರಯಯೌ ತದ್ರಜನ್ಯಾಮ್ ॥
ಗತೇ ಚ ಶಕ್ರೇ ರಥಮಾರುರೋಹ ಪ್ರಾತಃ ಪಾರ್ಥಸ್ಸಹಿತೋ ಭಾರ್ಯಯೈವ ॥೧೭೬॥

ತತಃ- ಅವರಿಬ್ಬರ ವಿವಾಹವನ್ನು ಮಾಡಿಸಿದ ನಂತರ, ಕೃಷ್ಣಃ- ಶ್ರೀಕೃಷ್ಣನು, ಸ್ವಂ ರಥಂ- ತನ್ನ ರಥವನ್ನು, ಫಲ್ಗುನಾರ್ಥೇ- ಅರ್ಜುನನ ಸಲುವಾಗಿ, ನಿಧಾಯ- ಇಟ್ಟು, ತದ್ರಜನ್ಯಾಂ ಆ ರಾತ್ರಿಯಲ್ಲಿಯೇ, ಪ್ರಯಯೌ- ಹೋದನು. ಶಕ್ರೇ ಚ- ದೇವೇಂದ್ರನೂ ಕೂಡ, ಗತೇ ಸತಿ- ಹೋಗುತ್ತಿರಲು, ಪಾರ್ಥಃ- ಅರ್ಜುನನು, ಪ್ರಾತಃ- ಬೆಳಿಗ್ಗೆ, ಭಾರ್ಯಯಾ ಸಹಿತಃ ಸನ್ ಏವ- ಪತ್ನಿಯಾದ ಸುಭದ್ರೆಯಿಂದ ಸಹಿತನಾಗಿಯೇ, ರಥಂ- ರಥವನ್ನು, ಆರುರೋಹ- ಏರಿದನು. ॥೧೮೬॥

ಸರ್ವಾಯುಧೈರ್ಯುಕ್ತರಥಂ ಸಮಾಸ್ಥಿತೇ ಗೃಹೀತಚಾಪೇ ಫಲ್ಗುನೇ ದ್ವಾರವತ್ಯಾಮ್ ।
ಆಸೀದ್ರಾವಃ ಕಿಂಕಿಮೇತತ್ತ್ರಿದಂಡೀ ಕನ್ಯಾಂ ಹರತ್ಯೇಷ ಕೋದಂಡಪಾಣಿಃ ॥೧೮೭॥

ಗೃಹೀತಚಾಪೇ- ಧನುಸ್ಸನ್ನು ಹಿಡಿದಿರುವ, ಫಲ್ಗುನೇ- ಅರ್ಜುನನು, ಸರ್ವಾಯುಧೈಃ- ಎಲ್ಲ ಆಯುಧಗಳಿಂದ, ಯುಕ್ತರಥಂ- ಕೂಡಿದ ರಥವನ್ನು, ಸಮಾಸ್ಥಿತೇ ಸತಿ- ಏರುತ್ತಿರಲು, ದ್ವಾರವತ್ಯಾಂ- ದ್ವಾರಕೆಯಲ್ಲಿ, ಕಿಂ ಏತತ್, ಕಿಂ ಏತತ್- ಏನಿದು! ಏನಿದು! ಏಷಃ ತ್ರಿದಂಡೀ- ಈ ತ್ರಿದಂಡಿ ಸನ್ಯಾಸಿಯಾಗಿದ್ದವನು, ಕೋದಂಡಪಾಣಿಃ ಸನ್- ಧನುರ್ಧಾರಿಯಾಗಿ, ಕನ್ಯಾಂ- ಕನ್ಯೆಯಾದ ಸುಭದ್ರೆಯನ್ನು, ಹರತಿ-ಅಪಹರಿಸುತ್ತಿದ್ದಾನೆ. (ಇತಿ-ಎಂಬ) ರಾವಃ- ಶಬ್ದದ ಧ್ವನಿಯು, ಆಸೀತ್- ಆಯಿತು ॥೧೮೭॥

ತತಸ್ತು ತಂ ಸತನುತ್ರಂ ಮಹೇಂದ್ರದತ್ತೇ ದಿವ್ಯೇ ಕುಂಡಲೇ ವಾಸಸೀ ಚ ।
ದಿವ್ಯಾನಿ ರತ್ನಾನಿ ಚ ಭೂಷಣಾನಿ ದೃಷ್ಟ್ವಾ ಬಿಭ್ರಾಣಂ ರಕ್ಷಿಣೋಽವಾರಯನ್ ಸ್ಮ ॥೧೮೮॥

ತತಃ- ಆ ಧ್ವನಿಯ ನಂತರ, ರಕ್ಷಿಣಃ- ಪುರರಕ್ಷಣ ಮಾಡುವ ಜನರು, ಸತನುತ್ರಂ- ಕವಚಧಾರಿಯಾದ, ಮಹೇಂದ್ರದತ್ತೇ ಇಂದ್ರನಿಂದ ಕೊಡಲ್ಪಟ್ಟ, ದಿವ್ಯೇ- ಶ್ರೇಷ್ಠವಾದ, ಕುಂಡಲೇ- ಕರ್ಣಕುಂಡಲಗಳನ್ನು, ಚ-ಮತ್ತು, ವಾಸಸೀ- ವಸ್ತ್ರಗಳನ್ನು, ದಿವ್ಯಾನಿ ರತ್ನಾನಿ ಭೂಷಣಾನಿ ಚ - ಶ್ರೇಷ್ಠವಾದ ರತ್ನಗಳನ್ನು, ಆಭರಣಗಳನ್ನೂ ಕೂಡ, ಬಿಭ್ರಾಣಂ- ಧರಿಸಿರುವ, ತಂ- ಆ ಅರ್ಜುನನನ್ನು, ದೃಷ್ಟ್ವಾ- ನೋಡಿ, ಅವಾರಯನ್ ಸ್ಮ- ತಡೆದರು. ॥೧೮೮॥

ತತಸ್ಸ ಆಬದ್ಧತಲಾಂಗುಲಿತ್ರಸ್ಸತೂಣೀರಶಾರ್ಙ್ಗಪಮಾಯಮ್ಯ ಬಾಣೈಃ ।
ಚಕ್ರೇಽಂತರಿಕ್ಷಂ ಪ್ರದಿಶೋ ದಿಶಶ್ಚ ನಿರಂತರಂ ಶಿಕ್ಷಯಾ ವಿದ್ಯಯಾ ಚ ॥೧೮೯॥

ತತಃ- ಪುರರಕ್ಷಕರು ತಡೆದನಂತರ, ಆಬದ್ಧತಲಾಂಗುಲಿತ್ರಃ- ಕರಕವಚಗಳನ್ನು ಧರಿಸಿದಂಥ, ಸತೂಣೀರಃ- ಬತ್ತಳಿಕೆಯನ್ನು ಧರಿಸಿರುವ, ಸಃ- ಆ ಅರ್ಜುನನು, ಶಾರ್ಙ್ಗಂ- ಧನುಸ್ಸನ್ನು, ಆಯಮ್ಯ- ಜಗ್ಗಿ, ಶಿಕ್ಷಯಾ- ಧನುರ್ವಿದ್ಯಾ ನೈಪುಣ್ಯದಿಂದ, ಚ-ಮತ್ತು, ವಿದ್ಯಯಾ-ವಿದ್ಯೆಯಿಂದ, ಬಾಣೈಃ- ಬಾಣಗಳಿಂದ, ಅಂತರಿಕ್ಷಂ- ಆಕಾಶವನ್ನು, ನಿರಂತರಂ- ಅವಕಾಶರಹಿತವನ್ನಾಗಿ, ದಿಶಃ- ದಿಕ್ಕುಗಳನ್ನು, ಚ- ಮತ್ತು, ಪ್ರದಿಶಃ- ಉಪದಿಕ್ಕುಗಳನ್ನು, (ನಿರಂತರಾಃ- ಅವಕಾಶರಹಿತಗಳನ್ನಾಗಿ) ಚಕ್ರೇ- ಮಾಡಿದನು. ॥೧೮೯॥

ಚಕ್ರೇ ಸಾರಥ್ಯಂ ಕೇಶವೇನೈತದರ್ಥೇ ಸುಶಿಕ್ಷಿತಾ ತಸ್ಯ ಸಮ್ಯಕ್ಸುಭದ್ರಾ।
ತಯಾ ಸಾರ್ಥೋ ವಾರಿತೋ ನೈವ ಕಂಚಿದ್ಭಿನ್ನತ್ವಚಂ ಕೃತವಾನ್ ಕ್ರೀಡಮಾನಃ ॥೧೯೦॥

ಏತದರ್ಥೇ—ಈ ಸಂದರ್ಭದಸಲುವಾಗಿಯೇ, ಕೇಶವೇನ–ಶ್ರೀಕೃಷ್ಣನಿಂದ, ಸಾರಥ್ಯಂ–ಸಾರಥ್ಯವನ್ನು, ಶಿಕ್ಷಿತಾ–ಅಭ್ಯಾಸ ಮಾಡಿಸಲ್ಪಟ್ಟ, ಸುಭದ್ರಾ – ಸುಭದ್ರೆಯು, ತಸ್ಯ—ಆ ಅರ್ಜುನನ, ಸಾರಥ್ಯಂ – ಸಾರಥ್ಯ ಕಾರ್ಯವನ್ನು, ಸಮ್ಯಕ್ ಚಕ್ರೇ – ಚೆನ್ನಾಗಿ ಮಾಡಿದಳು. ತಯಾವಾರಿತ:–ಅವಳಿಂದ ತಡೆಯಲ್ಪಟ್ಟ, ಪಾರ್ಥಃ– ಅರ್ಜುನನು, ಕ್ರೀಡಮಾನಃ ಸನ್—ಕ್ರೀಡಾರೂಪವಾಗಿ ಯುದ್ಧವನ್ನು ಮಾಡುವವನಾಗಿ, ಕಂಚಿತ್ – ಯಾವನನ್ನೂ ಕೂಡ, ಭಿನ್ನತ್ವಚಂ— ಗಾಯಗೊಂಡ ಚರ್ಮವುಳ್ಳವನನ್ನಾಗಿ, ನೈವ ಕೃತವಾನ್ – ಮಾಡಲಿಲ್ಲ. ॥೧೯೮॥

ಸ ಶಿಕ್ಷಯಾ ತ್ವದ್ಭುತಯಾ ಶರೌಘೈರ್ವಿದ್ರಾವ್ಯ ತಾನ್ಭೀಷಯಿತ್ವೈವ ಸರ್ವಾನ್॥
ನಿರ್ಗತ್ಯ ಪುರ್ಯಾ ವಿಪೃಥುಂ ದದರ್ಶ ರಾಮೇಣ ಪುರ್ಯಾ ರಕ್ಷಣೇ ಸನ್ನಿಯುಕ್ತಮ್ ॥೧೯೧॥

ಸಃ – ಆ ಅರ್ಜುನನು, ಅದ್ಭುತಯಾ ಶಿಕ್ಷಯಾ— ಅದ್ಭುತವಾದ ಪ್ರಾವೀಣ್ಯದಿಂದ, ಶರೌಘೈಃ - ಬಾಣಗಳ ಸಮೂಹಗಳಿಂದ, ತಾನ್ ಸರ್ವಾನ್ – ಆ ಎಲ್ಲ ಜನರನ್ನು ಭೀಷಯಿತ್ವಾ ಏವ–ಹೆದರಿಸಿಯೇ, ವಿದ್ರಾವ್ಯ –ಓಡಿಸಿ, ಪುರ್ಯಾ— ದ್ವಾರಕೆಯಿಂದ, ನಿರ್ಗತ್ಯ – ಹೊರಗೆ ಹೊರಟು, ಪುರ್ಯಾಃ – ದ್ವಾರಕೆಯ, ರಕ್ಷಣೇ–ರಕ್ಷಣಕಾರ್ಯದಲ್ಲಿ, ರಾಮೇಣ–ಬಲರಾಮನಿಂದ, ಸನ್ನಿಯುಕ್ತಂ –ತೊಡಗಿಸಲ್ಪಟ್ಟ, ವಿಪೃಥುಂ – ವಿಪೃಥು ಎಂಬವನನ್ನು, ದದರ್ಶ– ನೋಡಿದನು.॥೧೯೧॥

ಪ್ರಿಯಂ ಕುರ್ವನ್ನಿವ ರಾಮಸ್ಯ ಸೋ s ಪಿ ವ್ಯಾಜೇನ ಪಾರ್ಥಂ ಸೇನಯೈವಾವೃಣೋತ್ತಮ್,
ಕೃಷ್ಣಾದೇಶಾನ್ನೈವ ಪಾರ್ಥಸ್ಯ ಚಕ್ರೇ ಸಮ್ಯಗ್ರೋಧಂ ಯುಯುಧೇ ಚ ಛಲೇನ॥೧೯೨॥

ಸಃ ಅಪಿ— ಆ ವಿಪೃಥುವೂ ಕೂಡ, ರಾಮಸ್ಯ— ಬಲರಾಮದೇವರಿಗೆ, ಪ್ರಿಯಂ ಕುರ್ವನ್ನಿವ – ಸಂತೋಷವನ್ನುಂಟುಮಾಡುವವನಂತೆ, ಸೇನಯಾ – ಸೇನೆಯಿಂದ, ತಂ ಪಾರ್ಥಂ– ಆ ಅರ್ಜುನನನ್ನು, ವ್ಯಾಜೇನ— ಕಪಟದಿಂದ, ಆವೃಣೋತ್ – ಮುತ್ತಿದನು. (ಮುತ್ತಿದಂತೆ ಮಾಡಿದನು.) ಕೃಷ್ಣಾದೇಶಾತ್—ಶ್ರೀಕೃಷ್ಣನ ಅಪ್ಪಣೆಯಂತೆ, ಪಾರ್ಥಸ್ಯ ರೋಧಂ – ಅರ್ಜುನನಿಗೆ ವಿರೋಧವನ್ನು, ಸಮ್ಯಕ್ ಚ ಚಕ್ರೇ – ಸರಿಯಾಗಿ ಮಾಡಲಿಲ್ಲ. ಛಲೇನ ಚ—ಕಪಟದಿಂದಲೇ ಯುಯುಧೇ–ಯುದ್ಧ ಮಾಡಿದನು. (ಯುದ್ಧ ಮಾಡಿದಂತೆ ತೋರಿಸಿದನು.) ॥೧೯೨॥

ಅವತಾರಿಕಾ ಃ – ಆ ವಿಪೃಥು ಯಾರು ಎಂಬುದನ್ನು ತಿಳಿಸುತ್ತಾರೆ—

ಏಕೋ ಹ್ಯಸೌ ಮರುತಾಂ ಸೌಮ್ಯನಾಮಾ ಶುಶ್ರೂಷಾರ್ಥಂ ವಾಸುದೇವಸ್ಯ ಜಾತಃ ।
ತಂ ಯಾದವಂ ಶರವರ್ಷೈರ್ವವರ್ಷ ಯಥಾಕ್ಷತಂ ನ ಭವೇತ್ಸವ್ಯಸಾಚೀ ॥೧೯೩॥

ಅಸೌ – ಆ ವಿಪೃಥುವುಃ ಮರುತಾಂ — ಮರುತ್ತುಗಳ ಪೈಕಿ, ಏಕಃ – ಒಬ್ಬನಾದ ಸೌಮ್ಯನಾಮಾ – ಸೌಮ್ಯ ಎಂಬ ಹೆಸರುಳ್ಳ ಮರುತ್ತಿನ ಅವತಾರನು. ವಾಸುದೇವಸ್ಯ – ಶ್ರೀಕೃಷ್ಣನ, ಶುಶ್ರೂಷಾರ್ಥಂ–ಸೇವೆಗಾಗಿ. ಜಾತಃ—ಅವತರಿಸಿದವನು, ಸವ್ಯಸಾಚೀ—ಅರ್ಜುನನು, ಯಾದವಂ ತಂ – ಯಾದವನಾದ ಆ ವಿಪೃಥುವಿನ ಮೇಲೆ, ಕ್ಷತಂ ಯಥಾನಭವೇತ್ ತಥಾ— ಗಾಯವು ಹೇಗೆ ಆಗಬಾರದೋ ಹಾಗೆ, ಶರವರ್ಷೈಃ ವವರ್ಷ – ಬಾಣದ ಮಳೆಗಳನ್ನು ಸುರಿಸಿದನು.॥೧೯೩॥

ನಿರಾಯುಧಂ ವಿರಥಂ ಚೈವ ಚಕ್ರೇ ಪಾರ್ಥಸ್ಸೇನಾಂ ತಸ್ಯ ನೈವಾಹನಚ್ಚ ॥
ದೃಷ್ಟ್ವಾ ಶರಾಂಸ್ತಸ್ಯ ತೀಕ್ಷ್ಣಾಂಸ್ತ್ವಚೋಽಪಿ ನ ಭೇದಕಾನ್ವಿಪೃಥುಸ್ಸಂತುತೋಷ ॥೧೯೪॥

ಪಾರ್ಥ :— ಅರ್ಜುನನು, (ತಂ – ಆ ವಿಪೃಥುವನ್ನು), ನಿರಾಯುಧಂ— ಆಯುಧ ಹೀನನನ್ನಾಗಿ, ವಿರಥಂ— ರಥಹೀನನನ್ನಾಗಿ, ಚಕ್ರೇ–ಮಾಡಿದನು. ತಸ್ಯ ಸೇನಾಂ ಚ–ಅವನ ಸೈನ್ಯವನ್ನೂ ಕೂಡ, ನೈವ ಅಹನತ್—ಕೊಲ್ಲಲಿಲ್ಲ. ತಸ್ಯ–

ಅರ್ಜುನನ, ತೀಕ್ಷ್ಣಾನ್ ಶರಾನ್—ಹರಿತವಾದ ಬಾಣಗಳನ್ನು, ತ್ವಚಃ ಅಪಿ ನಭೇದಕಾನ್ — ಚರ್ಮವನ್ನೂ ಕೂಡ ಗಾಯ ಮಾಡದವುಗಳನ್ನಾಗಿ ದೃಷ್ಟ್ವಾ ನೋಡಿ (ಆ ರೀತಿ ಬಾಣ ಬಿಡುತ್ತಿರುವದನ್ನು ನೋಡಿ), ವಿಪೃಥುಃ; — ವಿಷ್ಣುಥುವು, ಸಂತುತೋಷ — ಸಂತೋಷಪಟ್ಟನು. ॥೧೯೪॥

ಶಿಕ್ಷಾಂ ಪಾರ್ಥಸ್ಯಾಧಿಕಾಂ ಮಾನಯಾನ ಉಪೇತ್ಯ ಪಾರ್ಥಂ ಚ ಶಶಂಸ ಸರ್ವಾನ್।
ಆಜ್ಞಾಂ ವಿಷ್ಣೋಸ್ಸನಿಯುಧ್ಯನ್ನಿವಾಸ್ಕೃ ಕೃತ್ತಾಯುಧಃ ಫಲ್ಗುನೇನೈವ ಪೂರ್ವಮ್॥೧೯೫॥

ಪೂರ್ವಂ — ಈ ಮೊದಲೇ, ಫಲ್ಗುನೇನ – ಅರ್ಜುನನಿಂದ, ಕೃತ್ತಾಯುಧಃ— ಕತ್ತರಿಸಲ್ಪಟ್ಟ ಆಯುಧ-ಗಳುಳ್ಳ, ಪಾರ್ಥಸ್ಯ – ಅರ್ಜುನನಿಗೆ, ಶಿಕ್ಷಾಂ—ಧನುರ್ವಿದ್ಯಾ ನೈಪುಣ್ಯವನ್ನು. ಅಧಿಕಾಂ—ಶ್ರೇಷ್ಠವಾದದ್ದನ್ನಾಗಿ ಮಾನಯಾನಃ–ತಿಳಿದಂಥ, ಫಲ್ಗುನೇನ ಸನ್ನಿಯುಧ್ಯನ್ ಇವ – ಅರ್ಜುನನ ಜೊತೆಗೆ ಯುದ್ಧ ಮಾಡಿದಂತೆ ಮಾಡುತ್ತಿದ್ದ ವಿಪೃಥುವು, ಪಾರ್ಥಂಉಪೇತ್ಯ– ಅರ್ಜುನನ ಸಮೀಪಕ್ಕೆ ಬಂದು, ವಿಷ್ಣೋಃ–ಶ್ರೀಕೃಷ್ಣನ, ಸರ್ವಾಂ ಆಜ್ಞಾಂ—ಎಲ್ಲ ಆಜ್ಞಾ ವಿಷಯವನ್ನು. ಶಶಂಸ – ಹೇಳಿದನು. ॥೧೯೫॥

ತತಃ ಪರಾಜಿತವಚ್ಛೀಘ್ರಮೇತ್ಯ ಶಶಂಸ ಸರ್ವಂ ಹಲಿನೇ s ಥ ಸೋ s ಪಿ।
ಪ್ರದ್ಯುಮ್ನಸಾಂಬಾದಿಯುತೋ s ಥ ಕೋಪಾದಾಯಾತ್ಪುರೀಂ ಹಂತುಕಾಮೋ s ರ್ಜುನಂ ಚ॥೧೯೬॥

ತತಃ:— ಅರ್ಜುನನಿಗೆ ತಿಳಿಸಿದ ನಂತರ, ಪರಾಜಿತವತ್ — ಸೋತವನಂತೆ, ಶೀಘ್ರಂ— ಬೇಗನೆ, ಏತ್ಯ— (ಬಲರಾಮಾದಿಗಳ ಸಮೀಪಕ್ಕೆ) ಬಂದು, ಸರ್ವಂ – ಕನ್ಯಾಪಹಾರಾದಿ ಎಲ್ಲ ವಿಷಯವನ್ನು, ಹಲಿನೇ–ಬಲರಾಮನಿಗೆ, ಶಶಂಸ–ಹೇಳಿದನು. ~~ಸಃ ಅಪಿಃ—ಆ ಬಲರಾಮನೂ ಕೂಡ, ಕೋಪಾತ್ — ಸಿಟ್ಟಿನಿಂದ, ಪ್ರದ್ಯುಮ್ನಸಾಂಬಾದಿಯುತಃ ಸನ್ —~~ ಪ್ರದ್ಯುಮ್ನ ಸಾಂಬ ಮೊದಲಾದವರಿಂದ ಕೂಡಿದವನಾಗಿ, ಅರ್ಜುನಂ—ಅರ್ಜುನನನ್ನು, ಹಂತುಕಾಮಃ ಸನ್ ಚ–ಕೊಲ್ಲಲು ಇಚ್ಛಾವುಳ್ಳವನಾಗಿಯೂ ಕೂಡ, ಪುರೀಂ—ದ್ವಾರಕೆಯನ್ನು ಕುರಿತು, ಆಯಾತ್ —ಬಂದನು. ॥೧೯೬॥

ಕೃಷ್ಣೋ s ಪಿ ಸರ್ವಂ ವಿಪೃಥೋರ್ನಿಶಮ್ಯ ಪ್ರಾಪ್ತಸ್ಸುಧರ್ಮಾಂ ವಿಮನಾ ಇವಾಸೀತ್।
ಅವಾಙ್ಮುಖಸ್ತತ್ರ ಯದುಪ್ರವೀರಾಃ ಪ್ರದ್ಯುಮ್ನಾದ್ಯಾ ಆಹುರುಚ್ಚೈರ್ನದಂತಃ ॥೧೯೭॥

ಕೃಷ್ಣಃ ಅಪಿ—ಶ್ರೀಕೃಷ್ಣನೂ ಕೂಡ, ಸರ್ವಂ—ಎಲ್ಲ ವಿಷಯವನ್ನು, ವಿಪೃಥೋಃ – ವಿಪೃಥುವಿನಿಂದ, ನಿಶಮ್ಯ—ಕೇಳಿ, ಸುಧರ್ಮಾಂ – ಸುಧರ್ಮಾ ಸಭೆಗೆ, ಪ್ರಾಪ್ತಃ – ಬಂದನು, ತತ್ರ – ಅಲ್ಲಿ, ವಿಮನಾಃಇವ—ದುಃಖಿಯಂತೆ, ಅವಾಙ್ಮುಖಃ ಆಸೀತ್ — ಕೆಳಗೆ ಮುಖ ಮಾಡಿದವನಾಗಿದ್ದನು. ತತ್ರ—ಆಗ, ಪ್ರದ್ಯುಮ್ನಾದ್ಯಾಃ ಯದುಪ್ರವೀರಾಃ — ಪ್ರದ್ಯುಮ್ನನೇ ಮೊದಲಾದ ಯದುಶ್ರೇಷ್ಠರು, ಉಚ್ಚೈಃ ನಂದಂತಃ ಸಂತಃ – ಗಟ್ಟಿಯಾಗಿ ಗರ್ಜಿಸುವವರಾಗಿ, ಆಹುಃ–ಹೇಳಿದರು. ॥೧೯೭॥

ಮಾಯಾವ್ರತಂ ತಂ ವಿನಿಹತ್ಯ ಶೀಘ್ರಂ ವಯಂ ಸುಭದ್ರಾಮಾನಯಾಮುಃಕ್ಷಣೇನ ॥
ಇತ್ಯುಕ್ತವಾಕ್ಯಾನವದದ್ಬಲಸ್ತಾನ್ ಕೃಷ್ಣಾಜ್ಞಯಾ ಯಾಂತು ನ ಸ್ವೇಚ್ಛಯೈವ ॥೧೯೮॥

ಜ್ಞಾತವ್ಯಮೇತಸ್ಯ ಮತಂ ಪುರಸ್ತಾದ್ಧರೇರ್ವಿರೋಧೇ ನ ಜಯೋ ಭವೇದ್ವಃ ॥
ಇತ್ಯುಕ್ತವಾಕ್ಯೇ ಹಲಿನಿ ಸ್ಮ ಸರ್ವೇ ಪಪ್ರಚ್ಛುರಾನಮ್ಯ ಜನಾರ್ದನಂ ತಮ್ ॥೧೯೯॥

ವಯಂ – ನಾವು, ಮಾಯಾವ್ರತಂ ತಂ— ಕಪಟಸನ್ಯಾಸಿಯಾದ ಆ ಅರ್ಜುನನನ್ನು, ಶೀಘ್ರಂ – ಬೇಗನೇ, ವಿನಿಹತ್ಯ— ಕೊಂದು, ಕ್ಷಣೇನ – ಸ್ವಲ್ಪ ಸಮಯದಲ್ಲಿಯೇ, ಸುಭದ್ರಾಂ – ಸುಭದ್ರೆಯನ್ನು, ಅನಯಾವಃ— ಕರೆದು ತರುವೆವು, ('ಇತಿ— ಎಂದು, ಅಹುಃ—ಹೇಳಿದರು' ಎಂದರಿ ಹಿಂದಿನ ಶ್ಲೋಕಕ್ಕೆ ಅನ್ವಯ.) ಇತಿ ಉಕ್ತವಾಕ್ಯಾನ್- ಈ ರೀತಿ ಮಾತನ್ನು ಹೇಳಿದ, ತಾನ್ – ಅವರೆಲ್ಲರನ್ನು ಕುರಿತು, ಬಲಃ—ಬಲರಾಮನು, ಕೃಷ್ಣಜ್ಞಯಾ ಏವ – ಶ್ರೀಕೃಷ್ಣನ ಅಪ್ಪಣೆಯಂತೆಯೇ, ಯಾಂತು – ಹೋಗಿರಿ, ಸ್ವೇಚ್ಛಯಾ ನ – ನಿಮ್ಮ ಇಚ್ಛೆಯಂತೆ ಹೋಗಬೇಡಿರಿ. ಏತಸ್ಯ ಮತಂ—ಈ ಶ್ರೀಕೃಷ್ಣನ, ಮತವು – ಅಭಿಪ್ರಾಯವು, ಪುರಸ್ತಾತ್ – ಮೊದಲೇ, ಜ್ಞಾತವ್ಯಂ – ತಿಳಿಯಲ್ಪಡಬೇಕು. ಹರೇಃ ವಿರೋಧೇ – ಶ್ರೀಕೃಷ್ಣನ ಅಭಿಪ್ರಾಯ ವಿರೋಧವಿದ್ದರೆ, ವಃ – ನಿಮಗೆ, ಜಯಃ – ಜಯವು, ನ ಭವೇತ್ - ಆಗಲಾರದು, ಇತಿ - ಎಂದು, ಅವದತ್ – ಹೇಳಿದನು. ಹಲಿನಿ ಹಲಾಯುಧಧರನಾದ ಬಲರಾಮನು, ಇತಿ ಉಕ್ತವಾಕ್ಯೇಸತಿ—ಈ ರೀತಿ ಮಾತನ್ನು ಹೇಳುತ್ತಿರಲು, ಸರ್ವೇ ಎಲ್ಲರೂ, ತಂ ಜನಾರ್ದನಂ–ಆ ಶ್ರೀಕೃಷ್ಣನನ್ನು ಆನಮ್ಯ–ನಮಸ್ಕರಿಸಿ, ಪಪ್ರಚ್ಛುಃ ಸ್ಮ – ಕೇಳಿದರು. ॥೧೯೮-೧೯೯॥

ಅಥಾಬ್ರವೀದ್ವಾಸುದೇವೋಽಮಿತೌಜಾಃ ಶೃಣ್ವಂತು ಸರ್ವೇ ವಚನಂ ಮದೀಯಮ್ ।
ಪುರೈವೋಕ್ತಂ ತನ್ಮಯಾ ಕನ್ಯಕಾಯಾ ಮಾಯಾವೃತೋ ನಾರ್ಹತಿ ಸನ್ನಿಧಿಸ್ಥಿತಿಮ್ ॥೨೦೦॥

ಅಥ—ಇದರ ನಂತರ, ಅಮಿತೌಜಾಃ ವಾಸುದೇವಃ— ಅಪರಿಮಿತ ಪರಾಕ್ರಮವುಳ್ಳ ಶ್ರೀಕೃಷ್ಣನು, ಸರ್ವೇ— ಎಲ್ಲರೂ, ಮದೀಯಂ ವಚನಂ – ನನ್ನ ಮಾತನ್ನು, ಶೃಣ್ವಂತು – ಕೇಳಿರಿ, ಮಾಯಾವೃತಃ – ಕಪಟಸನ್ಯಾಸಿಯಾದ ಅವನು, ಕನ್ಯಕಾಯಾಃ ಸನ್ನಿಧಿಸ್ಥಿತಿಂ – ಕನ್ಯೆಯ ಸನಿಹದಲ್ಲಿ ವಾಸವನ್ನು, ನ ಅರ್ಹತಿ – ಮಾಡಲು ಯೋಗ್ಯನಲ್ಲ, ಇತಿ ತತ್—ಎಂಬ ಆ ಮಾತು, ಮಯಾ – ನನ್ನಿಂದ, ಪುರೈವ – ಮೊದಲೇ, ಉಕ್ತಂ— ಹೇಳಲ್ಪಟ್ಟಿದೆ. ॥೨೦೦॥

ತಾಂ ಮೇ ವಾಚಂ ನಾಗ್ರಹೀದಗ್ರಜೋಽಯಂ ಬಹೂನ್ದೋಷಾನ್ ವ್ಯಾಹರತೋಽಪ್ಯತೋ ಮಯಾ ॥
ಅನುಲ್ಲಂಘ್ಯತ್ವಾದಗ್ರಜೋಽನು ಪ್ರವೃತ್ತಃ ಕನ್ಯಾಗೃಹೇ ವಾಸನೇ ಕೂಟಬುದ್ಧೇಃ ॥೨೦೧॥

ಬಹೂನ್‌ದೋಷಾನ್ – ಕನ್ಯಾಗೃಹದಲ್ಲಿ ವಾಸಮಾಡಿಸುವಬಗ್ಗೆ ಬಹಳ ದೋಷಗಳನ್ನು, ವ್ಯಾಹರತಃಅಪಿ--ಹೇಳಿದರೂ ಕೂಡ, ಮೇ—ನನ್ನ, ತಾಂ ವಾಚಂ—ಆ ಮಾತನ್ನು, ಅಯಂ ಅಗ್ರಜಃ – ಈ ಅಣ್ಣನು, ನ ಅಗ್ರಹೀತ್—ಒಪ್ಪಲಿಲ್ಲ. ಅನುಲ್ಲಂಘ್ಯತ್ವಾತ್ – ಅಣ್ಣನ ಮಾತು ಮೀರಲಾಗುವದಿಲ್ಲವಾದ್ದರಿಂದ, ಕೂಟಬುದ್ಧೇಃ—ಕಪಟ ಬುದ್ಧಿಯುಳ್ಳ ಈ ಸನ್ಯಾಸಿಗೆ, ಕನ್ಯಾಗೃಹೇ – ಕನ್ಯಾಗೃಹದಲ್ಲಿ, ವಾಸನೇ – ವಾಸಮಾಡಿಸುವ ಬಗ್ಗೆ, ಅಗ್ರಜಃ–ಅಣ್ಣನು, ಅನುಪ್ರವೃತ್ತಃ ನಮ್ಮಿಂದ ಅನುಸರಿಸಲ್ಪಟ್ಟನು. (ಅವನ ಮಾತಿನಂತೆ ವಾಸಮಾಡಿಸಿದೆನು.) ॥೨೦೧॥

ಅತೀತಶ್ಚಾಯಂ ಕಾರ್ಯಯೋಗೋಽಸಮಕ್ಷಂ ಹೃತಾ ಕನ್ಯಾನೋತ್ರ ಕಾ ಮಾನಹಾನಿಃ ।
ಭೂಯಸ್ತರಾಂ ಮಾನಿನಸ್ತಸ್ಯ ಸಾ ಸ್ಯಾತ್ ಜ್ಞಾತಾ ಚ ವೋ ವಿಪೃಥೋಃ ಪಾರ್ಥತಾಽಸ್ಯ ॥೨೦೨॥

ಅಯಂ ಕಾರ್ಯಯೋಗಃ ಚ—ಈ ಕಾರ್ಯದ ಘಟನೆಯೂ ಕೂಡ, ಅತೀತಃ—ಮುಗಿದು ಹೋಗಿದೆ, ನಃ ಅಸಮಕ್ಷಂ ನಮ್ಮ ಪರೋಕ್ಷದಲ್ಲಿ (ನಾವಿಲ್ಲದಿರುವಾಗ), ಕನ್ಯಾ ಹೃತಾ – ಕನ್ಯೆಯು ಅಪಹರಿಸಲ್ಪಟ್ಟಿದ್ದಾಳೆ. ಅತ್ರ— ಇಂಥ ಸಂದರ್ಭದಲ್ಲಿ, ನಃ – ನಮಗೆ, ಕಾ ಮಾನಹಾನಿಃ—ಎಂಥ ಮಾನಹಾನಿಯು? (ನಮ್ಮ ಮಾನಹಾನಿ ಆಗಿಲ್ಲ ಎಂದು ಅರ್ಥ) (ಕಿಂತು—ಆದರೆ), ಭೂಯಸ್ತರಾಂ ಮಾನಿನಃ—ಬಹು ಅಭಿಮಾನಿಯಾದ, ತಸ್ಯ–ಆ ಅರ್ಜುನನಿಗೆ, ಸಾ ಆ ಮಾನಹಾನಿಯು, ಸ್ಯಾತ್- ಆಗುವದು, ಚ —ಮತ್ತು, ವಃ – ನಿಮ್ಮಿಂದ, ಅಸ್ಯ ಪಾರ್ಥತಾ–ಈ ಸನ್ಯಾಸಿಗೆ ಅರ್ಜುನನ ನಿಜ ರೂಪವು,(ಇವನು ಅರ್ಜುನನು ಎಂದು), ವಿಪೃಥೋಃ—ವಿಪೃಥುವಿನ ವಂಶದಿಂದ, ಜ್ಞಾತಾ—ತಿಳಿಯಲ್ಪಟ್ಟಿದೆ. ॥೨೦೨॥

ದೇಯಾ ಚ ಕನ್ಯಾ ನಾಸ್ತಿ ಪಾರ್ಥೇನ ತುಲ್ಯೋ ವರೋಽಸ್ಮಾಕಂ ಕೌರವೇಯಶ್ಚ ಪಾರ್ಥಃ ।
ಪೌತ್ರಶ್ಚ ಕೃಷ್ಣಸ್ಯ ಸುಪೂರ್ಣಶಕ್ತೇಃ ಪೈತೃಷ್ವಸೇಯೋ ವೀರತಮೋ ಗುಣಾಢ್ಯಃ ॥೨೦೩॥

ಕನ್ಯಾ—ಸುಭದ್ರೆಯಾದರೂ, ದೇಯಾ ಚ—ಕೊಡಲ್ಪಡಲೇ ಬೇಕು. ಪಾರ್ಥೇನ ತುಲ್ಯಃ—ಅರ್ಜುನನಿಗೆ ಸದೃಶನಾದ, ವರಃ—ವರನಾದರೂ, ಅಸ್ಮಾಕಂ—ನಮಗೆ, ನಾಸ್ತಿ—ಇಲ್ಲ. ಪಾರ್ಥಃ ಚ—ಅರ್ಜುನನೂ ಕೂಡ, ಕೌರವೇಯಃ—ಕುರುವಂಶೀಯನು, ಸುಪೂರ್ಣಶಕ್ತೇಃ—ಪೂರ್ಣಶಕ್ತಿಯುಳ್ಳ, ಕೃಷ್ಣಸ್ಯ—ಶ್ರೀವೇದವ್ಯಾಸರ, ಪೌತ್ರಃ—ಮೊಮ್ಮಗನು, ಅಸ್ಮಾಕಂ—ನಮ್ಮ, ಪೈತೃಷ್ವಸೇಯಃ—ಸೋದರತ್ತೆಯ ಮಗನು, ವೀರತಮಃ—ಶ್ರೇಷ್ಠ ಪರಾಕ್ರಮಿಯೂ, ಗುಣಾಢ್ಯಃ—ಇತರ ಸದ್ಗುಣಗಳಿಂದಲೂ ಕೂಡಿದವನು. ॥೨೦೩॥

ಅರ್ಥ್ಯೋಽಸ್ಮಾಭಿಃ ಸ್ವಯಮೇವಾಹರತ್ಸ ಶಕ್ರಾತ್ಮಜೋ ನಾತ್ರ ನಃ ಕಾರ್ಯಹಾನಿಃ ।
ಅನುದ್ಯುತ್ಯೈನಂ ಯದಿ ನಃ ಸ್ಯಾತ್ಪರಾಜಯೋ ಹಾನಿರ್ದೃಢಂ ಯಶಸೋ ವೋ ಭವೇತ ॥೨೦೪॥

ಅಸ್ಮಾಭಿಃ—ನಮ್ಮಿಂದ ಅರ್ಥ್ಯಃ—ಇಚ್ಛಿಸಲ್ಪಡಬೇಕಾದಂಥ, ಶಕ್ರಾತ್ಮಜಃ ಸಃ—ಇಂದ್ರಾವತಾರಿಯಾದ ಆ ಅರ್ಜುನನು, ಸ್ವಯಮೇವ ತಾನೇ, ಅಹರತ್—ಅಪಹರಿಸಿಕೊಂಡು ಹೋದನು. ಅತ್ರ—ಈ ವಿಷಯದಲ್ಲಿ, ನಃ—ನಮಗೆ, ಕಾರ್ಯಹಾನಿಃ ನ—ಯಾವದೇ ಕಾರ್ಯಹಾನಿಯಾಗಿಲ್ಲ. ಯದಿ—ಒಂದು ವೇಳೆ, ಏನಂ—ಈ ಅರ್ಜುನನನ್ನು, ಅನುದ್ಯುತ್ಯ—ಬೆನ್ನು ಹತ್ತಿ ಹೋಗಿ, ವಃ—ನಿಮಗೆ, ಪರಾಜಯಃ ಸ್ಯಾತ್—ಅಪಜಯವಾದರೆ, ತರ್ಹಿ—ಆಗ, ವಃ ಯಶಸಃ—ನಿಮ್ಮ ಕೀರ್ತಿಯ, ಹಾನಿಃ—ನಾಶವು, ದೃಢಂ ಭವೇತ—ಖಂಡಿತವಾಗಿ ಆಗುತ್ತದೆ. ॥೨೦೪॥

ಜಿತ್ವಾ ಯದೈನಂ ಕನ್ಯಕಾ ಹ್ಯಾಹೃತಾ ಚೇತ್ಪರಾವೃಷ್ಟಾಂ ನೈವ ಕಶ್ಚಿದ್ವಿಲಿಪ್ಸೇತ್ ।
ತತೋ ನೋ ನ ರೋಚತೇ ವೋಽನುಯಾನಮಿತ್ಯೂಚಿವಾನ್ಸನ್ ತೂಷ್ಣೀಂ ಪರೇಶಃ ॥೨೦೫॥

ಯದಿ—ಒಂದು ವೇಳೆ, ಏನಂ—ಈ ಅರ್ಜುನನನ್ನು, ಜಿತ್ವಾ—ಗೆದ್ದು, ಕನ್ಯಕಾ—ಕನ್ಯೆಯಾದ ಸುಭದ್ರೆಯು, ಆಹೃತಾಚೇತ್—ತರಲ್ಪಟ್ಟರೂ, ಪರಾವೃಷ್ಟಾಂ—ಇನ್ನೊಬ್ಬರಿಂದ ಕೂಡಿಕೊಂಡು ಹೋದವಳನ್ನು, ಕಶ್ಚಿತ್—ಬೇರೆ ಯಾವನೂ ನೈವ ವಿಲಿಪ್ಸೇತ್—ಸ್ವೀಕರಿಸಲು ಇಚ್ಛಿಸಲಾರನು. ತತಃ—ಆ ಕಾರಣದಿಂದ, ವಃ—ನಿಮ್ಮ, ಅನುಯಾನಂ—(ಯುದ್ಧ ಮಾಡುವದಕ್ಕಾಗಿ) ಅರ್ಜುನನನ್ನು ಬೆನ್ನು ಹತ್ತಿ ಹೋಗುವದು, ನೋ ನ ರೋಚತೇ—ನನಗೆ ಸಮ್ಮತವಲ್ಲ (ಹಿಡಿಸುವದಿಲ್ಲ.) ಪರೇಶಃ—ಸರ್ವೋತ್ತಮನಾದ ಶ್ರೀಕೃಷ್ಣನು, ಇತಿ—ಹೀಗೆ, ಊಚಿವಾನ್ ಸನ್—ಮಾತನಾಡಿದವನಾಗಿ, ತೂಷ್ಣೀಂ ಆಸ—ಸುಮ್ಮನಾದನು. ॥೨೦೫॥

ಶ್ರುತ್ವಾಹಲೀ ಕೃಷ್ಣವಾಕ್ಯಂ ಬಭಾಷೇ ಮಾ ಯಾತ ಚಿತ್ತಂ ವಿದಿತಂ ಮಯಾಽಸ್ಯ ।
ಅಸ್ಯಾನುವೃತ್ತಿರ್ವಿಜಯಾಯ ನಃ ಸ್ಯಾಚ್ಛುಭಾಯ ಶಾಂತ್ಯೈ ಪರತಶ್ಚ ಮುಕ್ತ್ಯೈ ॥೨೦೬॥

ಹಲೀ—ಬಲರಾಮನು, ಕೃಷ್ಣವಾಕ್ಯಂ—ಶ್ರೀಕೃಷ್ಣನಮಾತನ್ನು, ಶ್ರುತ್ವಾ—ಕೇಳಿ, (ಸರ್ವಾನ್—ಎಲ್ಲ ಯಾದವರನ್ನು ಕುರಿತು), ಮಾ ಯಾತ—ಹೋಗಬೇಡಿರಿ, ಮಯಾ—ನನ್ನಿಂದ, ಅಸ್ಯ—ಶ್ರೀಕೃಷ್ಣನ, ಚಿತ್ತಂ—ಮನಸ್ಸಿನ ಅಭಿಪ್ರಾಯವು, ವಿದಿತಂ—ತಿಳಿಯಲ್ಪಟ್ಟಿತು, ಅಸ್ಯ ಅನುವೃತ್ತಿಃ—ಇವನ ಅಭಿಪ್ರಾಯಾನುಸಾರ ನಡೆಯುವದು ನಃ—ನಮ್ಮ, ವಿಜಯಾಯ—ಜಯಕ್ಕೆ, ಶುಭಾಯ—ಕಲ್ಯಾಣಕ್ಕಾಗಿ, ಶಾಂತ್ಯೈ—ಮನಶ್ಶಾಂತಿಗೆ, ಪರತಃ—ಪರಲೋಕದಲ್ಲಿ, ಮುಕ್ತ್ಯೈ—ಮೋಕ್ಷ ಸುಖಕ್ಕಾಗಿ, ಸ್ಯಾತ್—ಕಾರಣವಾಗುತ್ತದೆ. ॥೨೦೬॥

ತತೋಽರ್ಜುನೋ ಯತ್ರ ತಿಷ್ಠೇನ್ನ ಕಶ್ಚಿತ್ತ್ವರಾಜಯಂ ಯಾತಿ ಕೃಷ್ಣಾಜ್ಜಯೈವ ॥
ರಥೇನ ತೇನೈವ ಯಯೌ ಸಭಾರ್ಯಶ್ಶಕ್ರಪ್ರಸ್ಥಂ ಪ್ರಾವಿಶದ್ಭ್ರಾತೃಗುಪ್ತವ್ ॥೨೦೭॥

ತತ:—ತಿನಂತರ, ಅರ್ಜುನಃ – ಅರ್ಜುನನು, ಯತ್ರ – ಯಾವರಥದಲ್ಲಿ, ತಿಷ್ಠನ್—ಇರುವ, ಕಶ್ಚಿತ್ – ಯಾವನೂ, ಕೃಷ್ಣಾಜ್ಞಯಾ, ಏವ – ಶ್ರೀಕೃಷ್ಣನ (ಶ್ರೀ ವೇದವ್ಯಾಸದೇವರ) ಮಾತಿನಂತೆಯೇ, ಪರಾಜಯಂ – ಸೋಲನ್ನು, ನ ಯಾತಿ – ಹೊಂದುವದಿಲ್ಲವೋ. ತೇನ ರಥೇನ ಏವ—ತಿಂತಹ ಶ್ರೀಕೃಷ್ಣರಥದಿಂದಲೇ, ಸಭಾರ್ಯಸ್ಸನ್— ಪತ್ನಿಯಾದ ಸುಭದ್ರೆಯಿಂದ ಸಹಿತನಾಗಿ, ಯಯೌ— ಹೊರಟನು, ಭ್ರಾತೃಗುಪ್ತಂ—ಸಹೋದರರಾದ ಧರ್ಮಭೀಮಾದಿಗಳಿಂದ ರಕ್ಷಿಸಲ್ಪಟ್ಟ, ಶಕ್ರಪ್ರಸ್ಥಂ—ಇಂದ್ರಪ್ರಸ್ಥವನ್ನು. ಪ್ರಾವಿಶತ್ – ಪ್ರವೇಶಿಸಿದನು. ॥೨೦೭॥

ಸಂಭಾವಿತೋ ಭ್ರಾತೃಭಿಶ್ಚಾತಿತುಷ್ಟೈರೂಚೇಽಥ ಸರ್ವಂ ತೇಷು ಯಚ್ಚಾತ್ಮವೃತ್ತವ್ ।
ಶಾಂತೇಷು ವಾಕ್ಯಾದಾತ್ಮನೋ ಯಾದವೇಷು ಕೃಷ್ಣೋಽಯುಕ್ತೋ ಹಲಿನಾಽಗಾಚ್ಚ ಪಾರ್ಥಾನ್॥೨೦೮॥

ಅತಿತುಷ್ಟೈ: ಭ್ರಾತೃಭಿ;— ತನನ್ನು ನೋಡಿ ಅತಿ ಸಂತುಷ್ಟರಾದ ಸಹೋದರರಿಂದ, ಸಂಭಾವಿತ: – ಆದರಿಸಲ್ಪಟ್ಟ ಅರ್ಜುನನು, ಅಥ—ನುತರ, ಯತ್ ಆತ್ಮವೃತ್ತಂ – ತನ್ನ ವಾರ್ತೆ ಯಾವದು ಇತ್ತೋ, ತತ್ ಸರ್ವಂಚ – ಅದೆಲ್ಲವನ್ನು, ತೇಷು – ಆ ಸಹೋದರರ ಹತ್ತಿರ, ಊಚೇ – ಹೇಳಿದನು. ಕೃಷ್ಣ: ಚ – ಶ್ರೀಕೃಷ್ಣನಾದರೂ ಆತ್ಮನ ; ವಾಕ್ಯಾತ್ – ತನ್ನ ಮಾತಿನ ಪ್ರಕಾರ, ಯಾದವೇಷು – ಯಾದವರು, ಶಾಂತೇಷು ಸತ್ಸು – ಶಾಂತರಾಗುತ್ತಿರಲು, ಹಲಿನಾಯುಕ್ತಃ ಸನ್—ಬಲರಾಮನಿಂದ ಕೂಡಿದವನಾಗಿ, ಪಾರ್ಥಾನ್—ಪಾಂಡವರನ್ನು ಕುರಿತು, ಅಗಾತ್ – ಹೊರಟನು. ॥೨೦೮॥

ಸಾರ್ಧಂ ಯಯೌ ಶಕಟೈ ರತ್ನಪೂರ್ಣೈಶ್ಶಕ್ರಪ್ರಸ್ಥಂ ಪೂಜಿತಸ್ತತ್ರ ಪಾರ್ಥೈ: ।
ದದೌ ತೇಷಾಂ ತಾನಿ ರಾಮೇಣ ಯುಕ್ತಸ್ತಥಾ ಕೃಷ್ಣಾಯೈ ಭೂಷಣಾನಿ ಸ್ವಸುಶ್ಚ ॥೨೦೯॥

ರತ್ನಪೂರ್ಣೈ: ಶಕಟೈ: ಸಾರ್ಧಂ – ರತ್ನಗಳಿಂದ ತುಂಬಿದ ಬಂಡಿಗಳಿಂದ ಕೂಡಿಕೊಂಡು, ರಾಮೇಣಯುಕ್ತ:ಸನ್-ಬಲರಾಮನಿಂದ ಕೂಡಿದವನಾಗಿ, ಶಕ್ರಪ್ರಸ್ಥಂ – ಇಂದ್ರಪ್ರಸ್ಥಕ್ಕೆ, ಯಯೌ – ಹೋದನು, ತತ್ರ–ಅಲ್ಲಿ, ಪಾರ್ಥೈ: – ಪಾಂಡವರಿಂದ, ಪೂಜಿತ:ಸನ್ – ಪೂಜಿಸಲ್ಪಟ್ಟವನಾಗಿ, ತೇಷಾಂ—ಆ ಪಾಂಡವರಿಗೆ, ತಥಾ-ಹಾಗೂ, ಕೃಷ್ಣಾಯೈ – ದ್ರೌಪದಿಗೆ, ಚ – ಮತ್ತು, ಸ್ವಸು: – ತಂಗಿಯಾದ ಸುಭದ್ರೆಗೆ, ಭೂಷಣಾನಿ—ಆಭರಣಗಳನ್ನು, ರಾಮೇಣ ಯುಕ್ತಸ್ಸನ್–ಬಲರಾಮನಿಂದ ಕೂಡಿದವನಾಗಿ, ದದೌ –ಕೊಟ್ಟನು. ॥೨೦೯॥

ಮಾಸಾನುಷಿತ್ವಾ ಕತಿಚಿದ್ರೌಹಿಣೇಯೋ ಯಯೌ ಪುರೀಂ ಸ್ವಾಂ ಕೇಶವೋಽತ್ರಾವಸಚ್ಚ ।
ಬಹೂನ್ವರ್ಷಾನ್ಪಾಂಡವೈಃ ಪೂಜ್ಯಮಾನ: ಪ್ರೀತಿಂ ತೇಷಾಮಾದಧಾನೋಽಧಿಕಾಂ ಚ ॥೨೧೦॥

ರೌಹಿಣೇಯಃ – ಬಲರಾಮದೇವರು, ಕತಿಚಿತ್ ಮಾಸಾನ್—ಕೆಲವು ತಿಂಗಳುಗಳವರೆಗೆ, ಉಷಿತ್ವಾ – ವಾಸಮಾಡಿ, ಸ್ವಾಂ ಪುರೀಂ – ತನ್ನ ದ್ವಾರಕೆಯನ್ನು ಕುರಿತು, ಯಯೌ —ಹೋದರು. ಕೇಶವಃ—ಶ್ರೀಕೃಷ್ಣನು, ಅತ್ರ ಚ–ಇಲ್ಲಿಯೇ, ಪಾಂಡವೈ: ಪೂಜ್ಯಮಾನಃಸನ್ —ಪಾಂಡವರಿಂದ ಪೂಜಿಸಲ್ಪಡುವವನಾಗಿ, ತೇಷಾಂ— ಅವರ ಮೇಲೆ, ಅಧಿಕಾಂ ಪ್ರೀತಿಂ ಆದಧಾನ:ಸನ್ – ಬಹಳವಾದ ಪ್ರೀತಿಯನ್ನು ಮಾಡುವವನಾಗಿ, ಬಹೂನ್ ವರ್ಷಾನ್ – ಬಹಳ ವರ್ಷಗಳ ಪರ್ಯಂತ, ಅವಸತ್—ವಾಸಮಾಡಿದನು. ॥೨೧೦॥

ಭಾವಾನುವಾದ — ೧೪೬-೨೧೦ ಸುಭದ್ರಾ ಅರ್ಜುನರ ವಿವಾಹವನ್ನು ಮಾಡಿಸಿದ ನಂತರ, ಶ್ರೀಕೃಷ್ಣನು ತನ್ನ ರಥವನ್ನು ಅರ್ಜುನನಿಗಾಗಿ ಇಟ್ಟು ತಾನು ಅದೇ ರಾತ್ರಿಯಲ್ಲಿ ಹೊರಟು ಹೋದನು. ಇಂದ್ರನೂ ತನ್ನ ಪರಿವಾರದಿಂದ ಸಹಿತನಾಗಿ ಹೋದನು. ಬೆಳಗಾಗುವಾಗ ಅರ್ಜುನನು ಆಯುಧಗಳಿಂದ ತುಂಬಿದ ಶ್ರೀಕೃಷ್ಣ ರಥದಲ್ಲಿ ಸುಭದ್ರಾ ಸಹಿತನಾಗಿ ಏರಿದನು. ಧನುರ್ಬಾಣ ಬತ್ತಳಿಕೆಗಳಿಂದ ಸಿದ್ಧನಾಗಿದ್ದನು. ಇದನ್ನೆಲ್ಲ ನೋಡಿದ ದ್ವಾರಕಾವಾಸಿ ಪ್ರಜೆಗಳು ಏನಿದೂ! ಏನಿದು! ಇಲ್ಲಿಯವರೆಗೆ ಸನ್ಯಾಸಿಯಾಗಿದ್ದವನು ಈಗ ಧನುರ್ಧಾರಿಯಾಗಿ ಕನ್ಯಾಪಹಾರ ಮಾಡಿಕೊಂಡು ಹೊರಟಿದ್ದಾನೆ ಎಂದು ಕೂಗಲಾರಂಭಿಸಿದರು. ಪುರ ರಕ್ಷಕರು ಈ ಧ್ವನಿಯಿಂದ ಜಾಗೃತರಾಗಿ, ಯುದ್ಧಕ್ಕಾಗಿ ತೊಡುವ ಹೃದಯಕವಚ ಕರಕವಚಗಳನ್ನು ಹಾಕಿಕೊಂಡಂಥ, ಧನುರ್ಧಾರಿಯಾದ, ಅಭರಣ ವಸ್ತ್ರಗಳನ್ನು ಧರಿಸಿದ ಅರ್ಜುನನನ್ನು ನೋಡಿದರು, ಮತ್ತು ಅವನನ್ನು ತಡೆದರು. ಆಗ ಅರ್ಜುನನು, ಧನುಸ್ಸಿನಿಂದ ಸತತವಾಗಿ ಬಾಣಗಳನ್ನು ಬಿಡುತ್ತಾ ಆಕಾಶ ದಿಕ್ಕುಗಳನ್ನೆಲ್ಲ ತುಂಬಿಸಿದನು. ಈ ಸಂದರ್ಭಕ್ಕೆ ಬೇಕಾಗುತ್ತದೆಂದು ತಿಳಿದೇ ಶ್ರೀಕೃಷ್ಣನು ಸುಭದ್ರೆಗೆ ಸಾರಥ್ಯ ವಿದ್ಯೆಯನ್ನು ಬಾಲ್ಯದಲ್ಲಿಯೇ ಕಲಿಸಿದ್ದನು. ಅವಳು ಈಗ ಅರ್ಜುನನಿಗೆ ಸಾರಥ್ಯವನ್ನು ಚೆನ್ನಾಗಿ ಮಾಡಿದಳು. ಅರ್ಜುನನೂ ಕೂಡ ಕೇವಲ ಅವರನ್ನೆಲ್ಲ ಹೆದರಿಸುವದಕ್ಕಾಗಿ ಮಾತ್ರ ಯುದ್ಧ ಮಾಡಿದನು. ಇವನ ಬಾಣಗಳು ಅವರಿಗೆಲ್ಲ ತಾಗಿದರೂ ಚರ್ಮಕ್ಕೆ ಕೂಡ ಏನೂ ಗಾಯವಾಗದಂತೆ ಬಿಟ್ಟಿದ್ದನು. ಆ ಬಾಣಗಳು ಬರುವದನ್ನು ನೋಡಿಯೇ ರಕ್ಷಕರು ಹೆದರಿ ಓಡಿದರು. ಅರ್ಜುನನು ಮುಂದೆ ಹೋಗುತ್ತಾ ಬಲರಾಮನಿಂದ ಪುರರಕ್ಷಣೆಗಾಗಿ ಇಡಲ್ಪಟ್ಟಿದ್ದ ವಿಪೃಥುವನ್ನು ನೋಡಿದನು. ಅವನು ಸೌಮ್ಯ ಎಂಬ ಮರುದ್ದೇವತೆಯ ಅವತಾರನು; ಶ್ರೀಕೃಷ್ಣನ ಸೇವೆಗಾಗಿ ಅವತರಿಸಿದವನು. ಅವನಿಗೂ ಶ್ರೀಕೃಷ್ಣನ ಅಪ್ಪಣೆ ಇದ್ದದ್ದರಿಂದ ಅರ್ಜುನನಿಗೆ ಸರಿಯಾಗಿ ನಿಜವಾಗಿ ತಡೆಯನ್ನು ಮಾಡಲಿಲ್ಲ. ಬಲರಾಮನಿಗೆ ಸಂತೋಷವಾಗಬೇಕೆಂದು ಯುದ್ಧವನ್ನು ಮಾಡುತ್ತಿದ್ದಂತೆ ತೋರಿಸಿದನು. ಅವನಿಗೆ ಸ್ವಲ್ಪ ಗಾಯ ಕೂಡ ಆಗದಂತೆ ಬಾಣಗಳನ್ನು ಅರ್ಜುನನು ಪ್ರಯೋಗಿಸಿದನು. ಅವನ ರಥ-ಆಯುಧಗಳನ್ನು ಕತ್ತರಿಸಿದನು. ಸೈನ್ಯವನ್ನು ಕೊಲ್ಲದೇ ಓಡಿಸಿದನು. ಬಾಣಗಳು ಬಂದು ಮೈಗೆ ತಾಗಿ ನಿಲ್ಲುತ್ತವೆ, ಆದರೆ ಗಾಯವನ್ನುಂಟುಮಾಡುವದಿಲ್ಲ. ಇದನ್ನೆಲ್ಲ ನೋಡಿ ಸಂತೋಷಪಟ್ಟ ವಿಪೃಥುವು ಅರ್ಜುನನ ಧನುರ್ವಿದ್ಯಾ ಪ್ರಾವೀಣ್ಯವನ್ನು ಹೊಗಳಿ, ಅವನ ಹತ್ತಿರಕ್ಕೆ ಬಂದು ಶ್ರೀಕೃಷ್ಣನು ತನಗೆ ವಿಧಿಸಿದ ಕಾರ್ಯದ ವಿಷಯವನ್ನೆಲ್ಲ ಹೇಳಿದನು. ನಂತರ ಸೋತವರಂತೆ ಓಡಿ, ಪಿಂಡೋದ್ದಾರಕ್ಕೆ ಹೋಗಿ ಬಲರಾಮನ ಹತ್ತಿರ ಎಲ್ಲವನ್ನು ಹೇಳಿದನು. ಅವನು ಸಿಟ್ಟಿನಿಂದ ಅರ್ಜುನನನ್ನು ಕೊಂದೇ ಬಿಡಬೇಕೆಂಬ ಇಚ್ಛೆಯಿಂದ, ಪ್ರದ್ಯುಮ್ನ ಸಾಂಬ ಮೊದಲಾದವರಿಂದ ಕೂಡಿಕೊಂಡು ದ್ವಾರಕೆಗೆ ಬಂದನು. ಶ್ರೀಕೃಷ್ಣನೂ ಇದನ್ನೆಲ್ಲ ಕೇಳಿ ಊರಿಗೆ ಬಂದು ಸುಧರ್ಮಾ ಸಭೆಗೆ ಬಂದು ಅವಮಾನ ಮೊದಲಾದ ಅನಿಷ್ಟವಾದಾಗ ವಿಮನಸ್ಕರಾಗಿರುವವರಂತೆ ಕೆಳಗೆ ಮುಖ ಮಾಡಿಕೊಂಡು ಕುಳಿತಿದ್ದನು. ಆಗ ಪ್ರದ್ಯುಮ್ನ, ಸಾಂಬ ಮೊದಲಾದ ಯಾದವರು ಆ ಕಪಟ ಸನ್ಯಾಸಿಯನ್ನು ಕೊಂದೇ ಬಿಡುತ್ತೇವೆ, ನಮ್ಮ ಸುಭದ್ರೆಯನ್ನು ಕ್ಷಣಮಾತ್ರದಲ್ಲಿ ತರುತ್ತೇವೆ. ಎಂದು ಉಚ್ಚಧ್ವನಿಯಲ್ಲಿ ರೇಗಾಡುತ್ತಿದ್ದರು. ಇದನ್ನು ಕೇಳಿದ ಬಲರಾಮನು ಹಾಗೆ ಹೋಗಬೇಡಿ, ಶ್ರೀಕೃಷ್ಣನನ್ನು ಕೇಳಿ ಅವನ ಸಮ್ಮತಿ ಇದ್ದರೆ ಹೊರಡಿರಿ; ಅವನ ವಿರೋಧವಿದ್ದರೆ ಜಯವಾಗಲಾರದು. ಎಂದು ಹೇಳಿದಾಗ, ಅವರೆಲ್ಲರೂ ಶ್ರೀಕೃಷ್ಣನನ್ನು ಕೇಳಿದರು. ಆಗ ಶ್ರೀಕೃಷ್ಣನು—'ನೋಡಿ, ನಾನು ಮೊದಲೇ ಹೇಳಿದ್ದೆನು.—ಈ ತರುಣ ಸನ್ಯಾಸಿಯನ್ನು ಕನ್ಯಾಗೃಹದಲ್ಲಿ ವಾಸಮಾಡಿಸುವದು ಸರಿಯಲ್ಲ. ಎಂದು ಅನೇಕ ದೋಷಗಳನ್ನೂ ಕೂಡ ವಿವರಿಸಿ ಹೇಳಿದ್ದೆನು. ಆದರೂ ನನ್ನ ಮಾತು ನಮ್ಮ ಅಣ್ಣನಿಗೆ ಹಿಡಿಸಲಿಲ್ಲ. ನಾವೇನು ಮಾಡುವದು! ನಮ್ಮ ಅಣ್ಣನ ಮಾತು ನಮಗೆಲ್ಲ ಮಾನ್ಯವಾದ್ದರಿಂದ ಅವನ ಆಜ್ಞಾ ಪ್ರಕಾರ ಆ ಕಪಟಸನ್ಯಾಸಿಯ ವಾಸಕ್ಕೆ ಎಲ್ಲ ಅನುಕೂಲ ಮಾಡಿಕೊಟ್ಟೆವು. ಈಗಂತೂ ಈ ಘಟನೆ ಆಗಿಹೋಯಿತು. ನಾವಿಲ್ಲದಿರುವಾಗ ಕನ್ಯೆಯನ್ನು ಓಡಿಸಿಕೊಂಡು ಹೋದರೆ ನಮಗೇನೂ ಅವಮಾನಕರವಲ್ಲ; (ನಾವಿದ್ದಾಗ ಆಗಿದ್ದರೆ ನಮಗೆ ಅವಮಾನಕರ ಎನಬಹುದಾಗಿತ್ತು. ಈಗ ಪರಾಕ್ರಮಿ ಎಂದು ಪ್ರಸಿದ್ಧನಾದ ಆ ಅರ್ಜುನನಿಗೆ ಯಾರೂ ಇಲ್ಲದಾಗ ಹೇಡಿಯಂತೆ ಕಪಟದಿಂದ ಕನ್ಯಾಪಹಾರ ಮಾಡಿಕೊಂಡು ಹೋದನು ಎಂದು ಅಪಕೀರ್ತಿಯು ಬರುವದು. ವಿಪೃಥುವಿನಿಂದ ಆ ಸನ್ಯಾಸಿಯು ಅರ್ಜುನನೇ ಎಂದು ಸ್ಪಷ್ಟವಾಗಿ ತಿಳಿದಿದೆ. ಈಗ ನಾವು

ಮಾಡಬೇಕಾದದ್ದು ಏನು ಎಂದು ವಿಚಾರ ಮಾಡಬೇಕು. ನಮ್ಮ ಸುಭದ್ರೆಯು ಕನ್ಯೆಯು, ಮನೆಯಲ್ಲಿ ಇಟ್ಟುಕೊಂಡು ಕೊಡುವ ವಸ್ತುವಲ್ಲ. ಒಳ್ಳೇ ವರ ನೋಡಿ ವಿವಾಹಮಾಡಿ ಕೊಡಲೇಬೇಕು. ಈಗ ಓಡಿಸಿಕೊಂಡು ಹೋದವನಂತೂ ಅರ್ಜುನನು, ಶ್ರೇಷ್ಠ ಕುರುಕುಲದವನು, ಭಗವದವತಾರನಾದ ಶ್ರೀವೇದವ್ಯಾಸರ ಮೊಮ್ಮಗನು, ಪರಾಕ್ರಮಾದಿ ಗುಣ ಳುಳ್ಳವನು. ಇಂಥ ವರನನ್ನು ನಾವು ಹುಡುಕಿಕೊಂಡು ಹೋಗಬೇಕು, ಹಾಗಿರುವಾಗ ಅವನು ಸ್ವಯಂ ಕರೆದುಕೊಂಡು ಹೋಗಿರುವಾಗ ನಮಗೇನು ಹಾನಿಯು? ಈಗ ನೀವು ಅವನ ಮೇಲೆ ಯುದ್ಧಕ್ಕೆ ಹೋಗಿ ಸೋತುಬಂದರಂತೂ ಅಪ ಕೀರ್ತಿ ಬರುವದು ದೃಢ, ಗೆದ್ದು ಕನ್ಯೆಯನ್ನು ಬಿಡಿಸಿಕೊಂಡು ಬಂದರೂ ಅರ್ಜುನನ ಸಂಗಡ ಹೋದವಳು ಎಂದು ಪ್ರಸಿದ್ಧಳಾದ ಅವಳನ್ನು ಬೇರೆ ಯಾವನು ಗ್ರಹಿಸುವನು? ಯಾರೂ ಸ್ವೀಕರಿಸಲಾರರು ಆದ್ದರಿಂದ ನೀವು ಹೋಗು ವದು ಸರಿ ಎನಿಸುವದಿಲ್ಲ ಎಂದು ಅಂದನು. ಇದನ್ನೆಲ್ಲ ಕೇಳಿದ, ಬಲರಾಮನು ಶ್ರೀಕೃಷ್ಣನ ಅಭಿಪ್ರಾಯವು ತಿಳಿಯಿತು ಅವನ ಅಭಿಪ್ರಾಯಾನುಸಾರವಾಗಿ ನಡೆಯುವದೇ ನಮ್ಮೆಲ್ಲರ ಇಹ-ಪರ ಹಿತಕ್ಕೆ ಕಾರಣವಾಗುವದು. ಇಲ್ಲಿ ಸುಖ-ಶಾಂತಿ-ಸಮೃದ್ಧಿಯನ್ನು ಕೊಡುವದು ಪರದಲ್ಲಿ ಮೋಕ್ಷಸುಖಕ್ಕೂ ಕಾರಣವಾಗುವದು ಎಂದು ಹೇಳಿದನು. ಅದನ್ನು ಕೇಳಿ ಎಲ್ಲರೂ ಸುಮ್ಮನಾದರು. ಅರ್ಜುನನು ಹತ್ತಿದವರಿಗೆ ಜಯವನ್ನೇ ಕೊಡತಕ್ಕ ಶ್ರೀಕೃಷ್ಣ ರಥವನ್ನು ಏರಿ ಸುಭದ್ರಾ ಸಹಿತನಾಗಿ ಇಂದ್ರಪ್ರಸ್ಥಕ್ಕೆ ಬಂದನು. ಧರ್ಮರಾಜಾದಿ ಸಹೋದರರೆಲ್ಲರೂ ಬಹಳ ಸಂತೋಷಪಟ್ಟು ಸ್ವಾಗತಿಸಿದರು. ಅವರಿಗೆ ತನ್ನ ತೀರ್ಥಯಾತ್ರಾ ಘಟನೆಗಳನ್ನೆಲ್ಲ ಹೇಳಿದನು. ಈ ಕಡೆ ಶ್ರೀಕೃಷ್ಣನು ತನ್ನ ಅಭಿಪ್ರಾಯದಿಂದ ಬಲರಾಮ ಮೊದಲಾಗಿ ಎಲ್ಲರೂ ಶಾಂತರಾದಾಗ, ಬಲರಾಮನಿಂದ ಸಹಿತನಾಗಿ, ರತ್ನಗಳಿಂದ ತುಂಬಿದ ಗಾಡಿಗಳನ್ನು, ತೆಗೆದು ಕೊಂಡು ಪಾಂಡವರ ಹತ್ತಿರಕ್ಕೆ ಬಂದು ಅವರಿಂದ ಪೂಜಿತನಾಗಿ ಎಲ್ಲ ಪಾಂಡವರಿಗೆ, ದ್ರೌಪದಿಗೆ ಮತ್ತು ಸುಭದ್ರೆಗೂ ಸಾಕಷ್ಟು ರತ್ನರಾಶಿಗಳನ್ನು ಕೊಟ್ಟನು. ಬಲರಾಮದೇವನು ಕೆಲವು ತಿಂಗಳು ಇದ್ದು ಪುನಃ ದ್ವಾರಕೆಗೆ ಹೋದನು. ಶ್ರೀಕೃಷ್ಣನು ಮಾತ್ರ ಆ ಪಾಂಡವರಲ್ಲಿ ತನ್ನ ವಿಶೇಷ ಪ್ರೀತಿಯನ್ನು ವಹಿಸುತ್ತಾ, ಅವರಿಂದ ಪೂಜಿತನಾಗಿ ಅಲ್ಲಿಯೇ ಬಹು ವರ್ಷಗಳವರೆಗೆ ವಾಸಮಾಡಿದನು.

ಆಸನ್ ಕೃಷ್ಣಾಯಾಃ ಪಂಚ ಪುತ್ರಾ ಗುಣಾಢ್ಯಾ ವಿಶ್ವೇ ದೇವಾಃ ಪಂಚಗಂಧರ್ವಮುಖ್ಯೈಃ ।
ಆವಿಷ್ಟಾಸ್ತೇ ಚಿತ್ರರಥಾಭಿತಾವ್ರ್ಯ ಕಿಶೋರ ಗೋಪಾಲ ಬಲ್ಯೈಃ ಕ್ರಮೇಣ ॥೨೧೧॥

ಕೃಷ್ಣಾಯಾಃ—ದ್ರೌಪದಿದೇವಿಗೆ ಗುಣಾಢ್ಯಾಃ ಪಂಚಪುತ್ರಾಃ—ಗುಣಗಳಾದ ಐದು ಮಕ್ಕಳು, ಆಸನ್—ಆದರೂ, ತೇ—ಅವರು, ಪಂಚಗಂಧರ್ವಮುಖ್ಯೈ—ಐದು ಗಂಧರ್ವ ಶ್ರೇಷ್ಠರಾದ, ಚಿತ್ರರಥಾಭಿತಾವ್ರ್ಯಕಿಶೋರಗೋಪಾಲ ಬಲ್ಯೈಃ—ಚಿತ್ರರಥ ಅಭಿತಾವರ್ರ, ಕಿಶೋರ. ಗೋಪಾಲ ಹಾಗೂ ಬಿಲ ಎಂಬವರಿಂದ, ಕ್ರಮೇಣ ಆವಿಷ್ಟಾಃ—ಕ್ರಮವಾಗಿ ಆವಿಷ್ಟರಾದ, ವಿಶ್ವೇದೇವಾಃ—ವಿಶ್ವೇದೇವತೆಗಳ ಅವತಾರರು. ॥೨೧೧॥

ಅವತಾರಿಕೆ :— ದ್ರೌಪದೀಮಕ್ಕಳ ನಾಮಗಳನ್ನು ಹೇಳುತ್ತಾರೆ—

ಪ್ರತಿವಿಂಧ್ಯಃ ಶ್ರುತಸೋಮಃ ಶ್ರುತಾಖ್ಯಕೀರ್ತಿಃ ಶತಾನೀಕ ಉತ ಶ್ರುತಕ್ರಿಯಃ ।
ಯುಧಿಷ್ಠಿರಾದ್ಯೈಃ ಕ್ರಮಶಃ ಪ್ರಜಾತಾಸ್ತೇಷಾಂ ದ್ವ್ಯೋಶ್ಚಾವರಜೋಽಭಿಮನ್ಯುಃ ।।೨೧೨॥

ಪ್ರತಿವಿಂಧ್ಯಃ—ಪ್ರತಿವಿಂಧ್ಯನೆಂಬವನು, ಶ್ರುತಸೋಮಃ—ಶ್ರುತಸೋಮನೆಂಬುವನು, ಶ್ರುತಾಖ್ಯಕೀರ್ತಿಃ—ಶ್ರುತಕೀರ್ತಿ ಎಂಬುವನು, ಶತಾನೀಕಃ—ಶತಾನಿಶ ಎಂಬುವನು. ಶ್ರುತಕ್ರಿಯಃ—ಶ್ರುತಕ್ರಿಯನೆಂಬುವನು, ಹೀಗೆ ಈ ಐದು ಜನರು,) ಯುಧಿಷ್ಠಿರಾದ್ಯೈಃ - ಧರ್ಮರಾಜನೇ ಮೊದಲಾದ ಪಾಂಡವರಿಂದ, ಕ್ರಮಶಃ—ಜ್ಯೇಷ್ಠ ಕ್ರಮವಾಗಿ,

ಪ್ರಜಾತಾಃ—ಅವತರಿಸಿದರು. ಅಭಿಮನ್ಯುಃ—ಸುಭದ್ರಾತನಯನಾದ ಅಭಿಮನ್ಯುವು. ತೇಷಾಂ—ಆ ಐದು ಮಂದಿ ಉಪ ಪಾಂಡವರ ಪೈಕಿ, ದ್ವಯೋಃ ಮೊದಲಿನ ಇಬ್ಬರಿಗೆ, (ಅಂದರೆ ಪ್ರತಿವಿಂಧ್ಯ ಹಾಗೂ ಶ್ರುತಸೋಮರಿಗೆ) ಅವರಜಃ—ತಮ್ಮನು. ॥೨೧೨॥

ಚಂದ್ರಾಂಶಯುಕ್ತೋಽತಿತರಾಂ ಬುಧೋಽಸೌ ಜಾತಸ್ಸುಭದ್ರಾಜಠರೇಽರ್ಜುನೇನ ।
ಧರ್ಮೋರಶಕ್ರಾಂಶಯುತೊಽಶ್ವಿನೋಶ್ಚ ತಥೈವ ಕೃಷ್ಣಸ್ಯ ಸುಸನ್ನಿಧಾನಯುಕ್ ॥೨೧೩॥

ಅಸೌ — ಆ ಅಭಿಮನ್ಯುವು. ಅತಿತರಾಂ—ಅತ್ಯಂತವಾಗಿ, ಚಂದ್ರಾಂಶಯುಕ್ತಃ – ಚಂದ್ರನ ಆವೇಶದಿಂದ ಕೂಡಿದ. ಬುಧಃ – ಬುಧನ ಅವತಾರನು, ಸುಭದ್ರಾಜಠರೇ – ಸುಭದ್ರೆಯ ಉದರದಲ್ಲಿ, ಅರ್ಜುನೇನ ಜಾತಃ - ಅರ್ಜುನನಿಂದ ಹುಟ್ಟಿದನು. ಧರ್ಮೋರಶಕ್ರಾಂಶ ಯುತಃ – ಯಮಧರ್ಮ, ಮುಖ್ಯ ಪ್ರಾಣ,ದೇವೇಂದ್ರ. ಇವರ ಆವೇಶದಿಂದ ಕೂಡಿದವನು, ಅಶ್ವಿನೋಶ್ಚ — ಅಶ್ವಿನಿ ದೇವತೆಗಳ ಆವೇಶವುಳ್ಳವನೂ ಆಗಿದ್ದನು. ತಥಾ ಏವ – ಹಾಗೆಯೇ, ಕೃಷ್ಣಸ್ಯ—ಶ್ರೀಕೃಷ್ಣನ, ಸುಸನ್ನಿಧಾನಯುಕ್—ದಿವ್ಯಸನ್ನಿಧಾನದಿಂದ ಕೂಡಿದವನು ಆಗಿದ್ದನು. ॥೨೧೩॥

ಸರ್ವೇಽಪಿ ತೇ ವೀರ್ಯವಂತಸ್ಸುರೂಪಾಃ ಭಕ್ತಾವಿಷ್ಣೋರ್ಸರ್ವಶಾಸ್ತ್ರೇಷ್ವಭಿಜ್ಞಾಃ ।
ಮೋದಂ ಯಯುಃ ಪಾಂಡವಾಸ್ತೈಸ್ಸುತೈಶ್ಚ ವಿಶೇಷತಃ ಸಾತ್ವತೀನಂದನೇನ ॥೨೧೪॥

ತೇ ಸರ್ವೇ ಅಪಿ—ಪಾಂಡವರ ಆ ಎಲ್ಲ ಮಕ್ಕಳೂ, ವೀರ್ಯವಂತಃ—ಪರಾಕ್ರಮಿಗಳು, ಸುರೂಪಾಃ—ಅತಿ ಸುಂದರರು, ವಿಷ್ಣೋಃಭಕ್ತಾಃ—ವಿಷ್ಣುಭಕ್ತರು, ಸರ್ವಶಾಸ್ತ್ರೇಷು ಅಭಿಜ್ಞಾಃ— ಎಲ್ಲ ಶಾಸ್ತ್ರಗಳಲ್ಲಿ ಪರಿಣತರು, ಆಗಿದ್ದರು. ಪಾಂಡವಾಃ—ಪಾಂಡವರು, ತೈಃ ಸುತೈಃ ಚ— ಎಲ್ಲ ಮಕ್ಕಳಿಂದಲೂ, ಮೋದಂ ಯಯುಃ:—ಸಂತೋಷವನ್ನು ಹೊಂದಿದರು. ಸಾತ್ವತೀನಂದನೇನ–ಸುಭದ್ರಾತನಯನಾದ ಅಭಿಮನ್ಯುವಿನಿಂದ, ವಿಶೇಷತಃ ಮೋದಂ ಯಯುಃ – ವಿಶೇಷ ಆನಂದವನ್ನು ಪಡೆಯುತ್ತಿದ್ದರು. ॥೨೧೪॥

ಭಾವಾನುವಾದ ೨೧೧ – ೨೧೪ ದ್ರೌಪದಿದೇವಿಗೆ ಧರ್ಮರಾಜ, ಭೀಮ, ಮೊದಲಾದ ಐದು ಪಾಂಡವರಿಂದ ಕ್ರಮವಾಗಿ ಪ್ರತಿವಿಂಧ್ಯ, ಶ್ರುತಸೋಮ, ಶ್ರುತಕೀರ್ತಿ. ಶತಾನೀಕ, ಹಾಗೂ ಶ್ರುತಕ್ರಿಯ ಎಂಬ ಐದು ಮಂದಿ ಮಕ್ಕಳು ಹುಟ್ಟಿದರು. ಈ ಐದು ಮಂದಿ ಮಕ್ಕಳು ವಿಶ್ವೇದೇವತೆಗಳ ಅವತಾರರು; ಚಿತ್ರರಥ, ಅಭಿತಾವರ್ತ, ಕಿಶೋರ ಗೋಪಾಲ ಹಾಗೂ ಬಲ ಎಂಬ ಗಂಧರ್ವಶ್ರೇಷ್ಠರ ಆವೇಶವುಳ್ಳವರು ಹಾಗೂ ಗುಣಿಗಳು ಆಗಿದ್ದರು. ಅರ್ಜುನನಿಗೆ ಸುಭದ್ರೆಯಲ್ಲಿ ಅಭಿಮನ್ಯು ಎಂಬ ಮಗನು ದ್ರೌಪದಿ ದೇವಿಯಲ್ಲಿ ತನಗೆ ಶ್ರುತಕೀರ್ತಿ ಎಂಬ ಮಗನು ಹುಟ್ಟುವದಕ್ಕಿಂತ ಮೊದಲು ಆದರೆ ಶ್ರುತಸೋಮನ ನಂತರ ಹುಟ್ಟಿದನು. ಅವನು ಬುಧನ ಅವತಾರನು, ಚಂದ್ರ, ಯಮಧರ್ಮ ಮುಖ್ಯ ಪ್ರಾಣದೇವ ಇಂದ್ರ, ಅಶ್ವಿನೀದೇವತೆಗಳ ಆವೇಶವುಳ್ಳವನು ಹಾಗೂ ಶ್ರೀಕೃಷ್ಣನ ವಿಶೇಷ ಸನ್ನಿಧಾನಯುಕ್ತನೂ ಆಗಿದ್ದನು. ಪಾಂಡವರು ಈ ಎಲ್ಲ ಮಕ್ಕಳಿಂದ ಅವರಲ್ಲಿಯೂ ವಿಶೇಷವಾಗಿ ಅಭಿಮನ್ಯುವಿನಿಂದ ಸಂತೋಷಪಡುತ್ತಿದ್ದರು.

ತತಃ ಕದಾಚಿತ್ಪಾಂಡವಂ ಕೃಷ್ಣಪಾರ್ಥೌ ಚಿಕ್ರೀಡಿಷೂ ಸತ್ಯಭಾಮಾಸುಭದ್ರೇ ।
ಆದಾಯ ಯಾತೌ ಪರಿಚಾರಕೈಶ್ಚ ರಥೇನ ಗಂಧರ್ವವರಾನುಗೀತೌ ॥೨೧೫॥

ತತಃ – ಅನಂತರ, ಕದಾಚಿತ್—ಒಮ್ಮೆ, ಚಿಕ್ರೀಡಿಷೂ ಕೃಷ್ಣಪಾರ್ಥೌ—ಕ್ರೀಡಿಸಲು ಇಚ್ಛೆಯುಳ್ಳ, ಶ್ರೀಕೃಷ್ಣಾರ್ಜುನರು, ಸತ್ಯಭಾಮಾ ಸುಭದ್ರೇ – ಸತ್ಯಭಾಮಾ ಸುಭದ್ರೆಯರನ್ನು, ಆದಾಯ:— ಕರೆದುಕೊಂಡ್ಯ

ಪರಿಚಾರಕೈಃ ಚ ಸಹ – ಸೇವಕರಿಂದಲೂ ಸಹಿತವಾಗಿ, ಗಂಧರ್ವವರಾನುಗೀತೌ ಸತೌ –ಗಂಧರ್ವರಿಂದ ಸ್ತುತಿಸಲ್ಪಟ್ಟವರಾಗಿ, ರಥೇನಃ–ರಥದಿಂದ, ಖಾಂಡವಂ ಯಾತೌ –ಖಾಂಡವ ವನಕ್ಕೆ ಹೋದರು. ॥೨೧೫॥

ಸ್ವೈರಂ ತಯೋಸ್ತತ್ರ ವಿಕ್ರೀಡತೋಶ್ಚ ಸ್ತ್ರೀರತ್ನಾಭ್ಯಾಂ ಮುಂದವಾತಾನುಜುಷ್ಟೇ ।
ವನೇ ಪ್ರಸೂನಸ್ತಬಕೋರುರಾಜಿತೇ ಜಲೇ ಚ ತಿಗ್ಮದ್ಯುತಿಕನ್ಯಕಾಯಾಃ ॥೨೧೬॥

ಭೂತ್ವಾ ವಿಪ್ರಸ್ತೌ ಯಯಾಚೇಽನ್ನಮೇತ್ಯ ಕೃಶಾನುರೂಚೇಽನುಮತೇ ರಮೇಶಿತುಃ ।
ಪಾರ್ಥಃ ಕೀದೃಕ್ತೇಽನ್ನಮಿಷ್ಟಂ ವದೇತಿ ಸ ಚಾವಾದೀದ್ವಹ್ನಿರಹಂ ವನಾರ್ಥೀ ೨೧೭॥

ತಯೋಃ – ಆ ಕೃಷ್ಣಾರ್ಜುನರು, ಸ್ತ್ರೀರತ್ನಾಭ್ಯಾಂ – ಮಹಿಳಾರತ್ನರಾದ ಆ ಸತ್ಯಭಾಮಾ ಸುಭದ್ರೆಯರಿಂದ ಕೂಡಿ, ಮುಂದವಾತಾನುಜುಷ್ಟೇ—ವಂದಗಾಳಿಯಿಂದ ಕೂಡಿದ, ಪ್ರಸೂನಸ್ತಬಕೋರುರಾಜಿತೇ—ಪುಷ್ಪಸಮೂಹಗಳಿಂದ ಕೂಡಿಶೋಭಿಸುವ, ತತ್ರವನೇ – ಆ ಖಾಂಡವ ವನದಲ್ಲಿ, ಚ – ಮತ್ತು, ತಿಗ್ಮದ್ಯುತಿಕನ್ಯಕಾಯಾಃ – ಸೂರ್ಯಪುತ್ರಿಯಾದ ಯಮುನೆಯ, ಜಲೇ—ನೀರಿನಲ್ಲಿ, ವಿಕ್ರೀಡತೋಃ ಸತೋಃ–ಕ್ರೀಡಿಸುತ್ತಿರಲು, ಕೃಶಾನುಃ – ಅಗ್ನಿಯು, ವಿಪ್ರಃಭೂತ್ವಾ – ಬ್ರಾಹ್ಮಣನಾಗಿ (ಬ್ರಾಹ್ಮಣ ವೇಷಹೊಂದಿ), ತೌ—ಆ ಶ್ರೀಕೃಷ್ಣಾರ್ಜುನರನ್ನು, ಏತ್ಯ—ಹೊಂದಿ, ಅನ್ನಂ—ಅನ್ನವನ್ನು ಯಯಾಚೇ – ಪ್ರಾರ್ಥಿಸಿದನು. ಪಾರ್ಥಃ–ಅರ್ಜುನನು, ರಮೇಶಿತುಃ ಅನುಮತೇ – ಶ್ರೀಕೃಷ್ಣನ ಅನುಮತಿಯ ಪ್ರಕಾರ, ಕೀದೃಕ್ ಅನ್ನಂ—ಯಾವ ತರಹದ ಅನ್ನವು, ತೇ – ನಿನ್ನಿಂದ, ಇಷ್ಟಂ – ಅಪೇಕ್ಷಿತವಾದದ್ದು? ವದ – ಹೇಳು, ಇತಿ—ಎಂದು, ಊಚೇ – ಹೇಳಿದನು, ಸ ಚ—ಆ ಬ್ರಾಹ್ಮಣನಾದರೂ, ಅಹಂ—ನಾನು, ವಹ್ನಿಃ—ಅಗ್ನಿಯು, ವನಾರ್ಥೀ - ಈ ವನವೆಂಬ ಆಹಾರದ ಅಪೇಕ್ಷೆಯುಳ್ಳವನು. ಇತಿ—ಎಂದು, ಅವಾದೀತ್—ಹೇಳಿದನು, ॥೨೧೬ – ೨೧೭॥

ಅವತಾರಿಕೆ :–– ತಾನು ಈ ವನವನ್ನು ಭಕ್ಷಿಸಲ್ಬಿಟ್ಟಿರುವ ಕಾರಣವನ್ನು ಹೇಳುತ್ತಾನೆ—

ಪ್ರಯಾಜಾನ್ದೇವಾನನುಯಾಜಾಂಶ್ಚ ಶುಲ್ಕಂ ಹವಿರ್ದಾನೇ ದೈವತಾನಾಮಯಾಚಿಷಮ್ ।
ಬಲಹ್ರಾಸಸ್ತವ ಭೂಯಾದಿತಿ ಸ್ಮ ಶಪ್ತ್ವೈವ ತೇ ತಾಂಶ್ಚ ದದುಃ ಪುರಾ ಮಮ ॥೨೧೮॥

ಪುರಾ—ಹಿಂದೆ, ಅಹಂ—ನಾನು, ದೈವತಾನಾಂ – ದೇವತೆಗಳಿಗೆ ಹವಿರ್ದಾನೇ—ನನ್ನಲ್ಲಿ ಹೋಮಂ ಮಾಡುವವರು ದೇವತೆಗಳ ಹೆಸರಿನಿಂದ ಹಾಕಿದ ಆಹುತಿಗಳನ್ನು ಅವರಿಗೆ ಮುಟ್ಟಿಸುವ ಕಾರ್ಯದ ಬಗ್ಗೆ ದೇವಾನ್ – ದೇವತೆಗಳನ್ನು, ಪ್ರಯಾಜಾನ್ ಅನುಯಾಜಾನ್ ಚ—ಪ್ರಯಾಜ ಅನುಯಾಜ ಆಹುತಿಗಳನ್ನು, ಶುಲ್ಕಂ— ನನ್ನ ಕಾರ್ಯಕ್ಕೆ ಸಂಬಳ ರೂಪವಾಗಿ, ಅಯಾಚಿಷಂ – ಕೇಳಿದೆನು, ತೇ–ಆ ದೇವತೆಗಳು, ತವ—ನಿನಗೆ, ಬಲಹ್ರಾಸಃ—ಶಕ್ತಿಹ್ರಾಸ(ಕ್ಷಯ)ವು, ಭೂಯಾತ್—ಆಗಲಿ, ಇತಿ - ಎಂದು, ಶಪ್ತ್ವಾ ಏವ – ಶಾಪಪ್ರದಾನವಾಡಿಯೇ, ತಾನ್ – ಆ ಆಹುತಿಗಳನ್ನು, ಮಮ—ನನಗೆ, ದದುಃ ಸ್ಮ—ಕೊಟ್ಟರು. ॥೨೧೮॥

ಪುನಃ ಪೂರ್ತಿಃ ಕೇನ ಮೇ ಸ್ಯಾದ್ಬಲಸ್ಯೇತ್ಯಬ್ರೂದ್ಭವಂ ಪೃಷ್ಟವಾನಸ್ಮಿ ನತ್ವಾ।
ಯದಾ ವನಂ ಖಾಂಡವಂ ಹಿ ತ್ವಮತ್ಸಿ ತದಾ ಬಲಂ ತೇ ಭವತೀತಿ ಸೋಽಬ್ರವೀತ್ ॥೨೧೯॥

(ಅಹಂ—ನಾನು,) ಅಬ್ಜೋದ್ಭವಂ—ಕಮಲದಲ್ಲಿ ಉತ್ಪನ್ನನಾದ ಚತುರ್ಮುಖ ಬ್ರಹ್ಮದೇವರನ್ನು: ನತ್ವಾ—ನಮಸ್ಕರಿಸಿ, ಮೇ-ನನ್ನ, ಬಲಸ್ಯ-ಶಕ್ತಿಯ, ಪೂರ್ತಿಃ-ಪೂರ್ಣತೆಯನ್ನು, ಕೇನ ಸ್ಯಾತ್-ಯಾವದರಿಂದ ಆದೀತು, ಇತಿ-ಎಂದು, ಪೃಷ್ಟವಾನಸ್ಮಿ—ಕೇಳಿದೆನು, ತದಾ—ಆಗ ಸಃ—ಆ ಬ್ರಹ್ಮದೇವರು, ತ್ವಂ—ನೀನು, ಯದಾ—ಯಾವಾಗ, ಖಾಂಡವಂವನಂ—ಖಾಂಡವ ವನವನ್ನು, ಅತ್ಸಿ—ತಿನ್ನುತ್ತಿಯೋ, ತದಾ—ಆಗ, ತೇ ಬಲಂ—ನಿನ್ನ ಶಕ್ತಿಯು, (ಪೂರ್ಣಂ) ಭವತಿ—ಪೂರ್ಣವಾಗುವದು, ಇತಿ—ಎಂದು, ಅಬ್ರವೀತ್ - ಹೇಳಿದರು. ॥೨೧೯॥

ಶಕ್ರಸ್ಯೇದಂ ಖಾಂಡವಂ ತೇನ ವಿಘ್ನಂ ಕರೋತ್ಯಸೌ ತೇನ ವಾಂ ಪ್ರಾರ್ಥಯಾಮಿ ।
ಇತ್ಯುಕ್ತೇ ತಂ ಪಾರ್ಥ ಊಚೇ ಯದಿ ಸ್ಯಾದ್ರಥೋ ಧನುಶ್ಚಾಥ ಶಕ್ರಂ ನಿರೋತ್ಸ್ಯೇ ॥೨೨೦॥

ಇದಂ ಖಾಂಡವಂ—ಈ ಖಾಂಡವವನವು, ಶಕ್ರಸ್ಯ—ದೇವೇಂದ್ರನದು, ತೇನ—ಆ ಕಾರಣದಿಂದ, ಅಸೌ—ಅವನು, ವಿಘ್ನಂ ಕರೋತಿ-ವಿಘ್ನವನ್ನು ಮಾಡುತ್ತಾನೆ, ತೇನ-ಆ ಕಾರಣದಿಂದ, ವಾಂ-ನಿಮ್ಮಿಬ್ಬರನ್ನು, ಪ್ರಾರ್ಥಯಾಮಿ-ಪ್ರಾರ್ಥಿಸುತ್ತಿದ್ದೇನೆ. ಇತಿ-ಎಂದು, (ಅವಾದೀತ್-ಹೇಳಿದನು ಎಂದು ೨೧೭ ನೇಯ ಶ್ಲೋಕಕ್ಕೆ ಅನ್ವಯ), ಇತಿ ಉಕ್ತೇ ಸತಿ-ಈ ರೀತಿ ಅಗ್ನಿಯಿಂದ ಹೇಳಲ್ಪಡುತ್ತಿರಲು, ತಂ-ಅವನಿಗೆ, ಪಾರ್ಥಃ-ಅರ್ಜುನನು, ಯದಿ—ಒಂದು ವೇಳೆ, ರಥಃಸ್ಯಾತ್-ರಥವಿದ್ದರೆ, ಅಥ—ಹಾಗೂ, ಧನುಃಸ್ಯಾತ್—ಬಿಲ್ಲು (ಬಾಣ) ಇದ್ದರೆ, ಶಕ್ರಂ ನಿರೋತ್ಸ್ಯೇ—ಇಂದ್ರನನ್ನು ನಿರೋಧಿಸುತ್ತೇನೆ, ಇತಿ-ಎಂದು, ಊಚೇ—ಹೇಳಿದನು. ॥೨೨೦॥

ಅವತಾರಿಕೆ :— 1) ಅರ್ಜುನನು ತನ್ನ ಮೂಲರೂಪದ ವಿರೋಧವನ್ನು ಮಾಡಲು ಹೇಗೆ ಇಚ್ಛಿಸಿದನು.?

2) ಅಗ್ನಿಯು ಅರ್ಜುನನನ್ನು ಕೇಳಿದ್ದು ಏಕೆ? ಎಂಬ ಶಂಕೆಗೆ ಉತ್ತರವನ್ನು ಹೇಳುತ್ತಾರೆ—

ನರಾವೇಶಾದನ್ನದಾನಪ್ರತಿಶ್ರವಾತ್ಸ್ವಸ್ಯಾಪಿ ಶಕ್ರಸ್ಯ ವಿರೋಧಮೈಚ್ಛತ್ ।
ಪಾರ್ಥಃ ಕೃಷ್ಣಪ್ರೇರಣಾಚ್ಚೈವ ವಹ್ನಿಃ ಪಾರ್ಥಂ ಯಯಾಚೇ ಶಕ್ರವಿರೋಧಶಾಂತ್ಯೈ ॥೨೨೧॥

ನರಾವೇಶಾತ್ – ಅರ್ಜುನನಲ್ಲಿ ನರನಾಮಕ ಶೇಷನ ಆವೇಶವಿದ್ದದ್ದರಿಂದ, (ಅರ್ಜುನನು ಕೇವಲ ಇಂದ್ರನಲ್ಲದ್ದರಿಂದ), ಅನ್ನದಾನಪ್ರತಿಶ್ರವಾತ್ – ಬ್ರಾಹ್ಮಣನಾಗಿ ಬಂದ ಅಗ್ನಿಗೆ ಅನ್ನವನ್ನು ಕೊಡುವೆ ಎಂದು ಪ್ರತಿಜ್ಞೆ-ಮಾಡಿದ್ದರಿಂದ, ಚ—ಮತ್ತು, ಕೃಷ್ಣ ಪ್ರೇರಣಾತ್ – ಕೃಷ್ಣಪ್ರೇರಣೆಯಿಂದ, ಪಾರ್ಥಃ—ಅರ್ಜುನನು, ಸ್ವಸ್ಯ ಶಕ್ರಸ್ಯ—ತನ್ನ ಮೂಲರೂಪವೇ ಆದ ಇಂದ್ರನ, ವಿರೋಧಂ ಅಪಿ—ವಿರೋಧವನ್ನೂ ಕೂಡ, ಐಚ್ಛತ್ – ಇಚ್ಛಿಸಿದನು, (ಒಪ್ಪಿದನು). ವಹ್ನಿಃ—ಅಗ್ನಿಯು, ಶಕ್ರವಿರೋಧಶಾಂತ್ಯೈ—ಇಂದ್ರನ ವಿರೋಧ ಪರಿಹಾರವಾಗುವದಕ್ಕಾಗಿ, ಪಾರ್ಥಂ-ಅರ್ಜುನನನ್ನು, ಯಯಾಚೇ-ಪ್ರಾರ್ಥಿಸಿದನು. ॥೨೨೧॥

ನ ಹಿ ಸ್ವದತ್ತಸ್ಯ ಪುನಸ್ಸ್ವವೈರಂ ಶಕ್ರಃ ಕುರ್ಯಾತ್ಸ್ವಯಮಿಂದ್ರೋ ಹಿ ಪಾರ್ಥಃ ।
ನಾಪ್ರೀತೋ ವಿಷ್ಣುನಾ ತಸ್ಯ ರೋಧೇ ಪಾರ್ಥಃ ಕುರ್ಯಾದಿತಿ ಕೃಷ್ಣಂ ಯಯಾಚೇ ॥೨೨೨॥

ಸ್ವದತ್ತಸ್ಯ— ತನ್ನಿಂದಲೇ ಕೊಡಲ್ಪಟ್ಟದ್ದಕ್ಕೆ, ವೈರಂ – ವಿರೋಧವನ್ನು, ಸಃ ಶಕ್ರಃ – ಆ ದೇವೇಂದ್ರನು, ಪುನಃ – ಮತ್ತೆ, ನಹಿ ಕುರ್ಯಾತ್ - ಮಾಡಲಾರನು, ಪಾರ್ಥಃ – ಅರ್ಜುನನು, ಇಂದ್ರಃ ಹಿ – ಇಂದ್ರನ ಅವತಾರನೇ ಆಗಿರುವನು. (ಈ ವಿಚಾರದಿಂದ ಅರ್ಜುನನನ್ನು ಪ್ರಾರ್ಥಿಸಿದನು ಎಂದು ಸಂಬಂಧ)

ಅವತಾರಿಕೆ :— ಕೇವಲ ಅರ್ಜುನನನ್ನು ಪ್ರಾರ್ಥಿಸಬಹುದಿತ್ತು. ಶ್ರೀಕೃಷ್ಣನಿರುವಾಗ ಇಬ್ಬರನ್ನು ಪ್ರಾರ್ಥಿಸಲು ಕಾರಣವೇನು? ಎಂಬ ಶಂಕೆಗೆ ನಿರ್ಣಯವನ್ನು ಮುಂದಿನ ಭಾಗದಿಂದ ಹೇಳುತ್ತಿದ್ದಾರೆ—

ವಿಷ್ಣುನಾ - ಶ್ರೀಕೃಷ್ಣನಿಂದ, ತಸ್ಯ ರೋಧೇ - ಆ ಇಂದ್ರನ ವಿರೋಧ ಕಾರ್ಯದಲ್ಲಿ. ಅಪ್ರೇರಿತ:—ಆಜ್ಞಾಪ್ತನಾಗದೇ, ಪಾರ್ಥಃ ನಕುರ್ಯಾತ್ - ಅರ್ಜುನನು ಆ ಕಾರ್ಯವನ್ನು ಮಾಡಲಾರನು, ಇತಿ— ಎಂಬ ಕಾರಣದಿಂದ, ಕೃಷ್ಣಂ— ಶ್ರೀಕೃಷ್ಣನನ್ನು, ಯಯಾಚೇ - ಪ್ರಾರ್ಥಿಸಿದನು. ॥೨೨೨॥

ನ ಚಾಯುಕ್ತಃ ಕೇಶವೇನೈಷ ಶಕ್ತ ಇತಿ ಸ್ಮ ಕೃಷ್ಣಾದಾಪ ಭೂಯೋಽಪ್ಯನುಜ್ಞಾಮ್ ।
ಯಯೌ ಸಮೀಪಂ ಚ ಹರೇರ್ಬದಾರ್ಯಾಮಾದಾಯ ಚಕ್ರಂ ಚಾಮುತಃ ಕೇಶವೇಽದಾತ್ ॥೨೨೩॥

ಚ - ಮತ್ತು, ಕೇಶವೇನ ಅಯುಂಕ್ತಃ - ಶ್ರೀಕೃಷ್ಣನಿಂದ ಸಹಿತನಾಗದ, ಏಷ: — ಈ ಅರ್ಜುನನು, ನ ಶಕ್ತಃ — ಇಂದ್ರವಿರೋಧ ಕಾರ್ಯವನ್ನು ಮಾಡಲು ಸಮರ್ಥನಲ್ಲ. ಇತಿ ಚ — ಈ ಕಾರಣದಿಂದಲೂ ಕೃಷ್ಣಾತ್ ಅಪಿ—ಶ್ರೀಕೃಷ್ಣನಿಂದಲೂ, ಅನುಜ್ಞಾಂ—ಅಪ್ಪಣೆಯನ್ನು, ಭೂಯಃ — ಪುನಃ ಪುನಃ, ಆಪ – ಪಡೆದನು. ಚ - ಹಾಗೂ, (ಅಗ್ನಿಯು) ಬದರ್ಯಾಂ – ಬದರಿಯಲ್ಲಿ, ಹರೇ: ಸಮೀಪಂ – ಶ್ರೀಸತ್ಯನಾರಾಯಣದೇವರ ಸಮೀಪಕ್ಕೆ, ಯಯೌ — ಹೋದನು, ಅಮುತ:—ಅವರಿಂದ, ಚಕ್ರಂ—ಚಕ್ರಾಯುಧವನ್ನು, ಆದಾಯ – ತೆಗೆದುಕೊಂಡು, ಕೇಶವೇ— ಶ್ರೀಕೃಷ್ಣನಿಗೆ, ಅದಾತ್—ಕೊಟ್ಟನು. ॥೨೨೩॥

ಅವತಾರಿಕೆ :— ಈ ಮೊದಲು ಜರಾಸಂಧನ ಜೊತೆಗೆ ಯುದ್ಧ ಪ್ರಸಂಗದಲ್ಲಿ ಶ್ರೀಕೃಷ್ಣನು ಗೋಮಂತ ಪರ್ವತಕ್ಕೆ ಹೋಗಿರುವಾಗ ಚಕ್ರಾಯುಧವು ಬಂದಿತ್ತು. ಪುನ: ಅಗ್ನಿಯು ಏಕೆ ತಂದನು? ತರಲು ಶಕ್ಯ ಹೇಗೆ ಎಂಬ ಸಂಶಯಕ್ಕೆ ನಿರ್ಣಯ ಹೇಳುತ್ತಾರೆ—

ಚಕ್ರಂ ಗೋಮಂತೇ ಕೃಷ್ಣಮಾಪಾಪಿ ಪೂರ್ವಂ ಭಕ್ತ್ಯಾ ವಹ್ನಿ: ಕೇಶವೇದಾತ್ಪುನಸ್ತತ್ ।
ಚಕ್ರಂ ಚ ವಿಷ್ಣೋರ್ಬಹುಧಾ ವ್ಯವಸ್ಥಿತಂ ತದಗ್ನಿದತ್ತಂ ಪ್ರಾಕ್ತನಂ ಚೈಕಧಾಽಸೀತ್ ॥೨೨೪॥

ಪೂರ್ವಂ — ಈ ಹಿಂದೆ. ಚಕ್ರಂ—ಸುದರ್ಶನ ಚಕ್ರವು, ಗೋಮಂತೇ – ಗೋಮಂತ ಪರ್ವತದಲ್ಲಿ, ಕೃಷ್ಣಂ — ಶ್ರೀಕೃಷ್ಣನನ್ನು, ಆಪ – ಹೊಂದಿತ್ತು, ಅಪಿ—ಆದರೂ, ವಹ್ನಿ:—ಅಗ್ನಿಯು, ಭಕ್ತ್ಯಾ—ಶ್ರೀಕೃಷ್ಣನಲ್ಲಿ ಭಕ್ತಿಯಿಂದ, ತತ್—ಆ ಚಕ್ರವನ್ನೇ, ಪುನಃ—ಮತ್ತೆ, ಕೇಶವೇ – ಶ್ರೀಕೃಷ್ಣನಿಗೆ, ಆದಾತ್ - ಕೊಟ್ಟನು, ವಿಷ್ಣೋ:ಚಕ್ರಂ ಚ — ವಿಷ್ಣುವಿನ ಚಕ್ರವೂ ಕೂಡ, ಬಹುಧಾ ವ್ಯವಸ್ಥಿತಂ – ಬಹುರೂಪದಲ್ಲಿ ಇರುತ್ತದೆ. ಅಗ್ನಿದತ್ತಂ ತತ್—ಅಗ್ನಿಯಿಂದ ಕೊಡಲ್ಪಟ್ಟ ಚಕ್ರವು, ಪ್ರಾಕ್ತನಂ ಚ — ಮೊದಲು ಬಂದ ಚಕ್ರವೂ ಕೂಡ, ಏಕಧಾ ಆಸೀತ್—ಒಂದು ಆಯಿತು. ॥೨೨೪॥

ಧನುಶ್ಚ ಗಾಂಡೀವಮುಥಾಬ್ಜಜಸ್ಯ ಕರೋತಿ ಯೇನಾಖಿಲಸಂಹೃತಿಂ ಸಃ ।
ಅಂಶೇನ ದತ್ತಂ ತದುಮಾಪತೇಶ್ಚ ಶಕ್ರಸ್ಯ ಸೋಮಸ್ಯ ಜಲೇಶಿತುಶ್ಚ ॥೨೨೫॥

ಅಬ್ಜಜಸ್ಯ—ಚತುರ್ಮುಖಿ ಬ್ರಹ್ಮದೇವರ, ಸಃ – ಬ್ರಹ್ಮದೇವರು, ಯೇನ – ಯಾವದರಿಂದ ಅಖಿಲ–ಸಂಹೃತಿಂ—ಎಲ್ಲ ಜಗತ್ತಿನ ಸಂಹಾರವನ್ನು, ಕರೋತಿ—ಮಾಡುತ್ತಾರೋ, ತತ್ ಗಾಂಡೀವ ಧನುಃ – ಆ ಗಾಂಡೀವ ಧನುಸ್ಸನ್ನು,

[redacted]

ಅಂಶೇನ—ಒಂದೊಂದು ರೂಪದಿಂದ, ಉಮಾಪತೇಃ – ರುದ್ರದೇವರಿಗೆ, ಶಕ್ರಸ್ಯ – ಇಂದ್ರನಿಗೆ, ಸೋಮಸ್ಯ–ಚಂದ್ರನಿಗೆ ಚ—ಮತ್ತು, ಜಲೇಶಿತುಃ ಚ—ವರುಣದೇವರಿಗೂ ಕೂಡ, ದತ್ತಂ – (ಬ್ರಹ್ಮದೇವರಿಂದ)ಕೊಡಲ್ಪಟ್ಟಿತ್ತು. ॥೨೨೫॥

ತೇನೈವ ತೇ ಜಿಗ್ಯುರಥೋ ಜಗತ್ತ್ರಯಂ ಪ್ರಸಾದತಸ್ತೇ ಕ್ರಮುಶೋಽಬ್ಜಯೋನೇಃ ।
ಅನನ್ಯಧಾರ್ಯಂ ವಿಜಯಾವಹಂ ಚ ಭಾರೇಣ ಲಕ್ಷಸ್ಯ ಸಮಂ ಶುಭಾವಹಂ ॥೨೨೬॥

ತೇ—ಆವರೆಲ್ಲರೂ. ಅಥೋ—ಗಾಂಡೀವಧನುಃ ಪ್ರಾಪ್ತಿಯಾನಂತರ, ಅಬ್ಜಯೋನೇಃ - ಚತುರ್ಮುಖಿ ಬ್ರಹ್ಮದೇವರ, ಕ್ರಮಶಃ ಪ್ರಸಾದತಃ – ಕ್ರಮವಾಗಿ ಅನುಗ್ರಹದಿಂದ, ಜಗತ್ತ್ರಯಂ—ಮೂರು ಲೋಕಗಳನ್ನು, ಜಿಗ್ಯುಃ—ಗೆದ್ದರು. ಅನನ್ಯಧಾರ್ಯಂ—ಬೇರೆಯವರಿಂದ ಧರಿಸಲು ಶಕ್ಯವಲ್ಲದ, ವಿಜಯಾವಹಂ – ವಿಜಯಪ್ರದವಾದ, ಲಕ್ಷಸ್ಯ–ಭಾರೇಣ – ಒಂದು ಲಕ್ಷ ಸಂಖ್ಯಾಕ ಭಾರದಿಂದ, ಸಮಂ – ಸಮವಾದ. (ಒಂದು ಭಾರ ಎಂದರೆ ಇಪ್ಪತ್ತು ತೊಲಗಳು), ಶುಭಾವಹಂ – ಕಲ್ಯಾಣಕರವಾದ ಆ ಧನುಸ್ಸನ್ನು ॥೨೨೬॥

ರಥಂ ಚ ಶುಭ್ರಾಶ್ವಯುತಂ ಜಯಾವಹಂ ತೂಣೌ ತಥಾ ಚಾಕ್ಷಯಸಾಯಕೌ ಶುಭೌ ।
ಧ್ವಜಂ ಚ ರಾಮಸ್ಯ ಹನೂಮದಂಕಮಾದಾಯ ಸರ್ವಂ ವರುಣಾದರ್ಜುನೋಽದಾತ್ ॥೨೨೭॥

ಶುಭ್ರಾಶ್ವಯುತಂ—ಬಿಳಿಕುದುರೆಗಳಿಂದ ಕೂಡಿದ, ಜಯಾವಹಂ–ಜಯಪ್ರದವಾದ, ರಾಮಸ್ಯ–ಶ್ರೀರಾಮದೇವರ, ರಥಂ ಚ – ರಥವನ್ನೂ, ತಥಾ – ಹಾಗು, ಅಕ್ಷಯಸಾಯಕೌ—ತೀರಲಾರದ ಬಾಣಗಳುಳ್ಳ, ಶುಭೌ – ಶ್ರೇಷ್ಠವಾದ, ತೂಣೌ – ಬತ್ತಳಿಕೆಗಳನ್ನು, ಹನೂಮದಂಕಂ—ಹನುಮಂತದೇವರ ಚಿಹ್ನವುಳ್ಳ, ಧ್ವಜಂ ಚ – ಧ್ವಜವನ್ನೂ ~~ಕೂಡ, ವರುಣಾತ್—ವರುಣದೇವನಿಂದ, ಆದಾಯ—ತಂದು, ಸರ್ವಂ—ಆದೆಲ್ಲವನ್ನು ಅರ್ಜುನೇ—ಅರ್ಜುನನ~~ ವಶಕ್ಕೆ, ಅದಾತ್ – ಕೊಟ್ಟನು. ॥೨೨೭॥

ವಿಶೇಷತೋ ಧ್ವಜಸಂಸ್ಥೇ ಹನೂಮತ್ಯಜೇಯತಾ ಸ್ಯಾಜ್ಜಯರೂಪೋ ಯತೋಽಸೌ ।
ಸರ್ವಂ ಚ ತದ್ದಿವ್ಯಮಭೇದ್ಯಮೇವ ವಿದ್ಯುತ್ಪ್ರಭಾ ಜ್ಯಾ ಚ ಗಾಂಡೀವಸಂಸ್ಥಾ ॥೨೨೮॥

ಯತಃ - ಯಾವ ಕಾರಣದಿಂದ, ಅಸೌ—ಆ ಹನುಮಂತದೇವರು, ಜಯರೂಪಃ – ವಿಜಯಗುಣದ ಪ್ರತೀಕರಾಗಿದ್ದಾರೋ ಆದ್ದರಿಂದ, ಹನೂಮತಿ ಧ್ವಜಸಂಸ್ಥೇಸತಿ—ಹನುಮಂತದೇವರು ಧ್ವಜದಲ್ಲಿರುತ್ತಿರಲು, ವಿಶೇಷತಃ — ವಿಶೇಷವಾಗಿ ಅಜೇಯತಾ ಸ್ಯಾತ್ (ಆ ರಥದಲ್ಲಿರುವವನಿಗೆ) ಸೋಲದಿರುವಿಕೆಯು (ಪರಾಜಯದ ಅಭಾವವು), ಸ್ಯಾತ್—ಉಂಟಾಗುತ್ತದೆ, ಚ – ಮತ್ತು ತತ್ ಸರ್ವಂ–ವರುಣದೇವರಿಂದ ತಂದುಕೊಟ್ಟ ಆದೆಲ್ಲವೂ, ದಿವ್ಯಂ– ಲೋಕವಿಲಕ್ಷಣವಾದದ್ದು, ಅಭೇದ್ಯಂ ಏವ – ನಾಶಮಾಡಲು ಅಶಕ್ಯವಾದದ್ದೇ ಆಗಿತ್ತು. ಗಾಂಡೀವಸಂಸ್ಥಾ—ಗಾಂಡೀವ ಧನುಸ್ಸಿನಲ್ಲಿರುವ. ಜ್ಯಾ ಚ-ಜ್ಯಾವೂಕೂಡ, ವಿದ್ಯುತ್ಪ್ರಭಾ – ಮಿಂಚಿನಂತೆ ಕಾಂತಿಯುಳ್ಳದ್ದು ಆಗಿತ್ತು. ॥೨೨೮॥

ಗಾಂಡೀವಮುಪ್ಯಾಸ ಕೃಷ್ಣಪ್ರಸಾದಾಚ್ಚಕ್ಯಂ ಧರ್ತುಂ ಪಾಂಡವಸ್ಯಾಪ್ಯಧಾರ್ಯಮ್ ।
ದೇವೈಶ್ಚ ತೈರ್ಬ್ರಹ್ಮವರಾದ್ಧೃತಂ ತದ್ಬ್ರಹ್ಮೈವ ಸಾಕ್ಷಾತ್ಪ್ರಭುರಸ್ಯ ಧಾರಣೇ ॥೨೨೯॥

ಗಿಡ್ರಿಂಟ- ಗಾಂಡೀವಮಪಿ—ಆ ಗಾಂಡೀವ ಧನುಸ್ಸೂ ಕೂಡ, ಕೃಷ್ಣಪ್ರಸಾದಾತ್—ಕೃಷ್ಣಪ್ರಸಾದದಿಂದ, ಖಾಂಡವಸ್ಯಾಪಿ—ಅರ್ಜುನನಿಗೂ ಕೂಡ, ಧರ್ತುಂ ಶಕ್ಯಂ ಆಸ—ಧರಿಸಲ್ಪಟ್ಟಿತು ಶಕ್ಯವಾಯಿತು. ತೈ:ದೇವೈ: ಚ—ಆರುದ್ರ, ಇಂದ್ರ, ವರುಣದೇವತೆಗಳಿಂದಲೂ ಕೂಡ, ಅಧಾರ್ಯಂ—ಸ್ವತಃ ಧರಿಸಲು ಅಶಕ್ಯವಾದ ಆ ಧನುಸ್ಸು, ಬ್ರಹ್ಮವರಾತ್—ಬ್ರಹ್ಮದೇವರ ವರದಿಂದ, ತತ್ ಧೃತಂ—ಅದು ಧರಿಸಲ್ಪಟ್ಟಿತು. ಅಸ್ಯ ಧಾರಣೇ—ಅದರ ಧಾರಣೆ ಕಾರ್ಯದಲ್ಲಿ, ಸಾಕ್ಷಾತ್ ಬ್ರಹ್ಮಾಏವ-ಮುಖ್ಯವಾಗಿ ಬ್ರಹ್ಮದೇವರೇ, ಪ್ರಭು:—ಸಮರ್ಥರು. ॥೨೨೯॥

ಅವತಾರಿಕೆ :— ಅರ್ಜುನನಿಗೆ ಶಕ್ಯವಾಗಲು ಇನ್ನೊಂದು ಕಾರಣವನ್ನು ಹೇಳುತ್ತಾರೆ.—

ಇಂದ್ರಸ್ಯ ದತ್ತಶ್ಚ ವರಃ ಸ್ವಯಂಭುವಾ ತೇನಾಪಿ ಪಾರ್ಥಸ್ಯ ಬಭೂವ ಧಾರ್ಯಮ್ ।
ಇಂದ್ರೋಹ್ಯಸೌ ಫಲ್ಗುನತ್ವೇನ ಜಾತಸ್ತತಸ್ಸೋಽಸ್ತ್ರೈಶ್ಶರಶಾಲಾಂ ಚಕಾರ ॥೨೩೦॥

ಸ್ವಯಂಭುವಾ—ಬ್ರಹ್ಮದೇವರಿಂದ; ಇಂದ್ರಸ್ಯ-ಇಂದ್ರದೇವರಿಗೆ, ವರಃ ದತ್ತಶ್ಚ-ಧನುಸ್ಸನ್ನು ಎತ್ತಲು ಶಕ್ಯವಾಗುವಂತೆ ವರವು ಕೊಡಲ್ಪಟ್ಟಿದೆಯಷ್ಟೇ, ತೇನಾಪಿ—ಆ ಕಾರಣದಿಂದಲೂ ಕೂಡ, ಪಾರ್ಥಸ್ಯ-ಅರ್ಜುನನಿಗೆ; ಧಾರ್ಯಮ್—ಎತ್ತಲು ಶಕ್ಯವಾದದ್ದು ಬಭೂವ-ಆಯಿತು, ಹಿ-ಏಕೆಂದರೆ. ಅಸೌ ಇಂದ್ರಃ—ಆ ಇಂದ್ರನೇ ಫಲ್ಗುನತ್ವೇನ-ಅರ್ಜುನನು ರೂಪದಿಂದ, ಜಾತಃ-ಅವತರಿಸಿದವನೋ, ತತಃ—ಆ ಕಾರಣದಿಂದ(ಬ್ರಹ್ಮದೇವರ ವರವು ಇವನಿಗೂ ಅನ್ವಯಿಸುವದರಿಂದ) ಶಕ್ಯವಾಯಿತು, ಸಃ—ಆ ಅರ್ಜುನನು, ಅಸ್ತ್ರೈಃ—ಅಸ್ತ್ರಗಳಿಂದ, ಶರಶಾಲಾಂ—ಬಾಣಶಾಲಾವನ್ನೇ, ಚಕಾರ—ನಿರ್ಮಿಸಿದನು. ॥೨೩೦॥

ಸಯೋಜನದ್ವಾದಶಕಾಭಿವಿಸ್ತೃತೇ ಪುರಂ ಚಕಾರಾಶು ಪುರಂದರಾತ್ಮಜಃ ।
ಹುತಾಶನೋಽಪ್ಯಾಶು ವನಂ ಪ್ರಗೃಹ್ಯ ಪ್ರಭಕ್ಷಯಾಮಾಸ ಸಮುದ್ಧತಾರ್ಚಿಃ ॥೨೩೧॥

ಸ: ಪುರಂದರಾತ್ಮಜ:—ಆ ಅರ್ಜುನನು, ಯೋಜನದ್ವಾಶಕಾಭಿವಿಸ್ತೃತೇ—ಹನ್ನೆರಡು ಯೋಜನ ವಿಸ್ತೃತವಾದ ಪ್ರದೇಶದಲ್ಲಿ, ಪುರಂ—ಪುರವನ್ನು, ಆಶು—ಕೂಡಲೇ, ಚಕಾರ—ನಿರ್ಮಿಸಿದನು. ಹುತಾಶನ:ಅಪಿ—ಅಗ್ನಿಯೂ ಕೂಡ ಆಶು—ಕೂಡಲೇ, ಸಮುದ್ಧತಾರ್ಚಿಃ ಸನ್—ದೊಡ್ಡ ದೊಡ್ಡ ಜ್ವಾಲೆಗಳುಳ್ಳವನಾಗಿ, ವನಂ—ಖಾಂಡವ ವನವನ್ನು, ಪ್ರಭಕ್ಷಯಾಮಾಸ—ಸುಡಲಾರಂಭಿಸಿದನು. ॥೨೩೧॥

ಪ್ರಭಕ್ಷ್ಯಮಾಣಂ ನಿಜಕಕ್ಷಮೀಕ್ಷ್ಯ ಸಂಧುಕ್ಷಯಾಮಾಸ ತದಾಽಽಶುಶುಕ್ಷಣಿಮ್ ।
ಅಕ್ಷೋಪಮಾಭಿರ್ಬಹುಳೀಕ್ಷಣೋಽಂಭಸಾಂ ಧಾರಾಭಿರಾಕ್ಷುಬ್ಧಮನಾಃ ಕ್ಷಯಾಯ ॥೨೩೨॥

ತದಾ—ಆಗ, ಬಹುಳೀಕ್ಷಣ:—ಬಹು (ಸಹಸ್ರ) ಕಣ್ಣುಗಳುಳ್ಳ ಇಂದ್ರನು, ನಿಜಕಕ್ಷಂ—ತನ್ನ ವನವನ್ನು, ಪ್ರಭಕ್ಷ್ಯಮಾಣಂ—ಅಗ್ನಿಯಿಂದ ಸುಡಲ್ಪಡುವದನ್ನಾಗಿ, ಈಕ್ಷ್ಯ—ನೋಡಿ, ಆಕ್ಷುಬ್ಧಮನಾ: ಸನ್—ತಪ್ತವಾದ, ಕಾಪಿತವಾದ ಮನಸ್ಸುಳ್ಳವನಾಗಿ, ಕ್ಷಯಾಯ—ಅಗ್ನಿಯ ನಾಶಕ್ಕಾಗಿ, ಅಕ್ಷೋಪಮಾಭಿಃ—ರಥದ ಅಚ್ಚಿನ ಪ್ರಮಾಣವುಳ್ಳ ಅಂಭಸಾಂ ಧಾರಾಭಿಃ—ನೀರಿನ ಧಾರೆಗಳಿಂದ, ಸಂಧುಕ್ಷಯಾಮಾಸ—ಪೀಡಿಸಿದನು. ॥೨೩೨॥

ಅಸ್ತ್ರೈಸ್ತು ವೃಷ್ಟಿಂ ವಿನಿವಾರ್ಯ ಕೃಷ್ಣಃ ಪಾರ್ಥಶ್ಚ ಶಕ್ರಂ ಸುರಪೂಗಯುಕ್ತಮ್ ।
ಅಯುಧ್ಯತಾಂ ಸೋಽಪಿ ಪರಾಜಿತೋಽಭೂತ್ಪ್ರೀತಶ್ಚ ದೃಷ್ಟ್ವಾ ಬಲಮಾತ್ಮಜಸ್ಯ ॥೨೩೩॥

ಕೃಷ್ಣಃ- ಶ್ರೀಕೃಷ್ಣಪರಮಾತ್ಮನು, ಪಾರ್ಥಶ್ಚ - ಅರ್ಜುನನೂ ಕೂಡ, ಅಸ್ತ್ರೈಃ - ಅಸ್ತ್ರಗಳಿಂದ, ವೃಷ್ಟಿಂ- ಮಳೆಯನ್ನು, ವಿನಿವಾರ್ಯ—ತಡೆದು, ಸುರಪೂಗಯುಕ್ತಂ—ದೇವತೆಗಳ ಸಮೂಹದಿಂದ ಕೂಡಿದ, ಶಕ್ರಂ - ದೇವೇಂದ್ರನ ಜೊತೆಗೆ, ಅಯುಧ್ಯತಾಂ-ಯುದ್ಧ ಮಾಡಿದರು. ಸಃ ಅಪಿ-ಆ ಇಂದ್ರನಾದರೂ, ಪರಾಜಿತಃ ಅಭೂತ್—ಪರಾಜಿತನಾದನು. ಆತ್ಮಜಸ್ಯ - ತನ್ನ ಮಗ (ಅವತಾರ)ನಾದ ಅರ್ಜುನನ, ಬಲಂ ದೃಷ್ಟ್ವಾ-ಸಾಮರ್ಥ್ಯವನ್ನು ನೋಡಿ, ಪ್ರೀತಃ ಚ ಅಭೂತ್- ಸಂತುಷ್ಟನೂ ಆದನು, ಕ ॥೨೩೩॥

ಸ್ನೇಹಂ ಚ ಕೃಷ್ಣಸ್ಯ ತಮರ್ಜುನೇ ಧೃತಂ ವಿಲೋಕ್ಯ ಪಾರ್ಥಸ್ಯ ಬಲಂ ಚ ತಾದೃಶಮ್ ।
ನಿವರ್ತ್ಯ ಮೇಘಾನತಿತುಷ್ಟಚಿತ್ತಃ ಪ್ರಣಮ್ಯ ಕೃಷ್ಣಂ ತನಯಂ ಸಮಾಶ್ಲಿಷತ್ ॥೨೩೪॥

ಚ—ಮತ್ತು, ಅರ್ಜುನೇ—ಅರ್ಜುನನಲ್ಲಿ, ಧೃತಂ - ಮಾಡಲ್ಪಟ್ಟ, ಕೃಷ್ಣಸ್ಯ ಸ್ನೇಹಂ—ಶ್ರೀಕೃಷ್ಣನ ಪ್ರೀತಿಯನ್ನು, ಚ—ಮತ್ತು, ಪಾರ್ಥಸ್ಯ ತಾದೃಶಂ ಬಲಂ ಚಂ - ಅರ್ಜುನನ ಆ ರೀತಿಯಾದ ಸಾಮರ್ಥ್ಯವನ್ನು ಕೂಡ, ವಿಲೋಕ್ಯ - ನೋಡಿ, ಅತಿತುಷ್ಟಚಿತ್ತಃ - ಅತ್ಯಂತ ಪ್ರಸನ್ನ ಮನಸ್ಕನಾದ, (ಸಃ -) ಇಂದ್ರನು, ಮೇಘಾನ್-ಮೋಡಗಳನ್ನು, ನಿವರ್ತ್ಯ—ತಡೆದು, ಕೃಷ್ಣಂ ಪ್ರಣಮ್ಯ—ಶ್ರೀಕೃಷ್ಣನನ್ನು ನಮಸ್ಕರಿಸಿ, ತನಯಂ—ಮಗನಾದ ಅರ್ಜುನನನ್ನು, ಸಮಾಶ್ಲಿಷತ್—ಆಲಿಂಗಿಸಿದನು. ॥೨೩೪॥

ವಿಷ್ಣುಶ್ಚ ಶಕ್ರೇಣ ಸಹೈತ್ಯ ಕೇಶವಂ ಸಮಾಶ್ಲಿಷನ್ನಿರ್ವಿಶೇಷೋಽಪ್ಯನಂತಃ ।
ಸ ಕೇವಲಂ ಕ್ರೀಡಮಾನಸ್ಸಶಕ್ರಃ ಸ್ಥಿತೋ ಹಿ ಪೂರ್ವಂ ಯುಯುಧೇನ ಕಿಂಚಿತ್ ॥೨೩೫॥

ಅನಂತಃ ವಿಷ್ಣುಃ ಚ - ವಾಮನರೂಪೀ ನಾರಾಯಣನೂ ಕೂಡ, ಶಕ್ರೇಣ ಸಹ—ದೇವೇಂದ್ರನಿಂದ ಕೂಡಿ-ಕೊಂಡು, ಏತ್ಯ—ಬಂದು, ನಿರ್ವಿಶೇಷಃ ಅಪಿ - ಶ್ರೀಕೃಷ್ಣನಿಂದ ಭೇದವಿಲ್ಲದವನಾದರೂ ಕೂಡ, ಕೇಶವಂ—ಶ್ರೀಕೃಷ್ಣನನ್ನು, ಸಮಾಶ್ಲಿಷತ್—ಆಲಿಂಗಿಸಿಕೊಂಡನು. ಸಃ - ಆ ನಾರಾಯಣನು, ಪೂರ್ವಂ - ಈ ಮೊದಲು, ಕೇವಲಂ— ಕ್ರೀಡಮಾನಃ ಸನ್ - ಕೇವಲ ಕ್ರೀಡೆಮಾಡುವವನಾಗಿ. ಸಶಕ್ರಃ ಸ್ಥಿತಃ ಹಿ-ಇಂದ್ರನಿಂದ ಸಹಿತನಾಗಿ ನಿಂತಿದ್ದನು, ಕಿಂಚಿತ್- ಸ್ವಲ್ಪ ಕೂಡ, ನ ಯುಯುಧೇ—ಯುದ್ಧಮಾಡಲಿಲ್ಲ. ॥೨೩೫॥

ಬ್ರಹ್ಮಾ ಚ ಶರ್ವಶ್ಚ ಸಮೇತ್ಯ ಕೃಷ್ಣಂ ಪ್ರಣಮ್ಯ ಪಾರ್ಥಸ್ಯ ಚ ಕೃಷ್ಣನಾಮ ।
ಸಂಚಕ್ರತುಶ್ಚಾಪಿ ಶಿಕ್ಷಾಪ್ರಕರ್ಷಾಚ್ಚಕ್ರುಶ್ಚ ಸರ್ವೇ ಸ್ವಾಸ್ತ್ರದಾನೇ ಪ್ರತಿಜ್ಞಾಮ್ ॥೨೩೬॥

ಬ್ರಹ್ಮಾ—ಬ್ರಹ್ಮದೇವರು, ಚ—ಮತ್ತು, ಶರ್ವಃ ಚ—ರುದ್ರದೇವರೂ ಕೂಡ, ಸಮೇತ್ಯ - ಬಂದು, ಕೃಷ್ಣಂ- ಪ್ರಣಮ್ಯ—ಶ್ರೀಕೃಷ್ಣನನ್ನು ನಮಸ್ಕರಿಸಿ, ಶಿಕ್ಷಾಪ್ರಕರ್ಷಾತ್ - ಅಸ್ತ್ರವಿದ್ಯಾ ಪ್ರಕರ್ಷ(ನೈಪುಣ್ಯ) ವಿರುವದರಿಂದ, ಪಾರ್ಥಸ್ಯ- ಅರ್ಜುನನಿಗೆ, ಕೃಷ್ಣನಾಮ - ಕೃಷ್ಣ ಎಂಬ ನಾಮವನ್ನು, ಸಂಚಕ್ರತುಃ-ಕರೆದರು, ಸರ್ವೇ— ಬ್ರಹ್ಮಾದಿದೇವತೆಗಳೆಲ್ಲರೂ, ಸ್ವಾಸ್ತ್ರದಾನೇ—ತಮ್ಮ ತಮ್ಮ ಅಸ್ತ್ರಗಳನ್ನು ಅರ್ಜುನನಿಗೆ ಕೊಡುವದರ ಬಗ್ಗೆ, ಪ್ರತಿಜ್ಞಾಂ-ಪ್ರತಿಜ್ಞೆಯನ್ನು, ಚಕ್ರುಃ— ಮಾಡಿದರು ॥೨೩೬॥

ಭಾವಾನುವಾದ : - ೨೧೫-೨೩೬ ಒಮ್ಮೆ ಶ್ರೀಕೃಷ್ಣಾರ್ಜುನರು ವಿಹಾರೇಚ್ಛೆವುಳ್ಳವರಾಗಿ ತಮ್ಮ ತಮ್ಮ ಪತ್ನಿಯರಾದ ಸತ್ಯಭಾಮಾ ಸುಭದ್ರಾರನ್ನು ಕರೆದುಕೊಂಡು ಖಾಂಡವವನಕ್ಕೆ ಹೋದರು. ಪುಷ್ಪಗಳ ಸುಗಂಧ.

ಯುಕ್ತವಾದ, ಮಂದವಾದ ತಂಪಾದ ಗಾಳಿಯಿಂದ ಕೂಡಿದ ಆ ವನದಲ್ಲಿ ಹಾಗೂ ಯಮುನಾನದಿಯಲ್ಲಿ ವಿಹರಿಸುತ್ತಿರುವಾಗ ಅಗ್ನಿದೇವನು ಬ್ರಾಹ್ಮಣ ವೇಷವನ್ನು ಹಾಕಿಕೊಂಡು ಬಂದು ಅವರಿಬ್ಬರ ಹತ್ತಿರ ಅನ್ನ ಬೇಕು. ಅನ್ನ ಬೇಕು ಎಂದು ಕೇಳಿದನು. ಆಗ ಅರ್ಜುನನು ಶ್ರೀಕೃಷ್ಣನ ಅಪ್ಪಣೆಯ ಪ್ರಕಾರ (ಸಮ್ಮತಿಯ ಪ್ರಕಾರ) ಆಯಿತು, ಕೊಡೋಣ, ನಿನಗೆ ಯಾವತರಹದ ಅನ್ನ ಬೇಕು ಎಂದು ಕೇಳಿದನು. ಅದಕ್ಕೆ ಆ ಬ್ರಾಹ್ಮಣನು ನಾನು ಅಗ್ನಿಯು, ನನಗೆ ಈ ವನವೆಂಬ ಆಹಾರ ಬೇಕಾಗಿದೆ. ಏಕೆಂದರೆ, ಹಿಂದೆ ನಾನು ದೇವತೆಗಳ ಹತ್ತಿರ ಅವರವರ ಆಹುತಿಗಳನ್ನು ಅವರಿಗೆ ಮುಟ್ಟಿಸುವ ಕಾರ್ಯಕ್ಕಾಗಿ ಅನುಯಾಜ ಪ್ರಯಾಜ ಎಂಬ ಆಹುತಿಗಳನ್ನು ನನಗೆ ಸಂಬಳವಾಗಿ (ಶುಲ್ಕವಾಗಿ) ಕೊಡಬೇಕೆಂದು ಕೇಳಿದಾಗ ಆ ದೇವತೆಗಳು ನೀನು ಸಂಬಳ ಕೇಳಿದ್ದರಿಂದ ನಿನ್ನ ಶಕ್ತಿಹ್ರಾಸವಾಗಲಿ ಎಂದು ಶಪಿಸಿ ಆ ಸಂಬಳವನ್ನು ಕೊಟ್ಟರು. ನನ್ನ ಶಕ್ತಿ ಪೂರ್ಣವಾಗುವ ಉಪಾಯವನ್ನು ಬ್ರಹ್ಮದೇವರ ಹತ್ತಿರ ಕೇಳಿದಾಗ ಅವರು ನೀನು ಖಾಂಡವ ವನವನ್ನು ಭಕ್ಷಿಸಿದರೆ ನಿನ್ನ ಶಕ್ತಿ ಪೂರ್ಣವಾಗುವುದು ಎಂದು ಹೇಳಿದರು. ಆದರೆ ಈ ವನವು ಇಂದ್ರದೇವನದು. ನಾನು ಈ ವನವನ್ನು ಭಕ್ಷಿಸಲು (ಸುಡಲು) ಆರಂಭಿಸಿದರೆ ಅವನು ವಿಘ್ನವನ್ನು ಮಾಡುತ್ತಾನೆ ಆದ್ದರಿಂದ ನಾನು ನಿಮ್ಮನ್ನು ಕೇಳುತ್ತಿದ್ದೇನೆ, ಎಂದು ಹೇಳಿದನು. ಆಗ ಅರ್ಜುನನು ವನಕೆ ರಥ, ಧನುರ್ಬಾಣಗಳು ಸಿಕ್ಕರೆ ಇಂದ್ರನನ್ನೂ ವಿರೋಧಿಸಿ ನಿನಗೆ ಆ ಅನ್ನವನ್ನು ಸಿಗುವಂತೆ ಮಾಡುತ್ತೇನೆ ಎಂದನು. ಅರ್ಜುನನು ತನ್ನದೇ ಮೂಲರೂಪದ ವಿರೋಧವನ್ನು ಮಾಡಲು ಹೇಗೆ ಒಪ್ಪಿದನು? ಅಗ್ನಿಯು ಅರ್ಜುನನನ್ನು, ಶ್ರೀಕೃಷ್ಣನನ್ನು ಇಬ್ಬರನ್ನೂ ಏಕಕಾಲದಲ್ಲಿ ಕೇಳಲು ಕಾರಣವೇನು? ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ನಿರ್ಣಯವನ್ನು ಆಚಾರ್ಯರು ಹೇಳಿದ್ದಾರೆ. — ಅರ್ಜುನನು ಅನ್ನವನ್ನು ಕೊಡುವ ಪ್ರತಿಜ್ಞೆಯನ್ನು ಮೊದಲೇ ಮಾಡಿದ್ದರಿಂದ ಅದರ ರಕ್ಷಣೆ ಮಾಡುವದು ಕ್ಷತ್ರಿಯನ ಪ್ರಧಾನಕರ್ತವ್ಯವಾದ್ದರಿಂದ, ಅರ್ಜುನನಲ್ಲಿ ನರನಾಮಕಶೇಷದೇವರ ಆವೇಶವಿದ್ದದ್ದರಿಂದಲೂ ತನ್ನ ಮೂಲರೂಪದ ಜೊತೆಗೆ ವಿರೋಧ ಮಾಡುವ ಮನಸ್ಸು ಬಾಡಿದನು. ಅರ್ಜುನನಿಂದ ವನವನ್ನು ಆಹಾರವನ್ನಾಗಿ ತೆಗೆದುಕೊಂಡರೆ ಇಂದ್ರನು ಮೊದಲೇನೋ ಸಿಟ್ಟಿಗೆದ್ದರೂ, ನಂತರ ವಿಚಾರಮಾಡಿ ಅರ್ಜುನನು ತನ್ನ ರೂಪವೇ ಆದ್ದರಿಂದ ತಾನೇ ಕೊಟ್ಟಂತೆಯಾದ್ದರಿಂದ ವಿರೋಧವನ್ನು ಮುಂದುವರಿಸಲಾರನು, ಎಂದು ತಿಳಿದು ಅಗ್ನಿಯು ಅರ್ಜುನನನ್ನು ಕೇಳಿದನು. ಅರ್ಜುನನು ಶ್ರೀಕೃಷ್ಣನ ಪ್ರೇರಣೆಯಿಲ್ಲದೇ ~~ಯಾವ ಕಾರ್ಯವನ್ನೂ ಮಾಡಲಾರನು; ಮತ್ತು ಈ ಕಾರ್ಯವನ್ನು ಶ್ರೀಕೃಷ್ಣನಿಂದ ರಹಿತನಾಗಿ ಮಾಡಲು~~ ಸಮರ್ಥನೂ ಅಲ್ಲ ಎಂಬ ಭಾವದಿಂದ ಇಬ್ಬರೂ ಜೊತೆಗೆ ಇರುವಾಗಲೇ ಬಂದು ಪ್ರಾರ್ಥಿಸಿದನು. ಅಂತೂ ಅರ್ಜುನನು ರಥಾದಿಗಳನ್ನು ಕೇಳಿದಾಗ ಅಗ್ನಿಯು ಶ್ರೀ ಬದರೀಕ್ಷೇತ್ರಕ್ಕೆ ಹೋಗಿ ಅಲ್ಲಿಯ ಶ್ರೀನಾರಾಯಣದೇವರಿಂದ ಚಕ್ರವನ್ನು ತಂದು ಶ್ರೀಕೃಷ್ಣನಿಗೆ ಭಕ್ತಿಯಿಂದ ಸಮರ್ಪಿಸಿದನು. ಶ್ರೀಕೃಷ್ಣನಿಗೆ ಈ ಮೊದಲು ಗೋಮಂತ ಪರ್ವತಲ್ಲಿ ಚಕ್ರ ಪ್ರಾಪ್ತಿಯಾಗಿದೆ. ಆದರೆ ಚಕ್ರಕ್ಕೂ ಅನೇಕ ಅಂಶಗಳಿವೆ. ಅಗ್ನಿಯು ಭಕ್ತಿಯಿಂದ ಇನ್ನೊಂದು ಅಂಶವನ್ನು ತಂದು ಕೊಟ್ಟಾಗ ಅದು ಇದಕ್ಕೆ ಎರಡೂ ಒಂದಾದವು. ಅಗ್ನಿಯು ವರುಣದೇವನಿಂದ ಜಯಪ್ರದವಾದ, ಹೊಳೆಯುವ ಜ್ಯಾವುಳ್ಳ ಹನುಮದ್ಧ್ವಜವುಳ್ಳ, ಶುಭ್ರ ಕುದುರೆಗಳುಳ್ಳ ಜಯಪ್ರದವಾದ ರಥ, ಅಕ್ಷಯ ಬತ್ತಳಿಕೆ ಇವೆಲ್ಲವನ್ನೂ ತೆಗೆದುಕೊಂಡು ಬಂದು ಅರ್ಜುನನಿಗೆ ಕೊಟ್ಟನು. ಗಾಂಡೀವಧನುಸ್ಸು ನಿಜವಾಗಿ ಬ್ರಹ್ಮದೇವರದು. ಅದರಿಂದ ಅವರು ಎಲ್ಲ ಲೋಕಸಂಹಾರ ಕಾರ್ಯವನ್ನು ಮಾಡುವರು. ಅದು ಒಂದು ಲಕ್ಷ ಭಾರ ತೂಕದ್ದು (ಸಾಧಾರಣ ೨೨೦ ಕ್ವಿಂಟಲ್ ಭಾರ) ಇದೆ. ಬೇರೆ ಯಾರಿಗೂ ಎತ್ತಲು ಶಕ್ಯವಿಲ್ಲ. ಅದಕ್ಕೂ ಅನೇಕ ಅಂಶಗಳಿವೆ. ಒಂದೊಂದು ಅಂಶದಿಂದ ರುದ್ರ, ಇಂದ್ರ, ಚಂದ್ರ, ವರುಣದೇವರಿಗೆ ಕೊಟ್ಟು ಎತ್ತಲು ಉಪಯೋಗಿಸಲು ಆಗುವಂತೆ ವರವನ್ನೂ ಕೊಟ್ಟರು. ಆದ್ದರಿಂದ ಅವರು ಆ ಧನುಸ್ಸಿನಿಂದ ಲೋಕಗಳನ್ನು ಗೆದ್ದರು. ಜಯಸ್ವರೂಪರಾದ, ಸರ್ವರಿಗೂ ಜಯಪ್ರದರಾಗುವ ಹನುಮಂತದೇವರು ಆ ರಥದ ಧ್ವಜದಲ್ಲಿದ್ದದ್ದರಿಂದ ಆ ರಥದಲ್ಲಿದ್ದವರಿಗೆ ಸದಾಕಾಲ ಜಯವೇ. ಅದನ್ನು ಶ್ರೀರಾಮದೇವರು ಹತ್ತಿದ್ದರು. ಶ್ರೀಕೃಷ್ಣನ ಅನುಗ್ರಹವಿದ್ದದ್ದರಿಂದ, ಇಂದ್ರನ ಅವತಾರನಾದ್ದರಿಂದ ಇಂದ್ರನಿಗೆ ಬ್ರಹ್ಮವರವಿದ್ದದ್ದರಿಂದ ಅರ್ಜುನನಿಗೂ ಆ ಧನುಸ್ಸನ್ನು ಎತ್ತಲು ಶಕ್ಯವಾಯಿತು. ಅರ್ಜುನನು ಆ ಧನುಸ್ಸಿನಲ್ಲಿ ಬಾಣಗಳನ್ನು ಹೂಡಿ ಅಸ್ತ್ರ ಪ್ರಯೋಗಮಾಡಿ ಆ ವನದಿಂದ ಒಂದು ವಸ್ತುವೂ ಹೊರಗೆ ಹೋಗದಂತೆ ೧೨ ಯೋಜನವಿಸ್ತೃತವಾಗಿ ವನದ ಸುತ್ತಲೂ ಗೃಹವನ್ನೇ

ಬಾಣಗಳಿಂದ ನಿರ್ಭಿಸಿದನು. ಆಗ ಅಗ್ನಿಯು ಆ ವನವನ್ನು ವ್ಯಾಪಿಸಿ ದೊಡ್ಡ ದೊಡ್ಡ ಜ್ವಾಲೆಗಳಿಂದ ಆ ವನವನ್ನು ಸುಡ ಲಾರಂಭಿಸಿದನು. ಅದನ್ನು ಕಂಡ ಇಂದ್ರನು ಕುಪಿತನಾಗಿ ಆ ಅಗ್ನಿಯನ್ನೇ ನಾಶವಾಡಲು ರಥದ ಬಿಡ್ಡಿಯು ಅಳತೆಯು ನೀರಿನ ವೃಷ್ಟಿಯನ್ನು ಸುರಿಸಿದನು. ಆಗ ಶ್ರೀಕೃಷ್ಣ ಹಾಗು ಅರ್ಜುನ ಇಬ್ಬರು ಅಸ್ತ್ರಗಳಿಂದ ವೃಷ್ಟಿಯನ್ನು ನಿಲ್ಲಿಸಿದರು. ಇಂದ್ರನು ಯುದ್ಧಕ್ಕೆ ಬಂದಾಗ ಅವನ ಕೂಡ ಯುದ್ಧವನ್ನು ಮಾಡಿದರು.ಆಗ ಇಂದ್ರನು ಸೋತನು. ಈ ಯುದನಡೆದಾಗ ವಾಮನರೂಪೀ ಪರಮಾತ್ಮನೂ, ದೇವತೆಗಳೂ ಬಂದಿದ್ದರು. ಈಗ ಇಂದ್ರನು ಸೋತಾಗ ತನ್ನ ಅವತಾರನಾದ ಅರ್ಜುನನ ಬಲವನ್ನು ನೋಡಿ, ಶ್ರೀಕೃಷ್ಣನುಅವನಲ್ಲಿವಾಡುವ ಪ್ರೀತಿಯನ್ನು ನೋಡಿ ಸಂತುಷ್ಟನಾದನು.ವೇಘಗಳನ್ನು ಹಿಂದೆ ಹೋಗಲು ಆಜ್ಞಾಪಿಸಿ ಶ್ರೀಕೃಷ್ಣ ನನ್ನು ನಮಸ್ಕರಿಸಿ ಅರ್ಜುನನನ್ನು ಆಲಿಂಗಿಸಿಕೊಂಡನು. ಶ್ರೀಕೃಷ್ಣನಿಂದ ಅಭಿನ್ನನಾದ ವಾಮನ ರೂಪೀಪರಮಾತ್ಮನೂ ಕೂಡ ಇಲ್ಲಿಯವರೆಗೆಕೇವಲ ಪ್ರೇಕ್ಷಕನಾಗಿದ್ದು ಈಗ ಶ್ರೀಕೃಷ್ಣನನ್ನು ಆಲಿಂಗಿಸಿಕೊಂಡನು. ಬ್ರಹ್ಮಾದಿದೇವತೆಗಳು ಅರ್ಜುನನ ಅಸ್ತ್ರ-ವಿದ್ಯೆ ಪ್ರಕೃಷ್ಟತೆ (ನಿಪುಣತೆ)ಯನ್ನು ನೋಡಿ ಕೃಷ್ಣ(ನಿಪುಣ ಎಂಬ ಅರ್ಥದಲ್ಲಿ)ಎಂಬ ನಾಮವನ್ನು ಅರ್ಜುನನಿಗೆ ಕರೆದು ತಮ್ಮ ತಮ್ಮ ಅಸ್ತ್ರಗಳನ್ನು ಅವನಿಗೆ ಕೊಟ್ಟುವುದಾಗಿ ಪ್ರತಿಜ್ಞೆ ಮಾಡಿದರು.

ಅನುಜ್ಞಾತಾಸ್ತೇ ಪ್ರಯಯುಃ ಕೇಶವೇನ ಕ್ರೀಡಾರ್ಥಮಿಂದ್ರೋ ಯುಯುಧೇಹಿ ತತ್ರ ॥
ಪ್ರೀತ್ಯಾ ಕೀರ್ತಿಂ ದಾತುಮಪ್ಯರ್ಜುನಸ್ಯ ತತಸ್ತುಷ್ಟಸ್ಸಹದೇವೈರ್ಯಯೌ ಸ್ವಃ ॥೨೩೭॥

ಕೇಶವೇನ ಅನುಜ್ಞಾತಾಃ—ಶ್ರೀಕೃಷ್ಣನಿಂದ ಅನುಮತಿಯನ್ನು ಪಡೆದ, ತೇ – ಆ ಎಲ್ಲ ದೇವತೆಗಳು, ಪ್ರಯಯುಃ – ಹೋದರು. ಇಂದ್ರಃ – ದೇವೇಂದ್ರನು, ತತ್ರ—ಅಲ್ಲಿ, ಕ್ರೀಡಾರ್ಥಂ ಹಿ—ಕೇವಲ ವಿನೋದಕ್ಕಾಗಿಯೇ, ಪ್ರೀತ್ಯಾ – ಅರ್ಜುನನ ಮೇಲೆ ಪ್ರೀತಿಯಿಂದ, ಅರ್ಜುನಸ್ಯ – ಅರ್ಜುನನಿಗೆ, ಕೀರ್ತಿಂ ದಾತುಂ ಅಪಿ – ಕೀರ್ತಿಯನ್ನು ಕೊಡಲೂ ಕೂಡ, ಯುಯುಧೇ—ಯುದ್ಧ ಮಾಡಿದನು. ತತಃ – ಅನಂತರ ತುಷ್ಟಃ ಸನ್ – ಸಂತುಷ್ಟನಾಗಿ, ದೇವೈಃ ಸಹ:—ದೇವತೆಗಳಿಂದ ಕೂಡಿಕೊಂಡು, ಸ್ವಃ – ಸ್ವರ್ಗಕ್ಕೆ, ಯಯೌ – ಹೋದನು. ॥೨೩೭॥

ದೈತ್ಯಾಶ್ಚ ನಾಗಾಶ್ಚ ಪಿಶಾಚಯಕ್ಷಾ ಹತಾಸ್ಸರ್ವೇ ತದ್ವನಸ್ಥಾ ಹಿ ತಾಭ್ಯಾಮ್ ॥
ಋತೇ ಚತುಷ್ಪಕ್ಷಿಣ ಶ್ಚಾಶ್ವಸೇನಂ ಮಯಂ ಚ ನಾನ್ಯತ್ಕಿಂಚಿದಾಸಾತ್ರ ಮುಕ್ತಮ್ ॥೨೩೮॥

ತಾಭ್ಯಾಂ ಋತೇ—ಆ ಶ್ರೀಕೃಷ್ಣಾರ್ಜುನರನ್ನು ಬಿಟ್ಟು, ಚತುಷ್ಪಕ್ಷಿಣಃ ಋತೇ – ನಾಲ್ಕು ಪಕ್ಷಿಗಳನ್ನು ಬಿಟ್ಟು, ಅಶ್ವಸೇನಂ ಋತೇ – ಅಶ್ವಸೇನ ಎಂಬ ಸರ್ಪವನ್ನು ಬಿಟ್ಟು, ಮಯಂ ಋತೇ – ಮಯಾಸುರನನ್ನು ಬಿಟ್ಟು, ತದ್ವನಸ್ಥಾಃ—ಆ ವನದಲ್ಲಿರುವ, ಸರ್ವೇ – ಎಲ್ಲ, ದೈತ್ಯಾಃ—ದೈತ್ಯರು, ಚ—ಮತ್ತು, ನಾಗಾಃ—ನಾಗಗಳು, ಪಿಶಾಚಯಕ್ಷಾಃ—ಪಿಶಾಚಿಗಳು ಯಕ್ಷರು, ಹತಾಃ—ಸಂಹರಿಸಲ್ಪಟ್ಟರು, ಅನ್ಯತ್ ಕಿಂಚಿತ್—ಬೇರೆ ಯಾವದೂ ಕೂಡ, ಮುಕ್ತಂ—ಅಗ್ನಿಯಿಂದ ಬಿಡಲ್ಪಟ್ಟದ್ದು, ನ ಆಸ – ಆಗಲಿಲ್ಲ. ॥೨೩೮॥

ಅವತಾರಿಕೆ : – ಇವರೆಲ್ಲ ಉಳಿಯಲು ಕಾರಣವನ್ನು ಹೇಳುತ್ತಾರೆ—

ಅಯಮಗ್ನೇ ಜರಿತೇತ್ಯಾದಿಮುಂತ್ರೈಃ ಸ್ತುತ್ವಾ ವಹ್ನಿಂ ಪಕ್ಷಿಣೋ ನೈವದಗ್ಧಾಃ ॥
ಸ ಚಾಶ್ವಸೇನಃ ಪುತ್ರಕಸ್ತಕ್ಷಕಸ್ಯ ನೂತ್ಕ್ರಾಗ್ಯಸ್ತಃ ಪ್ರಾತಿಲೋಮ್ಯೇನ ಕಂಠೇ ॥೨೩೯॥

ಛಿನ್ನೇಽರ್ಜುನೇನಾಂತರಿಕ್ಷೇ ಪತಂತ್ಯಾಸ್ತಸ್ಯಾಶ್ಯಕ್ರೇಣಾವಿತಶ್ಛಿನ್ನಪುಚ್ಛಃ ॥
ವಧಾನ್ಮಾತುಃಪುಚ್ಛಭಂಗಾಚ್ಚ ರೋಷಾದ್ಧಂತುಂ ಪಾರ್ಥಂ ಕರ್ಣತೂಣೀರಗೋಽಭೂತ್ ॥೨೪೦॥

ಪಕ್ಷಿಣಃ – ಪಕ್ಷಿಗಳು, ಅಯಮಂಗ್ನೇ ಜರಿತಾ ಇತ್ಯಾದಿ ಮಂತ್ರೈಃ– ಅಯಂ ಅಗ್ನೇಎಂದು ಸುರುವಾಗುವ ಮಂತ್ರ, ಗಳಿಂದ, ವಹ್ನಿಂಸ್ತುತ್ವಾ—ಅಗ್ನಿಯನ್ನು ಸ್ತುತಿಸಿ, ನೈವದಗ್ಧಾಃ—ಸುಡಲ್ಪಡಲಿಲ್ಲ, ತಕ್ಷಕಸ್ಯ ಪುತ್ರಃ – ತಕ್ಷಕನ ಮಂಗನಾದ ಸ ಚ ಅಶ್ವಸೇನಃ—ಆ ಅಶ್ವಸೇನನೂ ಕೂಡ, ಮಾತ್ರಾ—ಅವನ ತಾಯಿ ಸರ್ಪದಿಂದ, ಪ್ರಾತಿಲೋಮ್ಯೇನ – ವಿರುದ್ಧ ಆಕಾರ ದಿಂದ (ಅಂದರೆ ತಾಯಿಯಬಾಲದಲ್ಲಿ ಅಶ್ವಸೇನ ಸರ್ಪದ ಮುಖವು ಬರುವಂತೆ ತಾಯಿಯ ಮುಖದ ಕಡೆಗೆ ಅಶ್ವಸೇನ ಸರ್ಪದ ಬಾಲವು ಬರುವಂತೆ), ಗ್ರಸ್ತಃ – ನುಂಗಲ್ಪಟ್ಟಿದ್ದನು. ಅಂತರಿಕ್ಷೇ–ಆಕಾಶದಲ್ಲಿ, ಪತತ್ಯಾಃ:–ಜಿಗಿದು ಹೋಗುವಂತಹ, ತಸ್ಯಾಃ– ಆ ತಾಯಿ ಸರ್ಪದ ಕಂಠೇ – ಹೆಡೆಭಾಗವು, ಅರ್ಜುನೇನ—ಅರ್ಜುನನಿಂದ, ಛಿನ್ನೇಸತಿ—ಕತ್ತರಿಸಲ್ಪಡುತ್ತಿರಲು, ಛಿನ್ನಪುಚ್ಛಃ– ಕತ್ತರಿಸಲ್ಪಟ್ಟ ಬಾಲವುಳ್ಳ, ಶಕ್ರೇಣ – ಇಂದ್ರನಿಂದ, ಅವಿತಃ – ರಕ್ಷಿತವಾದ ಅಶ್ವಸೇನ ಸರ್ಪವು, ಮಾತುಃ—ತನ್ನ ತಾಯಿಯ, ವಧಾತ್—ವಧದಿಂದ, ಪುಚ್ಛಭಂಗಾತ್ ಚ—ತನ್ನ ಬಾಲಛೇದವಾದ್ದರಿಂದಲೂ, ರೋಷಾತ್ – ಸಿಟ್ಟಿನಿಂದ, ಪಾರ್ಥಂ – ಅರ್ಜುನನನ್ನು, ಹಂತುಂ – ಕೊಲ್ಲಲು, ಕರ್ಣತೂಣೀರಗಃ ಅಭೂತ್ – ಕರ್ಣನ ಬತ್ತಳಿಕೆಯಲ್ಲಿ ಇರುವಂತಹದ್ದು ಆಯಿತು. ॥೨೩೯-೨೪೦॥

ಮಯಃ ಕೃಷ್ಣೇನಾತ್ತಚಕ್ರೇಣ ದೃಷ್ಟೋ ಯಯೌ ಪಾರ್ಥಂಶರಣಂ ಜೀವನಾರ್ಥೀ ॥
ಪಾರ್ಥಾರ್ಥಮೇನಂ ನ ಜಘಾನ ಕೃಷ್ಣ: ಸ್ವಭಕ್ತಶ್ಚೇತ್ಯತಿಮಾಯಂ ಪರೇಶಃ ॥೨೪೦॥

ಆತ್ತಚಕ್ರೇಣ—ಚಕ್ರವನ್ನು ಎತ್ತಿಹಿಡಿದಂಥ, ಕೃಷ್ಣೇನ—ಶ್ರೀಕೃಷ್ಣನಿಂದ, ದೃಷ್ಟಃ – ನೋಡಲ್ಪಟ್ಟ, ಮಯಃ—ಮಯಾಸುರನು, ಜೀವನಾರ್ಥೀಸನ್—ಬದುಕಲು ಇಚ್ಛೆವುಳ್ಳವನಾಗಿ, ಪಾರ್ಥಂ ಶರಣಂ ಯಯೌ – ಅರ್ಜುನನನ್ನು ಮೊರೆ ಹೊಂದಿದನು, ಪರೇಶಃ ಕೃಷ್ಣಃ—ಸರ್ವೋತ್ತಮನಾದ ಶ್ರೀಕೃಷ್ಣನು, ಅತಿಮಾಯಂ ಏನಂ – ಅತ್ಯಂತ ಮಾಯಾವಿದ್ಯೆಯುಳ್ಳ ಈ ಮಯನನ್ನು, ಪಾರ್ಥಾರ್ಥಂ—ಅರ್ಜುನನಿಗೆ ಮೊರೆ ಹೊಕ್ಕಿದ್ದರಿಂದ, (ಅವನ ಕೀರ್ತಿ ಉಳಿಸುವದಕ್ಕಾಗಿ), (ಇವನು) ಸ್ವ ಭಕ್ತಶ್ಚ—ತನ್ನ ಭಕ್ತನು, ಇತಿ ಚ—ಈ ಕಾರಣದಿಂದಲೂ ಕೂಡ, ನ ಜಘಾನ—ಕೊಲ್ಲಲಿಲ್ಲ. ॥೨೪೦॥

ಅವತಾರಿಕೆ :— ಅರ್ಜುನನನ್ನು ಮೊರೆ ಹೊಂದಿದ ಮಯನ ಉದ್ದೇಶವನ್ನು ತಿಳಿಸುತ್ತಾರೆ —

ದೇವಾರಿರಿತ್ಯೇವ ಮಯಿ ಪ್ರಕೋಪಃ ಕೃಷ್ಣಸ್ಯ ತೇನಾಹಮಿಮಂ ಪುರಂದರಮ್ ॥
ಪಾರ್ಥಾತ್ಮಕಂ ಶರಣಂ ಯಾಮಿ ತೇನ ಕೃಷ್ಣಪ್ರಿಯಃ ಸ್ಯಾಮಿತಿ ತಸ್ಯ ಬುದ್ಧಿಃ ॥೨೪೨॥

ಅಹಂ – ನಾನು, ದೇವಾರಿಃ ಇತಿ ಏವ—ದೇವತೆಗಳ ವೈರಿಯು ಎಂಬಕಾರಣದಿಂದಲೇ, (ಆದರೆ ದೇವರ ಭಕ್ತನಲ್ಲ ಎಂಬ ಕಾರಣದಿಂದಲ್ಲ; ಏಕೆಂದರೆ ನಾನು ದೇವರ ಭಕ್ತನೇ ಆಗಿದ್ದೇನೆ ಎಂದು ಅಭಿಪ್ರಾಯ) ಕೃಷ್ಣಸ್ಯ – ಶ್ರೀಕೃಷ್ಣನಿಗೆ, ಮಯಿ—ನನ್ನಲ್ಲಿ, ಪ್ರಕೋಪಃ—ಕೋಪವು, ತೇನ—ಆ ಕಾರಣದಿಂದ, ಅಹಂ – ನಾನು, ಪಾರ್ಥಾತ್ಮಕಂ – ಅರ್ಜುನನ ರೂಪದಲ್ಲಿರುವ, ಪುರಂದರಂ – ಇಂದ್ರದೇವನನ್ನು, ಶರಣಂ ಯಾಮಿ—ಮೊರೆ ಹೊಂದುತ್ತೇನೆ. ತೇನ—ಅದರಿಂದ, ಕೃಷ್ಣಪ್ರಿಯಃ ಸ್ಯಾಂ – ಶ್ರೀಕೃಷ್ಣಪ್ರಿಯನಾಗುವೆನು, ಇತಿ—ಎಂದು. ತಸ್ಯ ಬುದ್ಧಿಃ—ಅವನ ತಿಳಿವಳಿಕೆಯು. (ಇತ್ತು). ॥೨೪೨॥

ಪ್ರಾಣೋಪಕೃತ್ಪ್ರತ್ಯುಪಕಾರಮಾಶು ಕಿಂ ತೇ ಕರೋಮೀತಿ ಸ ಪಾರ್ಥಮಾಹ ॥
ಕೃಷ್ಣಪ್ರಸಾದಾದ್ಧಿ ಭವಾನ್ವಿಮುಕ್ತಸ್ತಸ್ಮೈ ಕರೋತ್ವಿತ್ಯವದತ್ಸ ಪಾರ್ಥ: ॥೨೪೩॥

ಸಃ – ಆ ಮಯನು, ಪಾರ್ಥಂ—ಅರ್ಜುನನನ್ನು ಕುರಿತು, ಪ್ರಾಣೋಪಕೃತ್—ಎನ್ನ ಪ್ರಾಣರಕ್ಷಣೆ ಮಾಡಿ

ಉಪಕರಿಸಿದ ಅರ್ಜುನನೇ, ತೇ – ನಿನಗೆ, ಪ್ರತ್ಯುಪಕಾರಂ– ನೀನುಮಾಡಿದ ಉಪಕಾರಕ್ಕೆ ಪ್ರತಿಯಾದ ಉಪಕಾರವನ್ನು, ಆಶು ಕಿಂ ಕರೋಮಿ –ಬೇಗ ಏನು ಮಾಡಿಯೇನು ? ಇತಿ—ಎಂದು, ಆಹ – ಹೇಳಿದನು. ಸಃ ಪಾರ್ಥಃ – ಆ ಅರ್ಜುನನು. ಭವಾನ್—ನೀನು, ಹಿ—ಯಾವ ಕಾರಣದಿಂದ, ಕೃಷ್ಣಪ್ರಸಾದಾತ್ – ಶ್ರೀಕೃಷ್ಣನ ಅನುಗ್ರಹದಿಂದ, ವಿಮುಕ್ತಃ – ಬಿಡಲ್ಪಟ್ಟಿರುವಿಯೋ, (ತಸ್ಮಾತ್— ಆದ್ದರಿಂದ), / ತಸ್ಮೈ ಕರೋತು – ಅವನಿಗೆ ಮಾಡು, ಇತಿ—ಎಂದು, ಅವದತ್—ಹೇಳಿದನು. ॥೨೪೩॥

ಕೃಷ್ಣೋ೭ಪಿ ರಾಜ್ಞೋ೭ತಿ ವಿಚಿತ್ರರೂಪಸಭಾಕೃತಾವದಿಶತ್ತಾಂ ಸ ಚಕ್ರೇ ॥
ಅನಿರ್ಗಮಂ ಪ್ರಾಣಿನಾಮುರ್ಥಿತೌ ತೌ ಹುತಾಶನೇನಾಥ ವಿಧಾಯ ಜಗ್ಮತುಃ ॥೨೪೪॥

ಕೃಷ್ಣಃ ಅಪಿ—ಶ್ರೀಕೃಷ್ಣನಾದರೂ, ರಾಜ್ಞಃ – ಧರ್ಮರಾಜನಿಗೆ, ವಿಚಿತ್ರರೂಪಸಭಾಕೃತೌ – ಅತ್ಯಂತ ಆಶ್ಚರ್ಯಕರವಾದ ಸೌಂದರ್ಯವುಳ್ಳ ಸಭಾ ನಿರ್ಮಾಣ ಮಾಡಲು, ಅದಿಶತ್ – (ಮಯಾಸುರನಿಗೆ) ಆಜ್ಞಾಪಿಸಿದನು, ಸಃ – ಆ ಮಯನು ತಾಂ—ಅಂಥ ಸಭೆಯನ್ನು, ಚಕ್ರೇ – ಮಾಡಿದನು. ಹುತಾಶನೇನ – ಅಗ್ನಿಯಿಂದ, ಅರ್ಥಿತೌ ತೌ – ಪ್ರಾರ್ಥಿಸಲ್ಪಟ್ಟ ಆ ಕೃಷ್ಣಾರ್ಜುನರಿಬ್ಬರೂ, ಪ್ರಾಣಿನಾಂ – ಯಾವದೇ ಪ್ರಾಣಿಗಳ, ಅನಿರ್ಗಮಂ – ಆ ವನದಿಂದ ಹೊರಗೆ ಹೊಗದಿರುವಂತೆ ವ್ಯವಸ್ಥೆಯನ್ನು, ವಿಧಾಯ – ಮಾಡಿ, ಅಥ—ನಂತರ, ಜಗ್ಮತುಃ—(ಗೃಹಕ್ಕೆ) ಹೋದರು. ॥೨೪೪॥

ದೃಷ್ಟ್ವಾ ಚ ತೌ ಪಾಂಡವಾಸ್ಸರ್ವ ಏವ ಮಹಾಮುದಂ ಪ್ರಾಪುರೇತನ್ನಿಶಮ್ಯ ॥
ಕೃಷ್ಣೋ೭ಪಿ ಪಾರ್ಥೈರ್ಮುದೇ೭ನಂತಶಕ್ತಿಸ್ಸುಖಜ್ಞಾನಪ್ರಭವೌದಾರ್ಯವೀರ್ಯಃ ॥೨೪೫॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ಸುಭದ್ರಾಹರಣಖಾಂಡವದಹನಾದಿನಿರೂಪಣಂ ನಾಮ ವಿಂಶೋ೭ಧ್ಯಾಯಃ ॥೨೦॥

ಸರ್ವೇ ಪಾಂಡವಾಃ – ಎಲ್ಲ ಪಾಂಡವರೂ, ತೌ – ಆ ಶ್ರೀಕೃಷ್ಣಾರ್ಜುನರನ್ನು, ದೃಷ್ಟ್ವಾ ಏವ – ನೋಡಿಯೇ, ಚ—ಮತ್ತು, ಏತತ್ – ಖಾಂಡವ ವನ ದಹನ ವಾರ್ತಾವನ್ನು, ನಿಶಮ್ಯ – ಕೇಳಿ, ಮಹಾಮುದಂ ಪ್ರಾಪುಃ—ಬಹ್ವಾನಂದವನ್ನು ಹೊಂದಿದರು. ಅನಂತಶಕ್ತಿಃ—ಅಪರಿಮಿತ ಶಕ್ತಿಯುಳ್ಳ, ಸುಖಜ್ಞಾನಪ್ರಭವೌದಾರ್ಯವೀರ್ಯಃ—ಆನಂದ, ಜ್ಞಾನ, ಪ್ರಭುತ್ವ, ಔದಾರ್ಯ, ವೀರ್ಯಗಳುಳ್ಳ. ಕೃಷ್ಣಃ ಅಪಿ—ಶ್ರೀಕೃಷ್ಣನೂ ಕೂಡ, ಪಾರ್ಥೈಃ ಮುದೇ – ಪಾಂಡವರಿಂದ ಕೂಡಿಕೊಂಡು ಸಂತೋಷದಿಂದ ವಾಸಿಸಿದನು. ॥೨೪೫॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಶ್ರೀಮಹಾಭಾರತತಾತ್ಪರ್ಯನಿರ್ಣಯದಲ್ಲಿ ಸುಭದ್ರಾಹರಣ ಖಾಂಡವದಹನಾದಿಗಳನ್ನು ನಿರೂಪಿಸುವ ಇಪ್ಪತ್ತನೆಯ ಅಧ್ಯಾಯದ ಪ್ರತಿಪದಾರ್ಥ ಚಂದ್ರಿಕೆಯು ಸಮಾಪ್ತವಾಯಿತು. ॥೨೦॥

ಭಾವಾನುವಾದ :– ೨೩೭–೨೪೫ ಶ್ರೀಕೃಷ್ಣನಿಂದ ಆಜ್ಞಾಪ್ತರಾಗಿ ಎಲ್ಲ ದೇವತೆಗಳೂ ತಮ್ಮ ಸ್ಥಳಕ್ಕೆ ಹೋದರು. ಇಂದ್ರನು ಇಲ್ಲಿ ಶ್ರೀಕೃಷ್ಣನ ಎದುರು ನಿಂತು ಯುದ್ಧಮಾಡಿದ್ದು ಕ್ರೀಡೆಗಾಗಿ ಹೊರತು ಅಸುರಾವೇಶದಿಂದ ಅಲ್ಲ. ತನ್ನ ಅವತಾರನಾದ ಅರ್ಜುನನಿಗೆ ಲೋಕದಲ್ಲಿ ವಿಶೇಷ ಕೀರ್ತಿ ಬರಲಿ ಎಂಬ ಪ್ರೀತಿಭಾವದಿಂದ ಅವನ ಜೊತೆಗೆ ಯುದ್ಧಮಾಡಿದನು. ಈ ರೀತಿ ಶ್ರೀಕೃಷ್ಣಾರ್ಜುನರು ಆ ವನವನ್ನು ಅಗ್ನಿಗೆ ದಹಿಸಲು ಪ್ರದಾನ ಮಾಡಿದಾಗ ಅಗ್ನಿಯು ಆ ವನ

ದಲ್ಲಿಯ ನಾಲ್ಕು ಪಕ್ಷಿಗಳು, ಅಶ್ವಸೇನ ಎಂಬ ಸರ್ಪ, ಹಾಗು ಮಯಾಸುರ ಇಷ್ಟು ಜನರನ್ನು ಬಿಟ್ಟು ಉಳಿದೆಲ್ಲವನ್ನು ಸುಟ್ಟು ಭಸ್ಮ ಮಾಡಿದ್ದಾನೆ. ಪಕ್ಷಿಗಳು ''ಅಯಮಗ್ನೇ ಜರಿತಾ...'' ಎಂಬ ಮಂತ್ರದಿಂದ ಅಗ್ನಿಯನ್ನು ಸ್ತೋತ್ರ ಮಾಡಿದ್ದರಿಂದ ಅಗ್ನಿಯ ಪರಿಣಾಮವಾಗದೇ ಉಳಿದವು, ಅಶ್ವಸೇನ ಸರ್ಪವು ತಕ್ಷಕ ಸರ್ಪದ ಮಗನು. ಅದರ ತಾಯಿಯು (ತಕ್ಷಕನ ಹೆಂಡತಿಯು) ಮಗನನ್ನು ವಿರುದ್ಧವಾಗಿ (ತನ್ನ ಬಾಲದ ಕಡೆಗೆ ಮಗನ ಮುಖ ಬರುವಂತೆ) ನುಂಗಿ ತಾನೂ ಬದುಕಿ ಕೊಳ್ಳಲೆಂದು ಆಕಾಶದಲ್ಲಿ ಹಾರುತ್ತಾ ಹೊಗುತ್ತಿತ್ತು. ಅದನ್ನು ನೋಡಿದ ಅರ್ಜುನನು ಬಾಣ ಬಿಟ್ಟು ಆ ತಾಯಿ ಸರ್ಪದ ಕಂಠವನ್ನೇ ಕತ್ತರಿಸಿದನು. ಅದು ಸತ್ತಿತು. ಅದರೊಳಗಿರುವ ಅಶ್ವಸೇನ ಸರ್ಪದ ಬಾಲ ಕತ್ತರಿಸಿತು. ನಂತರ ಇಂದ್ರನು ಅದಕ್ಕೆ ರಕ್ಷಣೆಯನ್ನು ಕೊಟ್ಟನು. ಹೀಗಾಗಿ ಬದುಕಿ ಉಳಿಯಿತು. ತಾಯಿಯು ಮರಣವಾದ್ದರಿಂದ, ತನ್ನಬಾಲ ಛೇದನವಾದ್ದರಿಂದ ಇದಕ್ಕೆಲ್ಲ ಕಾರಣನಾದ ಅರ್ಜುನನ ಮೇಲೆ ಕೋಪ ಬಂದು ಅವನನ್ನು ಕೊಲ್ಲಲೆಂದು ಕರ್ಣನ ಬತ್ತಳಿಕೆಗೆ ಹೋಗಿ ಸೇರಿತು. ಮಯಾಸುರನು ಬದುಕಲು ಪ್ರಯತ್ನಿಸುತ್ತಿರುವಾಗ, ಚಕ್ರವನ್ನು ಎತ್ತಿಹಿಡಿದಿರುವ ಶ್ರೀಕೃಷ್ಣನ ಕಣ್ಣಿಗೆ ಬಿದ್ದನು. ಆಗ ಬದುಕಬೇಕೆಂದು ಅರ್ಜುನನನ್ನು ಮೊರೆಹೊಕ್ಕನು. ಅವನಿಗೆ ನಾನು ದೇವರ ಭಕ್ತನೇ ಆಗಿದ್ದೇನೆ. ಆದರೆ ದೇವತೆಗಳನ್ನು ದ್ವೇಷಿಸುತ್ತೇನೆಯಾದ್ದರಿಂದ ನನ್ನ ಮೇಲೆ ಶ್ರೀಕೃಷ್ಣನ ಕೋಪವಿದೆ. ನಾನು ದೇವೇಂದ್ರನ ಅವತಾರನಾದ ಅರ್ಜುನನನ್ನು ಮೊರೆ ಹೊಕ್ಕರೆ ಶ್ರೀಕೃಷ್ಣನೂ ಪ್ರೀತನಾಗುವನು ನಾನು ಬದುಕುವೆನು'' ಎಂಬ ಭಾವವಿತ್ತು. ಆಗ ಶ್ರೀಕೃಷ್ಣನು ತನ್ನ ಭಕ್ತನಾದ ಅರ್ಜುನನನ್ನು ಮೊರೆ ಹೋದಾಗ ರಕ್ಷಣವಾಯಿತು ಎಂದು ಕೀರ್ತಿ ಅವನಿಗೆ ಬರಲಿ ಎಂಬ ಅಭಿಪ್ರಾಯದಿಂದಲೂ, ಮಯನು ನನ್ನ ಭಕ್ತನೇ ಆಗಿದ್ದಾನೆ ಎಂದೂ ಅವನನ್ನು ಕೊಲ್ಲಲಿಲ್ಲ, ಆಗ ಆ ಮಯನ ಅರ್ಜುನನಿಗೆ ''ನಾನು ನಿನ್ನಿಂದ ಪ್ರಾಣಸಹಿತ ಉಳಿದೆನು; ನಾನು ನಿನ್ನಿಂದ ಉಪಕೃತನು; ನಿನಗೆ ಏನು ಪ್ರತ್ಯುಪಕಾರ ಮಾಡ ಬಲ್ಲೆನು ಎಂದು ಅಂದನು, ಆಗ ಅರ್ಜುನನು ನೀನು ಶ್ರೀಕೃಷ್ಣಾನುಗ್ರಹದಿಂದ ಉಳಿದಿರುವಿ; ಅವನಿಗೆ ನೀನು ಸೇವೆಯನ್ನು ಮಾಡು ಎಂದು ಅಂದನು ಆಗ ಅವನು. ಶ್ರೀಕೃಷ್ಣನನ್ನು ಪ್ರಾರ್ಥಿಸಿದಾಗ ಶ್ರೀಕೃಷ್ಣನು ಧರ್ಮರಾಜನಿಗಾಗಿ ಶ್ರೇಷ್ಠವಾದ ಅದ್ಭುತಸೌಂದರ್ಯವುಳ್ಳ ಸಭಾವನ್ನು ನಿರ್ಮಿಸಲು ಆಜ್ಞಾಪಿಸಿದನು. ಮಯನು ಹಾಗೆ ಮಾಡಿದನು. ಶ್ರೀಕೃಷ್ಣಾರ್ಜುನರು ಅಗ್ನಿಕಾರ್ಯ ಮಾಡಿ ಇಂದ್ರಪ್ರಸ್ಥದ ವಾಸಸ್ಥಾನಕ್ಕೆ ಬಂದಾಗ ಉಳಿದ ಪಾಂಡವರು ಅವರನ್ನು ನೋಡಿಯೇ ಸಂತೋಷಪಟ್ಟು, ಎಲ್ಲ ಪಾರ್ಥರನ್ನು ಕೆಳಿಯುಂತೂ ವಿಶೇಷ ಆನಂದವನ್ನೂ ಹೊಂದಿದರು. ಶ್ರೀಕೃಷ್ಣನು ಅವರ ಜೊತೆಗೆ ಸಂತೋಷದಿಂದ ವಾಸಿಸಿದನು.

ವಿಶೇಷಾಂಶ — ೧) ಸಂಭದ್ರಾಹರಣದ ಸಂದರ್ಭದಲ್ಲಿ ಬಲರಾಮದೇವರು ಹೇಳಿದಂತೆ ಶ್ರೀಕೃಷ್ಣನು ಅನುಕೂಲನಾಗಿದ್ದರೇನೇ ಯಾರಿಗಾದರೂ ಜಯವು. ೨) ಅರ್ಜುನನು ಬ್ರಹ್ಮಚರ್ಯಾದಿ ನಿಯಮಗಳನ್ನು ತ್ಯಜಿಸಿದ ಎಂಬ ಸಂದರ್ಭದಲ್ಲಿ ಆಚಾರ್ಯರಿಂದ ಕೊಡಲ್ಪಟ್ಟ ನಿರ್ಣಯದಂತೆ ಅಪರೋಕ್ಷಜ್ಞಾನಿಗಳಲ್ಲಿ ಯಾವ ದೋಷವನ್ನೂ ಶಂಕಿಸಬಾರದು; ಅವರು ಮಾಡಿದ್ದಾರೆಂದು ತಿಳಿದು ನಾವು ಮಾಡಬಾರದು. ೩) ಅಗ್ನಿಯು ದೇವತೆಗಳಿಗೆ ಆಹುತಿ ಮುಟ್ಟಿಸುವದಕ್ಕೆ ಶುಲ್ಕ (ಲೌಕಿಕಫಲ) ವನ್ನು ಅಪೇಕ್ಷಿಸಿದ್ದರಿಂದಲೇ ಶಕ್ತಿಹ್ರಾಸವಾಯಿತೆಂದ ಮೇಲೆ ದೇವರ ಪ್ರೀತಿಗಾಗಿ ಮಾಡಬೇಕಾದ, ದೇವರಿಗೆ ಸಮರ್ಪಿಸಬೇಕಾದ ಭಾಗವತಧರ್ಮಾನುಷ್ಠಾನಕ್ಕೆ ಲೌಕಿಕಫಲಗಳನ್ನು ಅಪೇಕ್ಷಿಸಿದರೆ ಜ್ಞಾನ, ವರ್ಚಸ್ಸು ಇತ್ಯಾದಿ ಶಕ್ತಿಹ್ರಾಸವಾಗುವದೆಂದು ಕೈವಲ್ಯನ್ಯಾಯವಿದ್ದ, ಆದ್ದರಿಂದ ನಾವು ಕಾಮ್ಯಕರ್ಮಾನುಷ್ಠಾನ ಮಾಡಬಾರದು.

ಇಲ್ಲಿಗೆ ಇಪ್ಪತ್ತನೆಯ ಅಧ್ಯಾಯದಭಾವಾನುವಾದವು ಮುಗಿಯಿತು ॥೨೦॥

॥ಶ್ರೀಮದ್ವೇಶಾರ್ಪಣಮಸ್ತು॥

ತಿದ್ದುಪಡಿ

ಪುಟ	ಸಾಲು	ತಪ್ಪು	ಸರಿ
೨	೨೫	ಹರ್ಷದಾತ್	ಹಾರ್ದಾತ್
೩	೧೩	ನನು	ನನ್ನ
೪	೧೬	ವಿರ	ವಿರು
೫	೧೧	ಭೂ	ಭಾ
೭	೨	ಕೂರುಣಾಂ	ಕುರೂಣಾ
೭	೩	ಪಟ್ಟ	ಪಟ್ಟಣ
೯	—	ನಿಣಯಂ	ನಿರ್ಣಯಂ
೯	೨	ಭಿಮಸೇನ	ಭೀಮಸೇನ
೧೦	೧	ರಥೆನ	ರಥೇನ
...	೨	ಯೊಜನಾನಾಂ	ಯೋಜನಾನಾ
೧೩	೧೩	ಅತವರಿದಳು	ಅವತರಿಸಿದಳು
೧೪	೧೪	ಪಾಣಾ	ಪ್ರಾಣಾ
೧೫	೨೩	ಹೊದನು	ಹೋದನು
೧೬	೭	ಗೊಪ	ಗೋಪ
...	೧೧	...	...
...	೨೬	ಕರೇದು	ಕರೆದು
...	೨೭	ಸೊದರತ್ತೆ	ಸೋದರತ್ತೆ
೨೦	೭	ಜಾಂಬವತಿ	ಜಾಂಬವತಿ
...	೨೭	ಧನಸ್ಸನ್ನು	ಧನುಸ್ಸನ್ನು
೨೨	೧೦	ವಿಷ್ಟು	ವಿಷ್ಣು
೨೪	೭	ಅಂಗಾಯಾ :	ಅಂಕಗಾಯಾ
೨೫	೪	ಪ್ರದ್ಯತ್ಯಕ್ಷ	ಪ್ರತ್ಯಕ್ಷ
...	೨೩	ಆಶ್ಮ	ಆತ್ಮ
೩೫	೧೫	ಪಾದೌ೬	ಪಾದೌ
೩೭	೩	ಶ್ರೇಷ	ಶ್ರೇಷ್ಠ
...	೨೮	ಕೃಪ	ಕೃಷ್ಣ
೩೯	೫	ವೃತ	ವ್ರತ
೪೮	೧೯	ಮಾಯಾವ	ಮಾಯಾವತಿ
೪೯	೨೧	ರಾಜನಿಂರ	ರಾಜನಿಂದ
೫೧	೨೧	ಮಾಡಿದಳು	ಮಾಡಿದನು

೧೫	ಜ್ಞಾನಿ	ಜ್ಞಾತಿ
೧೦	ಶ್ರೀಕೃಷ್ಣಪರಮಾತ್ಮನಿಗೆ	ಬಲರಾಮನಿಗೆ
೧೦	ಆಹುಕದ್ಯಾ	ಆಹುಕಾದ್ಯಾ
೧೧	ದ್ಭಗವನ್	ದ್ಭಗವನ್
೨೩	ಅಸಿ	ಅಸ್ಮಿ
೧೦	ಯುಂಕ್ತ	ಯುಂಕ್ತ :
೯	ಉಳಿದ	ಉಳಿದವರು
೨೩	ನಂದಂತ	ನದಂತ :
೪	ನರನಾದರೂ	ವರನಾದರೂ
೨೩	ಬಿಲ	ಬಲ್ಕ
೨೯	ಶತಾನಿಶ	ಶತಾನೀಕ
...	ಶ್ರುತಕ್ರಿಯಂ–	ಶ್ರುತಕ್ರಿಯಂ:–
೧೧	ಶ್ರೀ	ಶ್ರೀ
೭	ಬ್ರದಾರ್ಯ	ಬ್ರದರ್ಯ
೧೧	ಶ್ರೀಸತ್ಯನಾರಾಯಣ	ಶ್ರೀನಾರಾಯಣ

-ನೇ ಸಾಲಿನಲ್ಲಿ ಜಿಗ್ಯು : ಎಂಬ ಪದಕ್ಕಿಂತ ಮೊದಲು 'ತೇನ ಏವ—ಆ ಧನುಸ್ಸಿನಿಂದಲೇ' ಎಂದು ಸೇರಿಸಬೇಕು

೨೧	ಅಜೇಯತಾಸ್ಯಾತ್	ಅಜೇಯುತಾ
೧೬	ದ್ವಾಶಕಾ	ದ್ವಾದಶಕಾ

೨೫ ನೇ ಸಾಲಿನಲ್ಲಿ ಸಂಧುಕ್ಷಯಾವಾಸ ಎಂಬ ಪದಕ್ಕಿಂತ ಮೊದಲು ' ಆಶುಶುಕ್ಷಣಿಂ-ಅಗ್ನಿಯನ್ನು ' ಎಂದು

೪	ಯುಂದ	ಯುಂದ್ಧ
೮	ವಿಚಿತ್ರ	ಅತಿವಿಚಿತ್ರ
೮	ಆಶ್ಚರ	ಆಶ್ಚರ್ಯ
೧೪	ಆಗಿದ್ದಾನೆ	ಆಗಿದ್ದಾನೆ
...	ಮಯನ	ಮಯನು
೧೮	ದದ್ಭುತ	ಅದ್ಭುತ
೨೪	ಅಪರೊಕ್ಷ	ಅಪರೋಕ್ಷ
೨೬	ಅಪೇಕ್ಷಿಸಿದ್ಧ	ಅಪೇಕ್ಷಿಸಿದ್ದ
೨೮	ಆದ್ಧರಿಂದ	ಆದ್ದರಿಂದ